f prajavani.net prajavani
ಮಂಗಳವಾರ, ಫೆಬ್ರುವರಿ 10, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 41 | ಪುಟ 14
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಕರ್ನಾಟಕ ಸೆಮಿಗೆ
ಕರ್ನಾಟಕದ ಕೆ.ಎಲ್.ರಾಹುಲ್ (130;182ಎ) ಅವರು ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್‌ನಲ್ಲಿ ಮುಂಬೈ ವಿರುದ್ಧ ಶತಕ ದಾಖಲಿಸಿದರು. ನಾಲ್ಕು ವಿಕೆಟ್‌ಗಳಿಂದ ಗೆದ್ದ ಕರ್ನಾಟಕ ಸೆಮಿಫೈನಲ್ ಪ್ರವೇಶಿಸಿತು

ಸೆನ್ಸೆಕ್ಸ್ 84,065 | ನಿಫ್ಟಿ 25,867 | $/₹ 90.66 | ಚಿನ್ನ (Std. 10g) ₹1,63,500 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,80,100 (ಬೆಂಗಳೂರು)

ಲೋಕಸಭೆ: ಕಲಾಪ ಕಗ್ಗಂಟು

‘ಒಪ್ಪಂದ’ ಮಾತು: ಆರನೇ ದಿನವೂ ನಡೆಯದ ಚರ್ಚೆ • ಮೇಲ್ಮನೆಯಲ್ಲೂ ಗದ್ದಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಬಜೆಟ್ ಚರ್ಚೆಗೆ ಮುನ್ನ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಮಾತನಾಡಲು ಅವಕಾಶ ನೀಡಬೇಕು ಎಂಬ ವಿಷಯದ ಬಗ್ಗೆ ಆಡಳಿತಾರೂಢ ಎನ್‌ಡಿಎ ಹಾಗೂ ವಿಪಕ್ಷ ಇಂಡಿಯಾ ಮೈತ್ರಿಕೂಟ ಸೋಮವಾರವೂ ಒಮ್ಮತಕ್ಕೆ ಬರಲಿಲ್ಲ. ಇದರಿಂದಾಗಿ, ಸತತ ಆರನೇ ದಿನವೂ ಲೋಕಸಭಾ ಕಲಾಪಕ್ಕೆ ಭಂಗವಾಯಿತು.

ರಾಜ್ಯಸಭೆಯಲ್ಲೂ ಇದೇ ವಿಚಾರ ಪ್ರಸ್ತಾಪಿಸಿದ ವಿರೋಧ ಪಕ್ಷಗಳ ಸದಸ್ಯರು ಚರ್ಚೆಗೆ ಅವಕಾಶ ನೀಡುವಂತೆ ಆಗ್ರಹಿಸಿದರು. ಆದರೆ ಸಭಾಪತಿ ಅವಕಾಶ ನೀಡದ ಕಾರಣ ಸಭಾತ್ಯಾಗ ಮಾಡಿದರು.



ಜನರಲ್ ಎಂ.ಎನ್. ನರವಣೆ ಪುಸ್ತಕ ಸೇರಿದಂತೆ ವಿವಾದಾತ್ಮಕ ವಿಷಯಗಳನ್ನು ಪ್ರಸ್ತಾಪಿಸಲು ತಮಗೆ ಅವಕಾಶ ನೀಡುವ ಕುರಿತು ಒಪ್ಪಂದ ಆಗಿದೆ ಎಂದು ಲೋಕಸಭೆಯಲ್ಲಿ ರಾಹುಲ್ ಗಾಂಧಿ ಪ್ರತಿಪಾದಿಸಿದರು. ವಿಪಕ್ಷ ನಾಯಕನ ಹೇಳಿಕೆಯನ್ನು ಬಿಜೆಪಿ ತಳ್ಳಿ ಹಾಕಿದ್ದು, ಅಂತಹ ಯಾವುದೇ ಒಪ್ಪಂದ ಆಗಿಲ್ಲ ಎಂದು ಸ್ಪಷ್ಟಪಡಿಸಿದೆ. ಇನ್ನೊಂದೆಡೆ, ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರದ್ದು ಪಕ್ಷಪಾತದ ಧೋರಣೆ ಎಂದು ಆರೋಪಿಸಿರುವ ಕಾಂಗ್ರೆಸ್, ಅವರನ್ನು ಪದಚ್ಯುತಗೊಳಿಸುವಂತೆ ಸಹಿ ಸಂಗ್ರಹಿಸಲು ಆರಂಭಿಸಿತು.

▶6

ಒಪ್ಪಂದದ ಕುರಿತ ರಾಹುಲ್ ಹೇಳಿಕೆ ನಿಜವಲ್ಲ. ತಮ್ಮ ಭಾಷಣದ ಸ್ವರೂಪವನ್ನು ಮುಂಚಿತವಾಗಿ ಸಲ್ಲಿಸುವಂತೆ ಲೋಕಸಭಾಧ್ಯಕ್ಷರು ರಾಹುಲ್ ಗಾಂಧಿಗೆ ಸೂಚಿಸಿದ್ದಾರೆ. ಆ ಬಳಿಕ ತೀರ್ಮಾನ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ

ಕಿರಣ್ ರಿಜಿಜು,
ಸಂಸದೀಯ ವ್ಯವಹಾರಗಳ ಸಚಿವ

ಭಯದಿಂದ ಪ್ರಧಾನಿ ಗೈರು: ರಾಹುಲ್

‘ಬಜೆಟ್ ಬಗ್ಗೆ ಚರ್ಚೆ ನಡೆಯಬೇಕೆಂದು ನಾವು ಉತ್ಸುಕರಾಗಿದ್ದೇವೆ. ಆದರೂ ಚರ್ಚೆ ನಡೆಸಲು ಸರ್ಕಾರ ಹೆದರುತ್ತಿದೆ. ನಾವು ಏನು ಹೇಳಲಿದ್ದೇವೆ ಎಂಬ ಭಯದಿಂದ ಮತ್ತು ನರವಣೆ ಅವರ ಪುಸ್ತಕವನ್ನು ಹಸ್ತಾಂತರಿಸುತ್ತೇವೆ ಎಂಬ ಭೀತಿಯಿಂದ ಪ್ರಧಾನಿ ಸದನಕ್ಕೆ ಬರಲಿಲ್ಲ’ ಎಂದು ರಾಹುಲ್ ಗಾಂಧಿ ವ್ಯಂಗ್ಯವಾಡಿದರು.

‘ವಾಸ್ತವ ತುಂಬ ಸ್ಪಷ್ಟವಾಗಿದೆ. ಪ್ರಧಾನಿ ಅವರು ಸದನಕ್ಕೆ ಬರಲು ಹೆದರುತ್ತಿದ್ದಾರೆ. ಅದಕ್ಕೆ ಕಾರಣ ಸಂಸದರಲ್ಲ. ಅವರಿಗೆ ಸತ್ಯ ಎದುರಿಸಲು ಸಾಧ್ಯವಾಗುತ್ತಿಲ್ಲ. ಆ ಕಾರಣಕ್ಕೆ ಅವರು ಭಯಭೀತರಾಗಿದ್ದಾರೆ. ಪ್ರಧಾನಿ ಮೇಲೆ ನಮ್ಮ ಸಂಸದರು ದಾಳಿ ಮಾಡುವ ಪ್ರಶ್ನೆಯೇ ಇಲ್ಲ. ಅವರು ಬರಲು ಧೈರ್ಯ ಮಾಡಬೇಕು. ಯಾರಾದರೂ ಪ್ರಧಾನಿಯ ಮೇಲೆ ದಾಳಿ ಮಾಡುವುದಾಗಿ ಹೇಳಿದರೆ, ದಯವಿಟ್ಟು ಎಫ್‌ಐಆರ್ ದಾಖಲಿಸಿ, ಆ ವ್ಯಕ್ತಿಯನ್ನು ಬಂಧಿಸಿ ಎಂದು ನಾನು ಹೇಳಿದ್ದೇನೆ. ಸರ್ಕಾರ ಆ ಕೆಲಸವನ್ನೇಕೆ ಮಾಡುತ್ತಿಲ್ಲ’ ಎಂದು ಪ್ರಶ್ನಿಸಿದರು.

ಬಿರ್ಲಾ ಪದಚ್ಯುತಿ ನಿರ್ಣಯಕ್ಕೆ ‘ಕೈ’ ಸಿದ್ಧತೆ

ಸದನದಲ್ಲಿ ಮಾತನಾಡಲು ರಾಹುಲ್ ಗಾಂಧಿಗೆ ಅವಕಾಶ ನಿರಾಕರಿಸಿದ್ದು, ಎಂಟು ಸಂಸದರ ಅಮಾನತು ಸೇರಿದಂತೆ ನಾಲ್ಕು ವಿಷಯಗಳಿಗೆ ಸಂಬಂಧಿಸಿದಂತೆ ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸುವಂತೆ ನಿರ್ಣಯ ಮಂಡಿಸಲು ಕಾಂಗ್ರೆಸ್ ಸಿದ್ಧತೆ ನಡೆಸಿದೆ.

ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸಬೇಕು ಎಂದು ಕೋರಿ ನಿರ್ಣಯ ಮಂಡಿಸಲು ವಿಪಕ್ಷ ಮೈತ್ರಿಕೂಟದಲ್ಲಿ ಸುದೀರ್ಘ ಚರ್ಚೆ ನಡೆದಿದೆ. ಸ್ಪೀಕರ್ ಅವರ ಪಕ್ಷಪಾತಿ ಧೋರಣೆ ಬಗ್ಗೆ ಮೂರು ಪುಟಗಳ ನೋಟಿಸ್ ಸಿದ್ಧಪಡಿಸಲಾಗುತ್ತಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

▶6

ಭಾರತದ ಎದುರು ಆಡಲು ಪಾಕ್ ಒಪ್ಪಿಗೆ

ಇಸ್ಲಾಮಾಬಾದ್/ಢಾಕಾ (ಪಿಟಿಐ): ಇದೇ 15ರಂದು ಭಾರತದ ವಿರುದ್ಧ ನಡೆಯಲಿರುವ ಟಿ20 ವಿಶ್ವಕಪ್ ಪಂದ್ಯದಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡವನ್ನು ಕಣಕ್ಕೆ ಇಳಿಸಲು ಪಾಕಿಸ್ತಾನ ಸರ್ಕಾರ ಒಪ್ಪಿಗೆ ನೀಡಿದೆ.

▶12

ಡಿಜಿಟಲ್ ವಂಚನೆ ಎಸ್‌ಒಪಿ ರೂಪಿಸಲು ‘ಸುಪ್ರೀಂ’ ಸೂಚನೆ

ನವದೆಹಲಿ (ಪಿಟಿಐ): ಡಿಜಿಟಲ್ ವಂಚನೆ ಮೂಲಕ ₹54,000 ಕೋಟಿಗೂ ಹೆಚ್ಚಿನ ಹಣ ದೋಚಿರುವುದು ‘ಡಕಾಯಿತಿ’ಗೆ ಸಮ ಎಂದಿರುವ ಸುಪ್ರೀಂಕೋರ್ಟ್, ಸೈಬರ್ ವಂಚನೆ ಪ್ರಕರಣಗಳನ್ನು ತಡೆಯಲು ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ರೂಪಿಸುವಂತೆ ಕೇಂದ್ರ ಸರ್ಕಾರಕ್ಕೆ ಸೋಮವಾರ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ), ಇತರೆ ಪ್ರಮುಖ ಬ್ಯಾಂಕ್‌ಗಳು, ದೂರಸಂಪರ್ಕ ಇಲಾಖೆಯ ಸಲಹೆಗಳನ್ನು ಪಡೆದು ‘ಎಸ್‌ಒಪಿ’ ರೂಪಿಸಬೇಕು. ‘ಎಸ್‌ಒಪಿ’ ಸಿದ್ಧಗೊಂಡ ನಂತರ, ನಾಲ್ಕು ವಾರಗಳಲ್ಲಿ ಇದಕ್ಕೆ ಸಂಬಂಧಿಸಿದ ಒಪ್ಪಂದದ ಕರಡನ್ನು ಪ್ರಕಟಿಸಬೇಕು ಎಂದು ಕೇಂದ್ರ ಗೃಹ ಇಲಾಖೆಗೆ ನ್ಯಾಯಪೀಠ ನಿರ್ದೇಶಿಸಿದೆ.

‘ಡಿಜಿಟಲ್ ವಂಚನೆಯ ಮೊತ್ತವು ಸಣ್ಣ ರಾಜ್ಯಗಳ ಬಜೆಟ್‌ಗಿಂತಲೂ ಹೆಚ್ಚಿರುವುದು ಕಳವಳಕಾರಿ. ತಕ್ಷಣವೇ ಇಂತಹ ಪ್ರಕರಣಗಳಿಗೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಬೇಕು’ ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ, ಎನ್.ವಿ. ಅಂಜಾರಿಯಾ ಅವರಿದ್ದ ಪೀಠವು ತಾಕೀತು ಮಾಡಿದೆ.

ಇನ್ನೊಂದು ಸುದ್ದಿ ▶7

ಚಿನಕುರುಳಿ ಪ್ರಕಾಶ್ ಶೆಟ್ಟಿ

ಕೌಶಲ ತರಬೇತಿ ನೀಡಿದವರು ಯಾರು?

• ಜಯಸಿಂಹ ಆರ್.

ಬೆಂಗಳೂರು: ಪ್ರಧಾನ ಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆ ಅಡಿಯಲ್ಲಿ 2015ರಿಂದ 2024ರವರೆಗೆ 3.30 ಲಕ್ಷ ಬ್ಯಾಚ್‌ಗಳಲ್ಲಿ 1.30 ಕೋಟಿ ಜನರಿಗೆ ತರಬೇತಿ ನೀಡಲಾಗಿದೆ. ಆದರೆ, 2.30 ಲಕ್ಷ ಬ್ಯಾಚ್‌ಗಳಲ್ಲಿ ತರಬೇತಿ ನೀಡಿದವರು ಯಾರು ಎಂಬ ಮಾಹಿತಿಯೇ ಇಲ್ಲ. ಯೋಜನೆ ಅನುಷ್ಠಾನದಲ್ಲಿ ಹೆಜ್ಜೆಹೆಜ್ಜೆಗೂ ಅಕ್ರಮ ನಡೆದಿದೆ ಎಂದು ಮಹಾಲೇಖಪಾಲರು (ಸಿಎಜಿ) ಹೇಳಿದ್ದಾರೆ.

ಈಚೆಗೆ ಸಂಸತ್ತಿನಲ್ಲಿ ಮಂಡಿಸಲಾದ ‘ಪ್ರಧಾನ ಮಂತ್ರಿ ಕೌಶಲ್ಯಾಭಿವೃದ್ಧಿ ಯೋಜನೆ–ಲೆಕ್ಕಪರಿಶೋಧನೆ’ ವರದಿಯಲ್ಲಿ ಈ ಉಲ್ಲೇಖ ಇದೆ.

‘ಯುವಜನರಲ್ಲಿ ಉದ್ಯೋಗಾರ್ಹತೆ ಹೆಚ್ಚಿಸುವ ಉದ್ದೇಶದ, ಪ್ರಧಾನಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷಿ ಯೋಜನೆ ಇದು. 2015ರಿಂದ 2014ರವರೆಗೆ ಒಟ್ಟು ಮೂರು ಹಂತಗಳಲ್ಲಿ ₹10,194 ಕೋಟಿ ವೆಚ್ಚ ಮಾಡಲಾಗಿದೆ. ಸಾವಿರಾರು ತರಬೇತುದಾರರು 3.30 ಲಕ್ಷ ಬ್ಯಾಚ್‌ಗಳಲ್ಲಿ ತರಬೇತಿ ನೀಡಿದ್ದಾರೆ ಎಂದು ಕೇಂದ್ರ ಸರ್ಕಾರದ ವರದಿ ಹೇಳುತ್ತದೆ. ಆದರೆ ಈ ತರಬೇತುದಾರರು ಯಾರು ಎಂಬುದನ್ನು ವಿವರಿಸುವ ಸಂಪೂರ್ಣ ವಿವರ ಲಭ್ಯವಿಲ್ಲ’ ಎಂದು ಸಿಎಜಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

▶6

ಇಲ್ಲದ ಕಂಪನಿಗಳಿಂದ ತರಬೇತಿ

‘ನೀಲಿಮಾ ಮೂವಿಂಗ್ ಪಿಕ್ಚರ್ಸ್’ ಎಂಬ ಕಂಪನಿಯು 100 ನೌಕರರನ್ನು ಹೊಂದಿದ್ದು, ಸಿನಿಮಾ ಕ್ಷೇತ್ರದಲ್ಲಿ 33,493 ಮಂದಿಗೆ ತರಬೇತಿ ನೀಡಿದೆ ಎಂದು ಕೌಶಲ್ಯಾಭಿವೃದ್ಧಿ ಸಚಿವಾಲಯವು ಲೆಕ್ಕಪರಿಶೋಧನೆಗೆ ದಾಖಲೆ ಸಲ್ಲಿಸಿತ್ತು. ಈ ಹೆಸರಿನ ಕಂಪನಿಯು ದೇಶದ ಯಾವುದೇ ಭಾಗದಲ್ಲೂ ನೋಂದಣಿ ಆಗಿಲ್ಲ ಎಂಬುದು ಗೊತ್ತಾಯಿತು. ಆದರೆ ದೇಶದ ಎಂಟು ರಾಜ್ಯಗಳಲ್ಲಿ ಈ ಕಂಪನಿ ತರಬೇತಿ ನೀಡಿದೆ ಎಂದು ಹಣ ಪಾವತಿ ಮಾಡಲಾಗಿದೆ’ ಎಂದು ಸಿಎಜಿ ವಿವರಿಸಿದೆ.

‘ಈ ಬಗ್ಗೆ ವಿವರಣೆ ಕೇಳಿದ್ದಕ್ಕೆ, ಕೌಶಲ್ಯಾಭಿವೃದ್ಧಿ ಸಚಿವಾಲಯವು ‘ನೀಲಿಮಾ ಮೂವಿಂಗ್ ಪಿಕ್ಚರ್ಸ್’ ಎಂಬ ಹೆಸರಿನ ಲಿಂಕ್ಡ್‌ಇನ್ ಖಾತೆಯ ಲಿಂಕ್ ನೀಡಿದೆ. ಲಿಂಕ್ಡ್‌ಇನ್ ಖಾತೆಯ ಆಧಾರದಲ್ಲಿ ತರಬೇತುದಾರರ ಕಂಪನಿಯನ್ನು ಆಯ್ಕೆ ಮಾಡಲಾಗಿದೆ. ಇದೇ ಕಂಪನಿ ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಿಸುವ ಸಮಾರಂಭದ ಒಂದೇ ಚಿತ್ರವನ್ನು ಹಲವು ಬ್ಯಾಚ್‌ಗಳದ್ದು ಎಂದು ಸುಳ್ಳು ಮಾಹಿತಿ ನೀಡಿದೆ’ ಎಂದಿದೆ.

▶6

ಸೂರ್ಯೋದಯ: 6:44 ಸೂರ್ಯಾಸ್ತ : 6:23 | ಚಂದ್ರೋದಯ: ರಾ. 11:41 ಚಂದ್ರಾಸ್ತ: ಬೆ. 11:35 | ಸೋಮವಾರದ ಉಷ್ಣಾಂಶ : ಗರಿಷ್ಠ 30° ಕನಿಷ್ಠ 17°

ಮಂಗಳವಾರ • ಫೆಬ್ರುವರಿ 10, 2026

ಮಂಗಳವಾರದ ಉಷ್ಣಾಂಶ 31° ಗರಿಷ್ಠ 17° ಕನಿಷ್ಠ | ಬುಧವಾರ 31° : 17° | ಗುರುವಾರ 31° : 17° | ಶುಕ್ರವಾರ 31° : 17°

ಪ್ರಜಾವಾಣಿ

ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ.

ಚುಟುಕು ಸುದ್ದಿ

ಕವಿ-ಕವಯಿತ್ರಿಯರಿಗೆ ಕವನ ಸ್ಪರ್ಧೆ

ಬೆಂಗಳೂರು: ಕನ್ನಡ ಸಂಘರ್ಷ ಸಮಿತಿಯು ರಾಷ್ಟ್ರಕವಿ ಗೋವಿಂದ ಪೈ ಅವರ ಜನ್ಮದಿನದ ಪ್ರಯುಕ್ತ ಮಾರ್ಚ್ 23ರಂದು ಉದಯೋನ್ಮುಖ ಕವಿ-ಕವಯಿತ್ರಿಯರಿಗೆ ಕವನ ಸ್ಪರ್ಧೆ ಆಯೋಜಿಸಿದೆ.



ಇದುವರೆಗೆ ಒಂದೂ ಕವನ ಸಂಕಲನ ಹೊರತರದ ಕವಿ-ಕವಯಿತ್ರಿಯರು, 'ಕನ್ನಡ ನಾಡು-ನುಡಿ, ಸಾಹಿತ್ಯ, ಕನ್ನಡ ನಾಡಿನ ಪರಂಪರೆ' ಕುರಿತು ರಚಿಸಿದ ಒಂದು ಕವನವನ್ನು ಸ್ಪರ್ಧೆಗೆ ಕಳುಹಿಸಿಕೊಡಬಹುದಾಗಿದೆ. ಪ್ರಥಮ ಬಹುಮಾನ ₹2,500, ದ್ವಿತೀಯ ಬಹುಮಾನ ₹2,000 ಹಾಗೂ ತೃತೀಯ ಬಹುಮಾನ ₹ 1,500 ಒಳಗೊಂಡಿದೆ.

ಆಸಕ್ತರು ಕವನವನ್ನು ಎ.ಎಸ್. ನಾಗರಾಜಸ್ವಾಮಿ, ಅಧ್ಯಕ್ಷರು, ಕನ್ನಡ ಸಂಘರ್ಷ ಸಮಿತಿ, ನಂ.3, 1ನೇ ತಿರುವು, 1ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿ ಬಡಾವಣೆ, ಬೆಂಗಳೂರು-560056 ಈ ವಿಳಾಸಕ್ಕೆ ಮಾರ್ಚ್ 5ರೊಳಗೆ ಕಳುಹಿಸಬೇಕು. ₹ 50 ಪ್ರವೇಶ ಶುಲ್ಕ ನಿಗದಿಪಡಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 9739001410

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

'9 ಲಕ್ಷ ಇ– ಖಾತಾ ವಿತರಣೆ'

ನಗರದಲ್ಲಿ 25 ಲಕ್ಷ ಆಸ್ತಿಗಳ ಡಿಜಿಟಲೀಕರಣ
ದಾಖಲೆಗಳಿಗೆ ಆಧಾರ್ ಜೋಡಣೆ

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಂಗಳೂರು: ನಗರದಾದ್ಯಂತ ಇದುವರೆಗೂ 25 ಲಕ್ಷ ಆಸ್ತಿಗಳನ್ನು ಡಿಜಿಟಲೀಕರಣ ಮಾಡಲಾಗಿದೆ. 9 ಲಕ್ಷ ಇ-ಖಾತಾಗಳನ್ನು ಜನರಿಗೆ ಹಂಚಿಕೆ ಮಾಡಲಾಗಿದೆ. ಉಚಿತವಾಗಿ, ಇ-ಖಾತಾ ಅಭಿಯಾನ ಪ್ರಾರಂಭ ಮಾಡಲು ಎಲ್ಲಾ ಪಾಲಿಕೆಗಳಿಗೆ ಸೂಚನೆ ನೀಡಲಾಗಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಖಾತಾ ಪರಿವರ್ತನೆ ಮಾಡಿಸಿಕೊಂಡವರಿಗೆ ಸೋಮವಾರ ಖಾತಾ ಪತ್ರ ವಿತರಣೆ ಮಾಡಿ ಅವರು ಸುದ್ದಿಗಾರರೊಂದಿಗೆ ಜತೆ ಮಾತನಾಡಿದರು.

'ಆಸ್ತಿ ದಾಖಲೆಗಳ ಡಿಜಿಟಲೀಕರಣ ಈ ಸರ್ಕಾರದ ಪ್ರಮುಖ ತೀರ್ಮಾನ. ಈ ಹಿಂದೆ ಕೃಷಿ ಭೂಮಿ ಡಿಜಿಟಲೀಕರಣಕ್ಕೆ ಭೂಮಿ ಯೋಜನೆ ತರಲಾಗಿತ್ತು. ನಮ್ಮ ಬೆಂಗಳೂರಿನ ಎಲ್ಲಾ ದಾಖಲೆಗಳನ್ನು ಸ್ಕ್ಯಾನ್ ಮಾಡಿ 'ಇ-ಖಾತ' ವ್ಯವಸ್ಥೆ ತರಲು ಉದ್ದೇಶಿಸಿದ್ದೇವೆ. ಉಪ ನೋಂದಣಾಧಿಕಾರಿ ಕಚೇರಿಗಳಲ್ಲಿ ಕಾವೇರಿ ಸಾಫ್ಟ್‌ವೇರ್‌ನಲ್ಲಿ ದಾಖಲೆಗಳು ಆಧಾರ್ ಜೊತೆ ಲಿಂಕ್ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದರು.

'ಯೂನಿಫಾರ್ಮ್ ಲ್ಯಾಂಡ್ ರೆಕಾರ್ಡ್ ಮ್ಯಾನೇಜ್‌ಮೆಂಟ್ ಸಿಸ್ಟಮ್' ಮೂಲಕ ಬಿ ಖಾತಾದಿಂದ ಎ ಖಾತ ನೀಡಲಾಗುತ್ತಿದೆ. ಈಗಾಗಲೇ ಏಳು ಸಾವಿರ ಅರ್ಜಿಗಳು ಬಂದಿವೆ. ಇದಕ್ಕೆ ಇನ್ನೂ ಲಕ್ಷಗಟ್ಟಲೆ ಅರ್ಜಿಗಳು ಬರಬೇಕಿದೆ. ಈಗಾಗಲೇ ಅರ್ಜಿ ಹಾಕಿರುವವರಿಗೆ 15 ದಿನದಲ್ಲಿ ಖಾತಾ ನೀಡಲು ಸಮಯ ನಿಗದಿಪಡಿಸಲಾಗಿದೆ ಎಂದರು.

'ಅನೇಕರು ಕ್ರಯಪತ್ರ ಮಾತ್ರ ಹೊಂದಿದ್ದು, ಖಾತೆಯನ್ನೇ ಪಡೆದಿಲ್ಲ. 1.20 ಲಕ್ಷ ಜನ ಈ ಬಗ್ಗೆ ಅರ್ಜಿ ನೀಡಿದ್ದಾರೆ. 60 ಸಾವಿರ ಜನರ ಅರ್ಜಿ ಒಪ್ಪಿತವಾಗಿದೆ. 40 ಸಾವಿರ ಅರ್ಜಿ ರದ್ದಾಗಿದೆ. 15 ಸಾವಿರ ಅರ್ಜಿಗಳು ವಿವಿಧ ಹಂತದಲ್ಲಿವೆ. ಅರ್ಜಿಗಳು ಏಕೆ ತಿರಸ್ಕೃತವಾಗಿವೆ ಎಂದು ಮತ್ತೊಮ್ಮೆ ಪರಿಶೀಲನೆ ನಡೆಸಲಾಗುತ್ತಿದೆ' ಎಂದರು.

ಒಂದೇ ದಿನ 17 ಸಾವಿರ ನಿವೇಶನ ಹಂಚಿಕೆ

'ಶಿವರಾಮ ಕಾರಂತ ಬಡಾವಣೆಯಲ್ಲಿ ಭೂಮಿ ಕಳೆದುಕೊಂಡವರಿಗೆ ಪರಿಹಾರ ನೀಡಿ ಎಂದು ನ್ಯಾಯಾಲಯ ಆದೇಶಿಸಿದೆ. 34,977 ನಿವೇಶನ ರಚಿಸಲಾಗಿದೆ. 17 ಸಾವಿರ ನಿವೇಶನಗಳನ್ನು ಭೂ ಮಾಲೀಕರಿಗೆ ನೀಡಬೇಕು. ಶೇ 75ರಷ್ಟು ಮಾಲೀಕರು ಇದಕ್ಕೆ ತಯಾರಿದ್ದಾರೆ. ಮಿಕ್ಕ ಮಾಲೀಕರ ಬಳಿ ನಾನು ಮನವಿ ಮಾಡುತ್ತಿದ್ದೇನೆ. ಬಿಡಿಎ 50 ವರ್ಷ ತುಂಬುತ್ತಿದ್ದು, 17 ಸಾವಿರ ಜನರಿಗೂ ಒಂದೇ ದಿನ ಹಂಚಿಕೆ ಮಾಡುವ ಕಾರ್ಯಕ್ರಮ ನಡೆಸಲಾಗುವುದು. ಉಳಿದ ನಿವೇಶನಗಳಿಗೆ ಅರ್ಜಿ ಕರೆದು ನೀಡಲಾಗುವುದು' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

5,173 ಹೆಕ್ಟೇರ್ ಮುಳುಗಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾವೇರಿ ಮತ್ತು ಅರ್ಕಾವತಿ ನದಿಗಳ ಸಂಗಮದ ಕೆಳಭಾಗದಿಂದ ಸುಮಾರು 2 ಕಿ.ಮೀ ದೂರದಲ್ಲಿ ಮೇಕೆದಾಟು ಅಣೆಕಟ್ಟೆ ನಿರ್ಮಿಸಲು ಕರ್ನಾಟಕ ಸರ್ಕಾರ ತೀರ್ಮಾನಿಸಿದೆ.

ಮೇಕೆದಾಟು ಸಮತೋಲನ ಜಲಾಶಯ ನಿರ್ಮಾಣಕ್ಕೆ ಕಾವೇರಿ ನೀರಾವರಿ ನಿಗಮ ಸಿದ್ಧಪಡಿಸಿರುವ ವಿಸ್ತೃತ ಯೋಜನಾ ವರದಿಯನ್ನು (ಡಿಪಿಆರ್) ಕೇಂದ್ರ ಜಲ ಆಯೋಗ ಪರಿಶೀಲನೆ ನಡೆಸಬೇಕಿದೆ. ಈ ಯೋಜನೆಯಿಂದಾಗಿ 5,173 ಹೆಕ್ಟೇರ್ ಪ್ರದೇಶ ಮುಳುಗಡೆಯಾಗಲಿದೆ.

ಮೇಕೆದಾಟು

ಯೋಜನೆ ಅನುಷ್ಠಾನಕ್ಕಾಗಿ ಭಾರಿ ಪ್ರಮಾಣದ ಅರಣ್ಯ ಬಳಕೆಗಾಗಿ ಕೇಂದ್ರ ಅರಣ್ಯ ಹಾಗೂ ಪರಿಸರ ಸಚಿವಾಲಯದಿಂದ ಅನುಮತಿ ಪಡೆಯಬೇಕಿದೆ. ಇದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಸೋಮವಾರ (ಫೆ.2) ಸವಿಸ್ತಾರವಾದ ವಿವರಣೆ ನೀಡಿರುವ ನಿಗಮದ ಮುಖ್ಯ ಎಂಜಿನಿಯರ್, 'ಹಲವಾರು ಅಧ್ಯಯನಗಳನ್ನು ನಡೆಸಿದ ಬಳಿಕ ಸಾಧಕ ಬಾಧಕಗಳನ್ನು ಪರಿಶೀಲಿಸಿ ಅಣೆಕಟ್ಟೆ ನಿರ್ಮಾಣದ ಜಾಗವನ್ನು ಅಂತಿಮಗೊಳಿಸಲಾಗಿದೆ' ಎಂದು ತಿಳಿಸಿದ್ದಾರೆ.

'ಅಣೆಕಟ್ಟಿನ ಎತ್ತರ 99 ಮೀಟರ್ ಇರಲಿದೆ. ಕಾವೇರಿ ವನ್ಯಜೀವಿ ಅಭಯಾರಣ್ಯದಲ್ಲಿರುವ ಪ್ರಸ್ತುತ ಸ್ಥಳದ ಮೇಲ್ಭಾಗ ಅಥವಾ ಕೆಳಭಾಗದಲ್ಲಿ ಯಾವುದೇ ನೀರಿನ ಸಂಗ್ರಹಣಾ ಸ್ಥಳ (ಜಲಾಶಯ) ಇಲ್ಲ. ಹೀಗಾಗಿ, ಈ ಜಲಾಶಯದಲ್ಲಿ 67.16 ಟಿಎಂಸಿ ಅಡಿ ನೀರು ಸಂಗ್ರಹಿಸಬಹುದು. ಈ ಅಣೆಕಟ್ಟೆಯು ಮಳೆಗಾಲದಲ್ಲಿ ವನ್ಯಜೀವಿಗಳ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಉಪಯುಕ್ತ ಆಗಲಿದೆ' ಎಂದು ಅವರು ಪ್ರತಿಪಾದಿಸಿದ್ದಾರೆ.

2011ರ ಜನಗಣತಿಯ ಪ್ರಕಾರ 1,91,976 ಚದರ ಕಿ.ಮೀ ಭೌಗೋಳಿಕ ವಿಸ್ತೀರ್ಣ ಹೊಂದಿರುವ ಕರ್ನಾಟಕ ರಾಜ್ಯವು ದೇಶದ ಎಂಟನೇ ಅತಿದೊಡ್ಡ ರಾಜ್ಯ. ಕರ್ನಾಟಕದಲ್ಲಿ ಪಶ್ಚಿಮಕ್ಕೆ ಹರಿಯುವ 13 ನದಿಗಳ ಜೊತೆಗೆ ಕೃಷ್ಣಾ ಮತ್ತು ಕಾವೇರಿಯಂತಹ ಪ್ರಮುಖ ನದಿಗಳಿವೆ. ಆದರೂ, ತೀವ್ರ ಬರ, ಕುಡಿಯುವ ನೀರಿನ ಅಭಾವ ಮತ್ತು ತೀವ್ರ ವಿದ್ಯುತ್ ಕೊರತೆ ಎದುರಿಸುತ್ತಿದೆ. ರಾಜಸ್ಥಾನದ ನಂತರ ಹೆಚ್ಚು ಬರಪೀಡಿತ ಪ್ರದೇಶಗಳು ಇರುವುದು ಕರ್ನಾಟಕದಲ್ಲೇ. ಹೀಗಾಗಿ, ಮೇಕೆದಾಟು ಅಣೆಕಟ್ಟೆ ನಿರ್ಮಿಸುವುದು ಇಂದಿನ ತುರ್ತು ಎಂದು ಅವರು ಹೇಳಿದ್ದಾರೆ.

ರಾಜಧಾನಿಯ ಜಲ ದಾಹ ನೀಗಿಸಲು...



ಜನಸಂಖ್ಯೆಯ ತೀವ್ರ ಹೆಚ್ಚಳದಿಂದ ಬೆಂಗಳೂರು ಮಹಾನಗರ ಪ್ರದೇಶ ಮತ್ತು ಕಾವೇರಿ ಜಲಾನಯನ ಪ್ರದೇಶದಲ್ಲಿ ತೀವ್ರ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಬೆಂಗಳೂರು ನಗರದ ಕೇವಲ ಶೇ 33 ಪ್ರದೇಶ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರುತ್ತದೆ ಎಂದು ಕಾವೇರಿ ನ್ಯಾಯಮಂಡಳಿ ತೀರ್ಪಿನಲ್ಲಿ ತಿಳಿಸಲಾಗಿದೆ. ಆದರೂ, ರಾಜಧಾನಿಯು ಗ್ರೇಟರ್ ಬೆಂಗಳೂರು ಪ್ರಾಧಿಕಾರವಾಗಿ ಬದಲಾದ ಬಳಿಕ ನಗರದ ವ್ಯಾಪ್ತಿಗೆ ಕಾವೇರಿ ಜಲಾನಯನ ಪ್ರದೇಶದ ಹೆಚ್ಚುವರಿ ಪ್ರದೇಶಗಳನ್ನು ಸೇರಿಸಲಾಗಿದೆ.

ಪ್ರದೇಶಗಳ ಸೇರ್ಪಡೆ ಹಾಗೂ ಜನಸಂಖ್ಯೆ ಹೆಚ್ಚಳದಿಂದಾಗಿ ಈಗಿನ ಯೋಜನೆಗಳು ಕುಡಿಯುವ ನೀರಿನ ಬೇಡಿಕೆ ಪೂರೈಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಮೇಕೆದಾಟು ಯೋಜನೆ ಪ್ರಸ್ತಾಪಿಸಲಾಗಿದೆ. ಕನಿಷ್ಠ 30 ವರ್ಷಗಳ ಜನಸಂಖ್ಯೆ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು ಈ ಯೋಜನೆಯ ವಿನ್ಯಾಸಗೊಳಿಸಲಾಗಿದೆ ಎಂದು ಮುಖ್ಯ ಎಂಜಿನಿಯರ್ ಸ್ಪಷ್ಟಪಡಿಸಿದ್ದಾರೆ.

ಪುಸ್ತಕ ಬಹುಮಾನಕ್ಕೆ ಆಹ್ವಾನ

ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು 2025ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಅನುವಾದಕರು ಹಾಗೂ ಪ್ರಕಾಶಕರಿಂದ ಪುಸ್ತಕಗಳನ್ನು ಆಹ್ವಾನಿಸಿದೆ.

2025ರ ಜ.1ರಿಂದ ಡಿ.31ರ ಅವಧಿಯಲ್ಲಿ ಪ್ರಥಮಾವೃತ್ತಿಯಲ್ಲಿ ಪ್ರಕಟಗೊಂಡ ಅನುವಾದಿತ ಕೃತಿಗಳು ಹಾಗೂ ಅನುವಾದ ಅಧ್ಯಯನ ಕುರಿತ ಪುಸ್ತಕಗಳನ್ನು ಪರಿಗಣಿಸಲಾಗುತ್ತದೆ. ಕನ್ನಡದಿಂದ ಇತರ ಭಾಷೆಗೆ ಅಥವಾ ಇತರ ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಕೃತಿಗಳನ್ನು ಕಳುಹಿಸಬಹುದಾಗಿದೆ.

ಪ್ರತಿ ಪುಸ್ತಕದ 4 ಪ್ರತಿಗಳನ್ನು ಮಾರ್ಚ್ 31ರೊಳಗೆ ರಿಜಿಸ್ಟ್ರಾರ್, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಜ್ಞಾನಭಾರತಿ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಂಗಳೂರು-560056 ಈ ವಿಳಾಸಕ್ಕೆ ಕಳುಹಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ 080 23183311

₹3 ಲಕ್ಷ ಲಂಚ: ಬೆಸ್ಕಾಂ ಇಇ ಬಂಧನ

ಬೆಂಗಳೂರು: ವಿದ್ಯುತ್ ಮೀಟರ್ ಸಂಪರ್ಕ ಮರುಚಾಲನೆ ಮಾಡಲು ಮತ್ತು ನೂತನ ಸಂಪರ್ಕ ನೀಡುವ ಸಲುವಾಗಿ ₹3 ಲಕ್ಷ ಲಂಚ ಪಡೆಯುತ್ತಿದ್ದ ವೇಳೆ ಬೆಸ್ಕಾಂನ ಇಂದಿರಾ ನಗರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ (ಇಇ) ರಾಜೇಶ್ ಕೆ.ವಿ. ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ವಿದ್ಯುತ್ ಗುತ್ತಿಗೆದಾರ ದಿಲೀಪ್. ಎಸ್.ಎನ್ ಅವರು ಇಂದಿರಾನಗರ ಬೆಸ್ಕಾಂ ಕಚೇರಿ ವ್ಯಾಪ್ತಿಯಲ್ಲಿ ವಾಣಿಜ್ಯ ಕಟ್ಟಡವೊಂದಕ್ಕೆ ವಿದ್ಯುತ್ ಕಾಮಗಾರಿ ನಡೆಸುತ್ತಿದ್ದಾರೆ. ಆ ಕಟ್ಟಡಕ್ಕೆ 24 ಕಿಲೋವಾಟ್ ಸಾಮರ್ಥ್ಯದ ನೂತನ ಸಂಪರ್ಕ ಪಡೆಯಲು ಅರ್ಜಿ ಸಲ್ಲಿಸಿದ್ದರು.

ಈ ಕೆಲಸಕ್ಕೆ ರಾಜೇಶ್ ಕೆ.ವಿ ಅವರು ₹7 ಲಕ್ಷ ಲಂಚ ನೀಡುವಂತೆ ಬೇಡಿಕೆ ಇಟ್ಟು, ₹3 ಲಕ್ಷಕ್ಕೆ ಒಪ್ಪಿಕೊಂಡಿದ್ದರು. ಈ ಬಗ್ಗೆ ದಿಲೀಪ್ ಅವರು ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು.

ಲೋಕಾಯುಕ್ತ ಎಸ್‌ಪಿ ಶಿವಪ್ರಕಾಶ್ ದೇವರಾಜ್ ಅವರ ಮಾರ್ಗದರ್ಶನದಲ್ಲಿ ಇನ್‌ಸ್ಪೆಕ್ಟರ್‌ಗಳಾದ ಎಸ್.ಬಿ.ಪಾಟೀಲ, ಕೇಶವಮೂರ್ತಿ ಮತ್ತು ರಾಜಶೇಖರಯ್ಯ ಅವರ ತಂಡವು ಕಾರ್ಯಾಚರಣೆ ರೂಪಿಸಿತ್ತು. ಅದರಂತೆ ದಿಲೀಪ್ ಅವರು ಸೋಮವಾರ, ರಾಜೇಶ್ ಅವರಿಗೆ ₹3 ಲಕ್ಷ ನೀಡಿದ್ದರು. ಇದೇ ವೇಳೆ ದಾಳಿ ನಡೆಸಿ ಅವರನ್ನು ಬಂಧಿಸಲಾಯಿತು. ಲಂಚದ ಹಣ ವಶಕ್ಕೆ ಪಡೆದಿದ್ದು, ತನಿಖೆ ಮುಂದುವರಿದಿದೆ ಎಂದು ಲೋಕಾಯುಕ್ತದ ಪ್ರಕಟಣೆ ತಿಳಿಸಿದೆ.

ನಗರ ಪಾಲಿಕೆಗಳ ವಾರ್ಡ್ ಗಡಿ ಪಾಲನೆ ಕಡ್ಡಾಯ

ಬೆಂಗಳೂರು: ಐದು ನಗರ ಪಾಲಿಕೆಗಳ ಚುನಾವಣೆಗೆ ಸಂಬಂಧಿಸಿದಂತೆ ಅಧಿಸೂಚನೆಯಲ್ಲಿ ನಮೂದಿಸಿರುವ ವಾರ್ಡ್ ಗಡಿಗಳನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರ ಪಾಲಿಕೆ ಮತದಾರರ ಕರಡು ಪಟ್ಟಿಯ ಪರಿಶೀಲನೆಗೆ ಸಂಬಂಧಿಸಿದ ಪ್ರಮಾಣಿತ ಕಾರ್ಯವಿಧಾನ (ಎಸ್‌ಒಪಿ) ಕುರಿತು ಆಯೋಜಿಸಲಾದ ಸಭೆಯಲ್ಲಿ ಅವರು ಮಾತನಾಡಿದರು.

ಅಧಿಸೂಚನಾ ವಾರ್ಡ್ ವಿವರಣೆಗಳಿಗೆ ಅನುಗುಣವಾಗಿ ಗಡಿಗಳನ್ನು ಸರಿಪಡಿಸಿ, ದೀರ್ಘಾವಧಿಯಲ್ಲಿ ವ್ಯವಸ್ಥಿತ ಸರ್ವೆ ಮೂಲಕ ಪರಿಶೀಲನೆ ಕೈಗೊಳ್ಳುವಂತೆ ಐಟಿ ವಿಭಾಗದ ಅಧಿಕಾರಿಗಳಿಗೆ ಅವರು ಸೂಚನೆ ನೀಡಿದರು.

ಪ್ರತಿ ನಗರ ಪಾಲಿಕೆಯಲ್ಲಿ ಒಬ್ಬ ತಹಶೀಲ್ದಾರ್, ಒಬ್ಬ ವ್ಯವಸ್ಥಾಪಕ, ಒಬ್ಬ ಎಫ್‌ಡಿಎ, ಒಬ್ಬ ಎಸ್‌ಡಿಎ ಹಾಗೂ ಒಬ್ಬ ಡೇಟಾ ಎಂಟ್ರಿ ಆಪರೇಟರ್ ಹೊಂದಿರುವ ಚುನಾವಣಾ ವಿಭಾಗವನ್ನು ರಚಿಸುವಂತೆ ಮುಖ್ಯ ಆಯುಕ್ತರು ನಿರ್ದೇಶಿಸಿದರು.

ಮತಗಟ್ಟೆಗಳ ಒಟ್ಟು ಸಂಖ್ಯೆ, ನಗರ ಪಾಲಿಕೆಗಳ ಒಳಗೆ ವಿಭಜಿತವಾದ ವಾರ್ಡ್‌ಗಳು ಹಾಗೂ ನಗರ ಪಾಲಿಕೆಗಳ ನಡುವೆ ವಿಭಜಿತವಾದ ವಾರ್ಡ್‌ಗಳಿಗೆ ಸಂಬಂಧಿಸಿದ ಡೇಟಾ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ಹಾಗೂ ಜಿಬಿಎ ಚುನಾವಣಾ ವಿಭಾಗದೊಂದಿಗೆ ಸಮನ್ವಯ ಸಾಧಿಸಬೇಕು. ಇದಕ್ಕಾಗಿ ಐದು ನಗರ ಪಾಲಿಕೆಗಳಲ್ಲಿಯೂ ಕಂದಾಯದ ಹೆಚ್ಚುವರಿ ಆಯುಕ್ತರನ್ನು ನೋಡಲ್ ಅಧಿಕಾರಿಗಳನ್ನಾಗಿ ನಿಯೋಜಿಸಲು ಸೂಚಿಸಿದರು.

ಮತದಾರರ ಪಟ್ಟಿ ಮಾಹಿತಿಯ ಆಧಾರದ ಮೇಲೆ ಎಲ್ಲಾ ವಾರ್ಡ್‌ಗಳನ್ನು, ವಿಶೇಷವಾಗಿ ವಿಭಜಿತ ವಾರ್ಡ್‌ಗಳನ್ನು, ಮತದಾರರ ನೋಂದಣಾಧಿಕಾರಿಗಳು ಮತ್ತು ಸಹಾಯಕ ಮತದಾರರ ನೋಂದಣಾಧಿಕಾರಿಗಳು ಸೂಕ್ಷ್ಮವಾಗಿ ಪರಿಶೀಲಿಸಬೇಕು. ವಿಭಜಿತ ವಾರ್ಡ್‌ಗಳಿಗೆ ಸಂಬಂಧಿಸಿದ ಮಾಹಿತಿಯ ನಿಖರತೆಯನ್ನು ನಗರ ಪಾಲಿಕೆ ಆಯುಕ್ತರು ಸ್ವತಂತ್ರವಾಗಿ ಪರಿಶೀಲಿಸಿ ದೃಢೀಕರಿಸುವಂತೆ ನಿರ್ದೇಶಿಸಿದರು.

ಚುನಾವಣೆ ವಿಭಾಗದ ವಿಶೇಷ ಆಯುಕ್ತರಾದ ರಾಮಚಂದ್ರನ್ ಮಾತನಾಡಿ, ನಗರ ಪಾಲಿಕೆ ಮತದಾರರ ಕರಡು ಪಟ್ಟಿಯ ಪರಿಶೀಲನೆಯ ವೇಳೆ ನಿಖರತೆ, ಪಾರದರ್ಶಕತೆ ಹಾಗೂ ವಿಶ್ವಾಸಾರ್ಹತೆಯನ್ನು ಖಚಿತಪಡಿಸಲು ಏಕರೂಪವಾದ ಪ್ರಮಾಣಿತ ಕಾರ್ಯವಿಧಾನವನ್ನು (ಎಸ್‌ಒಪಿ) ಕಟ್ಟುನಿಟ್ಟಾಗಿ ಅನುಸರಿಸುವುದು ಅತ್ಯಂತ ಅಗತ್ಯವೆಂದು ಅವರು ತಿಳಿಸಿದರು.

ನಗರ ಪಾಲಿಕೆಗಳ ಆಯುಕ್ತರಾದ ರಾಜೇಂದ್ರ ಚೋಳನ್, ಪೊಮ್ಮಲ ಸುನೀಲ್ ಕುಮಾರ್, ರಮೇಶ್ ಡಿ.ಎಸ್, ರಮೇಶ್ ಕೆ.ಎನ್, ಕಂದಾಯ ವಿಭಾಗದ ಹೆಚ್ಚುವರಿ ಆಯುಕ್ತರಾದ ಮಂಜುನಾಥ ಸ್ವಾಮಿ, ರಂಗನಾಥ್, ಪ್ರಜ್ಞಾ ಅಮ್ಮೆಂಬಳ, ರಾಚಪ್ಪ, ಅಮರೇಶ್, ಸಹಾಯಕ ಆಯುಕ್ತ ಎಂ.ಶ್ರೀನಿವಾಸ್ ಉಪಸ್ಥಿತರಿದ್ದರು.

'ಪಾರ್ಕಿಂಗ್ ಮಾಫಿಯಾ ಮತ್ತೆ ಪ್ರಾರಂಭ'

ಬೆಂಗಳೂರು: 'ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಂದಾಗಿ ಬೆಂಗಳೂರು ನಗರದಲ್ಲಿ ಮತ್ತೆ ಪಾರ್ಕಿಂಗ್ ಮಾಫಿಯಾ ಪ್ರಾರಂಭವಾಗಿದೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಸಂಘಟನಾ ಕಾರ್ಯದರ್ಶಿ ಸತೀಶ್ ಕುಮಾರ್ ಆರೋಪಿಸಿದರು.

'ಬೆಂಗಳೂರಿನ 5 ನಗರ ಪಾಲಿಕೆಗಳು ಈ ಬಗ್ಗೆ ಟೆಂಡರ್ ಕರೆದಿದ್ದು, ಸರ್ಕಾರ ನೇರವಾಗಿ ಬೆಂಗಳೂರಿಗರ ಜೇಬಿಗೆ ಕನ್ನ ಹಾಕುವ ಉದ್ದೇಶ ಹೊಂದಿದೆ' ಎಂದು ಅವರು ಆರೋಪಿಸಿದ್ದಾರೆ.

ನಗರದಲ್ಲಿ ಇಂದು

ಎಚ್.ವಿ. ಅನಂತಸುಬ್ಬರಾವ್ ಅವರಿಗೆ ನುಡಿನಮನ: ಸ್ಥಳ: ಪುರಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3

ಕಾಯಕ ಶರಣರ ಜಯಂತಿ: ಉದ್ಘಾಟನೆ ಮತ್ತು ಪ್ರಶಸ್ತಿ ಪ್ರದಾನ: ಸಿದ್ದರಾಮಯ್ಯ, ಸಾನ್ನಿಧ್ಯ: ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ, ಬಸವಹರಳಯ್ಯ ಸ್ವಾಮೀಜಿ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಶಿವರಾಜ ಎಸ್. ತಂಗಡಗಿ, ಅತಿಥಿಗಳು: ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ರೂಪಕಲಾ ಎಂ., ಉದಯ್ ಬಿ. ಗರುಡಾಚಾರ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

'ಶೂರ್ಪನಖಿ' ನಾಟಕ ಪ್ರದರ್ಶನ: ರಚನೆ: ಅಪೂರ್ವ ಕಾಸರವಳ್ಳಿ, ನಿರ್ದೇಶನ: ವಂದನಾ ಸುಪ್ರಿಯಾ ಕಾಸರವಳ್ಳಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ನಗರಸಭಾ ಕಾರ್ಯಾಲಯ, ಶಿರಾ

ನಸಶಿ/ಟೆಂಡರ್/ತಾಂಶಾ/ಸಿ.ಆರ್/20/2025–26 ದಿನಾಂಕ:–05–02–2026

ಪತ್ರಿಕಾ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಆದ್ಯಾದೇಶ 1999–2000 ಪ್ರಕಾರ ಆಕ್ಟ್ 2000ರನ್ವಯ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ (CMIDP) ಯಲ್ಲಿ ಅಭಿವೃದ್ಧಿ ಮತ್ತು 2025–26ನೇ ಸಾಲಿನ ನಗರಸಭಾ ನಿಧಿ ಅನುದಾನಗಳ ಕಾಮಗಾರಿಗಳ ಇಂಡೆಂಟ್ ಸಂಖ್ಯೆ 1)DMA/2025-26/OW/WORK_INDENT53846/CALL-2 (Reserved) 2)DMA/2025-26/BD/WORK_INDENT53775/CALL-2 3)DMA/2025-26/RD/WORK_INDENT53235 4)DMA/2025-26/SE7057 5)DMA/2025-26/SE7058 6)DMA/2025-26/RD/WORK_INDENT50564/CALL-4 7)DMA/2025-26/RD/WORK_INDENT53235 ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟಿನ ಇ– ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಅರ್ಹ ಗುತ್ತಿಗೆದಾರರು / ಸರಬರಾಜುದಾರರು ಇ– ಪ್ರಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದೆ. ಟೆಂಡರ್ ನಲ್ಲಿ ಯಾವುದೇ ಬದಲಾವಣೆ ಅಥವಾ ತಿದ್ದುಪಡಿ ಇದ್ದಲ್ಲಿ KPPP portal ವೆಬ್‌ಸೈಟ್‌ನಲ್ಲಿ ತಿಳಿಸಲಾಗುವುದು.

1) ಕಾಮಗಾರಿಗೆ ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕ್ರಸಂ 01 ರಿಂದ 5ರ ವರೆಗಿನ ಕೊನೆಯ **ದಿನಾಂಕ:–17–02–2026ರ ಸಂಜೆ 5:00 ಗಂಟೆಗೆ** ಮತ್ತು ಕ್ರಸಂ 06 ಮತ್ತು 07ರ ಕಾಮಗಾರಿಗಳ ಕೊನೆಯ **ದಿನಾಂಕ:–12–02–2026ರ ಸಂಜೆ 5:00 ಗಂಟೆಗೆ**

2) ಕ್ರ.ಸಂ 01 ರಿಂದ 05ರ ವರೆಗಿನ ಕಾಮಗಾರಿಗಳ ಸ್ವೀಕರಿಸಿದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ:–18–02–2026 ಸಂಜೆ 5:01 ಗಂಟೆಗೆ** ಮತ್ತು ಕ್ರಸಂ 06 ಮತ್ತು 07ರ ಕಾಮಗಾರಿಗಳ ತೆರೆಯುವ **ದಿನಾಂ:–13–02–206ರ ಸಂಜೆ 5:00 ಗಂಟೆಗೆ**

3) ಟೆಂಡರ್ ಅಂಗೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ನಗರಸಭೆ,ಶಿರಾ, ಕಾಯ್ದಿರಿಸಿಕೊಂಡಿದೆ.

ಸಹಿ/– ಅಧ್ಯಕ್ಷರು ನಗರಸಭೆ, ಶಿರಾ | **ಸಹಿ/– ಉಪಾಧ್ಯಕ್ಷರು** ನಗರಸಭೆ, ಶಿರಾ | **ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು** ನಗರಸಭೆ, ಶಿರಾ | **ಸಹಿ/– ಪೌರಾಯುಕ್ತರು** ನಗರಸಭೆ, ಶಿರಾ

DIPR/TUM/RO-250/25-26/Oysters

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO India

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001
ಫೋನ್: +91 80 22210705; ಫ್ಯಾಕ್ಸ್: +91 80 2224 5253
ಇಮೇಲ್: investor.india@diageo.com; ವೆಬ್‌ಸೈಟ್: www.diageoindia.com
ಕಾರ್ಪೊರೇಟ್ ಐಡೆಂಟಿಟಿ ನಂಬರ್: L01551KA1999PLC024991

ಸೂಚನೆ

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ('ಕಂಪನಿ') ಶ್ರೀಮತಿ ಜೂಲಿ ಬ್ರಹ್ಮಮ್ (DIN 08415737) ಅವರನ್ನು ಕಂಪನಿಯ ನಿರ್ದೇಶಕರನ್ನಾಗಿ (ಕಾರ್ಯನಿರ್ವಾಹಕೇತರ ಸ್ವತಂತ್ರ) ನಿರ್ದೇಶಕರನ್ನಾಗಿ ನೇಮಕ ಮಾಡಲು ಸದಸ್ಯರ ಅನುಮೋದನೆಯನ್ನು ಕೋರುತ್ತಿದೆ ಎಂದು ಈ ಮೂಲಕ ಸೂಚನೆ ನೀಡಲಾಗಿದೆ. ದೂರಸ್ಥ ಇ-ಮತದಾನದ ಮೂಲಕ ಅಂಚೆ ಮತಪತ್ರದ ಮೂಲಕ ಸದಸ್ಯರ ಅನುಮೋದನೆಯನ್ನು ಪಡೆಯಲಾಗುತ್ತಿದೆ.

ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 108 ಮತ್ತು 110ರ ಅನುಸಾರವಾಗಿ (ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಅದರ ಮರು–ಜಾರಿ ಸೇರಿದಂತೆ) (ಕಾಯ್ದೆ), ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014ರ ನಿಯಮ 20 ಮತ್ತು 22ರೊಂದಿಗೆ ಓದಿ ('ನಿಯಮಗಳು') ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ('ಎಂಸಿಎ') ಸೂಚಿಸಿರುವ ಮಾರ್ಗಸೂಚಿಗಳಿಗೆ ಅನುಗುಣವಾಗಿ ಇ–ವೋಟಿಂಗ್ ಮೂಲಕ ಸಾಮಾನ್ಯ ಸಭೆ/ಅಂಚೆ ಮತದಾನ ಪ್ರಕ್ರಿಯೆಯನ್ನು ನಡೆಸಲು ಸೆಪ್ಟೆಂಬರ್ 22, 2025ರ ಸಾಮಾನ್ಯ ಸುತ್ತೋಲೆ ಸಂಖ್ಯೆ. 03/2025 ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಇತರ ಅನ್ವಯವಾಗುವ ಸುತ್ತೋಲೆಗಳು ('ಎಂಸಿಎ ಸುತ್ತೋಲೆಗಳು'), ಮತ್ತು ಸೆಬಿ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗ ಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015ರ ನಿಯಮ 44, (ಎಲ್‌ಒಡಿಆರ್ ನಿಯಮಗಳು) ಭಾರತೀಯ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ('ಎಸ್‌ಎಸ್–2') ಹೊರಡಿಸಿದ ಸಾಮಾನ್ಯ ಸಭೆಗಳ ಮೇಲಿನ ಕಾರ್ಯದರ್ಶಿ ಮಾನದಂಡ ಮತ್ತು ಕಾಯ್ದೆಯ ಇತರ ಅನ್ವಯವಾಗುವ ನಿಬಂಧನೆಗಳು, ನಿಯಮಗಳು, ಯಾವುದೇ ಶಾಸನಬದ್ಧ ಮಾರ್ಪಾಡುಗಳು ಅಥವಾ ಮರು ಜಾರಿಗೊಳಿಸುವಿಕೆ ಸೇರಿದಂತೆ ಅದರ ಅಡಿಯಲ್ಲಿ ಹೊರಡಿಸಲಾದ ಸುತ್ತೋಲೆಗಳು ಮತ್ತು ಅಧಿಸೂಚನೆಗಳು ಕಂಪನಿಯು 9ನೇ ಫೆಬ್ರವರಿ 2026ರಂದು ಯಾವ ಸದಸ್ಯರ ಹೆಸರು ಕಂಪನಿ / ಡಿಪಾಸಿಟರಿ ಪಾರ್ಟಿಸಿಪೆಂಟ್ಸ್‌ರೊಂದಿಗೆ ('ಡಿಪಿಗಳು') ತಮ್ಮ ಇಮೇಲ್ ನೀಡಿರುವವರಿಗೆ ನ್ಯಾಶನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ ('ಎನ್‌ಎಸ್‌ಡಿಎಲ್') ಮತ್ತು ಸೆಂಟ್ರಲ್ ಡಿಪಾಸಿಟರಿ ಸರ್ವೀಸಸ್ (ಇಂಡಿಯಾ) ಲಿಮಿಟೆಡ್ ('ಸಿಡಿಎಸ್‌ಎಲ್') ನಿಂದ ಶುಕ್ರವಾರ 30ನೇ ಜನವರಿ 2026 ('ಕಟ್–ಆಫ್ ದಿನಾಂಕ') ಸ್ವೀಕರಿಸಿದಂತೆ ಸದಸ್ಯರ ನೋಂದಣಿ/ ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಇಮೇಲ್ ವಿಳಾಸಗಳು ದಾಖಲಿಸಿರುವ ಸದಸ್ಯರಿಗೆ ಮಾತ್ರ ಎಲೆಕ್ಟ್ರಾನಿಕ್ ಮೋಡ್ ಮೂಲಕ ಅಂಚೆ ಮತಪತ್ರ ನೋಟೀಸನ್ನು ಕಳುಹಿಸಿದೆ. ಅದರಂತೆ, ಅಂಚೆ ಮತಪತ್ರ ಸೂಚನೆಯ ಭೌತಿಕ ಪ್ರತಿ ಮತ್ತು ಪೂರ್ವ–ಪಾವತಿಸಿದ ವ್ಯವಹಾರ ಪ್ರತ್ಯುತ್ತರ ಲಕೋಟೆಯನ್ನು ಸದಸ್ಯರಿಗೆ ಕಳುಹಿಸಲಾಗಿಲ್ಲ.

ಅಂಚೆ ಮತದಾನದ ನೋಟೀಸು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಹಾಗೂ ಷೇರು ವಿನಿಮಯ ಕೇಂದ್ರಗಳಾದ ಬಿಎಸ್‌ಇ ಲಿಮಿಟೆಡ್ ('ಬಿಎಸ್‌ಇ') ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ('ಎನ್‌ಎಸ್‌ಇ')ಗಳ ವೆಬ್‌ಸೈಟ್‌ಗಳಾದ www.bseindia.com ಮತ್ತು www.nseindia.com ಗಳಲ್ಲಿ ಹಾಗೂ ಎನ್‌ಎಸ್‌ಡಿಎಲ್‌ನ www.evoting.nsdl.com ಗಳಲ್ಲಿ ಲಭ್ಯವಿದೆ.

ಸದಸ್ಯರ ದಾಖಲೆ ಪುಸ್ತಕ / ಕಟ್–ಆಫ್ ದಿನಾಂಕದಲ್ಲಿದ್ದಂತೆ ಫಲಾನುಭವಿ ಮಾಲೀಕರ ಪಟ್ಟಿಯಲ್ಲಿ ಹೆಸರು ಇರುವ ಸದಸ್ಯರು ನೋಟೀಸಿನಲ್ಲಿ ನಿಗದಿಪಡಿಸಿದ ಗೊತ್ತುವಳಿಗೆ ಮತ ಚಲಾಯಿಸಬಹುದು. ಸದಸ್ಯರ ಮತ ನೀಡುವ ಅಧಿಕಾರವು ಅವರು ಹೊಂದಿರುವ ಪ್ರಮಾಣದ ಪೂರ್ಣಪಾವತಿಯಾದ, ಕಂಪನಿಯ ಈಕ್ವಿಟಿ ಷೇರು ಬಂಡವಾಳದ, ಕಟ್–ಆಫ್ ದಿನಾಂಕದಲ್ಲಿದ್ದ ಷೇರುಗಳನ್ನು ಅವಲಂಬಿಸಿರುತ್ತದೆ. ಕಟ್–ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಈ ಅಂಚೆ ಮತಪತ್ರ ಪ್ರಕಟಣೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು.

ಕಂಪನಿಯು ತನ್ನ ಸದಸ್ಯರಿಗೆ ಪರೋಕ್ಷ ಇ–ವೋಟಿಂಗ್ ಸೌಲಭ್ಯ ಒದಗಿಸಲು ಎನ್‌ಎಸ್‌ಡಿಎಲ್ ಸೇವೆಯನ್ನು ಪಡೆದುಕೊಂಡಿದೆ. ಪರೋಕ್ಷ ಮತದಾನವು ಮಂಗಳವಾರ 10ನೇ ಫೆಬ್ರವರಿ, 2026ರಂದು ಬೆಳಿಗ್ಗೆ 9.00 ಗಂಟೆಗೆ (ಐಎಸ್‌ಟಿ) ಪ್ರಾರಂಭವಾಗಿ 11ನೇ ಮಾರ್ಚ್ 2026 ಬುಧವಾರ ಸಂಜೆ 5.00 ಗಂಟೆಗೆ (ಐಎಸ್‌ಟಿ) ಮುಕ್ತಾಯವಾಗುತ್ತದೆ. ಪರೋಕ್ಷ ಇ–ವೋಟಿಂಗ್ ಮಾಡ್ಯೂಲ್ ವ್ಯವಸ್ಥೆಯು ನಂತರ ಎನ್‌ಎಸ್‌ಡಿಎಲ್ ನಿಂದ ನಿಷ್ಕ್ರಿಯ ಮಾಡಲ್ಪಡುವುದು. ಸದಸ್ಯರು ಒಮ್ಮೆ ಗೊತ್ತುವಳಿಗೆ ಮತ ಚಲಾಯಿಸಿದ ನಂತರ ಅದನ್ನು ಬದಲಿಸಲು ಅವಕಾಶವಿರುವುದಿಲ್ಲ.

ಇ–ಮೇಲ್ ವಿಳಾಸ ನೋದಾಯಿಸಿಲ್ಲದ ಸದಸ್ಯರು ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ಕಂಪನಿಯ ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ)/ಡಿಪಿಗಳ ಬಳಿ ನೋದಾವಣೆ ಮಾಡಬಹುದು. ಇ–ಮೇಲ್ ವಿಳಾಸ ನೋಂದಾಯಿಸುವ ಹಾಗೂ ಪರೋಕ್ಷ ಇ–ವೋಟಿಂಗ್ ಮಾಡುವ ವಿಧಾನಗಳು ನೋಟೀಸಿನಲ್ಲಿ ಲಭ್ಯವಿವೆ.

ಶ್ರೀ ಸುಧೀರ್ ವಿ ಹುಲ್ಯಾಳ್ಕರ್, ಕಂಪನಿ ಸೆಕ್ರೆಟರಿ ಇನ್ ಪ್ರಾಕ್ಟೀಸ್ ವಿಫಲವಾದಲ್ಲಿ ಶ್ರೀ ಸುಧೀಂದ್ರ ಕೆ ಎಸ್ ಕಂಪನಿ ಸೆಕ್ರೆಟರಿ ಇನ್ ಪ್ರಾಕ್ಟೀಸ್ ಅವರನ್ನು ಅಂಚೆ ಮತಪತ್ರದ ಮೂಲಕ ಚಲಾವಣೆಯಾದ ಮತಗಳನ್ನು ರಿಮೋಟ್ ಇ–ವೋಟಿಂಗ್ ಪ್ರಕ್ರಿಯೆಯಲ್ಲಿ ನ್ಯಾಯಯುತ ಮತ್ತು ಪಾರದರ್ಶಕವಾಗಿ ಪರಿಶೀಲಿಸಲು ಪರಿಶೀಲಕರನ್ನಾಗಿ ನೇಮಿಸಲಾಗಿದೆ.

ಅಗತ್ಯವಿರುವ ಬಹುಮತದಿಂದ ಅಂಗೀಕರಿಸಲ್ಪಟ್ಟ ನಿರ್ಣಯವನ್ನು 11ನೇ ಮಾರ್ಚ್ 2026ರ ಬುಧವಾರ ಅಂಗೀಕರಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ, ಇದು ಕಂಪನಿಯ ಇ–ಮತದಾನಕ್ಕಾಗಿ ನಿರ್ದಿಷ್ಟಪಡಿಸಿದ ಕೊನೆಯ ದಿನಾಂಕವಾಗಿದೆ. ಅಂಚೆ ಮತದಾನದ ಫಲಿತಾಂಶವನ್ನು ಶುಕ್ರವಾರ 13ನೇ ಮಾರ್ಚ್ 2026ರಂದು ಅಥವಾ ಅದಕ್ಕೆ ಮುಂಚಿತವಾಗಿ ಘೋಷಿಸಲಾಗುವುದು. ಫಲಿತಾಂಶವನ್ನು ಪರಿಶೀಲಕರ ವರದಿಯೊಂದಿಗೆ ಬಿಎಸ್‌ಇ ಮತ್ತು ಎನ್‌ಎಸ್‌ಇ ಗೆ ಕಳುಹಿಸಲಾಗುವುದು ಹಾಗೂ ಕಂಪನಿಯ ವೆಬ್ ಸೈಟ್ www.diageoindia.com ಮತ್ತು ಎನ್‌ಎಸ್‌ಡಿಎಲ್‌ನ ವೆಬ್ ಸೈಟ್ www.evotingnsdl.com ಗಳಲ್ಲಿ ಅಪ್ಲೋಡ್ ಮಾಡಲಾಗುವುದು.

ಯಾವುದೇ ಪ್ರಶ್ನೆಗಳಿದ್ದಲ್ಲಿ, ನೀವು evoting@nsdl.com ಗೆ ಇಮೇಲ್ ಬರೆಯಬಹುದು ಅಥವಾ 022–4886 7000 ನಲ್ಲಿ ಸಂಪರ್ಕಿಸಬಹುದು ಅಥವಾ ಶ್ರೀ ಫಲ್ಗುಣಿ ಚಕ್ರಬೋರ್ತಿ, ಉಪ ವ್ಯವಸ್ಥಾಪಕರು, ಎನ್‌ಎಸ್‌ಡಿಎಲ್ ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್, 3 ನೇ ಮಹಡಿ, ನಮನ್ ಚೇಂಬರ್, ಪ್ಲಾಟ್ ಅ–32, ಜಿ–ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ ಪೂರ್ವ, ಮುಂಬೈ, ಮಹಾರಾಷ್ಟ್ರ – 400051 ಅವರಿಗೆ ವಿನಂತಿಯನ್ನು evoting@nsdl.com ಗೆ ಕಳುಹಿಸಬಹುದು.

ಸದಸ್ಯರು ನೋಟೀಸಿನಲ್ಲಿ ವಿವರಿಸಿರುವ ಎಲ್ಲಾ ಟಿಪ್ಪಣೆಗಳನ್ನು ಗಮನವಿಟ್ಟು ನೋಡಲು ವಿಶೇಷವಾಗಿ ಪರೋಕ್ಷ ಇ–ವೋಟಿಂಗ್ ಮೂಲಕ ಮತ ಚಲಾಯಿಸುವ ವಿಧಾನವನ್ನು ಗಮನವಿಟ್ಟು ಓದಿಕೊಳ್ಳಲು ಕೋರಲಾಗಿದೆ.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಪರವಾಗಿ

ಸ್ಥಳ : ಬೆಂಗಳೂರು
ದಿನಾಂಕ : 9ನೇ ಫೆಬ್ರವರಿ, 2026

ಪ್ರಗ್ಯಾ ಕೌಲ್
ಕಂಪನಿ ಕಾರ್ಯದರ್ಶಿ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್ : ಯು40109ಕೆಎ1999ಎಸ್‌ಜಿಸಿ025521)

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಕೆಳಕಂಡ ಕಾಮಗಾರಿಗಳಿಗೆ ಬಿಡ್‌ಗಳನ್ನು ಆಹ್ವಾನಿಸಿದೆ.

I. ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ಕಾ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/ಎಫ್–180(08)/25–26/5364–65 ದಿನಾಂಕ: 07.02.2026
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ(ವಿ)/ಟಿಆರ್ (ಕಾ)/ವೃತ್ತ ದಕ್ಷಿಣ/ಇಇ(ಓ)/ಎಇಇ–1/25–26/ಇ.ಪಿ.ಆರ್–04, ಕರೆ–4, ದಿನಾಂಕ:17.05.2025 ರ ಅನ್ವಯ ದಕ್ಷಿಣ ಕಾರ್ಯಾಚರಣೆ ವೃತ್ತದ ಅಡಿಯಲ್ಲಿ ಬರುವ ಟಿ.ಎಲ್.ಎಂ ಉಪ–ವಿಭಾಗ ಹೂಡಿ ವ್ಯಾಪ್ತಿಯ ರಾಮಮೂರ್ತಿನಗರದಲ್ಲಿರುವ ಟವರ್ ನಂ.9 ಮತ್ತು 11– 66ಕೆ.ವಿ ಐಟಿಐ–ಹೆಬ್ಬಾಳ–1 & 2 (ಐಟಿಐ–ಬಾಣಸವಾಡಿ ಮತ್ತು ಐಟಿಐ–ಪಾಟರಿ ರಸ್ತೆ) ಡಿ/ಸಿ ಲೈನ್ ನಲ್ಲಿ 66ಕೆ.ವಿ ಡಿಡಿ+3 [9 ಆರ್ಮ್] ಎನ್‌ಬಿಟಿ ಕವಿಪ್ರನಿನಿಯ ಟವರ್ ಮತ್ತು 66ಕೆ.ವಿ ಡಿಡಿ+3 ಎನ್‌ಬಿಟಿ ಕವಿಪ್ರನಿನಿಯ ವಿನ್ಯಾಸ ಟವರ್ ನ 2 ಸಂಖ್ಯೆಗಳ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ.

II. ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ಕಾ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/ಎಫ್–180(1)/25–26/5366–67 ದಿನಾಂಕ: 07.02.2026
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ(ವಿ)/ಟಿಆರ್(ಕಾ)/ವೃತ್ತ ದಕ್ಷಿಣ/ಇಇ(ಓ)/ಎಇಇ–1/24–25/ಇ.ಪಿ.ಆರ್–83, ಕರೆ–7, ದಿನಾಂಕ: 12.02.2025 ರ ಅನ್ವಯ ದಕ್ಷಿಣ ಕಾರ್ಯಾಚರಣೆ ವೃತ್ತದ ಅಡಿಯಲ್ಲಿ ಬರುವ ಟಿ.ಎಲ್.ಎಂ ಉಪ–ವಿಭಾಗ ವ್ಯಾಪ್ತಿಯ ಸೆಂಟ್ ಥಾಮಸ್‌ನಗರ, ಹೆಚ್.ಬಿ.ಆರ್ ಲೇಔಟ್, ಸೆಂಟ್‌ಚಾರ್ಲ್ಸ್ ಶಾಲೆಯ ಹತ್ತಿರದಲ್ಲಿ ಹಾದು ಹೋಗಿರುವ 66ಕೆ.ವಿ ಹೆಬ್ಬಾಳ–ಐ.ಟಿ.ಐ ಜೋಡಿ ಮಾರ್ಗ ಟವರ್‌ಸಂಖ್ಯೆ 22 ಮತ್ತು 23ರ ನಡುವೆ 02 ಸಂಖ್ಯೆ ಡಿಡಿ+6 ಎನ್‌ಬಿಟಿ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ.

III. ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ಕಾ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/ಎಫ್–180(05)/25–26/5362–63 ದಿನಾಂಕ: 07.02.2026
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಟಿಆರ್(ಓಪಿ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/25–26/ಇ.ಪಿ.ಆರ್–03, ಕರೆ–4, ದಿನಾಂಕ: 17.05.2025 ರ ಅನ್ವಯ ದಕ್ಷಿಣ ವೃತ್ತದ ಅಡಿಯಲ್ಲಿ ಬರುವ ಟಿ.ಎಲ್.ಎಂ. ಉಪ–ವಿಭಾಗ ಹೂಡಿ ವ್ಯಾಪ್ತಿಯ ಗರುಡಚಾರ್‌ಪಾಳ್ಯ ಮಹದೇವಪುರದಲ್ಲಿರುವ ಟವರ್ ನಂ.9 ಮತ್ತು 10 66ಕೆ.ವಿ ಹೂಡಿ–ಬಿಡಬ್ಲ್ಯೂಟಿಸಿ–1&2 ಡಿ/ಸಿ ಲೈನ್‌ನ ಮಧ್ಯದಲ್ಲಿ 110ಕೆ.ವಿ ಡಿಡಿ+3 ಎನ್‌ಬಿಟಿ ಕವಿಪ್ರನಿನಿಯ ಟವರ್ ಮತ್ತು 110ಕೆ.ವಿ, ಡಿಡಿ+0, ಎನ್‌ಬಿಟಿ, ಕವಿಪ್ರನಿನಿಯ ಡಿಸೈನ್ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ.

IV. ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ಕಾ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/ಎಫ್–180(06)/25–26/5360–61 ದಿನಾಂಕ: 07.02.2026
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ/ಟಿಆರ್(ಓಪಿ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/25–26/ಇ.ಪಿ.ಆರ್–02, ಕರೆ–04, ದಿನಾಂಕ: 17.05.2025 ರ ಅನ್ವಯ ಪ್ರಸರಣ ಕಾರ್ಯಾಚರಣೆ ದಕ್ಷಿಣ ವೃತ್ತದ ಅಡಿಯಲ್ಲಿ ಬರುವ ಟಿ.ಎಲ್.ಎಂ. ಉಪ–ವಿಭಾಗ ಹೂಡಿ ವ್ಯಾಪ್ತಿಯ ಅವಲಹಳ್ಳಿ ಮತ್ತು ಮೆಡಹಳ್ಳಿ (ಎಲ್ಲಮ್ಮ ಲೇಕ್)ಯಲ್ಲಿ 66ಕೆವಿ ಡಿಸಿ ಹೂಡಿ–ಪಾಟರಿ ರಸ್ತೆ (ಹೊಸಕೋಟೆ–1), ಹೂಡಿ–ಹೊಸಕೋಟೆ (ಹೊಸಕೋಟೆ–2) ಮಾರ್ಗವನ್ನು ಟವರ್ ಸಂಖ್ಯೆ 14 ರಿಂದ ಟವರ್ ಸಂಖ್ಯೆ 18ಕ್ಕೆ ಸ್ಥಳಾಂತರಿಸುವ ಕಾಮಗಾರಿ.

V. ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ಕಾ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/ಎಫ್–180(12)/25–26/5368–69 ದಿನಾಂಕ: 07.02.2026
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ(ವಿ)/ಟಿಆರ್(ಕಾ)/ವೃತ್ತ ದಕ್ಷಿಣ/ಇಇ(ಓ)/ಎಇಇ–1/24–25/ಇ.ಪಿ.ಆರ್–15, ಕರೆ–12, ದಿನಾಂಕ: 01.10.2024 ರ ಅನ್ವಯ ದಕ್ಷಿಣ ಕಾರ್ಯಾಚರಣೆ ವೃತ್ತದ ಅಡಿಯಲ್ಲಿ ಬರುವ ಹೂಡಿ ಟಿ.ಎಲ್.ಎಂ ಉಪ–ವಿಭಾಗ ವ್ಯಾಪ್ತಿಯ 66ಕೆವಿ ಐಟಿಐ– ಹೆಬ್ಬಾಳ –1 & 2 (ಹೆಬ್ಬಾಳ– ಎಲ್.ಆರ್.ಬಂಡೆ & ಹೆಬ್ಬಾಳ– ಬಾಣಸವಾಡಿ ಟ್ಯಾಪ್ ಮಾಡಲಾಗಿರುವ ಪೊಟರಿ ರಸ್ತೆ) 66ಕೆ.ವಿ ಡಬಲ್ ಸರ್ಕ್ಯೂಟ್ ಲೈನ್, ಹೆಚ್‌ಎಂಟಿ ಲೇಔಟ್‌ನ ಟವರ್ ನಂ.06 & 07 ಮಧ್ಯಂತರದಲ್ಲಿ 02 ಸಂಖ್ಯೆಯ 66ಕೆ.ವಿ ಡಿಸಿ + 6 ಎನ್‌ಬಿಟಿ ಕವಿಪ್ರನಿನಿ ವಿನ್ಯಾಸದ ಗೋಪುರಗಳನ್ನು ಅಳವಡಿಸಿ ಲಂಭಾಂತರವನ್ನು ಹೆಚ್ಚಿಸುವ ಕಾಮಗಾರಿ.

VI. ಸಂಖ್ಯೆ: ಕವಿಪ್ರನಿನಿ/ಅಇಂ(ವಿ)/ಪ್ರ(ಕಾ)/ವೃತ್ತ–ದಕ್ಷಿಣ/ಇಇ(ಓ)/ಎಇಇ–1/ಎಫ್–180(07)/25–26/5358–59 ದಿನಾಂಕ: 07.02.2026
ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಅ.ಇಂ(ವಿ)/ಟಿಆರ್(ಕಾ)/ವೃತ್ತ ದಕ್ಷಿಣ/ಇಇ(ಓ)/ಎಇಇ–1/24–25/ಇ.ಪಿ.ಆರ್–15, ಕರೆ–5, ದಿನಾಂಕ: 01.10.2024 ರ ಅನ್ವಯ ದಕ್ಷಿಣ ಕಾರ್ಯಾಚರಣೆ ವೃತ್ತದ ಅಡಿಯಲ್ಲಿ ಬರುವ ಟಿ.ಎಲ್.ಎಂ ಉಪ–ವಿಭಾಗ ವ್ಯಾಪ್ತಿಯ ಜಗದೀಶ್‌ನಗರದಲ್ಲಿರುವಲ್ಲಿ ಟವರ್ ನಂ.5 ಮತ್ತು ಟವರ್ ನಂ.6 66ಕೆ.ವಿ ಹೆಚ್‌ಎಎಲ್ – ಬಿಡಬ್ಲೂಟಿಸಿ–1 & 2 (ಹೆಚ್‌ಎಎಲ್ – ಕೆ.ಬಿ.ಹಳ್ಳಿ & ಹೆಚ್‌ಎಎಲ್ –ಬಾಗಮನೆ– ಜಿಟಿಆರ್‌ಇ) ಡಿ/ಸಿ ಲೈನ್‌ನಲ್ಲಿನ ಲಂಭಾಂತರವನ್ನು ಹೆಚ್ಚಿಸಲು 66ಕೆವಿ ಡಿಡಿ + 0 ಎನ್‌ಬಿಟಿ ಕವಿಪ್ರನಿನಿ ವಿನ್ಯಾಸದ ಗೋಪುರಗಳನ್ನು ಅಳವಡಿಸುವ ಕಾಮಗಾರಿ.

ಟೆಂಡರ್‌ಗೆ ಸಂಬಂಧಿಸಿದ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿ ವೆಬ್‌ಸೈಟ್ https://kptcl.karnataka.gov.in ಗೆ ಹೈಪರ್‌ಲಿಂಕ್ 'E Procurement KPTCL' ನಲ್ಲಿ ಅಥವಾ ವೆಬ್‌ಸೈಟ್ https://kppp.karnataka.gov.in ನಲ್ಲಿ ದಿನಾಂಕ: **10.02.2026** ರಂದು ಅಥವಾ ತದ ನಂತರ ಲಾಗಿನ್ ಮಾಡುವ ಮೂಲಕ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾರ್ಯಾಚರಣೆ)
ವೃತ್ತ–ದಕ್ಷಿಣ, ನೆಲ ಮಹಡಿ, ಕ.ವಿ.ಪ್ರ.ನಿ.ನಿ. ಕಛೇರಿ ಸಂಕೀರ್ಣ,
ಆನಂದರಾವ್ ವೃತ್ತ, ಬೆಂಗಳೂರು–09.

BEFORE THE HON'BLE LXXXII ADDITIONAL CITY CIVIL AND SESSIONS JUDGE, AT : BENGALURU (CCH-83)

IN

COM. EX. No. 68/2022

BETWEEN : Sri. Chandrashekar Srinivasulu Miryala. ...DECREE HOLDER

AND : M/s Allieddeccan Services Private Limited @ ADS Pvt. Ltd & Ors ...JUDGMENT DEBTORS

NOTICE TO JUDGMENT DEBTORS BY WAY OF PAPER PUBLICATION

To, 1. M/s Allieddeccan Services Private Limited @ ADS Pvt. Ltd. Corporate Identity No : U74900KA2013PTC069551 located at No. 25/A, 4th Floor, 7th Cross, Patel Rama Reddy Road, K.R. Colony. Domlur, Bengaluru - 560071 Represented by : 2. Minaraj Pant and managing Director, aged about 43 years old 3. Sri. Ganesh Raj Pant, Director and CEO, aged about 47 years, Both residing at: No. 220, A-Block, SMR, Vinay Cascade, behind BEML Quarters, Jagdish Nagar, New Thippasandra, Bengaluru-560075. ...JUDGMENT DEBTORS

Whereas the above-named Decree Holder has instituted COM.EX.No.68/2022 to execute the decree passed in COM. OS. No. 54/2020 on 30.10.2021 directing the judgment debtors to pay a sum of Rs.1,21,17,396/- (Rupees One Crore, Twenty-One Lakhs, Seventeen Thousand, Three Hundred and Ninety-Six only) along with the interest at the rate of 14% per annum from the date of the suit till realization. Further, the Judgment Debtors are directed to pay the cost of this suit to the Decree Holders i.e, Rs.3,60,134/- (Rupees Three lakh sixty thousand one hundred and thirty-four only).

You are hereby directed to appear before the court on 20th of March 2026 at 11:00 AM in person or through an advocate/pleader to show cause as to why you should not be arrested, failing which a warrant of arrest shall be issued against you without any further notice.

Given under my hand and seal this 3rd day of February 2026 at Bengaluru.

By Order of the Court
Sd/- Senior Sheristedar
Commercial Court Unit
City Civil Court, Bangalore

ADVOCATE FOR PLAINTIFF
A M IKTEAR UDDIN, ADVOCATE,
Prime Legal,
No. 39/2, 2nd Floor, ASVN Sangha Building, K.G. Road, Bangalore - 560009 Mob :9986386002

ಸತ್ಯಮೇವ ಜಯತೆ

ಫಾರ್ಮ್ ಸಂಖ್ಯೆ. 14
[ನಿಯಮಾವಳಿ ಪ್ರಕಾರ 33(2) ನೋಡಿ]
ರೆಜಿಸ್ಟರ್ ಎ/ಡಿ, ದಸ್ತಿ ಅವರಿಂದ, ವಿಫಲವಾದರೆ ಪ್ರಕಟಣೆಯ ಮೂಲಕ.
ರಿಕವರಿ ಅಧಿಕಾರಿ ಕಚೇರಿ – I/II
ಸಾಲ ವಸೂಲಾತಿ ನ್ಯಾಯಮಂಡಳಿ ಬೆಂಗಳೂರು (ಡಿಆರ್‌ಟಿ 2)
ಭಾರತ ಸರ್ಕಾರ ಹಣಕಾಸು ಸಚಿವಾಲಯ
ಹಣಕಾಸು ಸೇವೆಗಳ ಸಾಲ ವಸೂಲಾತಿ ನ್ಯಾಯಮಂಡಳಿ – II ಕರ್ನಾಟಕ (ಬೆಂಗಳೂರು)
4ನೇ ಮಹಡಿ, ದೂರವಾಣಿ ಮನೆ, ರಾಜಭವನ ರಸ್ತೆ, ಬೆಂಗಳೂರು–560001

ತಗಾದೆ ಸೂಚನೆ

ಸಾಲಗಳ ವಸೂಲಾತಿ ಮತ್ತು ಬ್ಯಾಂಕ್‌ಕ್ರಾಫ್ಟ್ ಕಾಯ್ದೆ, 1993 ರ ಸೆಕ್ಷನ್ 25 ರಿಂದ 28 ರ ಅಡಿಯಲ್ಲಿ ಸೂಚನೆ ಮತ್ತು ಆದಾಯ ತೆರಿಗೆ ಕಾಯ್ದೆ, 1961 ರ ಎರಡನೇ ಷೆಡ್ಯೂಲ್ ನಿಯಮ 2. ತಿದ್ದುಪಡಿ ಮಾಡಿದಂತೆ

RC/171/2024 IN
OA NO. 1243/2021

ಕೆನರಾ ಬ್ಯಾಂಕ್
ವಿರುದ್ಧ
ಶ್ರೀ. ಚನ್ನಪ್ಪ ಮತ್ತು ಇತರರು

ಇವರಿಗೆ,
(ಸಿಹೆಚ್) ಕೆನರಾ ಬ್ಯಾಂಕ್
ಬಿಡದಿ ಶಾಖೆ, ನೆಲ್ಲಿಗುಡ್ಡ ಟ್ಯಾಂಕ್ ರಸ್ತೆ, ಬಿಡದಿ–562109, ರಾಮನಗರ ಜಿಲ್ಲೆ
ವಿರುದ್ಧ .....ಪ್ರಮಾಣಪತ್ರ ಹೊಂದಿರುವವರು
(ಸಿಡಿ 1) ಶ್ರೀ. ಚನ್ನಪ್ಪ, ಬಿನ್. ಲೇಟ್ ನಾಗಪ್ಪ,
ಇವರ ವಾಸ: ಕೆಂಪನಹಳ್ಳಿ ಗ್ರಾಮ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು ಮತ್ತು ಕರ್ನಾಟಕ ಜಿಲ್ಲೆ
(ಸಿಡಿ 2) ಶ್ರೀಮತಿ. ಸಾವಿತ್ರಮ್ಮ, ಕೋಂ. ಶ್ರೀ. ಚನ್ನಪ್ಪ,
ಇವರ ವಾಸ: ಕೆಂಪನಹಳ್ಳಿ ಗ್ರಾಮ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು, ಕರ್ನಾಟಕ
(ಸಿಡಿ 3) ಶ್ರೀಮತಿ. ಕೆ.ಸಿ. ಶ್ರುತಿ, ಬಿನ್. ಶ್ರೀ. ಚನ್ನಪ್ಪ,
ಇವರ ವಾಸ: ಕೆಂಪನಹಳ್ಳಿ ಗ್ರಾಮ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು, ಕರ್ನಾಟಕ
(ಸಿಡಿ 4) ಶ್ರೀ. ಸಂತೋಷ್, ಬಿನ್. ಶ್ರೀ. ಚನ್ನಪ್ಪ,
ಇವರ ವಾಸ: ಕೆಂಪನಹಳ್ಳಿ ಗ್ರಾಮ, ಕಸಬಾ ಹೋಬಳಿ, ರಾಮನಗರ ತಾಲ್ಲೂಕು, ಕರ್ನಾಟಕ.
.....ಪ್ರಮಾಣಪತ್ರ ಸಾಲಗಾರರು

ಸಾಲ ವಸೂಲಾತಿ ನ್ಯಾಯಮಂಡಳಿ ಬೆಂಗಳೂರು (ಡಿಆರ್‌ಟಿ 2) ಅಧ್ಯಕ್ಷರು ಹೊರಡಿಸಿದ ಆದೇಶಗಳ ಅನುಸಾರವಾಗಿ ನೀಡಲಾದ ವಸೂಲಾತಿ ಪ್ರಮಾಣಪತ್ರದ ಪ್ರಕಾರ, ಓಎ/1243/2021 ರಲ್ಲಿ **ರೂ.1,63,72,582/– (ರೂಪಾಯಿ ಒಂದು ಕೋಟಿ ಅರವತ್ತಮೂರು ಲಕ್ಷ ಎಪ್ಪತ್ತೆರಡು ಸಾವಿರದ ಐದು ನೂರ ಎಂಬತ್ತೆರಡು ಮಾತ್ರ)** ಮೊತ್ತವನ್ನು ವೆಚ್ಚ, ವೆಚ್ಚಗಳು ಮತ್ತು ಬಡ್ಡಿಯೊಂದಿಗೆ ದಿನಾಂಕ 11/11/2021 ರಿಂದ ವಸೂಲಿಯಾಗುವವರೆಗೆ ಮತ್ತು **ರೂ.150005/– (ರೂಪಾಯಿ ಒಂದು ಲಕ್ಷ ಐವತ್ತು ಸಾವಿರದ ಐದು ಮಾತ್ರ)** ವೆಚ್ಚಗಳನ್ನು ನಿಮ್ಮ ವಿರುದ್ಧ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬಾಕಿ ಉಳಿಸಿಕೊಂಡಿದೆ.

2. ನೋಟಿಸ್ ತಲುಪಿದ 15 ದಿನಗಳ ಒಳಗೆ ಮೇಲಿನ ಮೊತ್ತವನ್ನು ಪಾವತಿಸಲು ನಿಮಗೆ ಇಲ್ಲಿ ನಿರ್ದೇಶಿಸಲಾಗಿದೆ, ವಿಫಲವಾದರೆ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ಕಾಯ್ದೆ, 1993 ಮತ್ತು ಅದರ ಅಡಿಯಲ್ಲಿರುವ ನಿಯಮಗಳ ಪ್ರಕಾರ ವಸೂಲಿ ಮಾಡಲಾಗುತ್ತದೆ.
3. ಮುಂದಿನ ವಿಚಾರಣೆಯ ದಿನಾಂಕದಂದು ಅಥವಾ ಅದಕ್ಕೂ ಮೊದಲು ನಿಮ್ಮ ಆಸ್ತಿಗಳ ವಿವರಗಳನ್ನು ಅಫಿಡವಿಟ್‌ನಲ್ಲಿ ಘೋಷಿಸಲು ನಿಮಗೆ ಇಲ್ಲಿ ಆದೇಶಿಸಲಾಗಿದೆ.
4. ಈ ಸೂಚನೆ ಪ್ರಕಟವಾದ ದಿನಾಂಕದಿಂದ 15 ದಿನಗಳ ಒಳಗೆ ಕೆಳಗೆ ಸಹಿ ಮಾಡಿರುವವರ ಮುಂದೆ ಹಾಜರಾಗಲು ನಿಮ್ಮನ್ನು ಇಲ್ಲಿ ಆದೇಶಿಸಲಾಗಿದೆ.
5. ಮೇಲೆ ತಿಳಿಸಿದ ಮೊತ್ತದ ಜೊತೆಗೆ, ನೀವು ಈ ಕೆಳಗಿನವುಗಳನ್ನು ಸಹ ಪಾವತಿಸಬೇಕಾಗುತ್ತದೆ:
(ಎ) ಪ್ರಮಾಣಪತ್ರ/ಕಾರ್ಯನಿರ್ವಹಣಾ ಪ್ರಕ್ರಿಯೆಗಳ ಈ ಸೂಚನೆಯ ನಂತರ ಪ್ರಾರಂಭವಾಗುವ ಅವಧಿಗೆ ಪಾವತಿಸಬೇಕಾದ ಬಡ್ಡಿಗಳು.
(ಬಿ) ಈ ಸೂಚನೆಯ ಜಾರಿಯ ಸಂಬಂಧದಲ್ಲಿ ಉಂಟಾದ ಎಲ್ಲಾ ವೆಚ್ಚಗಳು, ಶುಲ್ಕಗಳು ಮತ್ತು ವೆಚ್ಚಗಳು ಮತ್ತು ವಾರಂಟ್‌ಗಳು ಮತ್ತು ಇತರ ಪ್ರಕ್ರಿಯೆಗಳು ಮತ್ತು ಬಾಕಿ ಮೊತ್ತವನ್ನು ಮರುಪಡೆಯಲು ತೆಗೆದುಕೊಂಡ ಎಲ್ಲಾ ಇತರ ಕ್ರಮಗಳು.

ನನ್ನ ಹಸ್ತಾಕ್ಷರ ಮತ್ತು ನ್ಯಾಯಮಂಡಳಿಯ ಮುದ್ರೆಯೊಂದಿಗೆ, ಈ ದಿನಾಂಕ: 17/04/2024 ರಂದು ನೀಡಲಾಗಿದೆ.

ಸೂಚನೆ:
ಆದಾಯ ತೆರಿಗೆ ಕಾಯ್ದೆ, 1961 ರ ಎರಡನೇ ವೇಳಾಪಟ್ಟಿಯ ನಿಯಮ 16 ರ ಸಾಲ ವಸೂಲಾತಿ ಮತ್ತು ದಿವಾಳಿತನ ಕಾಯ್ದೆ, 1993 (ಕಾಲಕಾಲಕ್ಕೆ ತಿದ್ದುಪಡಿ ಮಾಡಲಾಗಿದೆ) ನೊಂದಿಗೆ ಓದಲಾಗಿದೆ, ಇದನ್ನು ಈ ಕೆಳಗಿನಂತೆ ಪುನರುತ್ಪಾದಿಸಲಾಗಿದೆ: "ನಿಯಮ 16(1) ನಿಯಮ 2 ರ ಅಡಿಯಲ್ಲಿ ಸುಸ್ತಿದಾರನಿಗೆ ನೋಟಿಸ್ ಜಾರಿ ಮಾಡಿದ್ದರೆ, ಸುಸ್ತಿದಾರ ಅಥವಾ ಅವನ ಪ್ರತಿನಿಧಿ ಅಥವಾ ಅವನ ಆಸಕ್ತಿಯ ಪ್ರತಿನಿಧಿಯು ಸಾಲ ವಸೂಲಾತಿ ಅಧಿಕಾರಿಯ ಅನುಮತಿಯಿಲ್ಲದೆ ಅವನಿಗೆ ಸೇರಿದ ಯಾವುದೇ ಆಸ್ತಿಯನ್ನು ಅಡಮಾನ ಇಡಲು, ವಿಧಿಸಲು, ಗುತ್ತಿಗೆ ನೀಡಲು ಅಥವಾ ಬೇರೆ ರೀತಿಯಲ್ಲಿ ವ್ಯವಹರಿಸಲು ಸಮರ್ಥರಾಗಿರುವುದಿಲ್ಲ ಅಥವಾ ಯಾವುದೇ ಸಿವಿಲ್ ನ್ಯಾಯಾಲಯವು ಹಣ ಪಾವತಿಗಾಗಿ ತೀರ್ಪು ನೀಡುವಾಗ ಅಂತಹ ಆಸ್ತಿಯ ವಿರುದ್ಧ ಯಾವುದೇ ಪ್ರಕ್ರಿಯೆಯನ್ನು ಹೊರಡಿಸುವಂತಿಲ್ಲ.
2. ಈ ಷೆಡ್ಯೂಲ್‌ನಲ್ಲಿ ಜಪ್ತಿ ಮಾಡಿದ್ದರೆ, ಜಪ್ತಿ ಮಾಡಲಾದ ಆಸ್ತಿಯ ಯಾವುದೇ ಖಾಸಗಿ ವರ್ಗಾವಣೆ ಅಥವಾ ವಿತರಣೆ ಅಥವಾ ಅದರಲ್ಲಿನ ಯಾವುದೇ ಬಡ್ಡಿ ಮತ್ತು ಸುಸ್ತಿದಾರರಿಗೆ ಯಾವುದೇ ಪಾವತಿ ಅಥವಾ ಯಾವುದೇ ಸಾಲ, ಅಂತಹ ಜಪ್ತಿ ಮಾಡುವಿಕೆಗೆ ವಿರುದ್ಧವಾದ ಭಾಗಿಸಿದ ಅಥವಾ ಇತರ ಹಣವು, ಜಪ್ತಿ ಅಡಿಯಲ್ಲಿ ಜಾರಿಗೊಳಿಸಬಹುದಾದ ಎಲ್ಲಾ ಹಕ್ಕುಗಳಿಗೆ ವಿರುದ್ಧವಾಗಿ ಅನೂರ್ಜಿತವಾಗಿರುತ್ತದೆ.
3. ಕಳೆದ 5 ವರ್ಷಗಳ ಆದಾಯ ತೆರಿಗೆ ರಿಟರ್ನ್‌ಗಳ ಜೊತೆಗೆ ನಿಮ್ಮ ಚರ ಮತ್ತು ಸ್ಥಿರಾಸ್ತಿಗಳನ್ನು ಈ ನ್ಯಾಯಮಂಡಳಿಗೆ ಬಹಿರಂಗಪಡಿಸಲು ನೀವು ಬಾಧ್ಯರಾಗಿರುತ್ತೀರಿ.

ರಿಕವರಿ ಆಫೀಸರ್
ಸಾಲ ವಸೂಲಾತಿ ನ್ಯಾಯಮಂಡಳಿ ಬೆಂಗಳೂರು (ಡಿಆರ್‌ಟಿ 2)

10,000 ಆಸ್ತಿ ಮಾಲೀಕರಿಗೆ ನೋಟಿಸ್

ಐದು ಪಾಲಿಕೆ ವ್ಯಾಪ್ತಿಯಲ್ಲಿ ಕಡಿಮೆ ತೆರಿಗೆ ಪಾವತಿಸುತ್ತಿರುವವರ ಮೇಲೆ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯಲ್ಲಿ ಕಟ್ಟಡದ ವಾಸ್ತವಕ್ಕಿಂತ ಕಡಿಮೆ ಅಳತೆ ನಮೂದಿಸಿ, ತೆರಿಗೆ ವಂಚಿಸಿರುವ ಸುಮಾರು 10 ಸಾವಿರ ಆಸ್ತಿ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿದೆ.

ಜಿಪಿಎಸ್ ಹಾಗೂ ವಿಶೇಷ ಮನೆ-ಮನೆ ಸಮೀಕ್ಷೆ ತಂಡದ ಮಾಹಿತಿ ಆಧಾರದಲ್ಲಿ ಆಸ್ತಿಗಳ ತೆರಿಗೆ ಪರಿಷ್ಕರಿಸಲಾಗಿದೆ. ಆಸ್ತಿ ಮಾಲೀಕರಿಗೆ ನೋಟಿಸ್ ನೀಡಿ, ಸುಮಾರು ₹370 ಕೋಟಿ ವಸೂಲಿ ಮಾಡಲಾಗುತ್ತಿದೆ ಎಂದು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಆಸ್ತಿಗಳ ತೆರಿಗೆ ಪರಿಷ್ಕರಣೆಗೆ, ಜಿಬಿಎಯ ಮಾಹಿತಿ ತಂತ್ರಜ್ಞಾನ ವಿಭಾಗವು, ಎನ್ಐಸಿ ಸಹಯೋಗದಲ್ಲಿ 5 ನಗರ ಪಾಲಿಕೆ ವ್ಯಾಪ್ತಿಯಲ್ಲಿ ಜಿಪಿಎಸ್,

ಡ್ರೋನ್ ಬಳಸಿಕೊಂಡು ಮನೆ ಮನೆಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಿದೆ. ಈ ಮೂಲಕ ಕಡಿಮೆ ತೆರಿಗೆ ಘೋಷಣೆ ಮಾಡಿ, ತೆರಿಗೆ ವಂಚಿಸಿರುವುದನ್ನು ದಾಖಲಿಸಲಾಗಿದೆ ಎಂದರು.

2020–21ನೇ ಸಾಲಿನಿಂದ ತೆರಿಗೆಯನ್ನು ಪರಿಷ್ಕರಿಸಿ, ಆಸ್ತಿ ಮಾಲೀಕರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಪ್ರತಿ ವರ್ಷಕ್ಕೆ ಪ್ರತಿ ಆಸ್ತಿಗೆ ಒಂದು ನೋಟಿಸ್ ನಂತೆ 49 ಸಾವಿರಕ್ಕೂ ಹೆಚ್ಚು ನೋಟಿಸ್ ಜಾರಿ ಮಾಡಲಾಗಿದೆ. ಎಸ್ಎಂಎಸ್ ಮೂಲಕವೂ ಸಂದೇಶ ಕಳುಹಿಸಲಾಗಿದ್ದು, ಐವಿಆರ್ಎಸ್ ಮೂಲಕ ಕರೆ ಮಾಡಿ, ವ್ಯತ್ಯಾಸ ಇರುವ ತೆರಿಗೆಯನ್ನು ಪಾವತಿಸಲು ಸೂಚಿಸಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಆಸ್ತಿ ತೆರಿಗೆ ಪರಿಷ್ಕರಣೆ ಕಾರ್ಯವನ್ನು ವಿಶೇಷ ತಂಡ ಮುಂದುವರಿಸಿದ್ದು, ದಿನಕ್ಕೆ ಸಾವಿರಾರು ಆಸ್ತಿಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ತೆರಿಗೆ ವಂಚಿಸಿದ ಎಲ್ಲರಿಗೂ ನೋಟಿಸ್ ಜಾರಿ ಮಾಡಿ ವಸೂಲಿ ಮಾಡಲಾಗುತ್ತದೆ ಎಂದು ಹೇಳಿದರು.

ಲೆಕ್ಕಾಚಾರ ಹೇಗೆ?: 'ಕೆಂಗೇರಿಯಲ್ಲಿರುವ ಆಸ್ತಿ ಮಾಲೀಕರೊಬ್ಬರು ಕಟ್ಟಡದ ಬಿಲ್ಟಪ್ ಏರಿಯಾವನ್ನು 2,800 ಚದರ ಅಡಿ ಎಂದು ನಮೂದಿಸಿ ತೆರಿಗೆ ಪಾವತಿಸುತ್ತಿದ್ದಾರೆ. ವಿಶೇಷ ತಂಡ ಸಮೀಕ್ಷೆ ನಡೆಸಿದಾಗ, ಕಟ್ಟಡದ ಬಿಲ್ಟಪ್ ಏರಿಯಾ 5,458 ಅಡಿ ಎಂಬುದು ಸಾಬೀತಾಯಿತು. ಅವರು ₹4,562 ತೆರಿಗೆ ಪಾವತಿಸುತ್ತಿದ್ದರು. ಆದರೆ, ವಾಸ್ತವದಲ್ಲಿ ₹12,496 ಪಾವತಿಸಬೇಕಿತ್ತು. ಹೀಗಾಗಿ, 2021–22ನೇ ಸಾಲಿನಿಂದ ಶೇ 26ರಷ್ಟು ಬಡ್ಡಿ ₹1,904, ತೆರಿಗೆ ಕಡಿಮೆ ಪಾವತಿಗೆ ದಂಡ ₹7,933, ಈವರೆಗಿನ ಬಡ್ಡಿ ₹4,621, ಘನತ್ಯಾಜ್ಯ ನಿರ್ವಹಣೆ ಸೆಸ್ ₹240 ಸೇರಿದಂತೆ ಒಟ್ಟಾರೆ ₹22,633 ಪಾವತಿಸುವಂತೆ ನೋಟಿಸ್ ಜಾರಿ ಮಾಡಲಾಗಿದೆ. ಈ ಮೊತ್ತ 2021–22ನೇ ಸಾಲಿನದ್ದಾಗಿದ್ದು, ನಂತರದ ಸಾಲಿನ ಬಾಕಿಯನ್ನು ಪ್ರತ್ಯೇಕವಾಗಿ ಲೆಕ್ಕ ಮಾಡಿ ನೋಟಿಸ್ ಜಾರಿ ಮಾಡಲಾಗಿದೆ' ಎಂದು ಮುನೀಶ್ ಮೌದ್ಗಿಲ್ ಮಾಹಿತಿ ನೀಡಿದರು.

ಪರಿಷ್ಕೃತ ತೆರಿಗೆ ಎಲ್ಲಿ, ಎಷ್ಟು ಬಾಕಿ?

ಪಾಲಿಕೆ	ಆಸ್ತಿಗಳು	ಒಟ್ಟು
ಕೇಂದ್ರ	722	₹42.62 ಕೋಟಿ
ಪೂರ್ವ	523	₹13.49 ಕೋಟಿ
ಉತ್ತರ	124	₹69.79 ಲಕ್ಷ
ದಕ್ಷಿಣ	5,141	₹164.03 ಕೋಟಿ
ಪಶ್ಚಿಮ	3,420	₹148.97 ಕೋಟಿ

ಮನೆ ಮನೆ ಸಮೀಕ್ಷೆ ಹೇಗೆ?

- ಮನೆ ಮನೆ ಸಮೀಕ್ಷೆ ನಡೆಸುವ ಜಿಪಿಎಸ್ ತಂಡವು ಮೊಬೈಲ್ ತಂತ್ರಾಂಶದಲ್ಲಿ ಆಸ್ತಿ ತೆರಿಗೆ ವಿವರಗಳನ್ನು ಹೊಂದಿರುತ್ತದೆ.
- ಭೇಟಿ ನೀಡುವ ತಂಡದ ಸದಸ್ಯರು ಪ್ರತಿ ಆಸ್ತಿಯ ಜಿಬಿಎಸ್ ಮಾಹಿತಿ ದಾಖಲಿಸಿ, ಬಳಕೆ (ವಸತಿ/ ವಾಣಿಜ್ಯ/ ಮಿಶ್ರ ಇತ್ಯಾದಿ) ಹಾಗೂ ಆ ಬಳಕೆಗೆ ಒಳಪಟ್ಟಿರುವ ವಿಸ್ತೀರ್ಣವನ್ನು ದಾಖಲಿಸುತ್ತಾರೆ.
- ಆಸ್ತಿಯ ಜಿಪಿಎಸ್, ನೆಲ ಹಾಗೂ ಮೇಲಿನ ಅಂತಸ್ತುಗಳ ಬಳಕೆ ಮಾಹಿತಿ, ಅಂತಸ್ತುಗಳ ಸಂಖ್ಯೆ ಇತ್ಯಾದಿ ವಿವರಗಳನ್ನು ಮೊಬೈಲ್ ತಂತ್ರಾಂಶದಿಂದ ಬ್ಯಾಕ್–ಎಂಡ್‌ಗೆ ಕಳುಹಿಸಲಾಗುತ್ತದೆ.
- ಗುಣಮಟ್ಟ ಪರಿಶೀಲನಾ (ಕ್ಯೂಸಿ) ತಂಡವು ಆಸ್ತಿಯ ಎಲ್ಲ ಮಾಹಿತಿಯನ್ನು ಪರಿಶೀಲಿಸುತ್ತದೆ. ತಿರಸ್ಕೃತ ಪ್ರಕರಣಗಳನ್ನು ಮರುಪರಿಶೀಲನೆಗಾಗಿ ಜಿಪಿಎಸ್ ತಂಡಕ್ಕೆ ಹಿಂದಿರುಗಿಸುತ್ತದೆ.
- ಕ್ಯೂಸಿ ಅನುಮೋದನೆ ಪಡೆದ ಪ್ರಕರಣಗಳನ್ನು ಡ್ರೋನ್ ಡೇಟಾ ಹಾಗೂ ಡಿಜಿಟೈಸ್ ಮಾಡಲಾದ ನಿರ್ಮಿತ ವಿಸ್ತೀರ್ಣದೊಂದಿಗೆ ಹೋಲಿಕೆ ಮಾಡಲಾಗುತ್ತದೆ. ನಿರ್ಮಿತ ವಿಸ್ತೀರ್ಣ ಹೆಚ್ಚು ಇದ್ದು, ನಾಗರಿಕರು ಕಡಿಮೆ ಘೋಷಿಸಿದ್ದರೆ ಅಥವಾ ಭಾಗಶಃ/ ಪೂರ್ಣವಾಗಿ ವಾಣಿಜ್ಯ ಬಳಕೆಯಲ್ಲಿದ್ದರೂ ಘೋಷಿಸದೇ ಇದ್ದರೆ, ತಂತ್ರಾಂಶದ ಮೂಲಕ ಬಾಕಿ ತೆರಿಗೆ, ಬಡ್ಡಿ ಮತ್ತು ದಂಡ ಸಹಿತ ಶೋಕಾಸ್ ನೋಟಿಸ್‌ಗಳನ್ನು ಸ್ವಯಂಚಾಲಿತವಾಗಿ ರಚನೆಯಾಗುತ್ತವೆ.

ಬಿಜೆಪಿಯ ಬೆಂಗಳೂರು ಜಿಲ್ಲಾ ಘಟಕಗಳ ಪದಾಧಿಕಾರಿಗಳು, ಯುವ ಕಾಂಗ್ರೆಸ್ ವಿರುದ್ಧ ಪೊಲೀಸರಿಗೆ ದೂರು ನೀಡಿದರು

ಪ್ರಧಾನಿ ವಿರುದ್ಧ ದಂಗೆ ಸೃಷ್ಟಿಸಲು ಕಾಂಗ್ರೆಸ್ ಕುಮ್ಮಕ್ಕು: ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಪ್ರದೇಶ ಯುವ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳು ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧ ಅವಹೇಳನಕಾರಿ ಮತ್ತು ಸುಳ್ಳು ಸುದ್ದಿಯ ಪೋಸ್ಟರ್‌ಗಳನ್ನು ಹಾಕಿ ದಂಗೆಗೆ ಪ್ರಚೋದನೆ ನೀಡುತ್ತಿದ್ದಾರೆ' ಎಂದು ಕಬ್ಬನ್ ಪಾರ್ಕ್ ಪೊಲೀಸರಿಗೆ ಬಿಜೆಪಿ ದೂರು ನೀಡಿದೆ.

'ಪ್ರಧಾನಿಯವರ ಭಾವಚಿತ್ರವನ್ನು ಬಳಸಿ, 'ದೇಶದ ಸಂಸತ್ತಿಗೆ ಬರಲು ಧೈರ್ಯವಿಲ್ಲದ ಪುಕ್ಕಲ ಪ್ರಧಾನಿ ದೇಶವನ್ನು ಹೇಗೆ ರಕ್ಷಿಸುತ್ತಾರೆ?' ಎಂಬ ಅಪಪ್ರಚಾರದ ಬ್ಯಾನರ್‌ಗಳನ್ನು ವಿಧಾನಸೌಧದ ಮುಂದೆ ಹಾಕಿದ್ದಾರೆ' ಎಂದು ದೂರಿನಲ್ಲಿ ತಿಳಿಸಿದೆ.

'ಈ ಮೂಲಕ ಪ್ರಧಾನಮಂತ್ರಿ ಮತ್ತು ಕೇಂದ್ರ ಸರ್ಕಾರದ ವಿರುದ್ಧ ಸಂಚು ರೂಪಿಸಿ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದು, ರಾಜಕೀಯ ದಂಗೆ ನಡೆಸುವ ಸಂಚನ್ನು ಕಾಂಗ್ರೆಸ್ ಪದಾಧಿಕಾರಿಗಳು ರೂಪಿಸಿದ್ದಾರೆ. ಇವರ ವಿರುದ್ಧ ಪ್ರಕರಣ ದಾಖಲಿಸಿ ಕೂಡಲೇ ಬಂಧಿಸಬೇಕು' ಎಂದು ಒತ್ತಾಯಿಸಿದೆ.

ಕಾನೂನು ಪ್ರಕೋಷ್ಠದ ರಾಜ್ಯ ಸಂಚಾಲಕ ವಸಂತ್ ಕುಮಾರ್, ಬೆಂಗಳೂರು ದಕ್ಷಿಣ ಜಿಲ್ಲಾಧ್ಯಕ್ಷ ಮತ್ತು ಶಾಸಕ ಸಿ.ಕೆ.ರಾಮಮೂರ್ತಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿಗೌಡ, ವಿಧಾನಪರಿಷತ್ ಮಾಜಿ ಸದಸ್ಯ ಮುನಿರಾಜ್ ಗೌಡ, ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

ಚಿಟಿಕೆ ಸುದ್ದಿ

ಫೆ. 12ರಿಂದ ಕಾಫಿ ಮೇಳ

ಬೆಂಗಳೂರು: ಫೆಬ್ರುವರಿ 12ರಿಂದ 14ರವರೆಗೆ ಅಂತರರಾಷ್ಟ್ರೀಯ ಕಾಫಿ ಉತ್ಸವ (ಇಂಡಿಯಾ ಇಂಟರ್‌ನ್ಯಾಷನಲ್ ಕಾಫಿ ಫೆಸ್ಟಿವಲ್–2026) ನಗರದ ಜಯಮಹಲ್ ಪ್ಯಾಲೆಸ್‌ನಲ್ಲಿ ನಡೆಯಲಿದೆ.

ಸ್ಪೆಷಾಲ್ಟಿ ಕಾಫಿ ಅಸೋಸಿಯೇಷನ್ ಆಫ್ ಇಂಡಿಯಾ (ಎಸ್‌ಸಿಎಐ) ಕಾರ್ಯಕ್ರಮವನ್ನು ಆಯೋಜಿಸಿದೆ. ಭಾರತೀಯ ಕಾಫಿ ಮಂಡಳಿಯು ಕಾರ್ಯಕ್ರಮಕ್ಕೆ ಬೆಂಬಲ ನೀಡಿದೆ ಎಂದು ಕಾಫಿ ಮಂಡಳಿಯ ಪ್ರಕಟಣೆ ತಿಳಿಸಿದೆ.

ಈ ಕಾರ್ಯಕ್ರಮಕ್ಕೆ 20 ಸಾವಿರಕ್ಕೂ ಹೆಚ್ಚು ಜನ ಭೇಟಿ ನೀಡುವ ನಿರೀಕ್ಷೆ ಇದೆ. ಕಾಫಿ ಬೆಳೆಗಾರರು, ರಫ್ತುದಾರರು, ರೋಸ್ಟರ್‌ಗಳು, ಉಪಕರಣ ತಯಾರಕರು, ಕಾಫಿ ಬ್ರ್ಯಾಂಡ್‌ಗಳು, ಬ್ಯಾರಿಸ್ತಾಗಳು ಹಾಗೂ ಗ್ರಾಹಕರನ್ನು ಇದು ಒಂದೇ ವೇದಿಕೆಗೆ ಕರೆತರಲಿದೆ ಎಂದು ತಿಳಿಸಿದೆ.

'ಭಾರತದ ಕಾಫಿ ತನ್ನ ಗುಣಮಟ್ಟ ಮತ್ತು ವೈವಿಧ್ಯತೆಯಿಂದಾಗಿ ಹೆಚ್ಚಿನ ಮಾನ್ಯತೆ ಪಡೆಯುತ್ತಿದೆ. ಅಂತರರಾಷ್ಟ್ರೀಯ ಕಾಫಿ ಉತ್ಸವದಂತಹ ವೇದಿಕೆಗಳು ಉತ್ಪಾದಕರನ್ನು ಮಾರುಕಟ್ಟೆಗಳೊಂದಿಗೆ ಬೆಸೆಯುವಲ್ಲಿ, ದೇಸಿ ಬಳಕೆ ಮತ್ತು ರಫ್ತಿಗೆ ಬೆಂಬಲ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ' ಎಂದು ಭಾರತೀಯ ಕಾಫಿ ಮಂಡಳಿಯ ಸಿಇಒ ಮತ್ತು ಕಾರ್ಯದರ್ಶಿ ಕೂರ್ಮಾ ರಾವ್ ಎಂ. ಹೇಳಿದ್ದಾರೆ.

ಜಂತುಹುಳು ನಿವಾರಣಾ ಮಾತ್ರೆ ವಿತರಣೆ ಇಂದು

ಬೆಂಗಳೂರು: ರಾಷ್ಟ್ರೀಯ ಜಂತುಹುಳು ನಿವಾರಣಾ ದಿನದ ಅಂಗವಾಗಿ ಆರೋಗ್ಯ ಇಲಾಖೆಯು ಮಂಗಳವಾರ (ಫೆ.10) ಒಂದೇ ದಿನ 1ರಿಂದ 19 ವರ್ಷದೊಳಗಿನ 1.95 ಕೋಟಿ ಮಕ್ಕಳು ಹಾಗೂ ಹದಿಹರೆಯದವರಿಗೆ 'ಅಲ್ಬೆಂಡ್‌ಜೋಲ್' ಮಾತ್ರೆ ವಿತರಿಸುವ ಗುರಿ ಹಾಕಿಕೊಂಡಿದೆ.

ಅಂಗನವಾಡಿಗಳು, ಶಾಲೆಗಳು ಮತ್ತು ಕಾಲೇಜುಗಳಲ್ಲಿ ಈ ಮಾತ್ರೆಗಳನ್ನು ವಿತರಿಸಲಾಗುತ್ತದೆ. ಅನಾರೋಗ್ಯ ಸೇರಿ ವಿವಿಧ ಕಾರಣಗಳಿಂದ ಗೈರುಹಾಜರಾದವರಿಗೆ ಇದೇ 16ರಂದು ಜಂತುಹುಳು ನಿವಾರಣಾ ಮಾತ್ರೆಗಳನ್ನು ನೀಡಲಾಗುತ್ತದೆ.

'ಜಂತುಹುಳು ಸೋಂಕಿನಿಂದ ರಕ್ತಹೀನತೆ, ಅಪೌಷ್ಟಿಕತೆಯಂತಹ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ಇದರಿಂದ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಕುಂಠಿತವಾಗುತ್ತದೆ. ಜಂತುಹುಳು ಸೋಂಕು ನಿವಾರಣೆಗೆ 19 ವರ್ಷದೊಳಗಿನ ಮಕ್ಕಳು 'ಅಲ್ಬೆಂಡ್‌ಜೋಲ್' ಮಾತ್ರೆ ಪಡೆಯಬೇಕು' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಪಿ.ಜಿ. ವೈದ್ಯಕೀಯ ಇಂದು ದಾಖಲೆ ಪರಿಶೀಲನೆ

ಬೆಂಗಳೂರು: ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳಾದ ಎಂ.ಡಿ./ಎಂ.ಎಸ್.ಗೆ ಲಭ್ಯವಿರುವ ಸೀಟುಗಳಿಗಾಗಿ ಆಸಕ್ತ ಅರ್ಹ ಸೇವಾನಿರತ ಅಭ್ಯರ್ಥಿಗಳು ಫೆಬ್ರುವರಿ 10ರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 1ರೊಳಗೆ ಎಲ್ಲ ಅಗತ್ಯ ದಾಖಲೆಗಳೊಂದಿಗೆ ಇಲ್ಲಿನ ಮಲ್ಲೇಶ್ವರದಲ್ಲಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಚೇರಿಗೆ ಪರಿಶೀಲನೆಗೆ ಹಾಜರಾಗುವಂತೆ ಪ್ರಾಧಿಕಾರವು ಸೂಚಿಸಿದೆ.

ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳ 3ನೇ ಸುತ್ತಿನ (ಮಾಪ್-ಅಪ್) ಆನ್‌ಲೈನ್ ಸೀಟು ಹಂಚಿಕೆಗೆ ಇದು ಅನ್ವಯವಾಗುತ್ತದೆ. ದಾಖಲೆಗಳ ಪರಿಶೀಲನೆಯ ನಂತರ ಅರ್ಹರಾಗುವ ಅಭ್ಯರ್ಥಿಗಳಿಗೆ ಇಚ್ಛೆ/ಆಯ್ಕೆಗಳನ್ನು ನಮೂದಿಸಲು ಫೆ.11ರ ಬೆಳಿಗ್ಗೆ 9ರವರೆಗೆ ಅವಕಾಶವಿರುತ್ತದೆ ಎಂದು ಕೆಇಎ ಆಡಳಿತಾಧಿಕಾರಿ ಇಸ್ಲಾವುದ್ದೀನ್ ಗದ್ಯಾಳ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜೀವ್ ಗಾಂಧಿ ಆರೋಗ್ಯ ವಿ.ವಿ.ಯು ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳಾದ ಎಂ.ಡಿ./ಎಂ.ಎಸ್.ಗೆ ಪರ್ಸೆಂಟೈಲ್ ಕಡಿತಗೊಳಿಸಿದನಂತರ, ಅರ್ಹ ವೈದ್ಯರ ಪಟ್ಟಿಯನ್ನು ಪ್ರಾಧಿಕಾರದ ಜಾಲತಾಣದಲ್ಲಿ ಪ್ರಕಟಿಸಲಾಗಿದೆ ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ಪುತ್ರಿಯರ ಗಿಫ್ಟ್ ಡೀಡ್ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಳಿವಯಸ್ಸಿನಲ್ಲಿ ಚೆನ್ನಾಗಿ ನೋಡಿಕೊಳ್ಳುತ್ತಾರೆ' ಎಂಬ ನಂಬಿಕೆಯಿಂದ ತಮ್ಮ ಬದುಕಿಗೆ ಆಧಾರವಾಗಿದ್ದ 2.4 ಎಕರೆ ಜಮೀನನ್ನು ಪುತ್ರಿಯರಿಬ್ಬರ ಹೆಸರಿಗೆ ಬರೆದುಕೊಟ್ಟಿದ್ದ ವೃದ್ಧರೊಬ್ಬರು, ಮಕ್ಕಳ ಕುತಂತ್ರದಿಂದ ನಿರಾಶ್ರಿತರಾದ ಹಿನ್ನೆಲೆಯಲ್ಲಿ ಹೈಕೋರ್ಟ್, ಗಿಫ್ಟ್ ಡೀಡ್ ರದ್ದುಪಡಿಸಿದೆ.

ಈ ಸಂಬಂಧ ತುಮಕೂರು ಜಿಲ್ಲೆಯ ಹೆಬ್ಬೂರು ಹೋಬಳಿ ದೊಡ್ಡಗೊಲ್ಲಹಳ್ಳಿ ವೆಂಕಟಯ್ಯ (84) ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಅಂತೆಯೇ, ಉಪ ವಿಭಾಧಿಕಾರಿ ಮತ್ತು ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶವನ್ನು; ಹಿರಿಯ ನಾಗರಿಕರ ಮತ್ತು ಪೋಷಕರ ನಿರ್ವಹಣಾ ಮತ್ತು ಕಲ್ಯಾಣ ಕಾಯ್ದೆ-2007ರ ಅನ್ವಯ ರದ್ದುಪಡಿಸಿದೆ.

'ಹಿರಿಯ ನಾಗರಿಕರು, ವಿಶೇಷವಾಗಿ ಗ್ರಾಮೀಣ ಪ್ರದೇಶದ

ಜನರು ವಿಶ್ವಾಸಾರ್ಹ ಸ್ವಭಾವ ಹೊಂದಿರುತ್ತಾರೆ ಮತ್ತು ಮಕ್ಕಳ ಮೇಲೆ ಭಾವನಾತ್ಮಕ ಮತ್ತು ಆರ್ಥಿಕ ಅವಲಂಬನೆ ಹೊಂದಿರುತ್ತಾರೆ. ಇದು ಕಾನೂನಿನಿಂದಲೂ ಗುರುತಿಸಲಾದ ಸಾಮಾಜಿಕ ವಾಸ್ತವ' ಎಂದು ವಿವರಿಸಿರುವ ನ್ಯಾಯಪೀಠ, 'ವಯಸ್ಸಾದ ಪೋಷಕರು ತಮ್ಮ ಮಕ್ಕಳಿಗೆ ಆಸ್ತಿಯನ್ನು ವರ್ಗಾಯಿಸುವಾಗ ಕಟ್ಟುನಿಟ್ಟಾದ ಕಾನೂನು ವಿಧಿ ವಿಧಾನಗಳಿಗಿಂತ ಹೆಚ್ಚಾಗಿ ನಂಬಿಕೆ, ನೈತಿಕ ಭರವಸೆಗಳು ಮತ್ತು ಕೌಟುಂಬಿಕ ಬಂಧಗಳನ್ನು ಅವಲಂಬಿಸಬೇಕು' ಎಂದು ಅಭಿಪ್ರಾಯಪಟ್ಟಿದೆ.

'ಹಿರಿಯ ನಾಗರಿಕರನ್ನು ಅವರ ವೃದ್ಧಾಪ್ಯದಲ್ಲಿ ಆರೈಕೆ ಮಾಡದೆ ಅವರ ಜೀವನ ನಿರ್ವಹಣೆಗೆ ನೆರವಾಗದೇ ಹೋದ ಸಂದರ್ಭದಲ್ಲಿ ನ್ಯಾಯಾಲಯ ರಕ್ಷಣೆಗೆ ಧಾವಿಸಿ ಆಸ್ತಿಯನ್ನು ರಕ್ಷಿಸಿ, ಅವರ ಹಕ್ಕುಗಳನ್ನು ಮರಳಿ ದೊರಕಿಸಿಕೊಡುತ್ತದೆ' ಎಂದು ತಿಳಿಸಿದೆ.

ಪ್ರಕರಣವೇನು?: ವೆಂಕಟಯ್ಯ ಅವರಿಗೆ ಪುತ್ರಿಯರು, 'ಚೆನ್ನಾಗಿ ನೋಡಿಕೊಳ್ಳುತ್ತೇವೆ' ಎಂದು ಭರವಸೆ ನೀಡಿದ್ದ ಹಿನ್ನೆಲೆಯಲ್ಲಿ ಶಿವಮ್ಮ ಮತ್ತು ಪುಟ್ಟಮ್ಮನವರಿಗೆ ತಮ್ಮ ಹೆಸರಿನಲ್ಲಿದ್ದ 2.4 ಎಕರೆ ಕೃಷಿ ಭೂಮಿಯನ್ನು ಗಿಫ್ಟ್ ಡೀಡ್ (ಉಡುಗೊರೆ ಪತ್ರ) ಮೂಲಕ ವರ್ಗಾವಣೆ ಮಾಡಿದ್ದರು.

ನಂತರ, 'ಪುತ್ರಿಯರು ಕೊಟ್ಟ ಮಾತಿನಂತೆ ನನ್ನನ್ನು ನೋಡಿಕೊಳ್ಳಲು ವಿಫಲವಾಗಿದ್ದಾರೆ' ಎಂದು ಆರೋಪಿಸಿ, ಗಿಫ್ಟ್ ಡೀಡ್ ರದ್ದು ಕೋರಿ ಉಪ ವಿಭಾಗಾಧಿಕಾರಿ ನೇತೃತ್ವದ ನ್ಯಾಯಮಂಡಳಿ ಮುಂದೆ ಮನವಿ ಸಲ್ಲಿಸಿದ್ದರು.

ನ್ಯಾಯಮಂಡಳಿ 2023ರ ಡಿಸೆಂಬರ್ 19ರಂದು ದೂರನ್ನು ವಜಾಗೊಳಿಸಿತ್ತು. ಈ ಆದೇಶವನ್ನು ಜಿಲ್ಲಾಧಿಕಾರಿ 2024ರ ಅಕ್ಟೋಬರ್ 22ರಂದು ಎತ್ತಿ ಹಿಡಿದಿದ್ದರು.

'ನವೋದ್ಯಮ ಕ್ಲಸ್ಟರ್‌ಗಳಿಗೆ ₹1,000 ಕೋಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಭೌಗೋಳಿಕ ಮತ್ತು ಪ್ರಾದೇಶಿಕ ಲಕ್ಷಣಗಳಿಗೆ ಅನುಗುಣವಾಗಿ ವಿವಿಧ ನವೋದ್ಯಮ ಕ್ಲಸ್ಟರ್‌ಗಳನ್ನು ಸ್ಥಾಪಿಸಲು ಮುಂದಿನ ಒಂದು ವರ್ಷದಲ್ಲಿ ₹1,000 ಕೋಟಿ ವಿನಿಯೋಗಿಸುತ್ತೇವೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ನಗರದ ಏಟ್ರಿಯಾ ವಿಶ್ವವಿದ್ಯಾಲಯದಲ್ಲಿ ಸೋಮವಾರ 'ಏಟ್ರಿಯಾ ಬಿಯಾಂಡರ್ ಲ್ಯಾಬ್' ಅನ್ನು ಉದ್ಘಾಟಿಸಿ ಅವರು ಮಾತನಾಡಿದರು. 'ನವೋದ್ಯಮ ನೀತಿಯ ಅಡಿಯಲ್ಲಿ 25 ಸಾವಿರ ನವೋದ್ಯಮಗಳನ್ನು ಬೆಳೆಸುವ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ. ಹೆಚ್ಚು ಚಾಲ್ತಿಯಲ್ಲಿರುವ ಡೀಪ್ ಟೆಕ್ ಮತ್ತು ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನಗಳ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ' ಎಂದರು.

'ನಮ್ಮ ಸರ್ಕಾರವು ಶಿಕ್ಷಣ ಸಂಸ್ಥೆಗಳು, ಉದ್ಯಮ ಮತ್ತು ನವೋದ್ಯಮಗಳನ್ನು ನಿಕಟವಾಗಿ ಜೋಡಿಸುವುದರ ಮೂಲಕ ತಂತ್ರಜ್ಞಾನ ಮತ್ತು ನಾವೀನ್ಯತೆಗೆ ಭದ್ರ ಬುನಾದಿ ಹಾಕುತ್ತಿದೆ. ಏಟ್ರಿಯಾ ಬಿಯಾಂಡರ್ ಲ್ಯಾಬ್ಸ್ (ಎಬಿಎಲ್) ಅಂತಹ ವೇದಿಕೆಗಳಲ್ಲಿ ಒಂದು. ಸಂಶೋಧನೆಗಳು ಪ್ರಯೋಗಾಲಯದ ನಾಲ್ಕು ಗೋಡೆಗಳಿಂದಾಚೆಗೆ ಬಂದು ವಾಸ್ತವಿಕ ಜಗತ್ತಿಗೆ ಪ್ರಯೋಜನಕಾರಿಯಾಗಿ ಪರಿವರ್ತಿಸಲು ಎಬಿಎಲ್ ವೇದಿಕೆ ಒದಗಿಸಲಿದೆ' ಎಂದರು. ಏಟ್ರಿಯಾ ವಿಶ್ವವಿದ್ಯಾಲಯದ ಕುಲಪತಿ ಸುಂದರ್ ರಾಜು ಉಪಸ್ಥಿತರಿದ್ದರು.

'ಗಾಂಧೀಜಿಗೆ ಅಪಮಾನ ಖಂಡನೀಯ'

ಬೆಂಗಳೂರು: 'ಮಹಾತ್ಮ ಗಾಂಧೀಜಿ ಅವರ ಊರುಗೋಲನ್ನು ದೊಣ್ಣೆಯಂತೆ ಚಿತ್ರಿಸಿ, ಅವರಿಗೆ ಅಪಮಾನ ಮಾಡುವ ರೀತಿ ಜಾಹೀರಾತು ಪ್ರಸಾರ ಮಾಡಿದ ಭಾರತೀಯ ಜನತಾ ಪಕ್ಷದ ಧೋರಣೆ ಗಾಸಿಯುಂಟುಮಾಡಿದೆ' ಎಂದು ಸ್ವಾಮೀಜಿಗಳು ಹಾಗೂ ಚಿಂತಕರು ಹೇಳಿದ್ದಾರೆ.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಗುರುಬಸವ ಸ್ವಾಮೀಜಿ, ವೂಡೇ ಪಿ. ಕೃಷ್ಣ, ಜಿ.ಎಸ್. ಜಯದೇವ, ನಾಗೇಶ್ ಹೆಗಡೆ, ಎನ್.ಆರ್. ವಿಶುಕುಮಾರ್, ಶಿವನಕರೆ ಬಸವಲಿಂಗಪ್ಪ, ಜೆ.ಬಿ. ಶಿವರಾಜ್, ವಿ. ಗಾಯತ್ರಿ ಹಾಗೂ ಶಾರದಾ ಗೋಪಾಲ್ ಜಂಟಿ ಹೇಳಿಕೆ ನೀಡಿದ್ದಾರೆ.

'ಮಹಾತ್ಮನ ಜೀವನಪಾಠಗಳನ್ನು, ತತ್ವಾದರ್ಶಗಳನ್ನು ಮೂಲೆಗೆ ತಳ್ಳುತ್ತ ಹೋದ ಬಿಜೆಪಿಗರ ನಡೆ ಈಗ 'ಜಿ ರಾಮ್ ಜಿ'ವರೆಗೆ ಬಂದಿದೆ. 'ನುಂಗಪ್ಪ'ರನ್ನು ಲೇವಡಿ ಮಾಡುವ ಭರದಲ್ಲಿ ಗಾಂಧೀಜಿ ಅವರ ಕೈಗೆ ದೊಣ್ಣೆ ಹಿಡಿಸಿ, ಅವರನ್ನೇ ಲೇವಡಿ ಮಾಡಿದ್ದು ಅಕ್ಷಮ್ಯ. ಬೌದ್ಧಿಕ ದಿವಾಳಿತನ ಬಿಂಬಿಸುವ ಈ ಜಾಹೀರಾತಿನಲ್ಲಿ ಲಾಠಿಯೇ ಬಂಡವಾಳ ಎಂಬ ಸಂದೇಶವಷ್ಟೇ ಎಲ್ಲರಿಗೂ ಕಾಣುವಂತಿದೆ. ಅಹಿಂಸಾಮೂರ್ತಿಯ ಬಿಂಬವನ್ನು ಹೀಗೆ ತಿರುಚಿದ್ದು ಖಂಡನೀಯ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮೆಜೆಸ್ಟಿಕ್: ಗಬ್ಬೆದ್ದ ಕೆಳಸೇತುವೆ

• ರಂಗನಾಥ ಮಲ್ಲಯ್ಯ

ಬೆಂಗಳೂರು: ನಗರದ ಹೃದಯ-ಭಾಗದಲ್ಲಿ ಇರುವ ಮೆಜೆಸ್ಟಿಕ್‌ನ ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಬಸ್ ನಿಲ್ದಾಣ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ (ಕೆಎಸ್‌ಆರ್) ರೈಲು ನಿಲ್ದಾಣಕ್ಕೆ ಪಾದಚಾರಿಗಳು ಸುಲಭವಾಗಿ ಹಾದು ಹೋಗಲು ನಿರ್ಮಿಸಿರುವ ಕೆಳಸೇತುವೆ ಗಬ್ಬೆದ್ದು ನಾರುತ್ತಿದ್ದು, ಪ್ರಯಾಣಿಕರಿಗೆ ಕಿರಿಕಿರಿ ಉಂಟು ಮಾಡುತ್ತಿದೆ.

ಗೋಡೆಗಳ ಮೇಲೆ ಪಾನ್ ಉಗುಳಿನ ಕಲೆ, ಕಿತ್ತುಹೋದ ನೆಲಹಾಸು, ಅಲ್ಲಲ್ಲಿ ಚೆಲ್ಲಿರುವ ತಿನಿಸುಗಳು, ಸೇದಿ ಬಿಸಾಡಿದ ಬೀಡಿ–ಸಿಗರೇಟ್ ತುಂಡುಗಳು, ಮದ್ಯ ಸೇವಿಸಿ ಎಸೆದಿರುವ ಪ್ಯಾಕೆಟ್‌ಗಳು, ಮೂತ್ರದ ವಾಸನೆಯ ನಡುವೆಯೇ ನಿತ್ಯ ಸಾವಿರಾರು ಪ್ರಯಾಣಿಕರು ಮೂಗು ಮುಚ್ಚಿಕೊಂಡು ಓಡಾಡುವ ದುಃಸ್ಥಿತಿ ಇದೆ.

2016ರಲ್ಲಿ 'ನಮ್ಮ ಮೆಟ್ರೊ' ಉದ್ಘಾಟನೆ ವೇಳೆ ಕೆಳಸೇತುವೆ ಪಾದಚಾರಿ ಮಾರ್ಗದ ನವೀಕರಣದ ಕೆಲಸಗಳಾಗಿದ್ದವು. ಆ ನಂತರ ಇದರ ನಿರ್ವಹಣೆಯೇ ಆಗಿಲ್ಲ. ಜಿಬಿಎ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಇಲ್ಲಿಗೆ ಭೇಟಿ ನೀಡಿಲ್ಲ ಎಂದು ಪ್ರಯಾಣಿಕರು ಆರೋಪಿಸಿದ್ದಾರೆ.

ರಸ್ತೆಯಲ್ಲಿ ವಾಹನಗಳ ದಟ್ಟಣೆ ಹೆಚ್ಚಿರುವುದರಿಂದ, ಕೆಳಸೇತುವೆ ಮಾರ್ಗ ಬಳಸುವುದು ಪಾದಚಾರಿಗಳಿಗೆ ಅನಿವಾರ್ಯ. ಆದರೆ ಶುಚಿಯಿಲ್ಲದ ಇಲ್ಲಿನ ವಾತಾವರಣ ಹೇಸಿಗೆ ತರಿಸುತ್ತದೆ ಎಂದು ಪಾದಚಾರಿಗಳು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಬಸ್ ನಿಲ್ದಾಣ ಮತ್ತು ರೈಲು ನಿಲ್ದಾಣಗಳಿಂದ ಹೊರ ಬರುವ ಪ್ರಯಾಣಿಕರನ್ನು ಸ್ವಾಗತಿಸುವ ರೀತಿ ಈ ಕೆಳಸೇತುವೆಗಳು ನಳನಳಿಸುವಂತಿರಬೇಕು. ಆದರೆ ಇಲ್ಲಿ ತದ್ವಿರುದ್ಧವಾಗಿದೆ. ಮೊದಲ ಬಾರಿಗೆ ನಗರಕ್ಕೆ ಬಂದವರು ಮತ್ತೆಂದಿಗೂ ಇಲ್ಲಿ ಸುಳಿಯಬಾರದು ಎಂಬ ನಿರ್ಣಯಕ್ಕೆ ಬರುತ್ತಾರೆ' ಎಂದು ಜಿ.ಆರ್.ಪ್ರೀತಮ್ ಹೇಳಿದರು.

'ಈ ಕೆಳಸೇತುವೆ ನಿರಾಶ್ರಿತರು ಮತ್ತು ಭಿಕ್ಷುಕರಿಗೆ ಆಶ್ರಯ ತಾಣವಾಗಿದೆ. ಮದ್ಯವ್ಯಸನಿಗಳು ಇಲ್ಲೇ ಇರುತ್ತಾರೆ. ಇದರಿಂದ ಮಹಿಳೆಯರು, ವಿದ್ಯಾರ್ಥಿನಿಯರು ಆತಂಕಪಡುವ ಸ್ಥಿತಿ ಎದುರಾಗಿದೆ. ಇಲ್ಲಿ ಸುರಕ್ಷತೆ ವಾತಾವರಣ ನಿರ್ಮಾಣವಾಗಬೇಕು' ಎಂದು ರಕ್ಷಿತಾ ಸಿದ್ದರಾಜು ಅಭಿಪ್ರಾಯಪಟ್ಟರು.

ಪಾದಚಾರಿ ಕೆಳಸೇತುವೆಯಲ್ಲಿ ಕಸದ ಮೂಟೆಗಳನ್ನು ಇಟ್ಟಿದ್ದಾರೆ

ಸಿ.ಸಿ.ಟಿ.ವಿ ಕ್ಯಾಮೆರಾಗಳು ಸಕ್ರಿಯವಾಗಿರುವಂತೆ ನೋಡಿಕೊಳ್ಳಬೇಕು. ಶುದ್ಧ ಕುಡಿಯುವ ನೀರು, ಶೌಚಾಲಯ ಸೇರಿದಂತೆ ಸುಸಜ್ಜಿತ ವ್ಯವಸ್ಥೆ ಕಲ್ಪಿಸಬೇಕು. ಸೂಕ್ತ ನಿರ್ವಹಣೆ ಆಗಬೇಕು

ನೂರ್ ಮೊಹಮ್ಮದ್, ಬಟ್ಟೆ ವ್ಯಾಪಾರಿ

ಸಂಯೋಜಿತ ವ್ಯಾಪಾರ ವ್ಯವಸ್ಥೆ ಕಲ್ಪಿಸಬೇಕು. ಪ್ರಯಾಣಿಕರ ಸುರಕ್ಷತೆಗೆ ಆದ್ಯತೆ ನೀಡಬೇಕು. ಟೈಲ್ಸ್ ಬದಲಿಸಬೇಕು. ಚಾವಣಿ ಮತ್ತು ಗೋಡೆಗಳಿಗೆ ಸುಣ್ಣಬಣ್ಣ ಬಳಿಯಬೇಕು

ಶರತ್ ಕೆ.ಆರ್., ಪ್ರಯಾಣಿಕ

'ಹಣಕ್ಕೆ ಪೀಡಿಸುತ್ತಾರೆ'

'ಲಿಂಗತ್ವ ಅಲ್ಪಸಂಖ್ಯಾತರು ಹಣಕ್ಕಾಗಿ ಪೀಡಿಸುತ್ತಾರೆ. ನಿರ್ಲಕ್ಷಿಸಿ ಮುಂದೆ ಸಾಗಿದರೂ ಬಿಡದೇ ಕೈಹಿಡಿದು ಎಳೆದಾಡಿ ಬಲವಂತದಿಂದ ಹಣ ವಸೂಲಿ ಮಾಡುತ್ತಾರೆ. ಇಂಥವರಿಂದ ಸಾರ್ವಜನಿಕರಿಗೆ ರಕ್ಷಣೆ ಒದಗಿಸಬೇಕು' ಎಂದು ಪಾದಚಾರಿ ಹೇಮಂತ್ ಜಿ.ಎಸ್. ಆಗ್ರಹಿಸಿದರು.

'ಒಂದೆಡೆ ಭಿಕ್ಷಾಟನೆ ಮಾಡುವವರ ಕಾಟ. ಮತ್ತೊಂದೆಡೆ ಲೈಂಗಿಕ ಕಾರ್ಯ-ಕರ್ತೆಯರ ಹಾವಳಿ. ಇದರಿಂದ ಉಸಿರುಗಟ್ಟುವ ವಾತಾವರಣ ಎದುರಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಕೆಐಐಟಿ: ಶೇ. 92.5ರಷ್ಟು ಉದ್ಯೋಗಾವಕಾಶ

ಬೆಂಗಳೂರು: ಭುವನೇಶ್ವರದ ಕೆಐಐಟಿ ಡೀಮ್ಡ್ ಟು ಬಿ ವಿಶ್ವವಿದ್ಯಾಲಯದಲ್ಲಿ 2025ರಲ್ಲಿ ಕ್ಯಾಂಪಸ್ ಸಂದರ್ಶನದ ಮೂಲಕ ಶೇಕಡ 92.5ರಷ್ಟು ವಿದ್ಯಾರ್ಥಿಗಳು ಉದ್ಯೋಗಾವಕಾಶಗಳನ್ನು ಪಡೆದುಕೊಂಡಿದ್ದಾರೆ.

757 ಕಂಪನಿಗಳು ನಡೆಸಿದ ಸಂದರ್ಶನದಲ್ಲಿ ಸುಮಾರು 5 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡಿದ್ದು, 4,621 ವಿದ್ಯಾರ್ಥಿಗಳಿಗೆ ಉದ್ಯೋಗ ಪಡೆದುಕೊಂಡಿದ್ದಾರೆ.

ಕೆಐಐಟಿ ಸ್ಕೂಲ್ ಆಫ್ ಟೆಕ್ನಾಲಜಿ (ಕೆಎಸ್‌ಒಟಿ) ನೇತೃತ್ವದಲ್ಲಿ ಆಯೋಜಿಸಿದ್ದ ಸಂದರ್ಶನದಲ್ಲಿ 451 ಕಂಪನಿಗಳು 3,800 ಉದ್ಯೋಗಾವಕಾಶಗಳನ್ನು ನೀಡಿದ್ದವು. ಇದರಲ್ಲಿ, ವಾರ್ಷಿಕ ತಲಾ ₹8.5 ಲಕ್ಷ ವೇತನ ನೀಡುವ ಭರವಸೆ ನೀಡಿವೆ. 59 ಕಂಪನಿಗಳು ವಾರ್ಷಿಕ ತಲಾ ₹10 ಲಕ್ಷ ವೇತನದ ಪ್ಯಾಕೇಜ್ ನೀಡಿವೆ. ವರ್ಲ್ಡ್ ಲೀಡರ್ ಇನ್ ಆರ್ಟಿಫಿಶಿಯಲ್ ಕಂಪ್ಯೂಟಿಂಗ್ (ಎನ್‌ವಿಐಡಿಐಎ) ಕಂಪನಿಯು ವಾರ್ಷಿಕ ₹36.28 ಲಕ್ಷ ವೇತನ ನೀಡುವ ಭರವಸೆ ನೀಡಿದೆ.

ಕೆಐಐಟಿ ಸ್ಕೂಲ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ (ಕೆಎಸ್‌ಒಎಂ) 161 ಕಂಪನಿಗಳು ನಡೆಸಿದ ಕ್ಯಾಂಪಸ್ ಸಂದರ್ಶನದಲ್ಲಿ 401 ಎಂಬಿಎ ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳು ಬಂದಿದ್ದು, ಕೆಐಐಟಿ ಸ್ಕೂಲ್ ಆಫ್ ರೂರಲ್ ಮ್ಯಾನೇಜ್‌ಮೆಂಟ್‌ನಲ್ಲಿ ಶೇ 100ರಷ್ಟು ವಿದ್ಯಾರ್ಥಿಗಳು ಉದ್ಯೋಗದ ಅವಕಾಶಗಳನ್ನು ಪಡೆದುಕೊಂಡಿದ್ದಾರೆ ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ರನ್‌ವೇಗೆ ಹಾರಿ ಬಂದ ಬಲೂನ್!

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ರನ್‌ವೇ ಪ್ರದೇಶಕ್ಕೆ ಬೃಹತ್ ಬಲೂನ್‌ವೊಂದು ಗಾಳಿಯಲ್ಲಿ ಹಾರಿ ಬಂದಿದೆ. ಫೆ.5ರಂದು ಈ ಘಟನೆ ನಡೆದಿದೆ.

ವಿಮಾನಗಳ ಟೇಕ್ ಆಫ್ ಮತ್ತು ಲ್ಯಾಂಡಿಂಗ್ ನಡೆಯುವ ರನ್‌ವೇ ಪ್ರದೇಶಕ್ಕೆ ಬೃಹತ್ ಗಾತ್ರದ ಬಲೂನ್ ಹಾರಿ ಬಂದಿದೆ. ಆ ಸಮಯದಲ್ಲಿ ವಿಮಾನಗಳ ಹಾರಾಟ ಇಲ್ಲದ ಕಾರಣ ಯಾವುದೇ ಅನಾಹುತ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಸಿಡಿ ಕನ್ಸಟ್ರಕ್ಷನ್ ಕಂಪನಿಗೆ ಈ ಬಲೂನ್ ಸೇರಿದೆ. ಅದರ ದಾರ ಕಟ್ ಆಗಿ ರನ್‌ವೇ ಕಡೆಗೆ ಹಾರಿ ಬಂದಿರುವ ಸಾಧ್ಯತೆ ಇದೆ. ಈ ಸಂಬಂಧ ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿ ಬಿಸಿಡಿ ಕನ್‌ಸ್ಟ್ರಕ್ಷನ್ ಕಂಪನಿ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ವಿಮಾನ ನಿಲ್ದಾಣದ ಭದ್ರತೆ ದೃಷ್ಟಿಯಿಂದ ಇಂತಹ ನಿರ್ಲಕ್ಷ್ಯ ಅಪಾಯಕಾರಿ ಪರಿಣಾಮಕ್ಕೆ ಕಾರಣವಾಗಬಹುದು ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಡ್ರಗ್ಸ್ ಮಾರಾಟ: 24 ಮಂದಿ ಬಂಧನ

₹2.08 ಕೋಟಿ ಮೌಲ್ಯದ ಮಾದಕ ವಸ್ತು ಜಪ್ತಿ
ನಗರದ ವಿವಿಧ ಠಾಣೆಗಳ ವ್ಯಾಪ್ತಿಯಲ್ಲಿ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಸಿಬಿ ಮಾದಕ ದ್ರವ್ಯ ನಿಗ್ರಹ ದಳ, ಸಂಘಟಿತ ಅಪರಾಧ ದಳ ಕಾರ್ಯಾಚರಣೆ ನಡೆಸಿ ನಗರದ ವಿವಿಧ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಮಾದಕ ವಸ್ತು ಮಾರಾಟ ಮಾಡುತ್ತಿದ್ದ 24 ಮಂದಿಯನ್ನು ಬಂಧಿಸಿದೆ.

ಕೇರಳ, ತೆಲಂಗಾಣ, ಆಂಧ್ರ ಪ್ರದೇಶ ಹಾಗೂ ಬೆಂಗಳೂರು ನಗರದ ಆರೋಪಿಗಳನ್ನು ಬಂಧಿಸಿ, 1 ಕೆ.ಜಿ. 23 ಗ್ರಾಂ ಹೈಡ್ರೋ ಗಾಂಜಾ, 76 ಕೆ.ಜಿ. ಗಾಂಜಾ, 11 ಕೆ.ಜಿ. 600 ಗ್ರಾಂ ಚರಸ್, 121 ಗ್ರಾಂ ಎಂಡಿಎಂಎ ವಶಪಡಿಸಿಕೊಳ್ಳಲಾಗಿದೆ. ಇವುಗಳ ಮೌಲ್ಯ ಅಂದಾಜು ₹2.08 ಕೋಟಿ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಕುಮಾರಸ್ವಾಮಿ ಲೇಔಟ್, ಹೆಬ್ಬಾಳ, ಜೆ.ಸಿ.ನಗರ, ಬಸವನಗುಡಿ, ಗೋವಿಂದರಾಜನಗರ, ಚಾಮರಾಜಪೇಟೆ ಠಾಣಾ ವ್ಯಾಪ್ತಿಗಳಲ್ಲಿ ಆರೋಪಿಗಳು ಹೈಡ್ರೋ ಗಾಂಜಾ, ಚರಸ್, ಎಂಡಿಎಂಎ ಮಾರಾಟ ಮಾಡುತ್ತಿದ್ದ ಬಗ್ಗೆ ಪೊಲೀಸರಿಗೆ ಮಾಹಿತಿ ಬಂತು. ಮಾಹಿತಿ ಆಧರಿಸಿ, ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಬಾತ್ಮೀದಾರರು ತಿಳಿಸಿದ ಸ್ಥಳಗಳ ಮೇಲೆ ದಾಳಿ ನಡೆಸಿ, ಹೊರ ರಾಜ್ಯದವರು ಸೇರಿ 24 ಮಂದಿಯನ್ನು ವಶಕ್ಕೆ ಪಡೆದು, ವಿಚಾರಣೆಗೆ ಒಳಪಡಿಸಲಾಯಿತು ಎಂದು ಹೇಳಿದ್ದಾರೆ.

ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಅಪರಿಚಿತ ವ್ಯಕ್ತಿಗಳಿಂದ ಮಾದಕ ವಸ್ತುಗಳನ್ನು ಖರೀದಿಸಿ, ಸಾರ್ವಜನಿಕರಿಗೆ, ಕಾಲೇಜು ವಿದ್ಯಾರ್ಥಿಗಳಿಗೆ, ಐಟಿ, ಬಿಟಿ ಉದ್ಯೋಗಿಗಳಿಗೆ ಮಾರಾಟ ಮಾಡುತ್ತಿದ್ದುದಾಗಿ ವಿಚಾರಣೆ ವೇಳೆ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ ಎಂದು ಹೇಳಿದರು.

ಆರೋಪಿಗಳಿಗೆ ಹೈಡ್ರೋ ಗಾಂಜಾ, ಗಾಂಜಾ, ಚರಸ್ ಮತ್ತು ಎಂಡಿಎಂಎ ಸರಬರಾಜು ಮಾಡಿದ ವ್ಯಕ್ತಿಗಳ ಪತ್ತೆ ಕಾರ್ಯ ಮುಂದುವರೆದಿದ್ದು, ತನಿಖೆ ಪ್ರಗತಿಯಲ್ಲಿದೆ ಎಂದರು.

ಆರೋಪಿಗಳಿಂದ ವಶಪಡಿಸಿಕೊಂಡಿರುವ ಮಾದಕ ವಸ್ತುಗಳನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ವೀಕ್ಷಿಸಿದರು

37 ದಿನಗಳಲ್ಲಿ 179 ಮಂದಿ ಸೆರೆ

ಅಪರಾಧ ಸುದ್ದಿ

ಮಾದಕ ವಸ್ತುಗಳ ಸಾಗಣೆ, ಬಳಕೆ ಮತ್ತು ಅದಕ್ಕೆ ಸಂಬಂಧಿಸಿದ ಅಪರಾಧ ಚಟುವಟಿಕೆ ನಿಯಂತ್ರಿಸುವ ಉದ್ದೇಶದಿಂದ ಕಾರ್ಯಾಚರಣೆ ತೀವ್ರಗೊಳಿಸಿರುವ ಪೊಲೀಸರು, ಜನವರಿ 1ರಿಂದ ಫೆಬ್ರುವರಿ 7ರ ಅವಧಿಯಲ್ಲಿ ಮಾದಕ ವಸ್ತು ಮಾರಾಟಕ್ಕೆ ಸಂಬಂಧಿಸಿದಂತೆ 109 ಪ್ರಕರಣಗಳನ್ನು ದಾಖಲಿಸಿ, 179 ಆರೋಪಿಗಳನ್ನು ಬಂಧಿಸಿದ್ದಾರೆ.

ಮಾದಕ ವಸ್ತು ಸೇವಿಸಿದ ಆರೋಪಕ್ಕೆ ಸಂಬಂಧಿಸಿ 839 ಪ್ರಕರಣಗಳು ದಾಖಲಾಗಿದ್ದು, 1,038 ಆರೋಪಿಗಳನ್ನು ಬಂಧಿಸಲಾಗಿದೆ. ಗಾಂಜಾ, ಹೈಡ್ರೋ ಗಾಂಜಾ, ಸಿಂಥೆಟಿಕ್ ಡ್ರಗ್ಸ್, ಮಾತ್ರೆಗಳನ್ನು ವಶಪಡಿಸಿಕೊಳ್ಳಲಾಗಿದೆ. ಇವುಗಳ ಅಂದಾಜು ಮೌಲ್ಯ ₹8.19 ಕೋಟಿ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ಮಾದಕ ವಸ್ತುಗಳ ಬಳಕೆ, ಮಾರಾಟ ಮತ್ತು ತಯಾರಿಕೆಗೆ ಸಂಬಂಧಿಸಿದಂತೆ ಯಾವುದೇ ಮಾಹಿತಿ, ಸುಳಿವು ದೊರೆತರೆ ಕೂಡಲೇ 1908/112 ಅಥವಾ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡುವ ಮೂಲಕ ಸಹಕರಿಸುವಂತೆ ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

ಮಗಳು ಸೇರಿ ಇಬ್ಬರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಯಿ ಹಾಗೂ ದೊಡ್ಡಮ್ಮನ ಖಾಸಗಿ ಫೋಟೊಗಳನ್ನು ರಹಸ್ಯವಾಗಿ ಸೆರೆಹಿಡಿದು ಪ್ರಿಯಕರನಿಗೆ ಕಳುಹಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಮಗಳು ಸೇರಿ ಇಬ್ಬರ ವಿರುದ್ಧ ಬ್ಯಾಟರಾಯನಪುರ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ನಗರದ ನಿವಾಸಿ 49 ವರ್ಷದ ಮಹಿಳೆ ನೀಡಿದ ದೂರಿನ ಮೇರೆಗೆ ಮಗಳು ಹಾಗೂ ಆಕೆಯ ಪ್ರಿಯಕರ ವರುಣ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ನನಗೆ ಇಬ್ಬರು ಹೆಣ್ಣುಮಕ್ಕಳಿದ್ದಾರೆ. ಹಿರಿಯ ಮಗಳು ಬಿಬಿಎಂ ಓದುತ್ತಿದ್ದು, ವಿದ್ಯಾಭ್ಯಾಸಕ್ಕಾಗಿ ಕಳೆದ ವರ್ಷ ಮೊಬೈಲ್ ಕೊಡಿಸಿದ್ದೆವು. ಒಂದು ತಿಂಗಳ ಹಿಂದೆ ಫೋನ್‌ನಲ್ಲಿ ಅಪರಿಚಿತ ಯುವಕನೊಂದಿಗೆ ಮಾತನಾಡುತ್ತಿರುವುದನ್ನು ಕಂಡು ಅನುಮಾನ ವ್ಯಕ್ತವಾಗಿತ್ತು. ಈ ಬಗ್ಗೆ ಮಗಳಿಗೆ ತಿಳಿವಳಿಕೆ ನೀಡಿದ್ದೆವು. ಬಳಿಕ ಪಾಸ್‌ವರ್ಡ್ ತೆಗೆದುಕೊಂಡು ಮೊಬೈಲ್ ಪರಿಶೀಲಿಸಿದಾಗ ತನ್ನ ಹಾಗೂ ಅಕ್ಕನ ಖಾಸಗಿ ಫೋಟೊಗಳನ್ನು ಯುವಕನಿಗೆ ಕಳುಹಿಸಿರುವುದನ್ನು ಕಂಡು ಆಚ್ಚರಿಯಾಗಿತ್ತು' ಎಂದು ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ.

'ತಾಯಿಯ ಖಾಸಗಿ ಫೋಟೊಗಳನ್ನು ಕಳುಹಿಸುವಂತೆ ಮಗಳಿಗೆ ಯುವಕ ಸಂದೇಶ ರವಾನಿಸಿರುವುದು ಗೊತ್ತಾಯಿತು. ಮೆಸೇಜ್‌ಗಳಲ್ಲಿ ಫೋಟೊ ಕಳಿಸುವಂತೆ ಯುವಕ ಒತ್ತಾಯಿಸಿದ್ದಾನೆ. ಮಗಳಿಗೆ ಬುದ್ಧಿಮಾತು ಹೇಳಿ, ಮೊಬೈಲ್ ನಲ್ಲಿದ್ದ ಫೋಟೊಗಳನ್ನು ಅಳಿಸಲಾಗಿತ್ತು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಆ ನಂತರ, ಪ್ರೀತಿಸಿದ ಯುವಕನನ್ನೇ ಮದುವೆ ಆಗುತ್ತೇನೆ ಎಂದು ಮಗಳು ಜಗಳ ಮಾಡಿಕೊಂಡು ಕೆಲ ದಿನಗಳ ಹಿಂದೆ ಮನೆ ಬಿಟ್ಟು ಹೋಗಿದ್ದಾಳೆ. ತಮ್ಮ ಖಾಸಗಿ ಫೋಟೊಗಳನ್ನು ಯುವಕ ಬೇರೆಯವರಿಗೆ ಕಳುಹಿಸಿರುವ ಸಾಧ್ಯತೆಯಿದೆ. ಹೀಗಾಗಿ, ಮಗಳು ಹಾಗೂ ಆಕೆಯ ಪ್ರಿಯಕರನ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ದೂರಿನಲ್ಲಿ ಯುವತಿಯ ತಾಯಿ ಆಗ್ರಹಿಸಿದ್ದಾರೆ.

ಮಾಸ್ಕ್ ಧರಿಸಿ ಮನೆಗಳ್ಳತನ: ಬಂಧನ

ಕೋವಿಡ್ ವೇಳೆ ಟ್ರಾವೆಲ್ಸ್ ವ್ಯವಹಾರದಲ್ಲಿ ನಷ್ಟ: ₹1.84 ಕೋಟಿ ಆಭರಣ ವಶ

ಪ್ರಜಾವಾಣಿ ವಾರ್ತೆ

ಡಿ. ರಾಜಾ

ಬೆಂಗಳೂರು: ಮುಖಕ್ಕೆ ಮಾಸ್ಕ್ ಧರಿಸಿ ಮನೆಗಳ್ಳತನ ಮಾಡುತ್ತಿದ್ದ ಟೂರ್ಸ್ ಆ್ಯಂಡ್ ಟ್ರಾವೆಲ್ಸ್ ಮಾಲೀಕನನ್ನು ಬೈಯಪ್ಪನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಸೋಲದೇವನಹಳ್ಳಿ ನಿವಾಸಿ ಡಿ.ರಾಜಾ (43) ಎಂಬಾತನನ್ನು ಬಂಧಿಸಿ, ₹1.84 ಕೋಟಿ ಮೌಲ್ಯದ ಚಿನ್ನಾಭರಣ ವಶಕ್ಕೆ ಪಡೆಯಲಾಗಿದೆ. ಅಲ್ಲದೆ, ಈತನ ಬಂಧನದಿಂದ ನಗರದ ಎರಡು ಠಾಣೆಗಳಲ್ಲಿ ದಾಖಲಾಗಿದ್ದ ನಾಲ್ಕು ಕಳ್ಳತನ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

'ದಾವಣಗೆರೆ ಹಾಗೂ ನಗರದಲ್ಲಿ ಟ್ರಾವೆಲ್ಸ್ ಏಜೆನ್ಸಿ ನಡೆಸುತ್ತಿದ್ದ ರಾಜಾ, ಕೆಲ ವರ್ಷಗಳಿಂದ ಸೋಲದೇವನಹಳ್ಳಿಯಲ್ಲಿ ಕುಟುಂಬ ಸಮೇತ ವಾಸವಾಗಿದ್ದಾನೆ. ಜೂಜಾಟದಲ್ಲಿ ಲಕ್ಷಾಂತರ ರೂಪಾಯಿ ಕಳೆದುಕೊಂಡಿದ್ದ ಈತ, ಕೋವಿಡ್ ವೇಳೆ ಟ್ರಾವೆಲ್ಸ್‌ನಲ್ಲಿ ಭಾರಿ ನಷ್ಟ ಉಂಟಾಗಿದ್ದರಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ಹೀಗಾಗಿ ನಾಲ್ಕು ವರ್ಷಗಳಿಂದ ನಗರದಲ್ಲಿ ಆಟೊ ಚಾಲನೆ ಮಾಡಿಕೊಂಡಿದ್ದ. ಆದರೆ, ತನ್ನ ದುಶ್ಚಟಗಳಿಗೆ ಹಣ ಹೊಂದಿಸಲು ಕಳೆದೊಂದು ವರ್ಷದಿಂದ ಕಳ್ಳತನ ಹಾದಿ ಹಿಡಿದಿದ್ದ' ಎಂದು ಪೊಲೀಸರು ತಿಳಿಸಿದರು.

ಎನ್‌ಜಿಇಎಫ್ ಲೇಔಟ್ ನಿವಾಸಿ, ಹೋಟೆಲ್ ಉದ್ಯಮಿ ಉದಯನಾಯಕ್ ಅವರು 2025ರ ಅಕ್ಟೋಬರ್ 18ರಂದು ಕುಂದಾಪುರಕ್ಕೆ ಕುಟುಂಬ ಸಮೇತ ಹೋಗಿದ್ದರು. ಅವರು ವಾಪಸ್ ಬಂದಾಗ ಮನೆ ಬಾಗಿಲನ್ನು ಮೀಟಿ, ಯಾರೋ ಒಳಗೆ ಹೋಗಿದ್ದರು. ಕೊಠಡಿಯ ಬೀರುವಿನಲ್ಲಿದ್ದ ಸುಮಾರು 783 ಗ್ರಾಂ ಚಿನ್ನಾಭರಣಗಳು ಹಾಗೂ ₹8 ಲಕ್ಷ ನಗದು ಕಳವಾಗಿದ್ದವು. ಈ ಬಗ್ಗೆ ಅವರು ದೂರು ನೀಡಿದ್ದರು ಎಂದರು.

ಬಾತ್ಮೀದಾರರ ಮಾಹಿತಿ ಆಧರಿಸಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ, ಕಳ್ಳತನದ ಬಗ್ಗೆ ತಪ್ಪೊಪ್ಪಿಕೊಂಡಿದ್ದಾನೆ. ಜತೆಗೆ ಕಳವು ಚಿನ್ನಾಭರಣಗಳನ್ನು ಕಮಗೊಂಡನಹಳ್ಳಿ, ಅಬ್ಬಿಗೆರೆ, ಎಚ್‌ಎಂಟಿ ಲೇಔಟ್‌ನಲ್ಲಿರುವ ಆಭರಣ ಅಂಗಡಿಗಳಲ್ಲಿ ಹಾಗೂ ಅಬ್ಬಿಗೆರೆ ಜಾಲಹಳ್ಳಿ, ಗೋವಾದಲ್ಲಿ ವಾಸವಿರುವ ವ್ಯಕ್ತಿ ಸೇರಿ ನಾಲ್ವರಿಗೆ ಚಿನ್ನಾಭರಣ ಮಾರಾಟ ಮಾಡಿರುವುದಾಗಿ ತಿಳಿಸಿದ್ದ. ನಂತರ ಆರೋಪಿ ನೀಡಿದ ಮಾಹಿತಿಯಂತೆ ಮೂರು ಆಭರಣ ಅಂಗಡಿ ಹಾಗೂ ನಾಲ್ವರು ವ್ಯಕ್ತಿಗಳಿಂದ ಒಟ್ಟು 1 ಕೆ.ಜಿ. 232 ಗ್ರಾಂ ಚಿನ್ನಾಭರಣ, ಕೃತ್ಯಕ್ಕೆ ಬಳಸಿದ್ದ ದ್ವಿಚಕ್ರವಾಹನ ಹಾಗೂ ಮೊಬೈಲ್ ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಆರೋಪಿ ತನ್ನ ಗುರುತು ಮರೆಮಾಚಲು ಮುಖಕ್ಕೆ ಮಾಸ್ಕ್, ಕೈಗವಸು ಹಾಕಿಕೊಂಡು ಮನೆಗಳ ಬೀಗ ಮುರಿದು ಮನೆಯೊಳಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ. ಜತೆಗೆ ರೈಲ್ವೆ ಟ್ರ್ಯಾಕ್ ಸಮೀಪದ ಮನೆಗಳನ್ನೇ ಗುರಿಯಾಗಿಸಿಕೊಂಡು ಕಳವು ಮಾಡುತ್ತಿರುವುದು ಪತ್ತೆಯಾಗಿದೆ.

ಚಿನ್ನಾಭರಣ ಮಾರಿದ ಹಣದಲ್ಲಿ ಗೋವಾದಲ್ಲಿ ಮೋಜು-ಮಸ್ತಿಗೆ ಹಣ ಬಳಸುತ್ತಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

ಜಾಲತಾಣ ಪೋಸ್ಟ್ ವಿರುದ್ಧ ವಿಚಾರಣೆ ನಡೆಸದೆ ಎಫ್‌ಐಆರ್: ಕಡಿವಾಣಕ್ಕೆ ಕ್ರಮ

ಪೊಲೀಸರಿಗೆ ನೂತನ ಮಾರ್ಗಸೂಚಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣದ ಪೋಸ್ಟ್‌ಗಳಿಗೆ ಸಂಬಂಧಿಸಿದ ಎಫ್‌ಐಆರ್‌ಗಳನ್ನು ಯಾಂತ್ರಿಕವಾಗಿ ದಾಖಲಿಸುವುದು ಮತ್ತು ಬಂಧನಗಳನ್ನು ತಪ್ಪಿಸಲು ಪೊಲೀಸ್ ಇಲಾಖೆಯಿಂದ ಹೊಸ ಮಾರ್ಗಸೂಚಿ ಜಾರಿ ಮಾಡಲಾಗಿದೆ.

ರಾಜ್ಯ ಪೊಲೀಸ್ ಮಹಾ ನಿರ್ದೇಶಕ ಎಂ.ಎ. ಸಲೀಂ ಈ ಬಗ್ಗೆ ಆದೇಶ ಹೊರಡಿಸಿದ್ದು, ಕಟ್ಟುನಿಟ್ಟಾಗಿ ಪಾಲನೆ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಹಾಗೆಯೇ ಈ ಮಾರ್ಗಸೂಚಿಗಳನ್ನು ಎಲ್ಲಾ ಸಿಬ್ಬಂದಿಗೆ ತಿಳಿಸುವಂತೆಯೂ ಸೂಚಿಸಿದ್ದಾರೆ.

ಈ ಮಾರ್ಗಸೂಚಿಗಳು ಹಲವು ಸಂದರ್ಭಗಳಲ್ಲಿ ಪೊಲೀಸರು ಹೇಗೆ ಕಾರ್ಯನಿರ್ವಹಿಸಬೇಕು ಎಂಬುದರ ಕುರಿತು ನಿರ್ದೇಶನ ನೀಡುತ್ತವೆ.

'ಇಮ್ರಾನ್ ಪ್ರತಾಪಗಢಿ ಮತ್ತು ಗುಜರಾತ್ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ನೀಡಿದ ನಿರ್ದೇಶನಗಳಿಗೆ ಅನುಗುಣವಾಗಿ ಪ್ರಾಥಮಿಕ ವಿಚಾರಣೆ ನಡೆಸದೆಯೇ ಪೊಲೀಸರು ಸಾಮಾಜಿಕ ಜಾಲತಾಣದ ಪೋಸ್ಟ್‌ಗಳ ಸಂಬಂಧಿಸಿದ ಪ್ರಕರಣಗಳನ್ನು ಯಾಂತ್ರಿಕವಾಗಿ ದಾಖಲಿಸುತ್ತಿದ್ದಾರೆ ಎಂಬುದು ಗಮನಕ್ಕೆ ಬಂದಿದೆ. ತೆಲಂಗಾಣ ಹೈಕೋರ್ಟ್ ರೂಪಿಸಿದ ಮಾರ್ಗಸೂಚಿಗಳನ್ನು ಸುಪ್ರೀಂಕೋರ್ಟ್ ಸಮರ್ಥಿಸಿದೆ. ಆದ್ದರಿಂದ, ಅದೇ ಮಾರ್ಗಸೂಚಿಗಳನ್ನು ಇಲ್ಲಿ ಅಳವಡಿಸಿಕೊಳ್ಳಲಾಗಿದೆ' ಎಂದು ಸಲೀಂ ಹೇಳಿದ್ದಾರೆ.

'ಮಾನಹಾನಿ ಅಥವಾ ಅಂತಹುದೇ ಅಪರಾಧಗಳಿಗೆ ಯಾವುದೇ ಎಫ್‌ಐಆರ್ ದಾಖಲಿಸುವ ಮೊದಲು, ದೂರುದಾರನು ಕಾನೂನು ಪ್ರಕಾರ 'ನೊಂದ ವ್ಯಕ್ತಿ' ಎಂಬುದನ್ನು ಪರಿಶೀಲಿಸಬೇಕು. ಸಂಜ್ಞೆಯ ಅಪರಾಧಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸುವ ಮೊದಲು ಪ್ರಾಥಮಿಕ ವಿಚಾರಣೆ/ತನಿಖೆ ನಡೆಸಬೇಕು' ಎಂದು ತಿಳಿಸಿದ್ದಾರೆ.

'ಕಠಿಣ, ಅವಮಾನಕಾರಿ ಅಥವಾ ಟೀಕಾತ್ಮಕ ರಾಜಕೀಯ ಭಾಷಣಗಳಿಗೆ ಸಂಬಂಧಿಸಿದಂತೆ ಪೊಲೀಸರು ಯಾಂತ್ರಿಕವಾಗಿ ಪ್ರಕರಣಗಳನ್ನು ದಾಖಲಿಸಬಾರದು. ಭಾಷಣವು ಹಿಂಸೆಗೆ ಪ್ರಚೋದನೆ ನೀಡಿದಾಗ ಅಥವಾ ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆಗೆ ತಕ್ಷಣದ ಅಪಾಯ ಉಂಟು ಮಾಡಿದಾಗ ಮಾತ್ರ ಕ್ರಿಮಿನಲ್ ಕಾನೂನನ್ನು ಅನ್ವಯಿಸಬಹುದು. ಸಂವಿಧಾನದ ವಿಧಿ 19(1)(ಎ) ಅಡಿಯಲ್ಲಿ ಇರುವ ರಾಜಕೀಯ ಅಭಿವ್ಯಕ್ತಿಯ ಸ್ವಾತಂತ್ರ್ಯದ ಸಂವಿಧಾನಾತ್ಮಕ ರಕ್ಷಣೆಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು' ಎಂದಿದ್ದಾರೆ.

'ಮಾನಹಾನಿಯನ್ನು ಗಂಭೀರ ಸ್ವರೂಪದ್ದಲ್ಲದ ಅಪರಾಧ ಎಂದು ವರ್ಗೀಕರಿಸಿರುವುದರಿಂದ, ಇಂತಹ ವಿಷಯಗಳಲ್ಲಿ ಪೊಲೀಸರು ನೇರವಾಗಿ ಎಫ್‌ಐಆರ್ ದಾಖಲಿಸಲು ಸಾಧ್ಯವಿಲ್ಲ. ಸಂಬಂಧಿತ ಮ್ಯಾಜಿಸ್ಟ್ರೇಟ್ ಅವರನ್ನು ಸಂಪರ್ಕಿಸಲು ದೂರುದಾರರಿಗೆ ನಿರ್ದೇಶಿಸಬೇಕು. ಮ್ಯಾಜಿಸ್ಟ್ರೇಟ್ ಅವರು ನಿರ್ದಿಷ್ಟ ಆದೇಶ ನೀಡಿದ ನಂತರ ಮಾತ್ರ ಪೊಲೀಸ್ ಕ್ರಮ ಕೈಗೊಳ್ಳಬಹುದು' ಎಂದು ಹೇಳಿದ್ದಾರೆ.

ಮಹಿಳೆ ಸಾವು: ಚಿನ್ನದ ಸರ ನಾಪತ್ತೆ

ಪೀಣ್ಯ ದಾಸರಹಳ್ಳಿ: ಹುಸ್ಕೂರು ಗ್ರಾಮದ ಜ್ಯೋತಿ (45) ಅವರು ಶೌಚಾಲಯದಿಂದ ಹೊರಗೆ ಬಂದು, ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಅವರು ಮಹಿಳೆ ಧರಿಸಿದ್ದ 70 ಗ್ರಾಂ ಚಿನ್ನದ ಸರ ನಾಪತ್ತೆಯಾಗಿದೆ.

ಮೃತ ಜ್ಯೋತಿ ಅವರ ಮನೆಯ ಕಾಂಪೌಂಡ್ ಒಳಗೆ ಶೌಚಾಲಯ ಇದ್ದು, ಬೆಳಗಿನ ಜಾವ 5.30ರಲ್ಲಿ ಶೌಚಗೃಹಕ್ಕೆ ಹೋಗಿ ಹೊರಬಂದಿದ್ದಾರೆ. ಅವರ ಮೂಗು ಹಾಗೂ ಕಿವಿಯಲ್ಲಿ ರಕ್ತ ಬಂದು, ಕುಸಿದು ಬಿದ್ದಿದ್ದಾರೆ.

'ಅಪರಿಚಿತ ವ್ಯಕ್ತಿಗಳು ಅವರ ಮುಖಕ್ಕೆ ರಾಸಾಯನಿಕ ಸ್ಪ್ರೇ ಮಾಡಿ, ಹಲ್ಲೆ ನಡೆಸಿ ಮಾಂಗಲ್ಯ ಸರ ಕಿತ್ತುಕೊಂಡು ಹೋಗಿರಬಹುದು' ಎಂದು ಸ್ಥಳೀಯರು ಅನುಮಾನ ವ್ಯಕ್ತಪಡಿಸಿದ್ದಾರೆ.

ಸ್ಥಳಕ್ಕೆ ಮಾದನಾಯಕನಹಳ್ಳಿ ಠಾಣೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿ ಸ್ಥಳೀಯರಿಂದ ಮಾಹಿತಿ ಪಡೆದರು.

ಡಿಸಿಪಿ ನಾಗೇಶ್ ಮಾತನಾಡಿ, 'ಮಹಿಳೆ ಶೌಚಾಲಯದಿಂದ ಹೊರಬಂದ ಬಳಿಕ ಕುಸಿದು ಬಿದ್ದು ಮೃತಪಟ್ಟಿದ್ದಾರೆ. ಅವರ ಕುತ್ತಿಗೆಯಲ್ಲಿದ್ದ ಮಾಂಗಲ್ಯ ಸರ ಕಾಣುತ್ತಿಲ್ಲ. ಆದರೆ, ರಾತ್ರಿ ಅವರ ಕಿವಿ ಓಲೆಯನ್ನು ಮನೆಯಲ್ಲಿ ತೆಗೆದು ಇಟ್ಟಿದ್ದನ್ನು ಅವರ ಮಗ ನೋಡಿದ್ದಾರೆ. ಹಾಗಾಗಿ ಚಿನ್ನದ ಸರವನ್ನೂ ತೆಗೆದು ಇಟ್ಟಿರುವ ಸಾಧ್ಯತೆ ಇದೆ. ರಾಸಾಯನಿಕ ಸ್ಪ್ರೇ ಮಾಡಿರುವ ಬಗ್ಗೆ ಸುಳಿವಿಲ್ಲ. ಪರಿಶೀಲನೆ ನಡೆಸಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಘಟನಾ ಸ್ಥಳದ ಸುತ್ತಮುತ್ತಲಿನ ರಸ್ತೆಗಳಲ್ಲಿರುವ ಸಿ.ಸಿ.ಟಿ.ವಿ. ಕ್ಯಾಮೆರಾಗಳನ್ನು ಪೊಲೀಸರು ಪರಿಶೀಲನೆ ನಡೆಸುತ್ತಿದ್ದಾರೆ. ಮರಣೋತ್ತರ ಪರೀಕ್ಷೆ ಬಳಿಕ ಮೃತದೇಹವನ್ನು ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ಸರಗಳ್ಳರ ಸೆರೆ: 66 ಗ್ರಾಂ ಚಿನ್ನ, ದ್ವಿಚಕ್ರ ವಾಹನ ವಶ

ಬೆಂಗಳೂರು: ಮನೆ ಬಾಡಿಗೆಗೆ ಕೇಳುವ ನೆಪದಲ್ಲಿ ಬಂದು ಮಹಿಳೆಯ ಮಾಂಗಲ್ಯ ಸರ ಕಸಿದುಕೊಂಡು ಪರಾರಿಯಾಗಿದ್ದ ಇಬ್ಬರು ಸರಗಳ್ಳರನ್ನು ಹೆಬ್ಬಾಳ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜೆ.ಪಿ. ನಗರದ ಅರುಣ್ ಮತ್ತು ಆಂಧ್ರಪ್ರದೇಶದ ವೆಂಕಟ್ ಬಂಧಿತರು. ಆರೋಪಿಗಳಿಂದ ₹9.24 ಲಕ್ಷ ಮೌಲ್ಯದ 66 ಗ್ರಾಂ ಚಿನ್ನಾಭರಣ, ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ. ವಿಲಾಸಿ ಜೀವನ ನಡೆಸುತ್ತಿದ್ದ ಆರೋಪಿಗಳು ನಗರದೆಲ್ಲೆಡೆ ಸುತ್ತಾಡಿ ಒಂಟಿ ಮಹಿಳೆಯರನ್ನು ಗುರಿಯಾಗಿಸಿಕೊಂಡು ಸರಗಳವು ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಜನವರಿ 27ರಂದು ಸಂಜೆ ದ್ವಿಚಕ್ರ ವಾಹನದಲ್ಲಿ ಬಂದ ಇಬ್ಬರು ಆರೋಪಿಗಳು, ಮನೆ ಬಾಡಿಗೆಗೆ ಕೇಳುವ ನೆಪದಲ್ಲಿ ಮೊಮ್ಮಗಳನ್ನು ಎತ್ತಿಕೊಂಡು ನಿಂತಿದ್ದ ಮಹಿಳೆಯನ್ನು ಮಾತನಾಡಿಸಿದ್ದಾರೆ. ಆಕೆಯ ಗಮನವನ್ನು ಬೇರೆಡೆ ಸೆಳೆದು 58.43 ಗ್ರಾಂ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದರು. ಈ ಕುರಿತು ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ವಿವಿಧ ಆಯಾಮಗಳಲ್ಲಿ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ. ಆರೋಪಿಗಳ ಬಂಧನದಿಂದ ಹೆಬ್ಬಾಳ ಠಾಣೆ, ಆರ್‌ಎಂಸಿ ಯಾರ್ಡ್ ಠಾಣೆಯ ತಲಾ ಒಂದು ಸರ ಅಪಹರಣ ಪ್ರಕರಣಗಳು ಪತ್ತೆಯಾಗಿವೆ ಎಂದು ಪೊಲೀಸರು ಹೇಳಿದರು.

ಚಿನ್ನ, ನಗದು ಸುಲಿಗೆ: ಇಬ್ಬರ ಸೆರೆ

ಬೆಂಗಳೂರು: ಗೋವಿಂದಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಗೆ ನುಗ್ಗಿ ಆಯುಧದಿಂದ ಮಹಿಳೆಯ ಮೇಲೆ ಹಲ್ಲೆ ನಡೆಸಿ, ಚಿನ್ನಾಭರಣ, ನಗದು ಸುಲಿಗೆ ಮಾಡಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ.

ಡಿ.ಜೆ.ಹಳ್ಳಿ ನಿವಾಸಿ ಮಹಮ್ಮದ್ ಶಬಾಜ್ ಖಾನ್ ಮತ್ತು ಟಿ.ದಾಸರಹಳ್ಳಿ ನಿವಾಸಿ ಎ. ಸೂರಜ್ ಎಂಬುವವರನ್ನು ಬಂಧಿಸಿ, 48.06 ಗ್ರಾಂ ಚಿನ್ನಾಭರಣ, ₹2.96 ಲಕ್ಷ ನಗದು, ಕೃತ್ಯಕ್ಕೆ ಬಳಸಿದ ದ್ವಿಚಕ್ರ ವಾಹನ ವಶಪಡಿಸಿಕೊಳ್ಳಲಾಗಿದೆ. ಮತ್ತೊಬ್ಬ ಆರೋಪಿ ಅಫ್ರೀದ್ ತಲೆಮರೆಸಿಕೊಂಡಿದ್ದು, ಆತನ ಪತ್ತೆಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ದೂರುದಾರರು ಶಿವಾಜಿನಗರದಲ್ಲಿ ಔಷಧ ಅಂಗಡಿ ಕೆಲಸಕ್ಕೆ ಹೋಗಿದ್ದ ವೇಳೆ, ಮನೆಯಲ್ಲಿ ಅವರ ಪತ್ನಿ ಇದ್ದರು. ಈ ವೇಳೆ ಮೂವರು ಅಪರಿಚಿತರು ಮನೆಗೆ ನುಗ್ಗಿ ಆಯುಧಗಳಿಂದ ಹಲ್ಲೆ ಮಾಡಿ, ಚಿನ್ನಾಭರಣ, ₹4 ಲಕ್ಷ ನಗದು ಸುಲಿಗೆ ಮಾಡಿಕೊಂಡು ಹೋಗಿದ್ದರು. ಈ ಸಂಬಂಧ ಪೊಲೀಸರಿಗೆ ದೂರು ನೀಡಲಾಗಿತ್ತು.

ರಾಜಸ್ಥಾನದ ಐವರು ಆರೋಪಿಗಳ ಸೆರೆ

ಬೆಂಗಳೂರು: ಗ್ರಾಹಕರ ಸೋಗಿನಲ್ಲಿ ಆಭರಣ ಅಂಗಡಿಗೆ ನುಗ್ಗಿ, ಪಿಸ್ತೂಲ್ ತೋರಿಸಿ, ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದ ರಾಜಸ್ಥಾನದ ಐವರು ಆರೋಪಿಗಳನ್ನು ಮಾದನಾಯಕನಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ಜೋಧ್‌ಪುರದ ಅಂಕಿತ್‌ನಾಥ್ (30), ಅನೂಪ್ ಸಿಂಗ್ (30), ರವಿ ದಾವ್ (28), ಅನೋಪ್ ರಾವ್(23) ಮತ್ತು ಅರುಣ್(31) ಬಂಧಿತರು. ಆರೋಪಿಗಳಿಂದ ₹2.5 ಲಕ್ಷ ಮೌಲ್ಯದ 9 ಗ್ರಾಂ ಚಿನ್ನಾಭರಣ, ಪಿಸ್ತೂಲ್, 2 ಗುಂಡುಗಳು, 3 ಮ್ಯಾಗ್‌ಜಿನ್, 4 ಮೊಬೈಲ್‌ಗಳು, ಬೈಕ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಆರೋಪಿಗಳು ಜನವರಿ 27ರಂದು ದಾಸನಪುರ ಗ್ರಾಮದಲ್ಲಿರುವ ಆಭರಣ ಅಂಗಡಿಗೆ ನುಗ್ಗಿ ಪಿಸ್ತೂಲ್ ತೋರಿಸಿ ಚಿನ್ನದ ಕಿವಿಯೋಲೆ, ಮೂಗುತಿ, ₹50 ಸಾವಿರ ನಗದು ದೋಚಿ ಪರಾರಿಯಾಗಿದ್ದರು. ಕಾರ್ಯಾಚರಣೆ ನಡೆಸಿ, ಅಂಕಿತ್‌ನಾಥ್ ಮತ್ತು ಅನೂಪ್ ಸಿಂಗ್‌ರನ್ನು ನಗರದಲ್ಲಿ ಬಂಧಿಸಲಾಗಿತ್ತು. ನಂತರ ಇವರ ಮಾಹಿತಿ ಮೇರೆಗೆ ಇತರೆ ಮೂವರನ್ನು ರಾಜಸ್ಥಾನದಿಂದ ಬಂಧಿಸಿ ಕರೆತರಲಾಗಿದೆ ಎಂದು ತಿಳಿಸಿದರು.

ಅಂಕಿತ್ ನಾಥ್ ಮತ್ತು ಅನೂಪ್ ಸಿಂಗ್ ಐದು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದು, ಸಮೋಸಾ ವ್ಯಾಪಾರ ಹಾಗೂ ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದರು. ಇತರೆ ಆರೋಪಿಗಳನ್ನು ರಾಜಸ್ಥಾನದಿಂದ ನಗರಕ್ಕೆ ಕರೆಸಿಕೊಂಡು ಕೃತ್ಯ ಎಸಗಿದ್ದಾರೆ ಎಂದು ಪೊಲೀಸರು ಮಾಹಿತಿ ನೀಡಿದರು. ಇನ್‌ಸ್ಪೆಕ್ಟರ್ ಮುರಳೀಧರ್ ಮತ್ತು ತಂಡ ಕಾರ್ಯಾಚರಣೆ ನಡೆಸಿದೆ.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿ.ವಿ ಕುಲಪತಿ ಅಭಿಮತ

'ಕೆರೆಗಳ ನಗರಿಗೆ ಜಲಕ್ಷಾಮದ ಭೀತಿ'

ಪ್ರಜಾವಾಣಿ ವಾರ್ತೆ

ಸಮ್ಮೇಳನದಲ್ಲಿ ಭಾಗವಹಿಸಿದ್ದ ಗಣ್ಯರು

ಬೆಂಗಳೂರು: 'ಕೆರೆಗಳ ನಗರವೆಂದು ಪ್ರಸಿದ್ಧವಾಗಿರುವ ಬೆಂಗಳೂರು ಮಹಾನಗರ ಜಲಕ್ಷಾಮದ ಗಂಭೀರ ಸವಾಲನ್ನು ಎದುರಿಸುತ್ತಿದೆ. ಆದ್ದರಿಂದ ಸಮರ್ಪಕ ಜಲಮೂಲಗಳ ನಿರ್ವಹಣೆಯತ್ತ ತುರ್ತು ಕ್ರಿಯಾ ಯೋಜನೆ ರೂಪಿಸಬೇಕು' ಎಂದು ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಬಿ. ರಮೇಶ್ ತಿಳಿಸಿದರು.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಡಬ್ಲ್ಯುಡಬ್ಲ್ಯು ಇಂಟರ್‌ನ್ಯಾಷನಲ್, ಜೆಡ್‌ಡಬ್ಲ್ಯುಎಸ್‌ಐ ಸೋಮವಾರ ಆಯೋಜಿಸಿದ್ದ ಜಲ, ಇಂಧನ, ಪರಿಸರ ಮತ್ತು ಆರೋಗ್ಯ ಸಂರಕ್ಷಣೆಗೆ ಸಂಬಂಧಿಸಿದ 'ವೀಹ್ ಟೆಕ್' ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಭವಿಷ್ಯದ ಹಿತದೃಷ್ಟಿಯಿಂದ ಬೆಂಗಳೂರು ನಗರದ ಸುಸ್ಥಿರ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಬೇಕು. ನೀರು ಕೇವಲ ಒಂದು ಸಂಪನ್ಮೂಲವಾಗಿರದೆ ಜೀವನ ಮತ್ತು ಜೀವನೋಪಾಯದ ಸಾಧನವೂ ಆಗಿದೆ. ಅದರ ಮಹತ್ವವನ್ನು ಕಡೆಗಣಿಸಿ ದುರ್ಬಳಕೆಯ ಮೂಲಕ ಅತ್ಯಂತ ಅಪಾಯಕಾರಿ ಸನ್ನಿವೇಶವನ್ನು ಸೃಷ್ಟಿಸಲಾಗಿದೆ' ಎಂದರು.

'ಸುರಕ್ಷಿತ ಇಂಧನ ಪೂರೈಕೆ, ಪರಿಸರ ಮಾಲಿನ್ಯ ನಿಯಂತ್ರಣ ಮತ್ತು ಆರೋಗ್ಯ ಸಂರಕ್ಷಣೆ ಮಾಡುವುದರಲ್ಲಿ ಸರ್ಕಾರ ಮತ್ತು ಸಾರ್ವಜನಿಕ ಸಂಸ್ಥೆಗಳ ಪ್ರಮುಖ ಜವಾಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ನಮ್ಮ ವಿಶ್ವವಿದ್ಯಾಲಯ ಸಕ್ರಿಯವಾಗಿ ಕೈಜೋಡಿಸಲು ಸಿದ್ಧವಿದೆ' ಎಂದರು. ಸಮ್ಮೇಳನದ ತಾಂತ್ರಿಕ ಅಧ್ಯಕ್ಷ ಮಾಜಿ ಶಾಸಕ ಎ. ನಾರಾಯಣಸ್ವಾಮಿ ಮಾತನಾಡಿ, 'ಜಲ, ಇಂಧನ ಭದ್ರತೆ ಹಾಗೂ ಹವಾಮಾನ ಬದಲಾವಣೆ ಸಮಸ್ಯೆಗಳು ಇಡೀ ಜಗತ್ತನ್ನು ಕಾಡುತ್ತಿವೆ. ಪ್ರಾಕೃತಿಕ ಸಂಪನ್ಮೂಲಗಳ ದುರ್ಬಳಕೆ ಹಾಗೂ ಪರಿಸರ ಮಾಲಿನ್ಯದಿಂದಾಗಿ ಜನರ ಆರೋಗ್ಯಕ್ಕೂ ಕುತ್ತು ಬಂದಿದೆ. ಹೀಗಾಗಿ ಮಾನವ ಕುಲದ ಉಳಿವಿಗಾಗಿ ಪರಿಣಾಮಕಾರಿ ಯೋಜನೆಗಳನ್ನು ರೂಪಿಸಬೇಕಿದೆ' ಎಂದರು.

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯ ಮಾಜಿ ಅಧ್ಯಕ್ಷ ಟಿ.ಜಿ. ಸೀತಾರಾಮ್, ಸಮ್ಮೇಳನದ ಸಂಘಟನಾ ಕಾರ್ಯದರ್ಶಿ ಬಿ.ಆರ್. ಸುಪ್ರೀತ್, ವಿಶ್ವವಿದ್ಯಾನಿಲಯದ ಕುಲಸಚಿವರಾದ (ಮೌಲ್ಯಮಾಪನ) ರಮೇಶ್ ಕುಡೇನಟ್ಟಿ, ಪರಿಸರ ತಜ್ಞರಾದ ರಾಂಪುರ್ ವಿಶ್ವನಾಥ್, ವೀಹ್ ಟೆಕ್ ಸಂಘಟಕರಾದ ಇನಾಯತುಲ್ಲಾಹ್, ಪವನ್ ಕುಮಾರ್ ಮತ್ತು ಯೋಗೀಂಧರ್ ಪೂಲಾ ಉಪಸ್ಥಿತರಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

[ಕಂಪನಿಗಳ (ಕಾಂಪ್ರೊಮೈಸಸ್, ಅರೇಂಜ್‌ಮೆಂಟ್ಸ್ ಮತ್ತು ಅಮಲ್ಗಮೇಶನ್ಸ್) ನಿಯಮಗಳು, 2016ರ ನಿಯಮ 16ರ ಪ್ರಕಾರ]
ಕಂಪನಿ ಕಾನೂನು ನ್ಯಾಯಾಧಿಕರಣ, ಬೆಂಗಳೂರು ಪೀಠ, ಇವರ ಸಮ್ಮುಖದಲ್ಲಿ
ಕಂಪನಿ ಸ್ಕೀಮ್ ಅಪ್ಲಿಕೇಶನ್ ನಂ. 36/2025 ರಲ್ಲಿನ ಕಂಪನಿ ಸ್ಕೀಮ್ ಪಿಟಿಷನ್ ನಂ. 57/2025
ಐಸೊಟ್ರ್ಯಾಕ್ ಇನ್ನೋವೇಟಿವ್ ಇನ್ಫ್ರಾಸ್ಟ್ರಕ್ಚರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್
...ಅರ್ಜಿದಾರ ಕಂಪನಿ 1 / ಟ್ರಾನ್ಸ್‌ಫೆರರ್ ಕಂಪನಿ
ಫಂಡರ್‌ಮ್ಯಾಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್
...ಅರ್ಜಿದಾರ ಕಂಪನಿ 2 / ಟ್ರಾನ್ಸ್‌ಫೆರೀ ಕಂಪನಿ
ಕಂಪನಿಗಳ ಕಾಯ್ದೆ, 2013ರ ವಿಷಯದಲ್ಲಿ; ಮತ್ತು
ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 230 ರಿಂದ 232ರ ವಿಷಯದಲ್ಲಿ ಮತ್ತು ಕೆಳಗಿನವರ ವಿಲೀನ ಯೋಜನೆಯ ವಿಷಯದಲ್ಲಿ
ಐಸೊಟ್ರ್ಯಾಕ್ ಇನ್ನೋವೇಟಿವ್ ಇನ್ಫ್ರಾಸ್ಟ್ರಕ್ಚರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ("ಅರ್ಜಿದಾರ ಕಂಪನಿ 1/ಟ್ರಾನ್ಸ್‌ಫೆರರ್ ಕಂಪನಿ")
ಜೊತೆಗೆ
ಫಂಡರ್‌ಮ್ಯಾಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ("ಅರ್ಜಿದಾರ ಕಂಪನಿ 2 / ಟ್ರಾನ್ಸ್‌ಫೆರೀ ಕಂಪನಿ") ಮತ್ತು ಅವರವರ ಷೇರುದಾರರು
ಅರ್ಜಿಯ ಅಂತಿಮ ವಿಚಾರಣಾ ಸೂಚನೆ
ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಐಸೊಟ್ರ್ಯಾಕ್ ಇನ್ನೋವೇಟಿವ್ ಇನ್ಫ್ರಾಸ್ಟ್ರಕ್ಚರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ("ಅರ್ಜಿದಾರ ಕಂಪನಿ 1 / ಟ್ರಾನ್ಸ್‌ಫೆರರ್ ಕಂಪನಿ") ಜೊತೆಗೆ ಫಂಡರ್‌ಮ್ಯಾಕ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ("ಅರ್ಜಿದಾರ ಕಂಪನಿ 2 / ಟ್ರಾನ್ಸ್‌ಫೆರೀ ಕಂಪನಿ") ಕಂಪನಿಯ ವಿಲೀನ ಯೋಜನೆಯ ಮಂಜೂರಾತಿಗಾಗಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 230 ರಿಂದ 232ರ ನಿಯಮಗಳ ಅಡಿಯಲ್ಲಿ ಒಂದು ಜಂಟಿ ಕಂಪನಿ ಸ್ಕೀಮ್ ಪಿಟಿಷನ್ ನಂ. 57/2025 ಸಲ್ಲಿಕೆಯಾಗಿದ್ದು, ದಿನಾಂಕ 5ನೇ ಜನವರಿ 2026 ರಂದು ಸದರಿ ಅರ್ಜಿಯು ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ, ಬೆಂಗಳೂರು ಪೀಠ, ಇವರಲ್ಲಿ ಅಂಗೀಕಾರ ಪಡೆದಿರುತ್ತದೆ. ಇದೀಗ, ಸದರಿ ಕಂಪನಿ ಅರ್ಜಿಯು ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ, ಬೆಂಗಳೂರು ಪೀಠ, ಇವರ ಸಮ್ಮುಖದಲ್ಲಿ, ದಿನಾಂಕ 27ನೇ ಫೆಬ್ರವರಿ 2026 ರಂದು ವಿಚಾರಣೆಗೆ ನಿಗದಿಯಾಗಿರುತ್ತದೆ.
ಯಾವುದೇ ವ್ಯಕ್ತಿಯು ಸದರಿ ಅರ್ಜಿಯನ್ನು ಬೆಂಬಲಿಸಲು ಅಥವಾ ವಿರೋಧಿಸಲು ಬಯಸುವುದಾದಲ್ಲಿ, ಅಂತಹವರು, ತಮ್ಮ ಉದ್ದೇಶದ ನೋಟಿಸ್ ತಯಾರಿಸಿ, ಅದಕ್ಕೆ ತನ್ನ ಅಥವಾ ತನ್ನ ವಕೀಲರ ಸಹಿ ಹಾಕಿ, ಸದರಿ ಅರ್ಜಿಯ ಅಂತಿಮ ವಿಚಾರಣೆಯ ದಿನಾಂಕಕ್ಕೆ ಎರಡು (2) ದಿನ ಮುಂಚಿತವಾಗಿ ತಲುಪುವಂತೆ, ಅರ್ಜಿದಾರರ ವಕೀಲರಾದ ಎಂ & ಎ ಅಸೋಸಿಯೇಟ್ಸ್, ಕಾರ್ಯನಿರತ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ, ನಂ. 47 ಮಣಿಪಾಲ್ ಸೆಂಟರ್, ಸೌತ್ ಬ್ಲಾಕ್, ಸ್ಯೂಟ್ ನಂ. 218, 2ನೇ ಮಹಡಿ, ಡಿಕನ್ಸನ್ ರಸ್ತೆ, ಬೆಂಗಳೂರು – 560042 ವಿಳಾಸಕ್ಕೆ ಸಲ್ಲಿಸತಕ್ಕದ್ದು. ಒಂದು ವೇಳೆ, ಸದರಿ ಅರ್ಜಿಯನ್ನು ವಿರೋಧಿಸಲು ಬಯಸುವುದಾದಲ್ಲಿ, ಅಂತಹವರು, ಕಡ್ಡಾಯವಾಗಿ ತಮ್ಮ ವಿರೋಧದ ಹಿನ್ನೆಲೆಗಳನ್ನು ಉಲ್ಲೇಖಿಸಿರುವ ಅಥವಾ ತಮ್ಮ ಒಂದು ಅಫಿಡವಿಟ್ ಪ್ರತಿಯನ್ನು ಕೂಡ ತಮ್ಮ ನೋಟಿಸ್ ಜೊತೆಗೆ ಲಗತ್ತಿಸುವುದು.
ಅರ್ಜಿದಾರರ ವಕೀಲರು, ಅಗತ್ಯ ಇರುವವರಿಗೆ ಸದರಿ ಅರ್ಜಿಯ ಪ್ರತಿಯನ್ನು ಒದಗಿಸುತ್ತಿದ್ದು, ಅವಶ್ಯವಿದ್ದವರು, ನಿಗದಿತ ಶುಲ್ಕ ಪಾವತಿಸಿ ಪ್ರತಿಯನ್ನು ಪಡೆದುಕೊಳ್ಳಬಹುದು.
ಸಹಿ/–
ಎಂ & ಎ ಅಸೋಸಿಯೇಟ್ಸ್,
ಕಾರ್ಯನಿರತ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ, ನಂ. 47 ಮಣಿಪಾಲ್ ಸೆಂಟರ್, ಸೌತ್ ಬ್ಲಾಕ್, ಸ್ಯೂಟ್ ನಂ. 218, 2ನೇ ಮಹಡಿ, ಡಿಕನ್ಸನ್ ರಸ್ತೆ, ಬೆಂಗಳೂರು – 560042
ದಿನಾಂಕ: 08ನೇ ಫೆಬ್ರವರಿ, 2026.

JOB
To Place your Classified Ads Contact:
9886213331

CONNECT ಕ್ಲಾಸಿಫೈಡ್ಸ್

LEARN AI SKILLS THAT INCREASE YOUR INCOME
LEARN ARTIFICIAL INTELLIGENCE
Whatever you do, do it better with AI. Whether you run a business, have a job, or want part-time income.
HANDS-ON CLASSROOM COACHING
CREATE WEBSITES,
CATALOGUES, YOUTUBE VIDEOS, FACEBOOK, INSTAGRAM POSTS, REELS & MORE..
BUILD AI ASSISTANTS
AI CHATBOTS, VIRTUAL RECEPTIONIST
DESIGN AI TOOLS &
WORKFLOW AUTOMATIONS
WITHOUT ANY CODING KNOWLEDGE OR IT SKILLS
YOU CAN DO IT IN MINUTES
EXPLORE THE MAGIC OF AI
ATTEND A FREE 2 HOUR DEMO CLASS
TODAY OR TOMORROW 6.20 PM
Hotel Paraag, Raj Bhavan Road, Opp GPO, Bengaluru-560001
Call to Register: 7680990163, 7680990168 www.bootcampsindia.com

PERSONAL

Change of Name

I, AKSHATHA N SHETTY, Residing at #5/1,1st Block, Gruhalakshmi Layout, Nelagadaranahalli, Bengaluru-73 have changed my name as AKSHATHA, vide affidavit dated 7/2/2026 before Notary N.Mahesha, Bengaluru

CHANGE OF NAME
I, SHIVASHANKARA Y C S/o. Y S Chandrashekharappa, R/o No.39,2nd Cross, Lakeshore Garden, Dr. K Shivarama Karanth Layout Ganigarahalli, Chikkabanavara, Bengaluru 560090 have changed my name to SHIVASHANKAR Y C vide affidavit dated 06.02.2026 sworn before notary: H R Karunakara, Blore

CHANGE OF NAME
I, GEETHA PRIYA S and GEETHA PRIYA, Residing at No77, 5th Main, BEML Layout, Seegehalli, Virgonagar Post, Bengaluru-560049, declare that the above names pertain to me only & henceforth I shall be known as GEETHA PRIYA S vide affidavit dated 07-02-2026 before notary K.V. Mani, Bengaluru.

CHANGE OF NAME
I, Karthik Ramesh, residing No.57, "LV Residency" Flat No.S2, 2nd Floor, 6th Cross, Hanumagiri Layout, Chikkalasandra, Bengaluru-560061, have changed our minor Son's name from Rudraksh Ashwini Karthik to RUDRAKSH KARTHIK vide affidavit dated 06-02-2026 before notary R.S. Vijay, Bengaluru

I, SADASHIV KORE residing at No.526, GangaShankar, 8th Cross MCECHS Layout, Dr.Shivaram Karanth Nagar, Bengaluru-560077 have changed my name to SADASHIV SHANKAR KORE vide affidavit dated 07/02/2026 sworn before notary D.Rajanna, Bengaluru

I, AYEESHA SULTANA, Residing at No. 147, 6th Ward Thimmakka Layout, Chickballapur- 562101, have changed my name to AYESHA SULTANA vide affidavit dated 04/02/2026, before notary K.H. Venkatappa, Chickballapur.

JOB OPPORTUNITIES

Factory

HIRING MALE CANDIDATES BELOW 30, for a Pvt Ltd Co. Qualification:10TH & PUC Pass, ITI or any Diploma. Contact: 9108458798/ 9845579620 Location: In and Around Rajajinagar

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

CBC 35101/13/0112/2526
125 ದಿನಗಳ ವೇತನ ಖಾತರಿ ಉದ್ಯೋಗ
ವಿಕಸಿತ ಭಾರತ – ಉದ್ಯೋಗ ಖಾತರಿ ಮತ್ತು ಆಜೀವಿಕ ಮಿಷನ್ (ಗ್ರಾಮೀಣ): ವಿಬಿ – ಜಿ ರಾಮ್ ಜಿ
(ವಿಕಸಿತ ಭಾರತ್ – ಜಿ ರಾಮ್ ಜಿ) ಕಾಯ್ದೆ, 2025
ಸೌರ ವಿದ್ಯುತ್ ಮೂಲಕ ಕಂಗೊಳಿಸುವ ಗ್ರಾಮಗಳೇ, ಸ್ವಾವಲಂಬಿ ಭಾರತದ ಹೆಗ್ಗುರುತು
ಗ್ರಾಮೀಣ ಪ್ರದೇಶಗಳಲ್ಲಿ ಸೌರ ಬೆಳಕು ವ್ಯವಸ್ಥೆಗಳನ್ನು ಮತ್ತು ಇನ್ನಿತರ ನವೀಕರಿಸಬಲ್ಲ ಇಂಧನ ಮೂಲಸೌಕರ್ಯಗಳನ್ನು ಸ್ಥಾಪಿಸಲಾಗುತ್ತದೆ.

ಆರೋಗ್ಯ ವೃದ್ಧಿಗೆ ಸಹಕಾರಿಯಾದ ಪೌಷ್ಟಿಕ ಆಹಾರ

ನಗರದ ಸರ್ಕಾರಿ ಆಸ್ಪತ್ರೆಗಳಲ್ಲಿ ವಿಶೇಷ ಊಟ–ತಿಂಡಿಗೆ ರೋಗಿಗಳಿಂದ ಉತ್ತಮ ಸ್ಪಂದನೆ • ಇಸ್ಕಾನ್‌ನಿಂದ ಪೂರೈಕೆ

ಬ್ರ್ಯಾಂಡ್ ಬೆಂಗಳೂರು

• ವರುಣ ಹೆಗಡೆ

ಬೆಂಗಳೂರು: ಆರೋಗ್ಯ ಇಲಾಖೆಯು ನಗರದ ಆಯ್ದ ಸರ್ಕಾರಿ ಆಸ್ಪತ್ರೆಗಳಲ್ಲಿ ಪರಿಚಯಿಸಿರುವ ವಿಶೇಷ ಪೌಷ್ಟಿಕ ಆಹಾರಕ್ಕೆ ರೋಗಿಗಳಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಈ ಆಹಾರವು ರೋಗಿಗಳ ಆರೋಗ್ಯ ವೃದ್ಧಿಗೂ ಸಹಕಾರಿಯಾಗಿದೆ.

ಇಸ್ಕಾನ್ ಸಹಯೋಗದಲ್ಲಿ ರೂಪಿಸಿರುವ ಈ ಯೋಜನೆಗೆ ಸೆಪ್ಟೆಂಬರ್‌ನಲ್ಲಿ ಚಾಲನೆ ನೀಡಲಾಗಿತ್ತು. ಕೆ.ಸಿ. ಜನರಲ್ ಆಸ್ಪತ್ರೆ, ಜಯನಗರ ಸಾರ್ವಜನಿಕ ಆಸ್ಪತ್ರೆ ಹಾಗೂ ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ವಿಶೇಷ ಪೌಷ್ಟಿಕ ಆಹಾರವನ್ನು ಉಚಿತವಾಗಿ ವಿತರಣೆ ಮಾಡಲಾಗುತ್ತಿದೆ.

ಒಂದೇ ರೀತಿಯ ಸಾಮಾನ್ಯ ಆಹಾರದ ಬದಲು, ರೋಗಿಗಳಿಗೆ ಅಗತ್ಯ ಪೌಷ್ಟಿಕಾಂಶ ಒದಗಿಸುವ ಆಹಾರವನ್ನು ನೀಡುವುದು ಈ ಯೋಜನೆಯ ಉದ್ದೇಶವಾಗಿದೆ. ನಗರದ ಈ ಮೂರು ಆಸ್ಪತ್ರೆಗಳಲ್ಲಿ ಹೊಸ ಆಹಾರ 'ಮೆನು'ವಿಗೆ ರೋಗಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದ-ರಿಂದ, ಕಳೆದ ತಿಂಗಳು, ರಾಜ್ಯದ ಐದು ಆಸ್ಪತ್ರೆಗಳಿಗೆ ಯೋಜನೆ ವಿಸ್ತರಿ-ಸಲಾಗಿದೆ. ಆ ಆಸ್ಪತ್ರೆಗಳ ಪಟ್ಟಿಯಲ್ಲಿ ನಗರದ ಯಲಹಂಕ ಸಾರ್ವಜನಿಕ ಆಸ್ಪತ್ರೆ ಹಾಗೂ ಕೆ.ಆರ್. ಪುರ ಸಾರ್ವಜನಿಕ ಆಸ್ಪತ್ರೆ ಕೂಡ ಸೇರಿದೆ. ಬೆಂಗಳೂರಿನಲ್ಲಿರುವ ಐದು ಆಸ್ಪತ್ರೆಗಳಲ್ಲಿ ಪೌಷ್ಟಿಕ ಆಹಾರ ವಿತರಣೆ-ಯಾಗುತ್ತಿದೆ.

ಈ ಮೊದಲು ಆಸ್ಪತ್ರೆಯ ಕಿಚನ್‌ಗಳಲ್ಲಿಯೇ ಊಟ-ತಿಂಡಿ ತಯಾರಿಸಿ ವಿತರಿಸಲಾಗುತ್ತಿತ್ತು. ಒಂದೇ ರೀತಿಯ ಊಟ-ತಿಂಡಿಯ ಗುಣಮಟ್ಟಕ್ಕೆ ಸಂಬಂಧಿಸಿದಂತೆಯೂ ರೋಗಿಗಳಿಂದ ದೂರುಗಳು ಬರುತ್ತಿದ್ದವು. ಇದರಿಂದಾಗಿ ಹೆಚ್ಚಿನ ಆಹಾರ ವ್ಯರ್ಥವಾಗುತ್ತಿತ್ತು.

ಇಸ್ಕಾನ್ ತನ್ನ ಕೇಂದ್ರೀಕೃತ ಅಡುಗೆಮನೆಯಲ್ಲಿ ಊಟ-ತಿಂಡಿಗಳನ್ನು ತಯಾರಿಸಿ, ನಿಗದಿತ ಅವಧಿಗೆ ಆಸ್ಪತ್ರೆಗಳಿಗೆ ತಲುಪಿಸುತ್ತಿದೆ. ಬೆಳಿಗ್ಗೆ ತಿಂಡಿ, ಮಧ್ಯಾಹ್ನ ಊಟ, ಸಂಜೆ ತಿಂಡಿ ಹಾಗೂ ರಾತ್ರಿ ಊಟವನ್ನು ಒದಗಿಸಲಾಗುತ್ತಿದೆ. ಇದರಿಂದಾಗಿ ಆಸ್ಪತ್ರೆಗಳ ಮುಖ್ಯಸ್ಥರಿಗೆ ಊಟ–ತಿಂಡಿಯ ಮೇಲುಸ್ತುವಾರಿ ತಪ್ಪಿದೆ. ಇಸ್ಕಾನ್‌ನಿಂದ ಊಟ–ತಿಂಡಿ ಬಂದ ಬಳಿಕ ಅವುಗಳ ಮಾದರಿಯನ್ನು ಆಸ್ಪತ್ರೆಯ ಮುಖ್ಯಸ್ಥರಿಗೆ ಮೊದಲು ಒದಗಿಸಿ, ಪರಿಶೀಲಿಸಿದ ಬಳಿಕ ರೋಗಿಗಳಿಗೆ ವಿತರಿಸಲಾಗುತ್ತಿದೆ. ಆಹಾರ ಪದಾರ್ಥಗಳ ಪ್ರತಿ ಕಂಟೇನರ್ ಮೇಲೂ ಅಗತ್ಯ ವಿವರ ನಮೂದಿಸಲಾಗುತ್ತಿದೆ. ವಾರ್ಡ್‌ಗಳಿಗೆ ಹಾಗೂ ರೋಗಿಗಳು ಇದ್ದಲ್ಲಿಯೇ ತೆರಳಿ ಊಟ–ತಿಂಡಿ ವಿತರಿಸಲಾಗುತ್ತಿದೆ. ಸರ್ಕಾರಿ ಆಸ್ಪತ್ರೆಗಳ ಊಟಗಳಿಗೆ ಮೂಗು ಮುರಿಯುತ್ತಿದ್ದ ರೋಗಿಗಳು, ಈಗ ವಿಶೇಷ ಪೌಷ್ಟಿಕ ಆಹಾರವನ್ನು ಸಂತೋಷದಿಂದ ಸೇವಿಸುತ್ತಿದ್ದಾರೆ.

ಐದು ಆಹಾರ ಕ್ರಮ: ಸಾಮಾನ್ಯ ಆಹಾರ ಕ್ರಮದ ಜತೆಗೆ, ಚಿಕಿತ್ಸಾ ಆಹಾರ ಕ್ರಮವನ್ನು ಯೋಜನೆಯಡಿ ರೂಪಿಸಲಾಗಿದೆ. ಗರ್ಭಿಣಿಯರು ಹಾಗೂ ಬಾಣಂತಿಯರ ಆಹಾರ ಕ್ರಮ, ಮಕ್ಕಳ ಆಹಾರ ಕ್ರಮ, ಸಾಮಾನ್ಯ ಆಹಾರ ಕ್ರಮ, ಮಧುಮೇಹಿಗಳ ಆಹಾರ ಕ್ರಮ, ಚಿಕಿತ್ಸಾ ಆಹಾರ ಕ್ರಮವೆಂದು ಆಹಾರವನ್ನು ಐದು ಪ್ರಮುಖ ವಿಭಾಗಗಳಾಗಿ ವಿಂಗಡಿಸಿ, ಯೋಜನೆಯಡಿ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಗರ್ಭಿಣಿಯರಿಗೆ ಗರ್ಭಾವಸ್ಥೆಯ ಆರೋಗ್ಯಕ್ಕೆ ಅಗತ್ಯವಾದ ಕಬ್ಬಿಣಾಂಶ ಮತ್ತು ಫೋಲಿಕ್ ಆಮ್ಲ ಹೆಚ್ಚಿರುವ ಆಹಾರವನ್ನು ಕೊಡಲಾಗುತ್ತಿದೆ. ಬಾಣಂತಿಯರಿಗೆ ಹಾಲು ಉತ್ಪಾದನೆ ಮತ್ತು ಆರೋಗ್ಯಕ್ಕೆ ಸಹಕಾರಿಯಾಗುವ ಆಹಾರವನ್ನು ಒದಗಿಸಲಾಗುತ್ತಿದೆ.

'ಪ್ರತಿದಿನ ಬೆಳಿಗ್ಗೆ ಉಪಾಹಾರ, ಸಂಜೆ ಲಘು ಉಪಾಹಾರ, ಮಧ್ಯಾಹ್ನ ಮತ್ತು ರಾತ್ರಿ ಊಟವನ್ನು ನೀಡುತ್ತಿದ್ದಾರೆ. ಸಮಯಕ್ಕೆ ಸರಿಯಾಗಿ ಒದಗಿಸುವ ಜತೆಗೆ, ಊಟ-ತಿಂಡಿ ಉತ್ತಮ ಗುಣಮಟ್ಟದಿಂದ ಕೂಡಿದೆ' ಎನ್ನುತ್ತಾರೆ ರೋಗಿಗಳು.

ನಿತ್ಯ ವೈವಿಧ್ಯ ಆಹಾರ

ಆಸ್ಪತ್ರೆಗಳಲ್ಲಿ ದೈನಂದಿನ ಆಹಾರ 'ಮೆನು'ವನ್ನು ಪ್ರದರ್ಶಿಸಿ, ಅದೇ ಪ್ರಕಾರ ನೀಡಲಾಗುತ್ತಿದೆ.

ಉಪ್ಪಿಟ್ಟು, ಪೊಂಗಲ್, ಗೋದಿ ಗಂಜಿ, ರಾಗಿಮುದ್ದೆ, ಚಪಾತಿ, ಅನ್ನ-ಸಾಂಬಾರ್, ಪಲ್ಯ, ಸೋಯಾ ಚಂಕ್ಸ್, ಹಾಲು, ಹಣ್ಣುಗಳು, ಮೊಸರು, ಬಿಸ್ಕತ್, ಚಿಕ್ಕಿಯನ್ನು 'ಮೆನು' ಒಳಗೊಂಡಿದೆ. ಬೆಳಿಗ್ಗೆ 8 ಗಂಟೆಗೆ ತಿಂಡಿ ಒದಗಿಸಿದರೆ, ಮಧ್ಯಾಹ್ನ 11 ಗಂಟೆ ವೇಳೆ ಮಜ್ಜಿಗೆ, ಹಾಲು, ಹಣ್ಣನ್ನು ನೀಡಲಾಗುತ್ತದೆ. ಮಧ್ಯಾಹ್ನ 12 ಗಂಟೆಯ ಬಳಿಕ ಊಟ, ಸಂಜೆ 4 ಗಂಟೆಯ ಬಳಿಕ ಹಾಲು ಅಥವಾ ಚಹಾದ ಜತೆಗೆ ಬಿಸ್ಕತ್ತು ಅಥವಾ ಚಿಕ್ಕಿ, ರಾತ್ರಿ 7.30ರ ಬಳಿಕ ಊಟವನ್ನು ಒದಗಿಸಲಾಗುತ್ತಿದೆ. ಮಧುಮೇಹಿಗಳು, ಗರ್ಭಿಣಿಯರ, ತಾಯಂದಿರು, ಮಕ್ಕಳು ಹಾಗೂ ಸಾಮಾನ್ಯ ರೋಗಿಗಳಿಗೆ ಬೇರೆ ಬೇರೆ ಪಥ್ಯಾಹಾರ ನಿಗದಿಮಾಡಲಾಗಿದೆ.

ರೋಗಿಗಳಿಗೆ ಒದಗಿಸಲಾಗುತ್ತಿರುವ ಪೌಷ್ಟಿಕ ಆಹಾರದ ವೆಚ್ಚವನ್ನು ಇಸ್ಕಾನ್‌ಗೆ ಆರೋಗ್ಯ ಇಲಾಖೆ ಭರಿಸಲಿದೆ. ಸಾಮಾನ್ಯ ರೋಗಿಗೆ ಉಪಾಹಾರಕ್ಕೆ ₹45 ನಿಗದಿಪಡಿಸಿದರೆ, ಮಕ್ಕಳಿಗೆ ₹30 ಗೊತ್ತುಪಡಿಸಲಾಗಿದೆ. ಮಧ್ಯಾಹ್ನದ ಊಟ ಸಾಮಾನ್ಯ ರೋಗಿಗೆ ₹52 ಇದ್ದರೆ, ಗರ್ಭಿಣಿಯರು ಮತ್ತು ಬಾಣಂತಿಯರಿಗೆ ನೀಡುವ ಊಟಕ್ಕೆ ₹60ರಂತೆ ಪಾವತಿಸಲಾಗುತ್ತದೆ. ದಿನವೊಂದಕ್ಕೆ ಸಾಮಾನ್ಯ ರೋಗಿಗೆ ₹183 ವೆಚ್ಚ ಮಾಡಿದರೆ, ಗರ್ಭಿಣಿಯರು ಮತ್ತು ಬಾಣಂತಿಯರಿಗೆ ₹225 ಪಾವತಿಸಲಾಗುತ್ತಿದೆ.

ಸರ್. ಸಿ ವಿ ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಗಳಿಗೆ ಇಸ್ಕಾನ್ ಊಟ ಹಾಕಿ ಕೊಡುತ್ತಿರುವ ದೃಶ್ಯ
ಪ್ರಜಾವಾಣಿ ಚಿತ್ರ: ಎಂ.ಎಸ್. ಮಂಜುನಾಥ್

'ಆಸ್ಪತ್ರೆ ದಾಖಲಾತಿ ಹೆಚ್ಚಳ'

'ಆರೋಗ್ಯ ಇಲಾಖೆ ಪರಿಚಯಿಸಿರುವ ವಿಶೇಷ ಪೌಷ್ಟಿಕ ಆಹಾರ ಯೋಜನೆ ರೋಗಿಗಳ ಆರೋಗ್ಯ ವೃದ್ಧಿಗೆ ಸಹಕಾರಿಯಾಗಿದೆ. ಪ್ರತಿ ದಿನವೂ ಮೆನುವಿನಲ್ಲಿ ಬದಲಾವಣೆ ಮಾಡಿ, ಅಗತ್ಯ ಪೋಷಕಾಂಶಗಳ ಅನುಸಾರ ಊಟ–ತಿಂಡಿ ಪೂರೈಕೆ ಮಾಡುತ್ತಿದ್ದಾರೆ. ರೋಗಿಗಳಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ರೋಗಿಗಳು ಇನ್ನು ಒಂದೆರಡು ದಿನ ಇದ್ದು ಮತ್ತಷ್ಟು ಚೇತರಿಸಿಕೊಂಡು ತೆರಳುವುದಾಗಿ ಹೇಳುತ್ತಿದ್ದಾರೆ. ದಾಖಲಾತಿಯೂ ಹೆಚ್ಚಳವಾ-ಗುತ್ತಿದ್ದು, ಊಟ–ತಿಂಡಿಯನ್ನು ಯಾರೂ ತಪ್ಪಿ-ಸಿಕೊಳ್ಳುತ್ತಿಲ್ಲ' ಎಂದು ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ರಾಜೇಶ್ ಕೆ.ಎಸ್. ತಿಳಿಸಿದರು.

ಶುಚಿ ಹಾಗೂ ರುಚಿಯಾದ ಊಟ–ತಿಂಡಿಯನ್ನು ರೋಗಿಗಳಿಗೆ ವಿತರಿಸುತ್ತಿದ್ದೇವೆ. ಸರಿಯಾದ ಸಮಯಕ್ಕೆ ಆಹಾರವನ್ನು ಪೂರೈಸುತ್ತಿದ್ದು, ಈ ಕಾರ್ಯ ನಮಗೂ ತೃಪ್ತಿ ನೀಡಿದೆ
ಶಿವಪ್ಪ, ಮೇಲ್ವಿಚಾರಕ, ಇಸ್ಕಾನ್

ರೋಗಿಗಳಿಗೆ ಅಧಿಕ ಪೋಷಕಾಂಶಯುಕ್ತ ಆಹಾರ ಅಗತ್ಯ. ಅದನ್ನು ಗಮನದಲ್ಲಿಟ್ಟುಕೊಂಡು ಆಹಾರ 'ಮೆನು' ತಯಾರಿಸಿ, ಊಟ–ತಿಂಡಿ ವಿತರಿಸಲಾಗುತ್ತಿದೆ
ಡಾ.ಶಶಿಕಲಾ, ಸ್ಥಾನಿಕ ವೈದ್ಯಾಧಿಕಾರಿ, ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆ

ರೋಗಿಗಳು ಏನಂತಾರೆ?

ವಿಶೇಷ ಪೌಷ್ಟಿಕ ಆಹಾರ ಯೋಜನೆಯಡಿ ನೀಡಲಾಗುತ್ತಿರುವ ಊಟ–ತಿಂಡಿ ಗುಣಮಟ್ಟದಿಂದ ಕೂಡಿದೆ. ಆಹಾರವನ್ನು ವ್ಯರ್ಥ ಮಾಡದೆ ಸೇವಿಸುತ್ತಿದ್ದೇವೆ. ಹೊರಗಡೆಯಿಂದ ಊಟ–ತಿಂಡಿ ತರಿಸಿಕೊಳ್ಳುವುದು ತಪ್ಪಿದೆ.
ಸೆಲ್ವಿ, ಎಚ್‌ಎಎಲ್ ನಿವಾಸಿ

ಇಸ್ಕಾನ್‌ನವರು ಊಟ–ತಿಂಡಿಯನ್ನು ಸಮಯಕ್ಕೆ ಸರಿಯಾಗಿ ಒದಗಿಸುತ್ತಿದ್ದಾರೆ. ಆಹಾರದಲ್ಲಿ ಹೆಚ್ಚಿನ ಪೋಷಕಾಂಶಗಳು ಇರುವುದರಿಂದ ಆರೋಗ್ಯ ವೃದ್ಧಿಗೆ ಸಹಕಾರಿಯಾಗಿದೆ. ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಈ ರೀತಿಯ ಊಟ–ತಿಂಡಿ ದೊರೆಯುವಂತಾಗಬೇಕು.
ಶಿವಾಜಿ, ಕಮನಹಳ್ಳಿ ನಿವಾಸಿ

ಪಂಚಾಯತ್: 'ಮಹಾಯುತಿ'ಗೆ ಭರ್ಜರಿ ಗೆಲುವು

ಮುಂಬೈ (ಪಿಟಿಐ): ಮಹಾರಾಷ್ಟ್ರದ ಜಿಲ್ಲಾ ಪರಿಷದ್ ಮತ್ತು ಪಂಚಾಯತ್ ಸಮಿತಿ ಚುನಾವಣೆಯ ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, 'ಮಹಾಯುತಿ' ಮೈತ್ರಿಕೂಟ ಭರ್ಜರಿ ಜಯ ಗಳಿಸಿದ್ದು, ಬಿಜೆಪಿ ಮುನ್ನಡೆ ಸಾಧಿಸಿದೆ.

731 ಜಿಲ್ಲಾ ಪರಿಷದ್ ಸ್ಥಾನಗಳ ಪೈಕಿ 552ರಲ್ಲಿ ಮತ್ತು 1,462 ಪಂಚಾಯತ್ ಸಮಿತಿ ಸ್ಥಾನಗಳ ಪೈಕಿ 1000ಕ್ಕೂ ಹೆಚ್ಚು ಸ್ಥಾನಗಳಲ್ಲಿ 'ಮಹಾಯುತಿ' ಮೈತ್ರಿಕೂಟ ಗೆದ್ದಿದೆ ಎಂದು ರಾಜ್ಯ ಚುನಾವಣಾ ಆಯೋಗ ತಿಳಿಸಿದೆ.

ಆಡಳಿತಾರೂಢ ಬಿಜೆಪಿ 225 ಜಿಲ್ಲಾ ಪಂಚಾಯಿತಿ ಸ್ಥಾನಗಳಲ್ಲಿ ಗೆಲುವು ಸಾಧಿಸಿದೆ. ಅದರ ಮಿತ್ರ ಪಕ್ಷಗಳಾದ ಎನ್‌ಸಿಪಿ ಮತ್ತು ಶಿವಸೇನಾ ಕ್ರಮವಾಗಿ 165 ಮತ್ತು 162 ಸ್ಥಾನಗಳಲ್ಲಿ ಜಯಿಸಿವೆ.

ವಿರೋಧ ಪಕ್ಷಗಳ 'ಮಹಾ ವಿಕಾಸ್ ಅಘಾಡಿ' ಮೈತ್ರಿಯಲ್ಲಿನ ಕಾಂಗ್ರೆಸ್ 55 ಜಿಲ್ಲಾ ಪರಿಷದ್‌ಗಳಲ್ಲಿ ಗೆದ್ದಿದ್ದರೆ, ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ (ಯುಬಿಟಿ) 43 ಮತ್ತು ಶರದ್ ಪವಾರ್ ನೇತೃತ್ವದ ಎನ್‌ಸಿಪಿ (ಎಸ್‌ಪಿ) 26 ಸ್ಥಾನಗಳಲ್ಲಿ ಜಯ ಗಳಿಸಿದೆ.

125 ಪಂಚಾಯತ್ ಸಮಿತಿಗಳಲ್ಲಿನ 1,462 ಸ್ಥಾನಗಳಲ್ಲಿ ಬಿಜೆಪಿ 459ರಲ್ಲಿ, ಅದರ ಮಿತ್ರ ಪಕ್ಷಗಳಾದ ಎನ್‌ಸಿಪಿ 306 ಮತ್ತು ಶಿವಸೇನಾ 302 ಸ್ಥಾನಗಳಲ್ಲಿ ಗೆಲುವು ಸಾಧಿಸಿವೆ. ಕಾಂಗ್ರೆಸ್ 97, ಶಿವಸೇನಾ (ಯುಬಿಟಿ) 89 ಮತ್ತು ಎನ್‌ಸಿಪಿ (ಎಸ್‌ಪಿ) 46 ಸ್ಥಾನಗಳಲ್ಲಿ ಜಯಿಸಿವೆ.

ಶರದ್ ಪವಾರ್ ಆಸ್ಪತ್ರೆಗೆ ದಾಖಲು

ಪುಣೆ (ಪಿಟಿಐ): ಎದೆ ಭಾಗದಲ್ಲಿ ಸೋಂಕು ಕಾಣಿಸಿಕೊಂಡಿರುವ ಕಾರಣ ಎನ್‌ಸಿಪಿ (ಎಸ್‌ಪಿ) ಅಧ್ಯಕ್ಷ ಶರದ್ ಪವಾರ್ (85) ಅವರನ್ನು ಪುಣೆಯ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಆರೋಗ್ಯ ಸ್ಥಿರವಾಗಿದೆ ಎಂದು ಚಿಕಿತ್ಸೆ ನೀಡುತ್ತಿರುವ ವೈದ್ಯರು ತಿಳಿಸಿದ್ದಾರೆ.



ಶರದ್ ಪವಾರ್

ಉಸಿರಾಟದ ಸಮಸ್ಯೆ ಮತ್ತು ನಿರಂತರ ಕೆಮ್ಮಿನಿಂದ ಬಳಲುತ್ತಿರುವ ಪವಾರ್ ಅವರನ್ನು ಬಾರಾಮತಿ ಪಟ್ಟಣ-ದಲ್ಲಿನ ಅವರ ನಿವಾಸದಿಂದ ಪುಣೆಯ ಆಸ್ಪತ್ರೆಗೆ ಕರೆತರಲಾಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.

ಆಸ್ಪತ್ರೆಯಲ್ಲಿ ವಿವಿಧ ವೈದ್ಯಕೀಯ ಪರೀಕ್ಷೆಗಳನ್ನು ಮಾಡಲಾಗಿದೆ. ಪವಾರ್ ಎದೆ ಭಾಗದಲ್ಲಿ ಸೋಂಕು ಇರುವುದು ಸಿ.ಟಿ ಸ್ಕ್ಯಾನ್‌ನಲ್ಲಿ ಪತ್ತೆಯಾಗಿದೆ. ಅವರ ಹೃದಯ ಬಡಿತ ಮತ್ತು ಆಮ್ಲಜನಕದ ಮಟ್ಟಗಳು ಸ್ಥಿರವಾಗಿವೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ.

'ಮಹೇಶ್ ಜೋಶಿ ಬಂಧಿಸುವ ಹುನ್ನಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಸಾಹಿತ್ಯ ಪರಿಷತ್ (ಕಸಾಪ) ಅಧ್ಯಕ್ಷ ಮಹೇಶ್ ಜೋಶಿ ಅವರನ್ನು ಬಂಧಿಸಲು ಸರ್ಕಾರ ಸರ್ವ ಪ್ರಯತ್ನ ಮಾಡುತ್ತಿದೆ' ಎಂದು ಜೋಶಿ ಪರ ವಕೀಲರು ಹೈಕೋರ್ಟ್‌ಗೆ ದೂರಿದರು.

ಮಹೇಶ್ ಜೋಶಿ

ಕಸಾಪ ಅವ್ಯವಹಾರ ಆರೋಪಕ್ಕೆ ಸಂಬಂಧಿಸಿದಂತೆ ತನಿಖಾಧಿಕಾರಿ ನೇಮಕ ಪ್ರಶ್ನಿಸಿ ಮಹೇಶ್ ಜೋಶಿ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಜೋಶಿ ಪರ ಪದಾಂಕಿತ ಹಿರಿಯ ವಕೀಲ ಜಯಕುಮಾರ್ ಎ. ಪಾಟೀಲ್ 'ನ್ಯಾಯಾ-ಲಯದಲ್ಲಿ ಆರ್‌ಎಫ್‌ಎ ಬಾಕಿ ಇದ್ದು, ಅದಕ್ಕೆ ಸಂಬಂಧಿಸಿದ ದಾಖಲೆಯನ್ನು ಕಸಾಪ ಕಚೇರಿಯಲ್ಲಿ ಇರಿಸಲಾಗಿದೆ. ಅದನ್ನು ತೆಗೆದುಕೊಳ್ಳಲು ನಿರ್ದೇಶನ ಕೋರಿ ಅರ್ಜಿ ಸಲ್ಲಿಸಲಾಗಿದೆ' ಎಂದರು.

ಇದಕ್ಕೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು, 'ಅದನ್ನು ಎಲ್ಲಿಡಲಾಗಿದೆ ಎಂಬುದು ಅವರಿಗೇ ಗೊತ್ತು. ಜೋಶಿ ಅವರೇ ಬಂದು ಅದನ್ನು ಪಡೆದುಕೊಳ್ಳ-ಬಹುದು' ಎಂದರು.

ಇದಕ್ಕೆ ಪಾಟೀಲ್, 'ಜೋಶಿಯವರು ಅಧಿಕಾರದಲ್ಲಿ ಇದ್ದಾಗ ದಾಖಲೆಗಳು ಕಪಾಟಿನಲ್ಲಿ ಇದ್ದವು. ಈಗ ಅವು ಅಲ್ಲಿಲ್ಲ. ಅವೆಲ್ಲವನ್ನೂ ಕಂತೆ ಕಟ್ಟಿ ಇಡಲಾಗಿದೆ. ಒಂದು ವೇಳೆ ಜೋಶಿ ಹೋಗಿ ಅವುಗಳನ್ನು ಮುಟ್ಟಿದರೆ ದಾಖಲೆ ಕಳವು ಆರೋಪ ಹೊರಿಸುವ ಸಾಧ್ಯತೆ ಇದೆ. ಬೇಕಿದ್ದರೆ ಅವರು ಅಲ್ಲಿಗೆ ಹೋಗಿ, ಯಾವ ಪತ್ರ ಎಂದು ಹೇಳುತ್ತಾರೆ. ಅದನ್ನು ತೆಗೆದುಕೊಡಬೇಕು. ಹಿಂದೆ ಒಮ್ಮೆ ಹೋಗಿದ್ದಾಗ. ಅವರನ್ನು ಬಂಧಿಸಲು ಪ್ರ-ಯತ್ನಿಸಲಾಗಿತ್ತು' ಎಂದು ದೂರಿದರು.

ಇದಕ್ಕೆ ನ್ಯಾಯಪೀಠ, 'ನೀವು ಅಲ್ಲಿ ಹೋಗದಿದ್ದರೆ ಆ ಪತ್ರಗಳು ಹೇಗೆ ಸಿಗುತ್ತವೆ? ಅವು ಎಲ್ಲಿವೆ ಎಂಬುದು ಸರ್ಕಾರಕ್ಕೇನು ಗೊತ್ತು? ಸರ್ಕಾರದ ಉಸ್ತುವಾರಿಯಡಿ ನೀವೇ ಅಲ್ಲಿಗೆ ಹೋಗಿ ದಾಖಲೆ ಪಡೆಯಬಹುದು. ಶೋಧಿಸಿ ನಿಮಗೆ ಕೊಡಿ ಎಂದು ಸರ್ಕಾರಕ್ಕೆ ನಿರ್ದೇಶಿಸಲಾಗದು' ಎಂದು ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿತು.

ಕೋರಿಕೆ: 'ಕಸಾಪ ಪದಾಧಿಕಾರಿಗಳ ಕಾರ್ಯವೈಖರಿ, ಅನುದಾನ ಮತ್ತು ಖರ್ಚು-ವೆಚ್ಚಗಳ ಕುರಿತು ವಿಚಾರಣೆ ನಡೆಸಲು ಸಹಕಾರ ಸಂಘಗಳ ನೋಂದಣಾಧಿಕಾರಿ 2025ರ ಜೂನ್ 26 ಹಾಗೂ 30ರಂದು ತನಿಖಾಧಿಕಾರಿ ನೇಮಕ ಮಾಡಿ ಹೊರಡಿಸಿರುವ ಆದೇಶಕ್ಕೆ ತಡೆ ನೀಡಬೇಕು' ಎಂದು ಮಹೇಶ್ ಜೋಶಿ ಕೋರಿದ್ದಾರೆ.

ರಕ್ಷಣಾ ಇಲಾಖೆ ಅಧಿಕಾರಿ ವಿರುದ್ಧ ಅತ್ಯಾಚಾರ ಆರೋಪ ಪ್ರಕರಣಕ್ಕೆ ತಡೆ

ಬೆಂಗಳೂರು: ನಿವೃತ್ತಿಯ ಅಂಚಿನಲ್ಲಿರುವ ರಕ್ಷಣಾ ಇಲಾಖೆ ಅಧಿಕಾರಿಯೊಬ್ಬರ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣಕ್ಕೆ ಹೈಕೋರ್ಟ್ ತಡೆ ನೀಡಿದೆ.

ಮುಂಬೈನಲ್ಲಿ ಕರ್ತವ್ಯದಲ್ಲಿರುವ 59 ವರ್ಷದ ಅಧಿಕಾ-ರಿಯಾಗಿರುವ ಅರ್ಜಿದಾರರ ಪ್ರಕರಣವನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

'ನಿವೃತ್ತಿಗೆ ಇನ್ನೊಂದು ವರ್ಷ ಇರುವಾಗ ಇದೆಲ್ಲಾ ಬೇಕಿತ್ತಾ? ಈಗ ನೋಡಿ ನಿವೃತ್ತಿಯ ಲಾಭಕ್ಕೆ ಸಂಕಟ ಎದುರಾಗಿದೆ' ಎಂದು ಅರ್ಜಿದಾರರ ನಡೆಗೆ ಬೇಸರ ವ್ಯಕ್ತಪಡಿಸಿದ ನ್ಯಾಯಪೀಠ, 'ಇಬ್ಬರ ನಡುವಿನ ಲೈಂಗಿಕ ಸಂಬಂಧ ಒಪ್ಪಿತವಾಗಿರುವ ಕಾರಣ ಅರ್ಜಿದಾರರ ವಿರುದ್ಧ, ಭಾರತೀಯ ದಂಡ ಸಂಹಿತೆ-1860ರ ಕಲಂ 376 ಮತ್ತು 506ರ ಅಡಿಯಲ್ಲಿನ ನ್ಯಾಯಿಕ ಪ್ರಕ್ರಿಯೆ ಮುಂದುವರಿಸಲು ಅನುಮತಿ ನೀಡುವುದಿಲ್ಲ' ಎಂದು ಹೇಳಿದೆ.

ಅರ್ಜಿದಾರರು ಮತ್ತು ದೂರುದಾರ ಮಹಿಳೆ ಇಬ್ಬರೂ ವಿಚ್ಛೇದಿತರು. ಇವರು 'ಶಾದಿ ಡಾಟ್ ಕಾಮ್' ನಲ್ಲಿ ಪರಿಚಿ-ತರಾಗಿದ್ದರು. ಈ ಸ್ನೇಹ ಗಾಢವಾಗಿ ಲೈಂಗಿಕ ಸಂಬಂಧಕ್ಕೂ ವಿಸ್ತರಿಸಿತ್ತು. 'ನಾನು ಗರ್ಭ ಧರಿಸಿದ ಬಳಿಕ ಅರ್ಜಿದಾರ ಮುಂಬೈಗೆ ಪರಾರಿಯಾಗಿದ್ದಾರೆ' ಎಂದು ಮಹಿಳೆ ದೂರು ನೀಡಿದ್ದಾರೆ.

ಚಿತ್ರಾವಳಿ

ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಹಾಗೂ ಪ್ರಥಮ ವರ್ಷದ ಬಿಕಾಂ, ಬಿಸಿಎ, ಬಿಬಿಎ ಪದವಿಯಲ್ಲಿ ವ್ಯಾಸಂಗ ಮಾಡುತ್ತಿರುವ ಆರ್ಥಿಕವಾಗಿ ಹಿಂದುಳಿದ ಬಡ 130 ವಿದ್ಯಾರ್ಥಿಗಳಿಗೆ ತಲಾ ₹5,000ದಂತೆ ಒಟ್ಟು ₹5.25 ಲಕ್ಷ ಪ್ರೋತ್ಸಾಹಧನವನ್ನು ಕೆ.ಆರ್.ಪುರದ ಶ್ರೀ ವೆಂಕಟೇಶ್ವರ ಸಮೂಹ ಶಿಕ್ಷಣ ಸಂಸ್ಥೆ ವತಿಯಿಂದ ಎಬಿವಿಪಿ ಬೆಂಗಳೂರು ನಗರ ಜಿಲ್ಲಾಧ್ಯಕ್ಷ ಎಂ.ರಮೇಶ್ ವಿತರಿಸಿದರು. ಸಂಸ್ಥೆಯ ಅಧ್ಯಕ್ಷ ಕೆ.ವಿ.ಮುನಿಸ್ವಾಮಿ, ನಿರ್ದೇಶಕ ಪ್ರೊ. ವಿ.ಎಂ.ರವಿ, ಆಡಳಿತಾಧಿಕಾರಿ ಪುಟ್ಟರಾಜು, ಸತ್ಯಶೀಲ ನಾಯರ್, ಚಂದ್ರಯ್ಯ, ನಾಗಾರ್ಜುನ, ಮಂಜುನಾಥ್, ರಮೇಶ್ ಉಪಸ್ಥಿತರಿದ್ದರು

ಪೀಣ್ಯ ದಾಸರಹಳ್ಳಿ ಸಮೀಪದ ಮಲ್ಲಸಂದ್ರದಲ್ಲಿ ಶಾಸಕ ಎಸ್. ಮುನಿರಾಜು ಅವರು ಒಂದು ಸಾವಿರ ಕಟ್ಟಡ ಕಾರ್ಮಿಕರಿಗೆ ರಕ್ಷಣಾ ಪರಿಕರ ಹಾಗೂ ತಲಾ ₹2,000 ಸಹಾಯ ಧನವನ್ನು ಸರ್ಕಾರಿ ಅನುದಾನದಡಿಯಲ್ಲಿ ವಿತರಣೆ ಮಾಡಿದರು. ಬಿಜೆಪಿ ಪ್ರಧಾನ ಕಾರ್ಯದರ್ಶಿ ರಘು ಸೂರ್ಯ, ಶ್ರೀನಿಧಿ ಬ್ಯಾಂಕ್ ಮಾಲೀಕ ಸುರೇಶ್ ಹಾಗೂ ಕಾರ್ಯಕ್ರಮ ಆಯೋಜಕ ಮೂರ್ತಿ ಉಪಸ್ಥಿತರಿದ್ದರು

ಹೆಸರಘಟ್ಟ: ಇಂದಿನಿಂದ ದನಗಳ ಜಾತ್ರೆ

ಪ್ರಜಾವಾಣಿ ವಾರ್ತೆ

ಹೆಸರಘಟ್ಟ: ತೋಟಗೆರೆ ಶ್ರೀ ಬಸವಣ್ಣ ದೇವಸ್ಥಾನದ ಆವರಣದಲ್ಲಿ ಫೆ.10ರಿಂದ 15ರವರೆಗೆ ದನಗಳ ಜಾತ್ರೆ ನಡೆಯಲಿದೆ ಎಂದು ಸಿಎನ್‌ಆರ್ ಹಿತಚಿಂತನಾ ಚಾರಿಟಬಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ವಿ.ರಾಮಸ್ವಾಮಿ ತಿಳಿಸಿದರು.

ಜಾತ್ರೆಯಲ್ಲಿ ರೈತರು ತಮ್ಮ ರಾಸುಗಳನ್ನು ಮಾರಾಟ ಮಾಡಬಹುದು. ಹಳ್ಳಿಕಾರ್, ಅಮೃತ ಮಹಲ್, ಎಚ್‌ಎಫ್, ಸಿಂಧಿ ಇನ್ನಿತರೆ ವೈವಿಧ್ಯಮಯ ತಳಿಗಳ ರಾಸುಗಳು ಜಾತ್ರೆಯಲ್ಲಿ ಭಾಗವಹಿಸಲಿವೆ. ಉತ್ತಮ ಮಳೆಯಾಗಿರುವುದರಿಂದ ಒಂದು ಸಾವಿರಕ್ಕೂ ಹೆಚ್ಚು ಜಾನುವಾರುಗಳು ಭಾಗವಹಿಸುವ ಸಾಧ್ಯತೆ ಇದೆ ಎಂದರು.

ದೇವಸ್ಥಾನದ ಸುತ್ತಮುತ್ತಲಿನ ಐದು ಎಕರೆ ಜಾಗದಲ್ಲಿ ಜಾನುವಾರುಗಳಿಗೆ ಸ್ಥಳಾವಕಾಶ ಕಲ್ಪಿಸಲಾಗಿದೆ. ತುಮಕೂರು, ನೆಲಮಂಗಲ, ಬೆಂಗಳೂರು ಉತ್ತರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ, ಗೌರಿಬಿದನೂರು, ದೇವನಹಳ್ಳಿ ತಾಲ್ಲೂಕುಗಳಿಂದ ರೈತರು ಜಾತ್ರೆಗೆ ಬರುವ ನಿರೀಕ್ಷೆ ಇದೆ ಎಂದು ತಿಳಿಸಿದರು.

ಜಾತ್ರೆಯಲ್ಲಿ ಭಾಗವಹಿಸುವ ಉತ್ತಮ ರಾಸುಗಳಿಗೆ ಟ್ರಸ್ಟ್ ವತಿಯಿಂದ ಹಲವು ವಿಭಾಗಗಳಲ್ಲಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನವನ್ನು ವಿತರಣೆ ಮಾಡಲಾಗುವುದು. ಜೊತೆಗೆ ಪ್ರತಿ ವರ್ಷದಂತೆ ಜಾತ್ರೆಯಲ್ಲಿ ಪಾಲ್ಗೊಳ್ಳುವ ಎಲ್ಲ ರೈತರಿಗೆ ಶಲ್ಯ ವಿತರಣೆ ಮತ್ತು ಎಲ್ಲಾ ರಾಸುಗಳಿಗೆ ಬಾರು ಗೋಲು, ಕೊರಳ ಗೆಜ್ಜೆ, ಕಾಲು ಗೆಜ್ಜೆ, ಶಂಖ, ದಂಡೆ ವಿತರಣೆ ಮಾಡಲಾಗುವುದು ಎಂದರು.

'ಸಂಪುಟ ದರ್ಜೆ ಹೊಂದಿದವರ ಪಟ್ಟಿ ಬಿಡುಗಡೆ ಮಾಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸಚಿವ ಸಂಪುಟ ದರ್ಜೆ ಹೊಂದಿರುವವರ ಪಟ್ಟಿಯನ್ನು ಸರ್ಕಾರದ ಮುಖ್ಯಕಾರ್ಯದರ್ಶಿಯವರು ಕೂಡಲೇ ಬಿಡುಗಡೆ ಮಾಡಬೇಕು ಎಂದು ವಿಧಾನಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿಯವರ ರಾಜಕೀಯ ಸಲಹೆಗಾರರು, ಹಣಕಾಸು ಸಲಹೆಗಾರರು, ರಾಜಕೀಯ ಕಾರ್ಯ-ದರ್ಶಿಗಳು, ಕಾನೂನು ಸಲಹೆಗಾರರು, ಸಚಿವರು, ನಿಗಮ, ಮಂಡಳಿ ಅಧ್ಯಕ್ಷರು ಇವರೆಲ್ಲ ಸೇರಿ ಎಷ್ಟು ಜನ ಸಂಪುಟ ದರ್ಜೆಯ ಸ್ಥಾನಮಾನ ಪಡೆದಿದ್ದಾರೆ, ಇದರಿಂದ ಬೊಕ್ಕಸಕ್ಕೆ ಆಗುತ್ತಿರುವ ಹೊರೆ ಎಷ್ಟು ಎಂಬುದನ್ನು ಬಹಿರಂಗಪಡಿಸಬೇಕು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ವಿವಿಧ ನಿಗಮಗಳ 54 ಅಧ್ಯಕ್ಷರ ಸ್ಥಾನವನ್ನು ಸಚಿವ ಸಂಪುಟ ದರ್ಜೆಗೆ ಏರಿಸಲಾಗಿದೆ. ಅನೇಕರಿಗೆ ಸಚಿವ ಸಂಪುಟ ದರ್ಜೆ ಕೊಟ್ಟಿದ್ದು, ಗ್ಯಾರಂಟಿಯ ರಾಜ್ಯದ ಜಾರಿ ಸಮಿತಿಯ ರಾಜ್ಯ ಸಮಿತಿ ಅಧ್ಯಕ್ಷರಿಗೂ ಇದೇ ಸ್ಥಾನಮಾನ ನೀಡಲಾಗಿದೆ. ಇವೆಲ್ಲ ಸೇರಿ ಕರ್ನಾಟಕ-ದಲ್ಲಿ ಕ್ಯಾಬಿನೆಟ್ ದರ್ಜೆಯ ಸ್ಥಾನಮಾನ-ವನ್ನು ಮುಖ್ಯಮಂತ್ರಿ ಸೇರಿ 150 ಜನರಿಗೆ ಕೊಡಲಾಗಿದೆ ಎಂದು ತಿಳಿಸಿದರು.

2003ರ ಕಾಯ್ದೆಯ ಪ್ರಕಾರ ಆಡಳಿತ ಪಕ್ಷದ ಶೇ 15ರಷ್ಟು ಶಾಸಕರು ಮತ್ತು ಸಂಸದರಿಗೆ ಮಾತ್ರ ಸಚಿವರನ್ನಾಗಿ ಮಾಡಬಹುದು. ಕರ್ನಾ-ಟಕದಲ್ಲಿ 33 ಜನರನ್ನು ಮಾತ್ರ ಮಂತ್ರಿ-ಗಳನ್ನಾಗಿ ಮಾಡಲು ಅವಕಾಶವಿದೆ. ಈ ಕಾರಣದಿಂದ ಸಚಿವರಾಗಲು ಬಯಸಿದವರು, ಸಂಪುಟದಲ್ಲಿ ಸ್ಥಾನ ಅಪೇಕ್ಷಿಸಿದವರಿಗೆ ಹಿಂಬಾಗಿಲ ಮೂಲಕ ಸಚಿವ ಸಂಪುಟದ ಸ್ಥಾನಮಾನವನ್ನು ಈ ಸರ್ಕಾರ ಕೊಡುತ್ತಿದೆ ಎಂದು ಟೀಕಿಸಿದರು.

ನಾಳೆ ಪ್ರತಿಭಟನೆ

ಬೆಂಗಳೂರು: 'ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 2.84 ಲಕ್ಷ ಹುದ್ದೆಗಳನ್ನು ಭರ್ತಿ ಮಾಡುವಂತೆ ಆಗ್ರಹಿಸಿ ಫೆ. 11ರಂದು, ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಆಲ್ ಕರ್ನಾಟಕ ಸ್ಟೇಟ್ ಸ್ಟೂಡೆಂಟ್ಸ್ ಅಸೋಸಿಯೇಷನ್ ತಿಳಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ಕಾಂತಕುಮಾರ್, 'ಗ್ರಾಮೀಣ ಭಾಗದ ನಿರುದ್ಯೋಗಿ ಯುವ ಸಮುದಾಯ ಸರ್ಕಾರಿ ನೌಕರಿಯನ್ನು ಪಡೆದುಕೊಳ್ಳಬೇಕು ಎಂಬ ಉದ್ದೇಶದಿಂದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಸ್ವಂತ ಊರುಗಳನ್ನು ತೊರೆದು ತಯಾರಿ ನಡೆ-ಸುತ್ತಿದ್ದಾರೆ. ಆದರೆ ಕಳೆದ ನಾಲ್ಕೈದು ವರ್ಷಗಳಿಂದ ಯಾವುದೇ ರೀತಿಯ ನೇಮಕಾತಿ ಆಗದೇ, ತೊಂದರೆ ಅನುಭವಿಸುತ್ತಿದ್ದಾರೆ' ಎಂದು ತಿಳಿಸಿದರು.

ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಸಂಜಯಕುಮಾರ. ಜೆ., ಸದಸ್ಯರಾದ ಶ್ರೀಶೈಲ್ ತೇಲಿ, ಶಿವು ಎಸ್. ಗೌಡ ಸುದ್ದಿಗೋಷ್ಠಿಯಲ್ಲಿದ್ದರು.

ಐಎಎಸ್ ಅಧಿಕಾರಿ ವರ್ಗಾವಣೆ

ಬೆಂಗಳೂರು: ಐಎಎಸ್ ಅಧಿಕಾರಿ ಎಂ.ಆರ್.ರವಿಕುಮಾರ್ ಅವರನ್ನು ಆಹಾರ ಇಲಾಖೆ ಆಯುಕ್ತ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ಜತೆಗೆ, ವಿತ್ತೀಯ ಕಾರ್ಯನೀತಿ ಸಂಸ್ಥೆಯ ಹೆಚ್ಚುವರಿ ನಿರ್ದೇಶಕ ಹುದ್ದೆಯ ಹೆಚ್ಚುವರಿ ಹೊಣೆ ನೀಡಲಾಗಿದೆ.

ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿದ ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ

'18 ತಿಂಗಳಲ್ಲಿ ಧಾರ್ಮಿಕ ಸೌಧ ನಿರ್ಮಾಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ಮುಜರಾಯಿ ಇಲಾಖೆಗೆ ಸೇರಿದ ನೂರಾರು ಎಕರೆ ಜಾಗವಿದ್ದರೂ ಇಲಾಖೆಗೆ ಸ್ವಂತ ಕಟ್ಟಡವಿರ-ಲಿಲ್ಲ. ಆದ್ದರಿಂದ ಅಂದಾಜು ₹27 ಕೋಟಿ ವೆಚ್ಚದಲ್ಲಿ ನೂತನ ಧಾರ್ಮಿಕ ಸೌಧವನ್ನು ಹೊಯ್ಸಳ ಶೈಲಿಯಲ್ಲಿ ನಿರ್ಮಿಸಲಾಗುತ್ತಿದೆ' ಎಂದು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ವಿಕಾಸಸೌಧದ ಹಿಂಭಾಗದಲ್ಲಿ-ರುವ ರಾಮಾಂಜನೇಯ ದೇವಸ್ಥಾನದ ಪಕ್ಕದಲ್ಲಿ, ಮುಜರಾಯಿ ಇಲಾಖೆಗೆ ಸೇರಿದ ಜಾಗದಲ್ಲಿ ಧಾರ್ಮಿಕ ಸೌಧ ನಿರ್ಮಾಣಕ್ಕೆ ಸೋಮವಾರ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದರು.

'ಈ ಸೌಧವು ನೆಲಮಹಡಿ, ಚಾವಣಿ ಹೊರತುಪಡಿಸಿ ಐದು ಮಹಡಿಗಳನ್ನು ಒಳಗೊಳ್ಳಲಿದೆ. ಮುಂದಿನ 18 ತಿಂಗಳಲ್ಲಿ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ. ಸದ್ಯ ಇಲಾಖೆಗೆ ಸ್ವಂತ ಕಟ್ಟಡ ಇರದ ಕಾರಣ, ಖಾಸಗಿ ಕಟ್ಟಡಕ್ಕೆ ಬಾಡಿಗೆ ಪಾವತಿಸಲಾಗುತ್ತಿದೆ' ಎಂದರು.

ರಾಮಲಿಂಗಾರೆಡ್ಡಿ ಅವರು ಧಾರ್ಮಿಕ ಸೌಧದ ನೀಲ ನಕ್ಷೆಯನ್ನು ವೀಕ್ಷಿಸಿದರು. ರಾಜೇಂದ್ರ ಕುಮಾರ್ ಕಟಾರಿಯಾ ಉಪಸ್ಥಿತರಿದ್ದರು

ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, 'ಇಲಾಖೆ ಪ್ರಕಾರ ರಾಜ್ಯದಲ್ಲಿ 'ಎ', 'ಬಿ' ಮತ್ತು 'ಸಿ' ವರ್ಗದ 34,564 ದೇವಸ್ಥಾನಗಳಿವೆ. ಸುಮಾರು 4,500 ದೇವಸ್ಥಾನಗಳು ಕಣ್ಮರೆಯಾಗಿರುವುದು ಕಳೆದ ವರ್ಷ ನಡೆಸಿದ ಸಮೀಕ್ಷೆಯಿಂದ ತಿಳಿದುಬಂದಿತ್ತು. ಪುನಃ ಎಲ್ಲ ಕಡೆ ಸಮೀಕ್ಷೆ ನಡೆಸಿದ ಬಳಿಕ 800 ದೇವಸ್ಥಾನಗಳು ಪತ್ತೆಯಾಗಿದ್ದವು. ಉಳಿದ ದೇವಸ್ಥಾನಗಳನ್ನು ಗುರುತಿಸುವ ಕಾರ್ಯ ಸಮೀಕ್ಷೆ ಮೂಲಕ ಮುಂದುವರಿದಿದೆ' ಎಂದು ಹೇಳಿದರು.

ಕಟ್ಟಡದಲ್ಲಿ ಏನೆಲ್ಲ ಇರಲಿದೆ?: ಕಟ್ಟಡದ ನೆಲಮಹಡಿಯಲ್ಲಿ ಪಾರ್ಕಿಂಗ್, ಕ್ಯಾಂಟೀನ್ ಇರಲಿದೆ. ಮೊದಲ ಮಹಡಿಯನ್ನು ವಾಣಿಜ್ಯ ಉದ್ದೇಶಕ್ಕೆ ನೀಡಲಾಗುತ್ತದೆ. ಎರಡನೇ ಮಹಡಿಯಲ್ಲಿ 80 ಆಸನ ಸಾಮರ್ಥ್ಯದ ಸಭಾಂಗಣ, ಆಗಮ ಕಚೇರಿ, ಮುಖ್ಯ ಆಡಳಿತ ಕಚೇರಿ ಇರಲಿದೆ.

ಮೂರನೇ ಮಹಡಿಯಲ್ಲಿ ಆಯುಕ್ತರ ಕಚೇರಿ, ಕೋರ್ಟ್ ಹಾಲ್ ಇರಲಿದ್ದು, ನಾಲ್ಕನೇ ಮಹಡಿಯಲ್ಲಿ ಅಧೀಕ್ಷಕರ ಹಾಗೂ ಹೊರಾಂಗಣ ಕಚೇರಿ ಇರಲಿದೆ. ಐದನೇ ಮಹಡಿಯಲ್ಲಿ ಡಿಜಿಟಲ್ ಗ್ರಂಥಾಲಯ, ರಾಜ್ಯ ಧಾರ್ಮಿಕ ಪರಿಷತ್ ಇರಲಿದೆ.

ತಲೆಹೊಟ್ಟಿನ ಗುಟ್ಟು ರಟ್ಟು

• ಡಾ.ವಿಜಯಲಕ್ಷ್ಮಿ ಪಿ

ತಲೆಹೊಟ್ಟು ಒಂದು ಸಾಮಾನ್ಯ ಸಮಸ್ಯೆಯಾಗಿದ್ದು, ಇದು ತಲೆಯ ಚರ್ಮದ ಸಿಪ್ಪೆ ಸುಲಿಯುವಿಕೆಯಿಂದ ಗುರುತಿಸಲ್ಪಡುತ್ತದೆ. ಇದು ಹೆಚ್ಚಾಗಿ ನೆತ್ತಿಯ ಮೇಲಿನ ಚರ್ಮದ ಕೋಶಗಳ ಉದುರುವಿಕೆಯಿಂದ ಉಂಟಾಗುತ್ತದೆ. ಕೂದಲು ಮತ್ತು ಬಟ್ಟೆಗಳ ಮೇಲೆ ಬಿಳಿ ಅಥವಾ ಬೂದು ಬಣ್ಣದ ಪದರಗಳು ಅಥವಾ ಪುಡಿಗಳ ಉದುರುವಿಕೆಯಿಂದ ಈ ತಲೆಹೊಟ್ಟಿನ ಸಮಸ್ಯೆಯನ್ನು ಗುರುತಿಸಬಹುದು. ತಲೆಯಲ್ಲಿ ಅತಿಯಾದ ನವೆಯ ಸಮಸ್ಯೆ ಇದ್ದು, ತಲೆಯ ಕೇಶಭೂಮಿ ಒರಟಾಗಿ, ಒಡೆಯುತ್ತದೆ. ಕೆಲವೊಮ್ಮೆ ಕೂದಲು ಉದುರಲೂ ಕಾರಣವಾಗುತ್ತದೆ. ತಲೆಹೊಟ್ಟು ಕೆಲವೊಮ್ಮೆ ಕಫ, ವಾತಗಳ ವಿಕೃತಿಯಿಂದಲೂ, ಕೆಲವೊಮ್ಮೆ ರಕ್ತಪಿತ್ತಗಳ ವಿಕೃತಿಯಿಂದಲೂ ಉತ್ಪನ್ನವಾಗುತ್ತದೆ.

ಆಗಾಗ ಕಾಡುವ ಕೆಮ್ಮು, ದಮ್ಮು, ನೆಗಡಿಗಳಿಗೆ ಸರಿಯಾದ ಚಿಕಿತ್ಸೆ ಮಾಡದಿರುವುದರಿಂದ, ಇವುಗಳ ಉತ್ಪತ್ತಿಗೆ ಕಾರಣವಾದ ದೋಷಗಳು, ಕಾಲಾಂತರದಲ್ಲಿ ತಲೆಯ ಚರ್ಮದಲ್ಲಿ ಆಶ್ರಯ ಪಡೆದು, ಹೊಟ್ಟನ್ನು ಉತ್ಪತ್ತಿ ಮಾಡುತ್ತವೆ. ಕಫವು ಹೆಚ್ಚಿರುವ ಸಂದರ್ಭಗಳಲ್ಲಿ ತಲೆಯಲ್ಲಿ ಅಧಿಕವಾದ ಜಿಡ್ಡು ಉಂಟಾಗುತ್ತದೆ. ಹಾಗೆ ಆದಾಗ ಕೂದಲಿನ ಬುಡದ ಗ್ರಂಥಿಗಳಿಂದ ಸ್ರವಿಸುವ ಎಣ್ಣೆಯ ಪ್ರಮಾಣ ಹೆಚ್ಚಾಗಿ, ಶಿಲೀಂಧ್ರಗಳ ಉತ್ಪತ್ತಿಗೆ ಕಾರಣವಾಗುತ್ತದೆ. ಈ ಶಿಲೀಂಧ್ರಗಳು ಸ್ರವಿಸುವ ಜಿಡ್ಡನ್ನೇ ತಿಂದು ಬೆಳೆದು ತಲೆಯ ಚರ್ಮವನ್ನು ಒಡೆದು ನವೆ ಉಂಟು ಮಾಡುತ್ತವೆ.

ವಾಯುವಿನ ವಿಕೃತಿಯಿಂದ ಉತ್ಪನ್ನವಾಗುವ ನೆಗಡಿ, ತಲೆನೋವು, ಕಿವಿನೋವು, ಒಣಕೆಮ್ಮಿಗೆ ಸರಿಯಾದ ಸಂಪೂರ್ಣ ಚಿಕಿತ್ಸೆ ಆಗದಿದ್ದರೆ, ಅತಿ ಬಿಸಿನೀರಿನಿಂದ ಸ್ನಾನ ಮಾಡಿದರೆ, ಅತಿ ತಂಪಾದ ವಾತಾವರಣದಲ್ಲಿದ್ದರೆ, ತೀಕ್ಷ್ಣವಾದ ರಾಸಾಯನಿಕಗಳಿಂದ ತಯಾರಿಸಿದ ಶ್ಯಾಂಪೂ ಮತ್ತು ಇತರ ಕೇಶಸಾಧನಗಳನ್ನು ಬಳಸಿದರೆ ತಲೆಯ ಚರ್ಮವು ಒಣಗಿದಂತಾಗಿ, ಪುಡಿಯ ರೂಪದಲ್ಲಿ ಉದುರುತ್ತದೆ. ಇದು ಹೆಚ್ಚಾದರೆ ಕೂದಲಿನ ಬುಡದಲ್ಲಿ ನೋವು ಉಂಟಾಗುತ್ತದೆ.

ಕೆಲವೊಮ್ಮೆ ತಲೆಹೊಟ್ಟು ವಿವಿಧ ಚರ್ಮರೋಗಗಳಾದ, ಸೋರಿಯಾಸಿಸ್, ಎಕ್ಜಿಮಾ, ಡರ್ಮಟೈಟಿಸ್ ರೋಗಗಳ ಲಕ್ಷಣವಾಗಿರುತ್ತದೆ. ಆಗ ವೈದ್ಯರ ಸೂಕ್ತ ಸಲಹೆಯಂತೆ ಸರಿಯಾದ ಚಿಕಿತ್ಸೆಯನ್ನು, ಸಂಪೂರ್ಣವಾಗಿ ತೆಗೆದುಕೊಳ್ಳಬೇಕು. ಇದನ್ನು ಗಮನಿಸದೆ, ಉದಾಸೀನ ಮಾಡಿದಲ್ಲಿ, ಇದು ಮಹಾವ್ಯಾಧಿಯಾಗಿ ತೊಂದರೆ ಉಂಟುಮಾಡಬಹುದು.

ಅತಿಯಾಗಿ ಕ್ಷಾರೀಯ ಪದಾರ್ಥಗಳನ್ನು, ಕ್ಷಾರೀಯ ದ್ರವಗಳನ್ನು ಸೇವಿಸುವುದರಿಂದ, ಅತಿಯಾದ ಮದ್ಯಪಾನ, ವಿರುದ್ಧಾಹಾರಗಳ ಸೇವನೆ, ಅತಿಯಾದ ಉಪವಾಸ, ವಿಪರೀತ ಮಸಾಲೆ, ಖಾರ, ಕರಿದ ಪದಾರ್ಥಗಳ ಸೇವನೆಯಿಂದ, ಮಾನಸಿಕ ಒತ್ತಡ, ಅತಿಯಾದ ಸಿಟ್ಟು, ದ್ವೇಷಗಳು ರಕ್ತ ಮತ್ತು ಪಿತ್ತಗಳಲ್ಲಿ ದೋಷ ಉಂಟು ಮಾಡಿ, ತಲೆಹೊಟ್ಟು ಉತ್ಪತ್ತಿಯಾಗುವಂತೆ ಮಾಡುತ್ತವೆ.

ಈ ತಲೆಹೊಟ್ಟು ಉಂಟುಮಾಡುವ ಶಿಲೀಂಧ್ರಗಳು ತಲೆಯ ಚರ್ಮಭಾಗದಲ್ಲಿ ಆಶ್ರಯ ಪಡೆಯುವುದರಿಂದ ಚರ್ಮ ಕೆಂಪಾಗುವುದು, ತುರಿಕೆ ಮತ್ತು ಸಿಪ್ಪೆ ಸುಲಿಯುವುದು, ಸಣ್ಣ ಗುಳ್ಳೆಗಳೇಳುವಂಥ ಲಕ್ಷಣಗಳು ಕಾಣಿಸಿಕೊಳ್ಳಬಹುದು.

ಆದಷ್ಟು ತಲೆಹೊಟ್ಟಿಗೆ ಕಾರಣವಾಗುವ ಅಂಶಗಳಿಂದ ದೂರವಿರಬೇಕು. ಮನಸ್ಸನ್ನು ಶಾಂತವಾಗಿರಿಸಿಕೊಳ್ಳಬೇಕು. ರಕ್ತ ಮತ್ತು ಪಿತ್ತ ದೋಷಗಳಿಗೆ ಸೂಕ್ತ ಚಿಕಿತ್ಸೆಯನ್ನು ವೈದ್ಯರ ಸಲಹೆಯಂತೆ ಪಡೆಯಬೇಕು. ಪೋಷಕಾಂಶಗಳ ಕೊರತೆಯಿಂದ ತಲೆಹೊಟ್ಟಿನ ಸಮಸ್ಯೆ ಉಂಟಾಗುತ್ತದೆ. ಹಾಗಾಗಿ ಆಹಾರದಲ್ಲಿ ವಿಶೇಷವಾಗಿ ಸತು, 'ಬಿ' ಜೀವಸತ್ವಗಳು, ಕೊಬ್ಬು, ಕ್ಯಾಲ್ಸಿಯಂ ಇರುವಂತೆ ನೋಡಿಕೊಳ್ಳಬೇಕು. ಆಗ ಕೂದಲಿನ ಬುಡಕ್ಕೆ ಬೇಕಾದ ಪೋಷಣೆಯನ್ನು ಈ ಜೀವಸತ್ವಗಳು ಮಾಡುತ್ತವೆ. ಅಷ್ಟೇ ಅಲ್ಲದೇ, ಸಕಾಲದಲ್ಲಿ, ಪೋಷಕಾಂಶಯುಕ್ತವಾದ ಆಹಾರಸೇವನೆ ಮಾಡುವುದರಿಂದಲೂ ತಲೆಹೊಟ್ಟಿನ ತೊಂದರೆ ನಿವಾರಣೆಯಾಗುತ್ತದೆ.

ಅತಿಯಾದ ಮಾನಸಿಕ ಒತ್ತಡ, ರಾತ್ರಿ ಜಾಗರಣೆ, ಹಗಲು ಅತಿಯಾದ ನಿದ್ರೆ, ರಾತ್ರಿ ತಡವಾಗಿ ಮಲಗುವುದು... ಇವು ನೇರ ಕಾರಣವಲ್ಲದಿದ್ದರೂ, ಈಗಾಗಲೇ ಇರುವ ತಲೆಹೊಟ್ಟಿನ ಸಮಸ್ಯೆಯನ್ನು ಉಲ್ಬಣಗೊಳಿಸಬಹುದು ಅಥವಾ ಚರ್ಮರೋಗಕ್ಕೆ ಕಾರಣವಾಗಬಹುದು.

ಪ್ರೌಢಾವಸ್ಥೆಯಲ್ಲಿ ಅಥವಾ ಕೆಲವು ವೈದ್ಯಕೀಯ ಪರಿಸ್ಥಿತಿಗಳಿಂದಾಗಿ ಹಾರ್ಮೋನುಗಳಲ್ಲಿ ಉಂಟಾಗುವ ಏರಿಳಿತಗಳು ತಲೆ ಬುಡದಲ್ಲಿ ಎಣ್ಣೆಯ ಉತ್ಪಾದನೆಯನ್ನು ಹೆಚ್ಚಿಸಬಹುದು. ಇದರ ಬಗ್ಗೆಯೂ ಗಮನ ಹರಿಸುವುದು ಒಳಿತು. ಕೆಲವರಿಗೆ ಆನುವಂಶೀಯವಾಗಿ ಹೆಚ್ಚು ಎಣ್ಣೆಯುಕ್ತ ನೆತ್ತಿ ಅಥವಾ ಒಣಚರ್ಮದ ನೆತ್ತಿ ಇರುತ್ತದೆ. ಅಂತಹವರಿಗೆ ಸಹಜವಾಗಿ ತಲೆಹೊಟ್ಟು ಬರುವ ಸಾಧ್ಯತೆ ಹೆಚ್ಚು. ಇದನ್ನು ನಿತ್ಯಾಭ್ಯಂಗದಿಂದ ತಡೆಗಟ್ಟಬಹುದು.

ಎಳ್ಳೆಣ್ಣೆಗೆ ಸಾಸಿವೆ, ಜೀರಿಗೆ ಮತ್ತು ಓಮ ಕಾಳನ್ನು ಹಾಕಿ ಒಗ್ಗರಣೆ ಮಾಡಿ, ಆ ಎಣ್ಣೆಯನ್ನು ನಿತ್ಯವೂ ತಲೆಗೆ ಹಚ್ಚುವುದರಿಂದ ತಲೆ ಹೊಟ್ಟು ಬರುವುದನ್ನು ತಡೆಗಟ್ಟಬಹುದು.

ತಲೆಹೊಟ್ಟಿನ ಸಮಸ್ಯೆ ಕಾಣಿಸಿಕೊಂಡರೆ ಅದಕ್ಕೆ ಪ್ರಾರಂಭದಲ್ಲಿಯೇ ಚಿಕಿತ್ಸೆ ಮಾಡದಿದ್ದರೆ ಕೂದಲು ಉದುರುವುದು, ಮೊಡವೆ ಮುಂತಾದ ಸಮಸ್ಯೆಗಳು ಕಂಡುಬರಬಹುದು.

ತಲೆಗೆ ಎಣ್ಣೆ ಹಚ್ಚದೆ ಇರುವುದೂ ತಲೆಹೊಟ್ಟಿನ ಸಮಸ್ಯೆಗೆ ಕಾರಣವಾಗಬಹುದು. ಹಾಗಾಗಿ ಆಯುರ್ವೇದವು ಎಲ್ಲರಿಗೂ ನಿತ್ಯಾಭ್ಯಂಗವನ್ನೇ ವಿಧಿಸುತ್ತದೆ.

ಸಮಯಾಭಾವವಿದ್ದಾಗ ಕಡೇಪಕ್ಷ ತಲೆ, ಕಿವಿ, ಅಂಗಾಲಿಗಾದರೂ ಎಣ್ಣೆ ಹಚ್ಚಿ ಸ್ನಾನ ಮಾಡುವುದರಿಂದ ಉತ್ತಮ ಫಲಿತಾಂಶವನ್ನು ಪಡೆಯಬಹುದು. ❖

ಹೀಗೆ ಮಾಡಿ

- ತಲೆಹೊಟ್ಟು ನಿವಾರಣೆಯಲ್ಲಿ ಮೊಸರು ಮಹತ್ವದ ಪಾತ್ರವಹಿಸುತ್ತದೆ. ಆದ್ದರಿಂದ 15 ದಿನಕ್ಕೊಮ್ಮೆ ತಲೆಗೆ ಮೊಸರನ್ನು ಹಚ್ಚಿ ಒಂದು ಗಂಟೆ ಬಿಟ್ಟು ತಲೆಸ್ನಾನ ಮಾಡಿ. ಇದರಿಂದ ಹೊಟ್ಟು ನಿವಾರಣೆಯಾಗುವುದಷ್ಟೇ ಅಲ್ಲ, ಕೂದಲೂ ಕಾಂತಿಯುತವಾಗುತ್ತದೆ.
- ಮೆಂತ್ಯವನ್ನು ರಾತ್ರಿ ನೆನೆಸಿಟ್ಟು, ಬೆಳಿಗ್ಗೆ ಅದನ್ನು ರುಬ್ಬಿ ತಲೆಗೆ ಹಚ್ಚಿಕೊಂಡು ಎರಡು ಗಂಟೆ ಕಾಲ ಬಿಟ್ಟು ನಂತರ ಸ್ನಾನ ಮಾಡುವುದರಿಂದ ತಲೆಹೊಟ್ಟು ನಿವಾರಣೆಯಾಗುತ್ತದೆ.
- ಮನಸ್ಸು ಒತ್ತಡದಿಂದ ಇರದಂತೆ ನೋಡಿಕೊಳ್ಳಿ. ದಿನವೂ ಯೋಗಾಸನ, ಧ್ಯಾನ, ಪ್ರಾಣಾಯಾಮಗಳನ್ನು ಮಾಡುವುದು ಒಳ್ಳೆಯದು.
- ತಲೆಗೆ ಸ್ನಾನ ಮಾಡಿದ ನಂತರ ತಲೆಯನ್ನು ಚೆನ್ನಾಗಿ ಒಣಗಿಸಿ ಹೊರಕ್ಕೆ ಹೋಗುವುದು ಒಳ್ಳೆಯದು. ಒದ್ದೆ ಕೂದಲಿಗೆ ದೂಳು ಸೇರುವುದೂ ತಲೆಹೊಟ್ಟಿಗೆ ಕಾರಣವಾಗುತ್ತದೆ.
- ಹೆಚ್ಚು ರಾಸಾಯನಿಕಗಳಿಂದ ಕೂಡಿದ ಶ್ಯಾಂಪೂಗಳು, ಕೃತಕ ಬಣ್ಣಗಳು, ಕೃತಕ ಸಾಧನಗಳನ್ನು ಬಳಸಿ ಮಾಡುವ ಕೇಶವಿನ್ಯಾಸಗಳು, ತಲೆಯ, ಕೂದಲಿನ ಮತ್ತು ನರಗಳ ಆರೋಗ್ಯವನ್ನು ಹಾಳು ಮಾಡುತ್ತವೆ; ಚರ್ಮಕ್ಕೂ ಹಾನಿಕಾರಕ. ಅವುಗಳಿಂದ ದೂರವಿರಿ.

ಮೂತ್ರ ಸೋಂಕು ಚಿಕಿತ್ಸೆಗೆ ಬೇಡ ಕೊಂಕು

ಶಿವರಾತ್ರಿ ಬಂತಲ್ಲ. ಚಳಿಗಾಲ ಶಿವಶಿವಾ ಎಂದು ಹೋಗಿ ಬಿಡುತ್ತದೆ ಎಂಬ ವಾಡಿಕೆ ಮಾತು ಬಲು ಪ್ರಸಿದ್ಧ. ಇಂತಹ ಚಳಿ ದಿನ ಕಳೆದು ಸೆಕೆಗಾಲ ಆರಂಭದ ಋತು ಸಂಧಿಯ ಸಂದರ್ಭ. ಭೂಮಿ ಮತ್ತು ದೇಹದಲ್ಲಿ ನಾನಾ ಬದಲಾವಣೆಗಳ ಪರ್ವ. ಅಂತಹ ಸಂದರ್ಭಗಳಲ್ಲಿ ಹೊಸ ಸಮಸ್ಯೆಗಳು ದಾಂಗುಡಿಯಿಡುವವು. ಮೂತ್ರ ಎಂಬುದು ನಮ್ಮ ದೇಹದಿಂದ ಹೊರಹೋಗಬೇಕಾದ 'ಮಲ'. ಅದಕ್ಕೆ ಸಂಬಂಧಿಸಿದಂತೆ ಸಮಸ್ಯೆ ಕಾಡುವವು. ತಡೆ ಮತ್ತು ಪರಿಹಾರದ ಬಗೆಗೆ ಆಯುರ್ವೇದದ ಉಪಚಾರಗಳತ್ತ ಇರಲಿ ನಮ್ಮ ಚಿತ್ತ.

• ಡಾ.ಸತ್ಯನಾರಾಯಣ ಭಟ್ ಪಿ.

ಸುಶ್ರುತ ಸಂಹಿತೆಯ ಕಾಲಘಟ್ಟ ಕನಿಷ್ಠ ಐದು ಸಾವಿರ ವರ್ಷ ಪೂರ್ವದ್ದು ಎಂದಿಟ್ಟುಕೊಳ್ಳಿರಿ. ಕಾಶಿಯಲ್ಲೊಂದು ವೈದ್ಯಕೀಯ ವಿಶ್ವ ವಿದ್ಯಾಲಯ. ಅದರ ಕುಲಪತಿ ದಿವೋದಾಸ ಧನ್ವಂತರಿ. ಕಾಶೀರಾಜನೀತ. ಅವನ ಶಿಷ್ಯಗಣದ ಪೈಕಿ ದೊಡ್ಡ ಹೆಸರು ಸುಶ್ರುತನದು. ಗುರುಗಳು ಹೇಳಿದ ಸಕಲ ಸಂಗತಿಗಳನ್ನು ಈತನು ಸಂಕಲನಗೊಳಿಸಿದ ಸಂಹಿತೆ ಸುಶ್ರುತ ಸಂಹಿತೆ. ಗುರು ಶಿಷ್ಯರ ಸಂಭಾಷಣೆ ರೂಪದ ಸುಂದರ ಮತ್ತು ಸರಳ ಭಾಷೆಯ ಸಂಸ್ಕೃತ ಗ್ರಂಥ. ಶರೀರದ ಪ್ರತಿ ಒಂದು ಅಂಗ, ಪ್ರತ್ಯಂಗಗಳನ್ನು ಸಿಗಿ ಸಿಗಿದು ಪೂರ್ಣ ವಿವರ ನೀಡುವ ಮತ್ತು ಅಂಥ ಮೂಲೆ ಮೂಲೆಗಳಲ್ಲಿ ಒದಗುವ ಕಾಯಿಲೆಗಳ ನಿಖರ ಮಾಹಿತಿ ಸಂಹಿತೆಯ ಹೂರಣ.

ಮೂತ್ರ ಉತ್ಪತ್ತಿ, ಅದರ ಹಿಂದಿರುವ ಕಾರಣ, ಅದು ಏಕೆ ಮತ್ತು ಹೇಗೆ ದೇಹದಿಂದ ಹೊರ ಮುಖವಾಗಿ ಹರಿಯುವ ವಿಧಾನದ ಅನಿವಾರ್ಯ ಸಂಗತಿಗಳ ಸ್ಪಷ್ಟ ವಿವರದ ಒಂದು ನಿದರ್ಶನ ಓದಿರಿ. 'ಸಾಗರಂ ಸರಿತಾಃ ಇವ', ಎಂದರೆ ಮಳೆನೀರು ಕಿರುಕಣಿವೆಗಳಲ್ಲಿ ಸಂಗ್ರಹ. ಅನಂತರ ಕೊಂಚ ಹಿರಿಕಾಲುವೆ ಗುಂಟ ಅದರ ಹರಿವು. ಹಳ್ಳಗಳತ್ತ ಅದರ ತಿರುವು. ಕೊನೆಗೊಮ್ಮೆ ನದಿಯಾಗಿ ಅದು ಸಮುದ್ರ ಸೇರುವ ಉಪಮೆ! ಒಂದು ಸಂಗತಿ ಇಲ್ಲಿ ಮನದಟ್ಟು ಮಾಡಿಕೊಳ್ಳಿರಿ. ಕಾಶಿಯ ಗಂಗೆಯ ತಟದ ರಾಜ ದಿವೋದಾಸ ಧನ್ವಂತರಿ ಸಮುದ್ರ ಕಾಣಲು ಅದೆಷ್ಟು ಯೋಜನ ಪಯಣಿಸಬೇಕು ಲೆಕ್ಕ ಹಾಕಿರಿ. ಅಂತಹ ಸಮಸ್ತ ಸಂಗತಿಯ ಹಿನ್ನೆಲೆಯಲ್ಲಿ ಬರೆದಿರಿಸಿದ ಸಂಹಿತೆಯ ಪ್ರಗಲ್ಭ ಪ್ರಖರ ಪಾಂಡಿತ್ಯದ ಬುನಾದಿಯನ್ನೂ ತಿಳಿಯಿರಿ.

'ವೃಕ್ಕ' ಎಂದರೆ ಕಿಡ್ನಿ. ಅದರೊಳಗೆ ತಿರುಗುಮುರುಗಾಗಿ ಇಟ್ಟ ಆಲಿಗೆ(ಫನೆಲ್)ಗಳು ಹಲವು. ಇದಕ್ಕೆ 'ಕೇಲಿಕ್ಸ್ ' ಎಂಬ ಹೆಸರು. ದೇಹದ ನಾನಾ ಮೂಲೆಯ ರಕ್ತನಾಳಗಳ ಸುಸಂಬದ್ಧ ಜೋಡಣೆ ಎರಡು ಕಿಡ್ನಿಗಳ ರಚನೆಯ ಹಿಂದಿರುವ ಕಸರತ್ತು. ಕೂದಲೆಳೆಗಿಂತ ಕಿರಿ ಹಿರಿ ಲೋಮನಾಳಗಳು ಎರಡೂ ಕಿಡ್ನಿಯೆಂಬ ಮೂತ್ರಾಗಾರ ಕಾರ್ಖಾನೆಗೆ ಅಹರ್ನಿಶಿ ಮಲಿನ ರಕ್ತದ ಹರಿವಿಗೆ ಕಾರಣ. ದೇಹದ ಅನಗತ್ಯ ವಸ್ತುಗಳು ಆಲಿಕೆಯ ಮೂಲಕ ಸೋಸಿದಾಗ ಕೆಳಗಡೆ ಪ್ರವಹಿಸುತ್ತವೆ, ಅಲ್ಲಿ ತ್ಯಾಜ್ಯ ವಿಂಗಡಣೆ. ಪರಿಶುದ್ಧ ರಕ್ತ ಮತ್ತೆ ಹೃದಯಾಭಿಮುಖ ಚಲನೆ. ಶೇಖರಿತ ತ್ಯಾಜ್ಯ ಸಾಗರದತ್ತ ಹರಿಯುವ ಹಿರಿ ಕಿರಿ ನೀರ್ಗಾಲುವೆಗಳಂತೆ ಎರಡು ಸಣ್ಣ ನಲಿಕೆಗಳ ಮೂಲಕ ಬಸ್ತಿ ಎಂಬ ಬ್ಲಾಡರ್ (ಬಲೂನಿನಂತಹದು) ಸೇರುತ್ತದೆ. ಮೂತ್ರ ತಯಾರಾಯಿತು. ಅಲ್ಲಿ ಸಂವೇದನೆ ಶುರು. ಹೊರ ಹಾಕುವ ಜವಾಬುದಾರಿ ನಮ್ಮದು. ಮೂತ್ರ ಕಟ್ಟುವ, ಮುಂದೆ ದೂಡುವ ಮೂರ್ಖತನದಿಂದ 'ಅಶ್ಮರೀ' ಅಂದರೆ ಕಲ್ಲು ತಯಾರಿ. ಅವು ಹೊರಗಿನಿಂದ ಬಂದುದಲ್ಲ. ತ್ಯಾಜ್ಯದ ತುಣುಕುಗಳು ಒಟ್ಟಾಗಿ ಹಿಟ್ಟು ರೂಪದವು. ಕ್ರಮೇಣ ಅದು ಗಟ್ಟಿಯಾದೀತು. ಕೊನೆಗೆ ಅತೀವ ವೇದನೆ. ಯೂರೇಟು, ಒಕ್ಸಾಲೇಟು, ಫಾಸ್ಫೇಟ್ ಎಂಬಿತ್ಯಾದಿ ರಾಸಾಯನಿಕಗಳವು. ಟೊಮೆಟೊ ನಿರಂತರ ತಿಂದರೆ ಮೂತ್ರಾಶಯದ ಕಲ್ಲು ಬೆಳೆ ವಿಪುಲ. ಅದರಿಂದ ದೂರವಿರಿ. ಧಾರಾಳ ದ್ರವಾಹಾರ ಬಳಸಿರಿ. ಕಡು ಬೇಸಿಗೆಗೆ ಕಲ್ಲಂಗಡಿ ತಿನ್ನುವ ಮಾರ್ಗ ಒಳಿತಲ್ಲ. ಸಿಟ್ರಸ್ ಹಣ್ಣುಗಳ ಪಾನಕ, ಬೇಲದ ಮತ್ತು ಕಾಶಿ ಬಿಲ್ಪತ್ರೆ ಪಾನಕ ಅತ್ಯುತ್ತಮ. ಕೃತಕ ಗೊಬ್ಬರದ ಬಳಕೆಯ ಕಲ್ಲಂಗಡಿ, ಕರಬೂಜದ ಬಗ್ಗೆ ಕೊಂಚ ಎಚ್ಚರವಿರಿ.

ಬಾರ್ಲಿ ನೀರಿನ ಮತ್ತು ಎಳನೀರಿನ ಸೇವನೆಯ ಉಪಾಯ ಉತ್ತಮ. ಮತ್ತೆ ಎಳನೀರಿನ ಬೆಳೆಗೆ ಯದ್ವಾ ತದ್ವಾ ರಾಸಾಯನಿಕಗಳ ಒಳಸುರಿ ಬಗ್ಗೆ ಎಚ್ಚರವಿರಲಿ. ಬಾಟಲೀಕರಿಸಿದ ರ್‍ವೋ ನೀರಾಗಲೀ, ಉಳಿದ ಕೃತಕ ಪೇಯಗಳಾಗಲೀ ಖಂಡಿತ ಉಪಕಾರ ಮಾಡದು;ದೂರವಿರಿ. ಕಾದಾರಿದ ನೀರು, ತಾಜಾ ಹಣ್ಣಿನ ರಸ, ಕಬ್ಬಿನ ಹಾಲು ಕುಡಿದರೆ ಮೂತ್ರ ಸೋಂಕು ತಡೆಗೆ ವಿರಾಮ. ನೆನೆದ ಎಳ್ಳು ಮತ್ತು ಹೆಸರು ಕಾಳು ಪಾನಕ ಕುಡಿದಾಗ ಮೂತ್ರಾಂಗಗಳಿಗೆ ಉಪಕಾರ. ಬಿಸಿಲ ಬೇಗೆಗೆ ತಡೆ. ಮೊಸರು ಬೇಡ. ಹಾಲಿನ ಉತ್ಪನ್ನಗಳ ಬಗ್ಗೆ ಧಾರಾಳತನ ಉತ್ತಮ. ಅಚ್ಛ ಸ್ನೇಹ ಎಂದರೆ ಬೆಣ್ಣೆ ಮತ್ತು ತುಪ್ಪದ ಬಳಕೆ. ಬಿಸಿನೀರಿನ ಸಂಗಡ ಅದನ್ನು ಸೇವಿಸಿರಿ. ಮಜ್ಜಿಗೆಯ ಧಾರಾಳ ಬಳಕೆ, ಹಸಿ ತೆಂಗಿನಕಾಯಿ ಹಾಲು ಕುಡಿದರೆ ತಂಪು. ಮಲ ಮತ್ತು ಮೂತ್ರ ಸ್ರಾವಕ್ಕೆ ಸರಾಗ. ಉಪ್ಪಿನಂಶ ಕಡಿಮೆ ಬಳಸಿರಿ. ಖಾರವಂತೂ ಕೇವಲ ರುಚಿಗೆ ಮಾತ್ರ ಸಾಕು. ತಂಬಾಕು ಮದ್ಯದ ಚಟದಿಂದ ಬಿಸಿಲುಗಾಲದಲ್ಲಿ ಖಂಡಿತ ದೂರವಿರಿ. ಹಗಲು ನಿದ್ದೆಯಿಂದ ನಿಮಗೆ ವಿಶ್ರಾಂತಿ ದಕ್ಕೀತು. ಒಳಾಂಗಗಳ ಸೋಮಾರಿತನದಿಂದ ಕಫ ಹೆಚ್ಚಿ ಮೂತ್ರಾಂಗ ಬಳಲುವ ಅಪಾಯವಿದೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

38) **10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ ಎಷ್ಟು?**

ಪರಿಹಾರ:– (.......ಹಿಂದಿನ ಸಂಚಿಕೆಯಿಂದ)

ಕೊನೆಯ ಪದ (l)= 248

$$\text{Then } nth \text{ term} = l$$

$$a+(n-1)d = 248$$
$$12+(n-1)(4) = 248$$
$$(n-1)4 = 248-12$$
$$(n-1)4 = 236$$
$$(n-1) = \frac{236}{4}$$
$$(n-1) = 59$$
$$n = 59+1 = 60$$

10 ಮತ್ತು 250ರ ನಡುವಿನ 4ರ ಗುಣಕಗಳ ಸಂಖ್ಯೆ = 60

39) **ಚಿತ್ರದಲ್ಲಿ ಕೊಟ್ಟಿರುವ ನಕ್ಷೆಯ ಸಹಾಯದಿಂದ P ಮತ್ತು Q ಬಿಂದುಗಳ ನಿರ್ದೇಶಾಂಕಗಳನ್ನು ಕಂಡುಹಿಡಿದು PQನ ಉದ್ದವನ್ನು ದೂರ ಸೂತ್ರ ಉಪಯೋಗಿಸಿ ಕಂಡುಹಿಡಿಯಿರಿ**



ಉತ್ತರ

P(1, 1) ಮತ್ತು Q(5, 4)

$$PQ = \sqrt{(x_2-x_1)^2+(y_2-y_1)^2}$$
$$PQ = \sqrt{(5-1)^2+(4-1)^2}$$
$$PQ = \sqrt{4^2+3^2}$$
$$PQ = \sqrt{16+9}$$
$$PQ = \sqrt{25}$$

PQ = 5 ಮಾನಗಳು

40) ಚಿತ್ರದಲ್ಲಿ $AB \parallel PQ$ ಮತ್ತು $AC \parallel PR$ ಆಗುವಂತೆ A, B ಮತ್ತು C ಗಳು ಕ್ರಮವಾಗಿ OP, OQ ಮತ್ತು ORಗಳ ಮೇಲಿನ ಬಿಂದುಗಳು. ಆದರೆ $BC \parallel QR$ ಎಂದು ತೋರಿಸಿ



ಪರಿಹಾರ:– ΔOPQ ದಲ್ಲಿ, AB || PQ (ದತ್ತ)

ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

$$\frac{QA}{AP} = \frac{OB}{BQ} \quad \text{.................(1)}$$

ΔOPRದಲ್ಲಿ, AC || PR

ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

$$\therefore \frac{QA}{AP} = \frac{OC}{CR} \quad \text{.................(2)}$$

ಸಮೀಕರಣ 1 ಮತ್ತು 2 ರಿಂದ,

$$\frac{OB}{BQ} = \frac{OC}{CR}$$

ಮೂಲ ಸಮಾನುಪಾತತೆಯ ಪ್ರಮೇಯದಂತೆ ಕೆಳಗಿನಂತೆ ಪಡೆಯುತ್ತೇವೆ

ΔOQR ದಲ್ಲಿ, BC || QR.

41) **ಬಿರುಗಾಳಿಗೆ ಸಿಕ್ಕಿ ಒಂದು ಮರವು ಮುರಿದು ನೆಲಕ್ಕೆ ತಾಗಿದಾಗ ನೆಲದೊಂದಿಗೆ 30^0 ಕೋನವನ್ನು ಉಂಟು ಮಾಡಿದೆ. ಮತ್ತು ಮರದ ತುದಿಯು ಮರದ ಬುಡದಿಂದ 8 ಮೀ. ದೂರದಲ್ಲಿ ನೆಲಕ್ಕೆ ತಾಗಿದೆ. ಹಾಗಾದರೆ ಮುರಿದು ಬೀಳುವ ಮುನ್ನ ಮರದ ಎತ್ತರ ಎಷ್ಟಿತ್ತು ಎಂಬುದನ್ನು ಕಂಡುಹಿಡಿಯಿರಿ.**

ಪರಿಹಾರ:–

ಚಿತ್ರದಲ್ಲಿ ACಯನ್ನು ಬಿರುಗಾಳಿಗೆ ಸಿಕ್ಕಿ ಒಂದು ಮರವು ಮುರಿದು ನೆಲಕ್ಕೆ ತಾಗಿದಾಗ ಕೊಂಬೆ ಎಂದು ಭಾವಿಸೋಣ. ಕೋನ C= 30°

BC = 8 m

ಮುರಿದು ಬೀಳುವ ಮುನ್ನ ಮರದ ಎತ್ತರ = AB+AC

ಲಂಬಕೋನ ತ್ರಿಭುಜ ΔABCದಲ್ಲಿ,

(Using Cosine and tangent angles)

cos 30° = BC/AC

ನಮಗೆ ಗೊತ್ತಿರುವಂತೆ cos 30° = √3/2

√3/2 = 8/AC

AC = 16/√3 ....(1)

ಇದೇ ರೀತಿ

tan 30° = AB/BC

1/√3 = AB/8

AB = 8/√3 ....(2)

ಮುರಿದು ಬೀಳುವ ಮುನ್ನ ಮರದ ಎತ್ತರ = AB + AC

= 16/√3 + 8/√3

= 24/√3 = 8√3 m.

42) **ಕೆಳಗಿನ ಪ್ರತಿ ಸಂಖ್ಯೆಯ ಅದರ ಅವಿಭಾಜ್ಯ ಅಪವರ್ತನಗಳನ್ನು ಕಂಡುಹಿಡಿಯಿರಿ**

(1) 140 (2)156 (3)3825

ಉತ್ತರ:– 1) 140 =

2	140
2	70
5	35
7	7
	1

$= 2^2 \times 5 \times 7$

2) 156 =

2	156
2	78
3	39
13	13
	1

$= 2^2 \times 3 \times 13$

3) 3825 =

5	3825
5	765
3	153
3	51
17	12
	1

$= 3 \times 3 \times 5 \times 5 \times 17$

$= 3^2 \times 5^2 \times 17$

(ಮುಂದುವರಿಯುವುದು)

PHYSICS

REVISION: MODEL QUESTIONS

31. Using Brewster's law, to show that reflected and refracted rays are mutually perpendicular to each other at Brewster's angle.

Ans:- Brewster's law - states that when light is incident at polarizing angle at the interface of a refracting medium, the refractive index of the medium is equal to the tangent of the polarizing angle. If p is polarizing angle and μ, the refractive index of the refracting medium, then according to Brewster's law,

$$\mu = \tan p \quad \text{.......(1)}$$

When light is incident at polarizing angle, the reflected light is found to be completely plane polarized.



When light is incident at polarising angle p on a refracting medium of refractive index μ, let r be the angle of refraction. Then, according to Snell's law,

$$\mu = \frac{\sin p}{\sin r} \quad \text{..............(2)}$$

From the equations (1) and (2), we have

$$\frac{\sin p}{\sin r} = \tan p$$

$$(\text{or}) \quad \frac{\sin p}{\sin r} = \frac{\sin p}{\cos p}$$

(or) $\sin r = \cos p$ (or) $\sin r = \sin(90° - p)$

(or) $r = 90° - p$ (or) $r + p = 90°$

Now, angle of reflection i.e., $\angle NBC = p$, the angle of incidence. Since $r+p=90°$, it follows that $\angle CBD = 90°$ i.e. reflected ray BC is perpendicular to refracted ray BD.

Hence, when a ray of light is incident at polarizing angle, the reflected ray is at right angle to the refracted ray.

32. When are the resistors said to be in parallel? Obtain an expression for effective resistance of three resistors in parallel.

Ans:- (a) Two or more resistors are said to be connected in parallel if one end of a resistor is connected to one end of the other resistor and the second end of the first resistor is connected to second end of the other resistor such that the potential difference across each resistor is equal to the applied potential difference across the combination.

b) Obtain an expression for effective resistance of three resistors in parallel –

Consider three resistors of resistances R_1, R_2 and R_3 respectively connected in parallel.



Let V be the potential difference across each resistor. The current I drawn from the cell divides into three parts(i.e., I_1, I_2 and I_3) at junction point A. Let current I_1, I_2 and I_3 flow through the resistors R_1, R_2 and R_3 respectively,

Then $I = I_1 + I_2 + I_3$

$$\text{Here } I = \frac{V}{R_1}, I_2 = \frac{V}{R_2} \text{ and } I_3 = \frac{V}{R_3}$$

$$\therefore I = \frac{V}{R_1}+\frac{V}{R_2}+\frac{V}{R_3} = V\left(\frac{1}{R_1}+\frac{1}{R_2}+\frac{1}{R_3}\right)$$

If R_P is the effective or equivalent resistance of the parallel combination, then

$$I = \frac{V}{R_P}$$

$$\text{Hence eqn.(ii) becomes } \frac{V}{R_P} = V\left(\frac{1}{R_1}+\frac{1}{R_2}+\frac{1}{R_3}\right)$$

$$\therefore \frac{1}{R_P} = \frac{1}{R_1}+\frac{1}{R_2}+\frac{1}{R_3}$$

32. Derive an expression for impedance and current in LCR series circuit using phasor diagram.

Ans:- An expression for impedance and current in LCR series circuit using phasor diagram.

L, C AND R IN SERIES ACROSS AN ALTERNATING SUPPLY

A circuit containing inductor of pure inductance (L), capacitor of pure capacitance (C) and resistor of resistance, (R), all jointed in series across an a.c. supply, is shown in figure (a). Let V be the r.m.s. value of the applied alternating e.m.f. to the LCR circuit.



Phasor-diagram Solution of Series LCR circuit

Let I be the r.m.s. value of current flowing through all the circuit elements.

The potential difference across inductor, $V_L = I X_L$

This potential difference or voltage leads current I by an angle of $\pi/2$.

This potential difference across C, $V_C = I X_C$

This potential difference or voltage lags behind the current I by an angle of $\pi/2$.

This potential difference across R, $V_R = IR$

This potential difference or voltage is in phase with the current).

Since V_R and I are in phase, so V_R is represented by OA in the direction of I fig.



(Contd)

ಖಾಲಿ ಟ್ರಂಕ್ ಪ್ರದರ್ಶಿಸಿದ ಸಂಸದ

ಮೆಟ್ರೊ ದರ ಏರಿಕೆ ನಿರ್ಧಾರ ವಿರೋಧಿಸಿದ ತೇಜಸ್ವಿ ಸೂರ್ಯ, ಶಾಸಕ ರಾಮಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಮ್ಮ ಮೆಟ್ರೊ ಪ್ರಯಾಣ ದರ ಏರಿಕೆ ನಿರ್ಧಾರ ಸಂಬಂಧ ರಾಜ್ಯ ಸರ್ಕಾರದ ವಿರುದ್ಧ ಪ್ರತಿಭಟನೆಗೆ ಮುಂದಾಗಿದ್ದ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ಹಾಗೂ ಜಯನಗರ ಕ್ಷೇತ್ರದ ಶಾಸಕ ಸಿ.ಕೆ. ರಾಮಮೂರ್ತಿ ಅವರನ್ನು ಪೊಲೀಸರು ವಶಕ್ಕೆ ಪಡೆದು, ಬಳಿಕ ಬಿಡುಗಡೆ ಮಾಡಿದರು.

ಮೆಟ್ರೊ ಪ್ರಯಾಣ ದರ ಏರಿಕೆ ವಿರೋಧಿಸಿ ತೇಜಸ್ವಿ ಸೂರ್ಯ ಅವರಿಗೆ ಪ್ರತಿಭಟನೆ ಮಾಡದಂತೆ ಪೊಲೀಸರು ಭಾನುವಾರ ನೋಟಿಸ್ ನೀಡಿದ್ದರು. ಆದರೂ ಸೋಮವಾರ ಬೆಳಿಗ್ಗೆ ಆರ್.ವಿ.ರಸ್ತೆ ನಿಲ್ದಾಣದಲ್ಲಿ ಖಾಲಿ ಟ್ರಂಕ್ ಹಿಡಿದು ಸರ್ಕಾರದ ಬೊಕ್ಕಸ ಖಾಲಿಯಾಗಿದೆ ಎಂದು ಟೀಕಿಸಿದರು.

ತೇಜಸ್ವಿ ಅವರನ್ನು ತಡೆಯಲು ಪೊಲೀಸರು ಮುಂದಾದಾಗ, 'ನಾನು ಪ್ರತಿಭಟನೆ ನಡೆಸುತ್ತಿಲ್ಲ. ಖಾಲಿ ಟ್ರಂಕ್ ಹಿಡಿದು ನಿಂತಿದ್ದೇನೆ. ನನ್ನನ್ನು ಯಾರೂ ತಡೆಯಬಾರದು. ಸಂಸತ್ ಅಧಿವೇಶನ ನಡೆಯುತ್ತಿದೆ. ಕಾನೂನು ತಿಳಿದುಕೊಂಡು ವಶಕ್ಕೆ ಪಡೆದುಕೊಳ್ಳಬೇಕು' ಎಂದು ಸೂಚಿಸಿದರು.

ಶಾಸಕ ರಾಮಮೂರ್ತಿ ಮಾತನಾಡಿ, 'ಮೆಟ್ರೊ ಪ್ರಯಾಣ ದರ ಏರಿಕೆಗೆ ತಾತ್ಕಾಲಿಕ ತಡೆ ಆಗಿದೆ. ದರ ಏರಿಕೆ ನಿರ್ಧಾರ ಕೂಡಲೇ ಕೈ ಬಿಡಬೇಕು. ಈಗಿರುವ ದರವನ್ನೂ ಕಡಿಮೆ ಮಾಡಬೇಕು. ರಾಜ್ಯ ಸರ್ಕಾರ ಸುಳ್ಳು ಹೇಳುತ್ತಿದೆ' ಎಂದು ಅಸಮಾಧಾನ ಹೊರಹಾಕಿದರು.

ಧ್ವನಿ ಅಡಗಿಸಲು ಸಾಧ್ಯವಿಲ್ಲ: 'ಕಾಂಗ್ರೆಸ್ ಸರ್ಕಾರದ 'ಖಾಲಿ ಪೆಟ್ಟಿಗೆ' ಅಸಲಿಯತ್ತನ್ನು ಮತ್ತು ಸತ್ಯವನ್ನು ಬಯಲಿಗೆಳೆದಿದ್ದಕ್ಕಾಗಿ ನನ್ನನ್ನು ಬಂಧಿಸಿರುವುದು ನಾಚಿಕೆಗೇಡಿನ ಸಂಗತಿ' ಎಂದು ತೇಜಸ್ವಿ ಸೂರ್ಯ 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ.

'ಕರ್ನಾಟಕದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದೆ. ಮೆಟ್ರೊ ಪ್ರಯಾಣ ದರ, ಬೆಲೆ ಏರಿಕೆಯ ಮೂಲಕ ಜನಸಾಮಾನ್ಯರು ಇದರ ಬೆಲೆ ತೆರುತ್ತಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಬಜೆಟ್‌ನಲ್ಲಿ 'ಶ್ವೇತಪತ್ರ' ಹೊರಡಿಸಬೇಕು' ಎಂದು ಆಗ್ರಹಿಸಿದ್ದಾರೆ.

ತೇಜಸ್ವಿ ಸೂರ್ಯ, ರಾಮಮೂರ್ತಿ ಅವರನ್ನು ವಶಕ್ಕೆ ಪಡೆದಿರುವ ಕಾಂಗ್ರೆಸ್ ಸರ್ಕಾರದ ಕ್ರಮ ಪ್ರಜಾಪ್ರಭುತ್ವದ ಕರಾಳ ಅಣಕ
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಖಾಲಿ ಟ್ರಂಕಿನ ರಾಜ್ಯ ಸರ್ಕಾರ, ಟ್ರಂಕ್ ತುಂಬಿಸುವ ಕೆಲಸ ಮಾಡಬೇಕು. ಅದು ಬಿಟ್ಟು ತೇಜಸ್ವಿ ಸೂರ್ಯ ಅವರನ್ನು ಬಂಧಿಸಿದ್ದು ಮೂರ್ಖತನ
ಅರವಿಂದ ಬೆಲ್ಲದ, ವಿಧಾನಸಭೆ ವಿರೋಧ ಪಕ್ಷದ ಉಪನಾಯಕ

'ನಮ್ಮ ಮೆಟ್ರೊ' ಪ್ರಯಾಣ ದರ ಏರಿಕೆ ನಿರ್ಧಾರ ವಿರೋಧಿಸಿ ತೇಜಸ್ವಿ ಸೂರ್ಯ ಸೋಮವಾರ ಆರ್.ವಿ.ರಸ್ತೆ ನಿಲ್ದಾಣದಲ್ಲಿ ಖಾಲಿ ಟ್ರಂಕ್ ಹಿಡಿದು ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸಿದರು

ದರ ಏರಿಸಿದ್ದು ಕೇಂದ್ರ: ಸಿ.ಎಂ

ಹರಿಹರ (ದಾವಣಗೆರೆ): 'ನಮ್ಮ ಮೆಟ್ರೊ' ದರ ಏರಿಕೆ ಮಾಡುವ ತೀರ್ಮಾನವನ್ನು ಕೇಂದ್ರ ಸರ್ಕಾರ ನಿಯೋಜಿಸಿದ 'ಬಿಎಂಆರ್‌ಸಿಎಲ್' ಅಧ್ಯಕ್ಷರು ಕೈಗೊಳ್ಳುತ್ತಾರೆ. ದರ ಏರಿಕೆ ಮಾಡುವಂತೆ ರಾಜ್ಯ ಸರ್ಕಾರ ಯಾವುದೇ ಶಿಫಾರಸು ಮಾಡಿರಲಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

'ಮೆಟ್ರೊ ದರ ಏರಿಕೆಯಲ್ಲಿ ರಾಜ್ಯ ಸರ್ಕಾರದ ಪಾತ್ರವಿಲ್ಲ. ಸಂಸದ ತೇಜಸ್ವಿ ಸೂರ್ಯ ಮಾಡಿದ ಆರೋಪಗಳಲ್ಲಿ ಹುರುಳಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

'ದರ ಏರಿಕೆ ತಡೆದದ್ದು ರಾಜ್ಯ ಸರ್ಕಾರ'

'ಈ ಹಂತದಲ್ಲಿ ಮೆಟ್ರೊ ದರ ಏರಿಕೆಯನ್ನು ತಡೆಹಿಡಿಯಿರಿ ಎಂದು ಹೇಳಲು ಕೇಂದ್ರ ಸರ್ಕಾರಕ್ಕೆ ಯಾವುದೇ ಅಧಿಕಾರವಿಲ್ಲ. ದರ ಏರಿಕೆ ತಡೆಹಿಡಿಯಿರಿ ಎಂದು ಸೂಚಿಸಿದ್ದು ನಮ್ಮ ಸರ್ಕಾರ' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದರ ಏರಿಕೆ ತಡೆ ಹಿಡಿಯಿರಿ ಎಂದು ಕೇಂದ್ರ ಸರ್ಕಾರದವರು ಪತ್ರ ಬರೆದಿರಬಹುದು. ಆದರೆ ಈ ರೀತಿ ಮಾಡಲು ಕಾನೂನಿನಲ್ಲಿ ಅವಕಾಶವಿಲ್ಲ. ಅವರು ಯಾವ ಕಾನೂನಿನ ಅಡಿ ಪತ್ರ ಬರೆದಿದ್ದಾರೆ? ಕೇಂದ್ರದ ಆದೇಶದಂತೆ ದರ ಪರಿಷ್ಕರಣೆ ಮಾಡಬೇಕು ಎಂದಾದರೆ ಅದಕ್ಕೆ ಹೊಸದಾಗಿ ದರ ನಿಗದಿ ಸಮಿತಿಯನ್ನು ರಚಿಸಬೇಕು. ಯಾರೋ ತಾವು ಪತ್ರ ಬರೆದಿದ್ದಕ್ಕೆ ದರ ಏರಿಕೆಗೆ ತಡೆಬಿತ್ತು ಎಂದರೆ ನಂಬಲಾಗದು' ಎಂದರು.

ಏರಿಕೆ ಒಪ್ಪಲ್ಲ ಎಂದು ಪತ್ರ ಬರೆಯಿರಿ: ಅಶೋಕ

ಕೇಂದ್ರ ಸರ್ಕಾರವೇ ಮೆಟ್ರೊ ದರ ಏರಿಕೆ ಮಾಡುತ್ತದೆ ಎಂದು ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮುಂದಿನ ಎರಡು ವರ್ಷ ಪ್ರಯಾಣ ದರ ಏರಿಕೆ ಒಪ್ಪಲು ಸಾಧ್ಯವೇ ಇಲ್ಲ ಎಂದು ಕೇಂದ್ರಕ್ಕೆ ಪತ್ರ ಬರೆಯಲಿ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಸವಾಲು ಹಾಕಿದ್ದಾರೆ.

ಮೆಟ್ರೊದಲ್ಲಿ ಶೇ 87 ರಷ್ಟು ಪಾಲು ರಾಜ್ಯ ಸರ್ಕಾರದ್ದೇ ಎಂದು ಹೇಳಿಕೊಳ್ಳುವ ಕಾಂಗ್ರೆಸ್ ಪ್ರಯಾಣ ದರ ಏರಿಕೆ ಮಾಡಿದ್ದು ಮಾತ್ರ ಕೇಂದ್ರ ಸರ್ಕಾರ ಎಂದು ಗೂಬೆ ಕೂರಿಸುತ್ತದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

ಬಿಎಂಆರ್‌ಸಿಎಲ್ ನಿಗಮದ ವ್ಯವಸ್ಥಾಪಕ ನಿರ್ದೇಶಕರನ್ನು ರಾಜ್ಯ ಸರ್ಕಾರದಿಂದಲೇ ನೇಮಿಸಲಾಗಿದೆ. ಸಾವಿರಾರು ಕೋಟಿ ಟೆಂಡರ್ ಅನ್ನು ರಾಜ್ಯ ಸರ್ಕಾರವೇ ಕರೆಯುತ್ತದೆ. ರಾಜ್ಯ ಆರ್ಥಿಕ ಇಲಾಖೆ ಮತ್ತು ನಗರಾಭಿವೃದ್ಧಿ ಇಲಾಖೆಗಳ ಕಾರ್ಯದರ್ಶಿಗಳು ಟೆಂಡರ್ ಅಂತಿಮಗೊಳಿಸುತ್ತಾರೆ. ಇಷ್ಟೆಲ್ಲ ಅಧಿಕಾರ ಹೊಂದಿರುವ ರಾಜ್ಯ ಸರ್ಕಾರ ದರ ಏರಿಕೆಯನ್ನೂ ಇವರೇ ಮಾಡಿದ್ದಾರೆ. ಕೇಂದ್ರ ಸರ್ಕಾರ ಆದೇಶ ಮಾಡುವುದಾದರೆ ದೇಶದ ಇತರ ರಾಜ್ಯಗಳಲ್ಲೂ ಮೆಟ್ರೊ ಪ್ರಯಾಣ ದರ ಏರಿಕೆ ಆಗಬೇಕಾಗುತ್ತದೆ. ಅಲ್ಲಿ ಏಕೆ ಆಗಿಲ್ಲ ಎಂದು ಪ್ರಶ್ನಿಸಿದರು.

'ಡಿಕೆಶಿ ಬೆಂಬಲಕ್ಕೆ 90 ಶಾಸಕರು'

ನಾಯಕತ್ವ ಬದಲಾವಣೆಗೆ ಶಾಸಕ ಇಕ್ಬಾಲ್ ಹುಸೇನ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಿದ್ದರಾಮಯ್ಯ ಅವರು ಡಿ.ಕೆ.ಶಿವಕುಮಾರ್ ಅವರಿಗೆ ಅವಕಾಶ ಮಾಡಿಕೊಡಬೇಕು. ಈ ಅವಧಿಯಲ್ಲೇ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಬೇಕು ಎಂದು 80–90 ಶಾಸಕರು ಬಯಸಿದ್ದೇವೆ' ಎಂದು ಶಾಸಕ ಇಕ್ಬಾಲ್ ಹುಸೇನ್ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ದೇವರಾಜ ಅರಸು ಬಳಿಕ ದಲಿತರ ಪರವಾಗಿ, ಹಿಂದುಳಿದ ಪರವಾಗಿ ಸಿದ್ದರಾಮಯ್ಯ ಅವರು ಸೇವೆ ಮಾಡಿದ್ದಾರೆ. ಎರಡೂವರೆ ವರ್ಷ ಅವರ ಮೇಲೆ ಸಾಕಷ್ಟು ಶಾಸಕರು ಒಬ್ಬ ನಿಷ್ಠಾವಂತ, ಪಕ್ಷನಿಷ್ಠ ವ್ಯಕ್ತಿ ಬರಬೇಕೆಂದು ಡಿ.ಕೆ.ಶಿವಕುಮಾರ್ ಪರವಾಗಿ ಮಾತನಾಡಿದ್ದೇವೆ' ಎಂದರು.

'ಅವರಿಗೆ ಅವಕಾಶ ಕೊಡಬೇಕು ಎಂದು 80ರಿಂದ 90 ಶಾಸಕರು ಅಭಿಪ್ರಾಯ ಪಡುತ್ತಿದ್ದೇವೆ. ಸಾಮಾಜಿಕ ನ್ಯಾಯ ಎಂದು ಹೇಳುತ್ತೀರಿ. ಸಾಮಾಜಿಕ ನ್ಯಾಯದಂತೆ ನಡೆದುಕೊಳ್ಳಬೇಕು' ಎಂದು ಒತ್ತಾಯಿಸಿದರು.

ಯತೀಂದ್ರ ಸಿದ್ದರಾಮಯ್ಯ ಹೇಳಿಕೆ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, 'ನಮ್ಮ ಪಕ್ಷ ಶಿಸ್ತಿನ ಪಕ್ಷ. ತಂದೆ ಪರವಾಗಿ ಈ ರೀತಿ ಪದೇ ಪದೇ ಮಾತನಾಡುವುದು ಅಸಹ್ಯ' ಎಂದು ಅವರು ಟೀಕಿಸಿದರು.

ಸಿ.ಎಂ ಬದಲಾವಣೆ ವಿಷಯಕ್ಕಿಂತ ಬದುಕಿನ ವಿಷಯ ಹೆಚ್ಚು ಚರ್ಚೆ ಆಗಬೇಕು. ಸಿ.ಎಂ ವಿಷಯದ ಮಿತಿಮೀರಿ ಚರ್ಚೆ ಒಳ್ಳೆಯದಲ್ಲ
ಕೃಷ್ಣ ಬೈರೇಗೌಡ, ಕಂದಾಯ ಸಚಿವ

ಸರ್ಕಾರ ಬಂದು ಮೂರು ವರ್ಷ ಆಗಿದೆ. ಬದಲಾವಣೆ ಒಳ್ಳೆಯದು. ಸಂಪುಟ ವಿಸ್ತರಣೆ ಆಗಲೇಬೇಕು. ಹೊಸಬರಿಗೆ ಅವಕಾಶ ಸಿಗಬೇಕು
ರಿಜ್ವಾನ್ ಅರ್ಷದ್, ಶಾಸಕ

ಡಿಸಿಎಂ ಇಂದು ದೆಹಲಿಗೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ನಡೆಯಲಿದ್ದ ತಮ್ಮ ಇಲಾಖೆಯ ಬಜೆಟ್ ಪೂರ್ವಭಾವಿ ಸಭೆಗೆ ಹಾಜರಾಗದೇ ಡಿಸಿಎಂ ಡಿ.ಕೆ.ಶಿವಕುಮಾರ್ ಮಂಗಳವಾರ ದೆಹಲಿಗೆ ತೆರಳಲಿದ್ದಾರೆ.

ಜಲ ಸಂಪನ್ಮೂಲ ಇಲಾಖೆಯ ಜತೆಗೆ ಸಿದ್ದರಾಮಯ್ಯ ಅವರ ಬಜೆಟ್ ಪೂರ್ವಭಾವಿ ಸಭೆ ಮಂಗಳವಾರ ಸಂಜೆ ನಿಗದಿಯಾಗಿದೆ. ಇಲಾಖಾ ಸಚಿವರೂ ಆಗಿರುವ ಡಿ.ಕೆ.ಶಿವಕುಮಾರ್ ಅವರು ಸಭೆಯಲ್ಲಿ ಇರಬೇಕಿತ್ತು.

ವಿಧಾನಸೌಧದ ಬಳಿ ಸುದ್ದಿಗಾರರ ಜತೆ ಮಾತನಾಡಿದ ಶಿವಕುಮಾರ್, 'ನನ್ನನ್ನು ದೆಹಲಿಗೆ ಕರೆದಿರುವ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡುತ್ತೇನೆ. ದೆಹಲಿ ಪ್ರವಾಸದಲ್ಲಿ ರಾಜಕಾರಣ ಜೊತೆಗೆ ಕೇಂದ್ರ ಜಲಶಕ್ತಿ ಸಚಿವರು, ಕಾನೂನು ತಜ್ಞರನ್ನು ಭೇಟಿ ಮಾಡುತ್ತಿರುವೆ' ಎಂದರು.

'ಯಾರನ್ನು ಭೇಟಿ ಮಾಡುತ್ತೇನೆ ಎಂದು ಹೇಳಲು ಆಗುವುದಿಲ್ಲ. ನಿಮಗೆ ಏಕೆ ಇಷ್ಟು ಕುತೂಹಲ. ನಾನು ಉಪಮುಖ್ಯಮಂತ್ರಿ ಅಷ್ಟೇ ಅಲ್ಲ, ಕೆಪಿಸಿಸಿ ಅಧ್ಯಕ್ಷ ಕೂಡ. ನಾನು ಕೆಪಿಸಿಸಿ ಅಧ್ಯಕ್ಷನಾಗಿ ಮಾರ್ಚ್ 10ಕ್ಕೆ 6 ವರ್ಷವಾಗುತ್ತದೆ. ನಮ್ಮ ಸಂಸದರನ್ನು, ನಾಯಕರನ್ನು ಭೇಟಿ ಮಾಡುವುದು ನನ್ನ ಕರ್ತವ್ಯ. ನಾನು ಭೇಟಿ ಮಾಡುತ್ತಾ ಇರುತ್ತೇನೆ. ಆಗ ನನ್ನ ಕಷ್ಟ, ದುಃಖ, ದುಮ್ಮಾನ, ನಿಮ್ಮ ಸಂತೋಷ, ಬಯಕೆ ಎಲ್ಲಾ ಹೇಳುತ್ತಾ ಇರುತ್ತೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'ನದಿ ಜೋಡಣೆ, ಪಂಪ್ಡ್ ಸ್ಟೋರೇಜ್ ಕೈಬಿಡಿ'

ನವದೆಹಲಿ: ಬೇಡ್ತಿ–ಅಘನಾಶಿನಿ ನದಿ ಜೋಡಣೆ ಹಾಗೂ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆಯನ್ನು ಕೈಬಿಡಬೇಕು ಎಂದು ಒತ್ತಾಯಿಸಿ ಉತ್ತರ ಕನ್ನಡದ ಜನಪ್ರತಿನಿಧಿಗಳ ಹಾಗೂ ಪರಿಸರವಾದಿಗಳ ನಿಯೋಗವು ಕೇಂದ್ರ ಸಚಿವರಿಗೆ ಸೋಮವಾರ ಮನವಿ ಸಲ್ಲಿಸಿತು.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ನೇತೃತ್ವದ ನಿಯೋಗವು ಜಲಶಕ್ತಿ ಸಚಿವ ಸಿ.ಆರ್.ಪಾಟೀಲ, ಅರಣ್ಯ ಸಚಿವ ಭೂಪೇಂದರ್ ಯಾದವ್, ಆಹಾರ ಸಚಿವ ಪ್ರಲ್ಹಾದ ಜೋಶಿ, ಬೃಹತ್ ಕೈಗಾರಿಕೆ ಸಚಿವ ಎಚ್.ಡಿ.ಕುಮಾರ ಸ್ವಾಮಿ ಅವರಿಗೆ ಮನವಿ ಮಾಡಿತು.

ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಗೇರಿ, 'ನದಿ ತಿರುವು ಯೋಜನೆಗಳಿಂದ ಜಿಲ್ಲೆಯ ಜೀವವೈವಿಧ್ಯ ಮತ್ತು ಸ್ಥಳೀಯರ ಜೀವನೋಪಾಯಕ್ಕೆ ತೊಂದರೆ ಉಂಟಾಗಲಿದೆ. ಹೀಗಾಗಿ, ಈ ಯೋಜನೆಗೆ ಅನುಮತಿ ನೀಡದಂತೆ ಒತ್ತಾಯಿಸಿದ್ದೇವೆ' ಎಂದರು.

'ಜಿಲ್ಲೆಯಲ್ಲಿ ಈಗಿರುವ ಯೋಜನೆಗಳೇ ನಮ್ಮ ಜಿಲ್ಲೆಗೆ ಭಾರವಾಗಿವೆ. ನದಿ ಜೋಡಣೆ ಯೋಜನೆಗೆ ಜಿಲ್ಲೆಯಲ್ಲಿ ತೀವ್ರ ವಿರೋಧ ಇದೆ, ನಮ್ಮ ವಿರೋಧವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿದ್ದೇವೆ. ಯೋಜನೆಯ ವಿಸ್ತೃತ ಯೋಜನಾ ವರದಿ ತಯಾರಿಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ. ಇದನ್ನು ಕೂಡಲೇ ಕೈ ಬಿಡಬೇಕು. ಜಿಲ್ಲೆಯ ಧಾರಣಾ ಶಕ್ತಿಯ ಅಧ್ಯಯನ ನಡೆಯಬೇಕು' ಎಂದು ಆಗ್ರಹಿಸಿದರು.

ನಿಯೋಗದಲ್ಲಿ ಮೀನುಗಾರಿಕೆ ಸಚಿವ ಮಾಂಕಾಳ ವೈದ್ಯ, ಕಾಂಗ್ರೆಸ್ ಶಾಸಕ ಭೀಮಣ್ಣ ನಾಯ್ಕ್, ಶಾಸಕರಾದ ಶಿವರಾಮ ಹೆಬ್ಬಾರ, ಶಾಂತಾರಾಮ ಸಿದ್ದಿ, ಪರಿಸರವಾದಿ ಅನಂತ ಹೆಗಡೆ ಅಶೀಸರ ಮತ್ತಿತರರು ಇದ್ದರು.

ರಾಯ್‌ಗೆ ಐಟಿ ಕಿರುಕುಳ ಇರಲಿಲ್ಲ: ಜೋಸೆಫ್

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕಾನ್ಫಿಡೆಂಟ್ ಗ್ರೂಪ್ ಮುಖ್ಯಸ್ಥ ಸಿ.ಜೆ.ರಾಯ್ ಅವರು ಆದಾಯ ತೆರಿಗೆ (ಐಟಿ) ಇಲಾಖೆ ಅಧಿಕಾರಿಗಳಿಂದ ಕಿರುಕುಳ ಎದುರಿಸುತ್ತಿರಲಿಲ್ಲ ಎಂದು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಟಿ.ಎ.ಜೋಸೆಫ್ ಹೇಳಿದ್ದಾರೆ.

ಕೊಚ್ಚಿಯಲ್ಲಿ ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ರಾಯ್ ಅವರಿಗೆ ಐಟಿ ಅಧಿಕಾರಿಗಳಿಂದ ಒತ್ತಡವಿತ್ತು ಎಂದು ಅವರ ಸಹೋದರ ಸಿ.ಜೆ.ಬಾಬು ಹೇಳಿದ್ದಾರೆ. ರಾಯ್ ಅವರ ನಿಧನದ ನಂತರ ಆಘಾತಕ್ಕೆ ಒಳಗಾಗಿ ಅವರು ಹೀಗೆ ಹೇಳಿರಬಹುದು. ಸತ್ಯ ಗೊತ್ತಿಲ್ಲದೆ ಯಾವುದೇ ಹೇಳಿಕೆ ನೀಡದಂತೆ ತಿಳಿಸಿದ್ದೇನೆ' ಎಂದರು.

ರಾಯ್ ಅವರ ನಿಧನಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ನೀಡದಂತೆ ಪ್ರಕರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡವು ಸೂಚನೆ ನೀಡಿದೆ ಎಂದೂ ತಿಳಿಸಿದರು.

'ಈ ಹಿಂದೆಯೂ ನಮ್ಮ ಸಂಸ್ಥೆಯ ಮೇಲೆ ದಾಳಿ ನಡೆದಿತ್ತು. ಅಧಿಕಾರಿಗಳು ಗೌರವಯುತವಾಗಿಯೇ ನಡೆದುಕೊಂಡಿದ್ದರು' ಎಂದು ತಿಳಿಸಿದರು.

ಸರ್ಕಾರದ ಜೊತೆ ಸಂಘರ್ಷ ಬೇಡ ಎಂಬುದಕ್ಕೆ, ಹೈಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿ ಹಿಂಪಡೆಯಲಾಗಿದೆ ಎಂದರು.

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರ ರವರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಬೆಂಗಳೂರು ನಗರ ಜಿಲ್ಲೆ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ,
ಬನಶಂಕರಿ, ಬೆಂಗಳೂರು–560070.
ಸಂ: ಕಾಅ/ಗ್ರಾ.ಕುನೀ&ನೈವಿ/ಬೆಂ.ನ/ತಾಂಸ/ಟೆಂಡರ್/16/2025–26 ದಿನಾಂಕ: 07.02.2026
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಟೆಂಡರ್ ಪ್ರಕಟಣೆ ನೋಟೀಸ್
2025–26 ನೇ ಸಾಲಿನ ಜೆಜೆಎಂ ಲೆಕ್ಕಶೀರ್ಷಿಕೆ ಅನುದಾನದಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಮೂಲಕ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಅನ್ನು ಕರೆಯಾಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ: 18.02.2026 ರ ಸಂಜೆ 4.00 ಗಂಟೆ**ಯವರೆಗೆ ಸಲ್ಲಿಸಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್ ಸೈಟ್ https://kppp.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಬೆಂಗಳೂರು ನಗರ, ಬೆಂಗಳೂರು
ವಾಸಾಸಂಇ/ವಾಪ್ರ/ಶಿರಡಿ ಸಾಯಿ/5539/2025–26

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಚೇರಿ (ಪಶ್ಚಿಮ)
6ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು – 560 009
ಸಂ:ಬೆಂಜಮಂ/ಪ್ರಮುಅ/ಮುಅ(ಪ)/ಅಮುಅ(ಪ)–2/ಉಮುಅ(ನಿ)–2/ತಾಂಸ(ಪ)/7833/2025–26 ದಿನಾಂಕ:09.02.2026
ಟೆಂಡರ್‌ಗಾಗಿ ಆಹ್ವಾನ – 2ನೇ ಕರೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ಬೆಂಗಳೂರು ಜಲ ಮಂಡಳಿಯು, ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಸಕಾನಿಅ(ಉಪ–2) ಉಪ–ವಿಭಾಗದ ಪೀಣ್ಯ ದಾಸರಹಳ್ಳಿ ಸೇವಾಠಾಣೆ ಪ್ರದೇಶದಡಿ ಬರುವ ಎನ್‌ಟಿಟಿಎಫ್ ರಸ್ತೆ ಅರವಿಂದ್ ಮೋಟಾರ್ಸ್ ಬಳಿಯಿರುವ 5.0 ಎಲ್‌ಎಲ್ ಓಹೆಚ್‌ಟಿಯಿಂದ ಪೀಣ್ಯ ಕೈಗಾರಿಕಾ ಪ್ರದೇಶದ ವಿವಿಧ ರಸ್ತೆಗಳಿಗೆ 350 ಮಿ.ಮೀ ವ್ಯಾಸದ ಡಿಐ ಮಾರ್ಗ ಮತ್ತು 280 ಮಿ.ಮೀ ಯಿಂದ 100ಮಿ.ಮೀ ವ್ಯಾಸದ ಹೆಚ್‌ಡಿಪಿಇ ವಿತರಣಾ ವ್ಯವಸ್ಥೆ ಜಾಲದ ಮಾರ್ಗವನ್ನು ಒದಗಿಸಿ ಅಳವಡಿಸುವ ಕಾಮಗಾರಿ.
ಟೆಂಡರ್‌ಗಿಟ್ಟ ಮೊತ್ತ: ರೂ.769.95 ಲಕ್ಷಗಳು, ಇಎಂಡಿ: ರೂ.11.55 ಲಕ್ಷಗಳು
ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ 24.02.2026ರ ಸಂಜೆ 5:00 ಗಂಟೆಯವರೆಗೆ. ಬಿಡ್‌ಗಳನ್ನು ದಿನಾಂಕ: 25.02.2026ರ ಸಂಜೆ 5:30 ಗಂಟೆಯ ನಂತರ ತೆರೆಯಲಾಗುವುದು. ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತಾದ ಮಾಹಿತಿಯನ್ನು ವೆಬ್‌ಸೈಟ್ https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.
ಸಹಿ/–
ಮುಖ್ಯ ಅಭಿಯಂತರರು (ಪಶ್ಚಿಮ)
ಡಿಐಪಿಆರ್/ಸಿಪಿ/5541/ಸಿಸಿಎಲ್/2025–26

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಘಟಪ್ರಭಾ ಎಡದಂಡೆ ಕಾಲುವೆ ವಿಭಾಗ ನಂ–2 ಜಮಖಂಡಿ,
ಸಂ: ಘ.ಎ.ದಂ.ಕಾ./ವಿ–2/ಪಿಬಿ/2025–26/1435 ದಿನಾಂಕ: 06.02.2026
ಟೆಂಡರ್ ಪ್ರಕಟಣೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕರ್ನಾಟಕ ಸರಕಾರದ / ಕೇಂದ್ರ ಸರ್ಕಾರದ ಲೋಕೋಪಯೋಗಿ ಇಲಾಖೆಯಿಂದ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕಾರ್ಯನಿರ್ವಾಹಕ ಅಭಿಯಂತರರು, ಜಿಎಲ್‌ಬಿಸಿ ವಿಭಾಗ ನಂ. 2 ಜಮಖಂಡಿ ಕಚೇರಿ ವ್ಯಾಪ್ತಿಯಲ್ಲಿ Lumpsum Turnkey / ದ್ವಿ ಲಕೋಟೆ ಪದ್ಧತಿಯಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಟೆಂಡರನ್ನು ಈ ಕೆಳಗಿನಂತೆ ಅಹ್ವಾನಿಸಲಾಗಿದೆ.
ಜಿ.ಎಸ್.ಟಿ ಹೊರತುಪಡಿಸಿ

ಕ್ರ ಸಂ	ಕಾಮಗಾರಿ ಇಂಡೆಂಟ್ ಸಂಖ್ಯೆ	ಟೆಂಡರಿಗಿಟ್ಟ ಮೊತ್ತ ರೂ. ಕೋಟಿಗಳಲ್ಲಿ.
1	KNNL/2024-25/LI/ WORK_INDENT 2875/Call-3	102.24

1) ಬಿಡ್ ಪೂರ್ವ ಭಾವಿ ಸಭೆ ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ ಜಿಎಲ್‌ಬಿಸಿ ವಿಭಾಗ ನಂ. 2 ಜಮಖಂಡಿ ದಿನಾಂಕ: 24.02.2026 ರಂದು ಬೆಳಿಗ್ಗೆ 11.00 ಘಂಟೆಗೆ. 2) ಗುತ್ತಿಗೆದಾರರ ಸ್ಪಷ್ಟೀಕರಣ ಕೇಳಲು ಕೊನೆ ದಿನಾಂಕ KPP Portal ನಲ್ಲಿ ಇರುವಂತೆ. 3) ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 12.03.2026 [17.30 ಗಂಟೆಯ ವರೆಗೆ]. 4) KPP Portal ಮುಖಾಂತರ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 16.03.2026 [11.00 ಗಂಟೆಗೆ]. 5) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯುವುದು.
ಸೂಚನೆ: ಸದರಿ ಟೆಂಡರಿಗೆ ಸಂಬಂಧಿಸಿದ ಮಾಹಿತಿಗಾಗಿ ಅಧಿಕೃತ ಜಾಲತಾಣ https://kppp.karnataka.gov.in ಯಲ್ಲಿ ವೀಕ್ಷಿಸಬಹುದಾಗಿದೆ.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು
ಘ.ಎ.ದಂ ಕಾಲುವೆ ವಿಭಾಗ ನಂ–2, ಜಮಖಂಡಿ
DIPR/BGK/RO-NO-575/KSMCA/2025-26

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
CIN-U04010KA2002SGC030438
ಅಂತಿಮ ಮರು ಕರೆ
ಶ್ರೀ ಮಂಜಪ್ಪ ಹಿರೆಯಕ್ಕನವರ್, ಕಿರಿಯ ಪವರ್‌ಮ್ಯಾನ್, ಕಾರ್ಯ ಮತ್ತು ಪಾಲನಾ ಘಟಕ–17, ಪಶ್ಚಿಮ 5ನೇ ಉಪ ವಿಭಾಗ, ವಿಧಾಸೌಧ ವಿಭಾಗ, ಬೆವಿಕಂ., ಬೆಂಗಳೂರು ರವರು ದಿನಾಂಕ: 19.01.2024 ರಿಂದ ಇಲ್ಲಿಯವರೆಗೂ ಕಂಪನಿಯ ಕೆಲಸಕ್ಕೆ ಗೈರು ಹಾಜರಾಗಿದ್ದು, ಈ ಕಛೇರಿಯ ಪತ್ರ ಸಂಖ್ಯೆ: ಕಾನಿಇಂ(ವಿ)/ವಿವಿ/ಲೆ/ಸಲೆ/ಹಿಸ(ಸಿ)/24–25/729–32 ದಿನಾಂಕ: 03.06.2024 ರಲ್ಲಿ ಅಂತಿಮ ನೋಟೀಸ್ ಅನ್ನು ನೋಂದಾಯಿತ ಅಂಚೆಯ ಮೂಲಕ ಜಾರಿಯಾಗಿದ್ದು ಕೆಲಸಕ್ಕೆ ಹಾಜರಾಗಿರುವುದಿಲ್ಲ ಮತ್ತು ಎಸ್.ಎಸ್.ಎಲ್.ಸಿ ಮೂಲ ಅಂಕ ಪಟ್ಟಿಯನ್ನು ಸಲ್ಲಿಸಿರುವುದಿಲ್ಲ.
ಆದ್ದರಿಂದ ನಿಮ್ಮ ಅನಧಿಕೃತ ಗೈರು ಹಾಜರಿಗೆ ಸಮಂಜಸವಾದ ಕಾರಣದೊಂದಿಗೆ ಮತ್ತು ಎಸ್.ಎಸ್.ಎಲ್.ಸಿ ಮೂಲ ಅಂಕ ಪಟ್ಟಿಯೊಂದಿಗೆ ಈ ಪತ್ರಿಕಾ ಪ್ರಕಟಣೆಯು ಪ್ರಕಟವಾದ ದಿನಾಂಕದಿಂದ 7 ದಿನಗಳ ಒಳಗಾಗಿ ಈ ಕೆಳಕಂಡ ಸಹಿದಾರರ ಮುಂದೆ ಸಮಕ್ಷಮ ಹಾಜರಾಗತಕ್ಕದ್ದು. ತಪ್ಪಿದಲ್ಲಿ ಈ ಪ್ರಕಟಣೆಯು ಅಂತಿಮ ಕರಯೋಲೆ ಪತ್ರವೆಂದು ಪರಿಗಣಿಸಿ ಕ.ವಿ.ಮಂಡಳಿ ನೌಕರರ (ವ.ಶಿ.ನಿ ಮತ್ತು ಮೆ) ನಿಬಂಧನೆಗಳು 1987ರ ನಿಯಮಾವಳಿಯ ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಯಾವುದೇ ಪರಿಹಾರ ನೀಡದೆ ನಿಮ್ಮನ್ನು ಕೆಲಸದಿಂದ ವಜಾಗೊಳಿಸಲಾಗುವುದು.
ಸಹಿ/–
ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ವಿಧಾನಸೌಧ ವಿಭಾಗ, ಬೆವಿಕಂ.,
ಗಾಂಧಿನಗರ, ಬೆಂಗಳೂರು–09.
ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

ನಿರ್ದೇಶಕರ ಕಛೇರಿ, ಪೌರಾಡಳಿತ ನಿರ್ದೇಶನಾಲಯ
9ನೇ ಮಹಡಿ, ವಿಶ್ವೇಶ್ವರಯ್ಯ ಟವರ್, ಡಾ॥ ಬಿ. ಆರ್ ಅಂಬೇಡ್ಕರ್ ವೀಧಿ,
ಬೆಂಗಳೂರು–560001. ದೂರವಾಣಿ: 080–22867172/22866302
ಫ್ಯಾಕ್ಸ್: 080–22863576 /22861665
ಇ–ಮೇಲ್: sedmatech@gmail.com Website: www.municipaladmn.gov.in
ಸಂಖ್ಯೆ: 1802916/DMA/TECH/MGNV/31/2025 ದಿನಾಂಕ: 09–02–2026
ಟೆಂಡರ್ ಪ್ರಕಟಣೆ
ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ (ಹಂತ–2) ಯಡಿ ಯುಐಡಿಎಫ್ ಮಾರ್ಗ ಸೂಚಿಯನ್ವಯ ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಈ ಕೆಳಕಂಡಂತೆ ಟೆಂಡರ್ ಪ್ರಕ್ರಿಯೆ ನಡೆಸಲು ಉದ್ದೇಶಿಸಲಾಗಿದೆ.

ಕ್ರ. ಸಂ.	ಕಾಮಗಾರಿ ವಿವರ	ಯೋಜನೆ ಮೊತ್ತ (ರೂ.ಲಕ್ಷಗಳಲ್ಲಿ)
1	DMA/2025-26/RD/WORK_INDENT48132 ಕಲಬುರಗಿ ಮಹಾನಗರ ಪಾಲಿಕೆ	1452.00

ಟೆಂಡರ್‌ನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪ್ರಚುರಪಡಿಸಲಾಗಿದ್ದು, ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಸೂಚಿಸಿರುವ ದಿನಾಂಕದೊಳಗೆ ಆಸಕ್ತ ಬಿಡ್‌ದಾರರು/ಏಜೆನ್ಸಿದಾರರು ಭಾಗವಹಿಸಲು ಕೋರಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ಇತರೆ ಯಾವುದೇ ಮಾಹಿತಿಯನ್ನು ಕೆ.ಪಿ.ಪಿ ಪೋರ್ಟಲ್ ಮುಖಾಂತರವೇ ಪಡೆಯುವುದು.
ಸಹಿ/– ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು
DIPR/CP/SPAN/5553/2025-26

ಕರ್ನಾಟಕ ಸರ್ಕಾರ
ಮೀನುಗಾರಿಕೆ ಇಲಾಖೆ
ಮೀನುಗಾರಿಕೆ ನಿರ್ದೇಶನಾಲಯ, 3ನೇ ಮಹಡಿ, ಪೋಡಿಯಂ ಬ್ಲಾಕ್,
ವಿಶ್ವೇಶ್ವರಯ್ಯ ಕೇಂದ್ರ, ಡಾ॥ ಬಿ.ಆರ್.ಅಂಬೇಡ್ಕರ್ ವೀಧಿ, ಬೆಂಗಳೂರು–560 001.
ದೂ : 080–2286 4681/4604, ಫ್ಯಾಕ್ಸ್: 080–2286 4619,
ಇ–ಮೇಲ್: dfkarnataka@rediffmail.com
ಸಂಖ್ಯೆ: DOF-ADMNOEST2/11/2026 ದಿನಾಂಕ: 09.02.2026
ಇ–ಟೆಂಡರ್ ಪ್ರಕಟಣೆ
2026–27ನೇ ಸಾಲಿನಲ್ಲಿ ರಾಜ್ಯ ವಲಯದ ವಿವಿಧ ಕಛೇರಿಗಳು/ಪಾಲನಾ ಕೇಂದ್ರಗಳು/ಉತ್ಪಾದನಾ ಕೇಂದ್ರಗಳಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳಾದ ಗ್ರೂಪ್ "ಡಿ", ಮೀನುಗಾರಿಕೆ ಸಹಾಯಕರು, ವಾಹನ ಚಾಲಕರು ಹಾಗೂ ಬೆರಚ್ಚುಗಾರರ ಹುದ್ದೆಗಳಿಗೆ ಅಗತ್ಯಕ್ಕನುಗುಣವಾಗಿ ತಾತ್ಕಾಲಿಕವಾಗಿ ಹೊರಗುತ್ತಿಗೆ ಮೂಲಕ ಸಿಬ್ಬಂದಿಗಳನ್ನು ನೇಮಿಸಿಕೊಳ್ಳುವ ಕುರಿತು ಅಧಿಕೃತ ಸಂಸ್ಥೆ/ಏಜೆನ್ಸಿಗಳಿಂದ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ದ್ವಿಲಕೋಟೆ (TWO COVERS SYSTEM) ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 23–02–2026 ಸಂಜೆ 5.00 ಗಂಟೆಯವರೆಗೆ.
ಸಹಿ/–
ಮೀನುಗಾರಿಕೆ ನಿರ್ದೇಶಕರು
ವಾಸಾಸಂಇ/ವಾ.ಪ್ರ/5551/ಶಿರಡಿ ಸಾಯಿ/2025–26

NMDC Limited
(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad-500028
Corporate Identity Number (CIN) - L13100TG1958GOI001674
WORKS DIVISION - CONTRACTS DEPARTMENT
E-Tender Notice (Open Tender Enquiry for Domestic Bidding)
Tender Enquiry No.: HO (Contracts)/ET Hostel/DIOM/2026/308 Dt: 10.02.2026
NMDC Limited, A "NAVARATNA" Public Sector Company under Ministry of Steel, Govt. of India, invites **online bids** through **MSTC Portal** from experienced domestic bidders for the work of **Construction of New Executive Trainee Hostel (S+5) Building at NMDC Donimalai Township, Sandur Taluk, Bellary District, Karnataka.**
The detailed NIT and Bid documents can be viewed and / or downloaded from **10.02.2026** to **09.03.2026** from following website links;
1. NMDC website - **https://nmdcportals.nmdc.co.in/nmdctender**
2. Central Public Procurement portal – **https://www.eprocure.gov.in/epublish/app** and search tender through tender enquiry number
3. MSTC Portal - portal **https://www.mstcecommerce.com/eprocn/**
For accessing the bid document from MSTC portal, bidders to visit MSTC website (use Microsoft Edge browser for compatibility) and search **Tender Event No. NMDC/Head Office/Contract/62/25-26/ET/695.**
The bidders are requested to submit their bids online through MSTC Portal. The details of submission of bid through online are given in NIT. The Bidders on regular basis are required to visit the NMDC's website/CPP Portal/ MSTC Portal for corrigendum, if any, at a future date.
For further clarification, the following can be contacted :
Senior Manager (Electrical) / Contracts, NMDC Limited, Hyderabad, Fax No. 040-23534746, Telephone No. 040-23532800, email: **contracts@nmdc.co.in**
For and on behalf of NMDC Ltd.
Executive Director (Works)

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–2/2025–26/1983 ದಿ:06.02.2026
ಅಲ್ಪಾವಧಿ ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ–4 ಮುಖಾಂತರ)
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ಅಣೆಕಟ್ಟು ಪಿಕಪ್ –ಪ್ರಧಾನ ಕಾಮಗಾರಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲುಕಿನ 01 ಕಾಮಗಾರಿ ಹಾಗೂ 4702 ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪ ಯೋಜನೆಯಡಿ, ಬಳ್ಳಾರಿ ಜಿಲ್ಲೆ ಸಂಡೂರು, ಹಾಗೂ ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ 2 ಕಾಮಗಾರಿಗಳಿಗಾಗಿ ದ್ವಿಲಕೋಟೆ ಪದ್ಧತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಕನಿಷ್ಠ ಅಂದಾಜು ಮೊತ್ತ ರೂ. 562.85 ಲಕ್ಷ ಟೆಂಡರಿಗಿಟ್ಟ ಗರಿಷ್ಠ ಅಂದಾಜು ಮೊತ್ತ ರೂ. 2254.34 ಲಕ್ಷಗಳಿರುತ್ತದೆ. ಟೆಂಡರ್‌ನ್ನು ದಿನಾಂಕ: 06.02.2026 ರಿಂದ ದಿನಾಂಕ: 13.02.2026 ರ ಸಂಜೆ 5.30 ಗಂಟೆಯವರೆಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 16.02.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು ದಿನಾಂಕ: 18.02.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "KPPP" ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ
ಡಿಐಪಿಆರ್/ಬಳ್ಳಾರಿ/982/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ,
ಶಿರಸಿ ವಿಭಾಗ, ಶಿರಸಿ
ಕ್ರಸಂ: ಪಿಬಿ/3054 ರಾ.ಹೆ.ಸೇ/ಅಧಿಸೂಚನೆ: 2025–26/03421 ದಿನಾಂಕ: 06.02.2026
ಇ–ಟೆಂಡರ್ ಅಧಿಸೂಚನೆ IFT-KW-4
ಇ–ಪ್ರೋಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ದ್ವಿ ಲಕೋಟೆ ಪದ್ಧತಿಯಲ್ಲಿ)(ಅಲ್ಪಾವಧಿ)
ಕರ್ನಾಟಕ ರಾಜ್ಯಪಾಲರ ಪರವಾಗಿ ಲೋಕೋಪಯೋಗಿ, ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಗಿನ ಕಾಮಗಾರಿಗಳಿಗಾಗಿ ಇ–ಪ್ರೋಕ್ ಸ್ಟ್ಯಾಂಡರ್ಡ್ ಡಾಕ್ಯುಮೆಂಟ್ ಮುಖಾಂತರ ಟೆಂಡರನ್ನು ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಕಾಣಿಸಿದಂತೆ ಇ–ಪ್ರೋಕ್‌ನಲ್ಲಿ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್ kppp.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿಗಾಗಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು. ಕಾಮಗಾರಿಗಳ ಇನ್ನುಳಿದ ವಿವರಗಳು ಈ ಕೆಳಗಿನಂತಿವೆ. ಒಟ್ಟು 1 ಕಾಮಗಾರಿ
(1) ಟೆಂಡರ್ ಮಾಹಿತಿ ವಿಚಾರಣೆಗೆ ಕೊನೆಯ ದಿನಾಂಕ: 13–02–2026 (16.00 ಗಂಟೆಗೆ)
(2) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 16–02–2026 (16.00 ಗಂಟೆವರೆಗೆ)
(3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 17–02–2026 (16.30 ಗಂಟೆವರೆಗೆ)
(4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 18–02–2026 (16.00 ಗಂಟೆವರೆಗೆ)
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ
ಶಿರಸಿ (ಉತ್ತರ ಕನ್ನಡ ಜಿಲ್ಲೆ)
DIPR/KWR/KSMCA/1072/25-26 dt. 09.02.2026

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ
ಮಹಾತ್ಮಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ,
ಬೆಂಗಳೂರು–560022 ದೂರವಾಣಿ: 23472850/23371695
ಇ–ಮೇಲ್:apmcbangalore22@gmail.com
ಸಂಖ್ಯೆ: ಕೃಉಮಾಸ(ಬೆಂ)/ಅಭಿವೃದ್ಧಿ/5038/2025–26 ದಿನಾಂಕ: 08–02–2026
–:ಸಂಕ್ಷಿಪ್ತ ಟೆಂಡರ್ ಪ್ರಕಟಣೆ ಕರೆ–3:–
ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ, 2024–25ನೇ ಸಾಲಿಗೆ ವಾರ್ಷಿಕ ಕ್ರಿಯಾಯೋಜನೆಯಡಿ ಮಂಜೂರಾಗಿರುವ ಈ ಕೆಳಕಂಡ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಐಟಂವಾರು ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಷರತ್ತು–ವಾ–ನಿಬಂಧನೆಗಳು ಮತ್ತು ಹೆಚ್ಚಿನ ಮಾಹಿತಿಯನ್ನು ಕರ್ನಾಟಕ ಸರ್ಕಾರದ ವೆಬ್‌ಸೈಟ್: http://kppp.karnataka.gov.in ನಲ್ಲಿ ಪಡೆಯತಕ್ಕದ್ದು.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ ಮೊಬಲಗು (ರೂ.ಗಳಲ್ಲಿ)
1.	2024–25ನೇ ಸಾಲಿನ ವಾರ್ಷಿಕ ಕ್ರಿಯಾ–ಯೋಜನೆಯಡಿ ಮಂಜೂರಾಗಿರುವ ಬೆಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಯಶವಂತಪುರ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ Replacing deteriorated/damaged/burnt out streetlights, U.G. Cable, streetlight control boxes, high mast lights, L.T. U.G. loop cable, additional streetlight poles, LT meter bank panels etc and also providing CCTV for all the Gates and important places in the yard at main market yard of Yeshwantpur APMC ಕಾಮಗಾರಿ.	69,02,312.00 (ಜಿ.ಎಸ್.ಟಿ ಹೊರತುಪಡಿಸಿ)	1,38,100.00
INDENT NO: APMC/2025-26/BD/WORK-INDENT639/CALL-3			
ಅರ್ಹತೆ: KW-03 ರಂತೆ			

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 27–02–2026ರ ಸಂಜೆ:5.00 ಗಂಟೆವರೆಗೆ
ಸಹಿ/– ಕಾರ್ಯದರ್ಶಿ
ಕೃಉಮಾಸ, ಬೆಂಗಳೂರು
ಡಿಐಪಿಆರ್/ಸಿಪಿ/5542/ಸಿಸಿಎಲ್/2025–26

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
(www.kpwd.gov.in)
ಕಾರ್ಯಪಾಲಕ ಇಂಜಿನಿಯರ್, ನಂ.2, ಕಟ್ಟಡಗಳ ವಿಭಾಗ, 1ನೇ ಮಹಡಿ,
ಲೋ.ಇ. ಪೂರಕ ಕಟ್ಟಡ, ಕೆ.ಆರ್.ವೃತ್ತ, ಬೆಂಗಳೂರು. ದೂ: 080 22220227
E-Portal : https://kppp.karnataka.gov.in/#/portal/portal-home
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 19/2025–26
ದಿನಾಂಕ: 07–02–2026
ಕಾರ್ಯಪಾಲಕ ಇಂಜಿನಿಯರ್, ನಂ2 ಕಟ್ಟಡಗಳ ವಿಭಾಗ, ಬೆಂಗಳೂರು ರವರು ಕರ್ನಾಟಕದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಸಾರ್ವಜನಿಕ ಸಂಗ್ರಹಣೆ ಅದಿನಿಯಮ–2000ರನ್ವಯ ಕೆಡಬ್ಲ್ಯೂ–1 ಕೆಡಬ್ಲ್ಯೂ–2 & ಕೆಡಬ್ಲ್ಯೂ–3 & ಕೆಡಬ್ಲ್ಯೂ–4 ನಿಯಮಗಳಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಪಿಡಬ್ಲ್ಯೂಡಿಯಲ್ಲಿ ನೋಂದಣಿ ಮಾಡಿರುವ ಅರ್ಹ ಟೆಂಡರ್‌ದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಟೆಂಡರ್ ಪ್ರೋಸಸಿಂಗ್ ಬೆಲೆ ಮತ್ತು ಇಎಂಡಿ ವಿವರಗಳನ್ನು ಇ–ಪೋರ್ಟಲ್‌ನಲ್ಲಿ ಪ್ರಕಟಿಸಲಾಗಿದೆ.
1. ಟೆಂಡರ್ ಡಾಕ್ಯುಮೆಂಟ್‌ನ್ನು ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೌಡ್ ಮಾಡಿಕೊಳ್ಳಲು ನಿಗದಿಪಡಿಸಿರುವ ದಿನಾಂಕ : 07.02.2026 ರಿಂದ 16.02.2026 ಸಂಜೆ 04.30 ಗಂಟೆಯವರೆಗೆ.
2. ಟೆಂಡರ್‌ಗಳನ್ನು ಆನ್‌ಲೈನ್ ನಲ್ಲಿ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕ : 16.02.2026 ಸಂಜೆ 4.30 ಗಂಟೆಯವರೆಗೆ.
3. ಟೆಂಡರ್‌ಗಳನ್ನು ಇ–ಪೋರ್ಟಲ್‌ನಲ್ಲಿ ದಿನಾಂಕ : 18.02.2026 ರಂದು ಬೆಳಿಗ್ಗೆ 10.30 ಕ್ಕೆ ತೆರೆಯಲಾಗುವುದು.
ಹೆಚ್ಚಿನ ವಿವರಗಳಿಗೆ ಕರ್ನಾಟಕದ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ (https://kppp.karnataka.gov.in/) ಪಡೆಯಬಹುದಾಗಿದೆ ಹಾಗೂ ಈ ಕಛೇರಿಯ ವೇಳೆಯಲ್ಲಿ ಸಂಪರ್ಕಿಸಬಹುದಾಗಿರುತ್ತದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು
ನಂ.2ನೇ ಕಟ್ಟಡಗಳ ವಿಭಾಗ, ಬೆಂಗಳೂರು.
DIPR/CP/5534/Zen/2025-26

ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
CIN :U70100KA2015SGC081817
ಕರ್ನಾಟಕ ಒಂದು ರಾಜ್ಯ, ಹಲವು ಜಗತ್ತುಗಳು. ಪ್ರವಾಸೋದ್ಯಮ ಇಲಾಖೆ
ನಂ.54, 5ನೇ ಮಹಡಿ, ಇಂಧನಭವನ, ರೇಸ್ ಕೋರ್ಸ್ ರಸ್ತೆ, ರಿನೇಸನ್ಸ್ ಹೋಟೆಲ್ ಎದುರು, ಬೆಂಗಳೂರು–560001. ದೂರವಾಣಿ : 080–22352828, ಫ್ಯಾಕ್ಸ್ : 080–22352626
ಸಂಖ್ಯೆ: ಕೆ.ಟಿ.ಐ.ಎಲ್/ಯೋ–01/12/2025–26 ದಿನಾಂಕ: 09.02.2026
ಟೆಂಡರ್ ಪ್ರಕಟಣೆ
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ ಬೆಂಗಳೂರುರವರಿಂದ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಮೈಸೂರು, ಶ್ರೀರಂಗಪಟ್ಟಣ, ಹಾಸನ ಬೇಲೂರು–ಹಳೇಬೀಡು ಒಳಗೊಂಡಂತೆ ದಕ್ಷಿಣ ಕರ್ನಾಟಕ ಪ್ರವಾಸಿ ವೃತ್ತವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ವಿನ್ಯಾಸ, ನಿರ್ಮಾಣ, ಹಣಕಾಸು, ನಿರ್ವಹಣೆ ಮತ್ತು ವರ್ಗಾವಣೆ (DBFOT) ಮಾದರಿಯಲ್ಲಿ ಅಭಿವೃದ್ಧಿಪಡಿಸಲು (Indent No. KTIL/2025-26/SE0039 to KTIL/2025-26/SE0044) ಹಾಗೂ ಹಂಪಿ–ಬಾದಾಮಿ–ಐಹೊಳೆ–ಪಟ್ಟದಕಲ್ಲು–ವಿಜಯಪುರ ಒಳಗೊಂಡಂತೆ ಉತ್ತರ ಕರ್ನಾಟಕ ಪ್ರವಾಸಿ ವೃತ್ತವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ವಿನ್ಯಾಸ, ನಿರ್ಮಾಣ, ಹಣಕಾಸು, ನಿರ್ವಹಣೆ ಮತ್ತು ವರ್ಗಾವಣೆ (DBFOT) ಮಾದರಿಯಲ್ಲಿ ಅಭಿವೃದ್ಧಿಪಡಿಸುವ (Indent No. KTIL/2025-26/SE0048 to KTIL/2025-26/SE0054) ಸಂಬಂಧ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಟೆಂಡರ್‌ಗಳನ್ನು ಪ್ರಕಟಿಸಿದ್ದು, ಸದರಿ ಟೆಂಡರ್‌ಗಳಿಗೆ ಸಂಬಂಧಿಸಿದ ವೇಳಾಪಟ್ಟಿ ಮತ್ತು ಟೆಂಡರ್ ದಾಖಲೆಗಳು ಇ– ಸಂಗ್ರಹಣೆ ವೇದಿಕೆಯಲ್ಲಿ ದಿನಾಂಕ:07.02.2026 ರಿಂದ ಲಭ್ಯವಿರುತ್ತದೆ.
ಟೆಂಡರ್ ವಿವರಗಳನ್ನು ವಿದ್ಯುನ್ಮಾನ ಸಂಗ್ರಹಣಾ ವೇದಿಕೆ ಮೂಲಕ (Through Karnataka public procurement portal) https://www.kppp.karnataka.gov.in ದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ.ಎಂ.ಡಿ ಮೊತ್ತವನ್ನು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು https://www.kppp.karnataka.gov.in ನಲ್ಲಿ ವಿದ್ಯುನ್ಮಾನ (Electronic) ವಿಧಾನದಲ್ಲಿ ಪಾವತಿಸಬಹುದಾಗಿರುತ್ತದೆ. ಆಸಕ್ತಿಯುಳ್ಳ ಸಂಸ್ಥೆಗಳು ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ನೊಂದಾಯಿಸುವ ಅಗತ್ಯವಿದೆ.
ಸಹಿ/–
ಕಾರ್ಯಪಾಲಕ ಅಭಿಯಂತರರು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರಿ
ಕರ್ನಾಟಕ ಪ್ರವಾಸೋದ್ಯಮ ಮೂಲಸೌಲಭ್ಯ ನಿಗಮ.
DIPR/CP/5543/NR/2025-26

ಚಟಕೆ ಸುದ್ದಿ

ಲಿಂಗಪ್ಪಗೆ 'ಕಾಯಕ ಶರಣಶ್ರೀ ಪ್ರಶಸ್ತಿ'

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನೀಡುವ 'ಕಾಯಕ ಶರಣಶ್ರೀ ಪ್ರಶಸ್ತಿ'ಗೆ ಶಿಕ್ಷಣ ತಜ್ಞ ಪ್ರೊ.ಎಚ್. ಲಿಂಗಪ್ಪ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹5 ಲಕ್ಷ ನಗದು ಒಳಗೊಂಡಿದೆ. ಕಾಯಕ ಶರಣ ಜಯಂತಿಯ ಅಂಗವಾಗಿ ಸ್ಥಾಪಿಸಿರುವ ಈ ಪ್ರಶಸ್ತಿಯನ್ನು ಇದೇ ಮೊದಲ ಬಾರಿಗೆ ನೀಡಲಾಗುತ್ತಿದೆ. ದಾವಣಗೆರೆಯ ಜಗಳೂರಿನ ಲಿಂಗಪ್ಪ ಅವರು, ಶಿವಶರಣರ ಆದರ್ಶಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಿದ್ದಾರೆ. 'ಉರಿಲಿಂಗಪೆದ್ದಿ', 'ಬುದ್ಧ ಪ್ರಜ್ಞೆಯ ಕಾಯಕ ಜೀವಿಗಳು' ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಕವಿ ಎಲ್. ಹನುಮಂತಯ್ಯ ಅವರ ಅಧ್ಯಕ್ಷತೆ ಸಮಿತಿ ಈ ಆಯ್ಕೆ ಮಾಡಿದೆ. ಮಂಗಳವಾರ (ಫೆ.10) ಸಂಜೆ 5 ಗಂಟೆಗೆ ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜಿಸಿರುವ ಕಾಯಕ ಶರಣರ ಜಯಂತಿ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ.

ಮಹಿಳಾ ಅಧಿಕಾರಿ ವಿಡಿಯೊ ಸೆರೆ: ನೌಕರನ ಬಂಧನ

ಬೆಳಗಾವಿ: ಮಹಿಳಾ ಅಧಿಕಾರಿಯ ಮನೆಯಲ್ಲಿ ರಹಸ್ಯವಾಗಿ ಕ್ಯಾಮೆರಾಗಳನ್ನು ಅಳವಡಿಸಿ, ಖಾಸಗಿ ದೃಶ್ಯಗಳನ್ನು ಸೆರೆ ಹಿಡಿದು ₹ 50 ಲಕ್ಷ ಹಣಕ್ಕೆ ಬೇಡಿಕೆ ಇಟ್ಟ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಮಹಿಳಾ ಅಧಿಕಾರಿಯ ಕಚೇರಿಯಲ್ಲೇ ಕೆಲಸ ಮಾಡುತ್ತಿದ್ದ ನೌಕರ ವಿನೋದ ಬಂಧಿತ. ಈ ಪ್ರಕರಣದಲ್ಲಿ ಈಗಾಗಲೇ ಮೂವರು ಯೂಟ್ಯೂಬರ್‌ಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ವಿನೋದ ಹಾಗೂ ಮಹಿಳಾ ಅಧಿಕಾರಿ ಒಂದೇ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ವೃತ್ತಿ ಮಾತ್ಸರ್ಯದಿಂದ ಅವರ ಮೇಲೆ ಸೇಡು ತೀರಿಸಿಕೊಳ್ಳಲು ವಿನೋದ ಹೊಂಚು ಹಾಕಿದ್ದ. ಇದಕ್ಕೆ ಯೂಟ್ಯೂಬರ್ಸ್ ನೆರವು ಪಡೆದಿದ್ದ. ಮಹಿಳಾ ಅಧಿಕಾರಿ ಹಾಗೂ ಅವರೊಂದಿಗೆ ಆಪ್ತಕ್ಷಣಗಳನ್ನು ಕಳೆದ ಇನ್ನೊಬ್ಬ ಅಧಿಕಾರಿ ಕಡೆಯಿಂದ ತಲಾ ₹50 ಲಕ್ಷ ಪಡೆಯುವ ಹುನ್ನಾರ ನಡೆಸಿದ್ದ' ಎಂದು ಮೂಲಗಳು ಮಾಹಿತಿ ನೀಡಿವೆ.

ಜೆಡಿಎಸ್: ನೂತನ ಜಿಲ್ಲಾಧ್ಯಕ್ಷರ ಆಯ್ಕೆ

ಬೆಂಗಳೂರು: ಜೆಡಿಎಸ್‌ನ ಆಂತರಿಕ ಚುನಾವಣೆಯಲ್ಲಿ ರಾಜ್ಯದ ಕೆಲವು ಜಿಲ್ಲೆಗಳಿಗೆ ನೂತನ ಜಿಲ್ಲಾ ಘಟಕದ ಅಧ್ಯಕ್ಷರು ಆಯ್ಕೆಯಾಗಿದ್ದಾರೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ಬೆಂಗಳೂರು ಗ್ರಾಮಾಂತರ–ಕೆ.ವಿ.ಮಂಜುನಾಥ್, ಬೆಂಗಳೂರು ದಕ್ಷಿಣ–ಜಯಮುತ್ತು, ಚಿತ್ರದುರ್ಗ–ಕೆ.ಮಂಜುನಾಥ್, ಶಿವಮೊಗ್ಗ–ರಾಮಕೃಷ್ಣ ಕೆ.ಎನ್., ಮೈಸೂರು ಗ್ರಾಮಾಂತರ–ಅಶ್ವಿನ್ ಕುಮಾರ್ ಎಂ., ಮೈಸೂರು ನಗರ–ಎಸ್‌ಬಿಎಂ ಮಂಜು, ಮಂಡ್ಯ–ಡಿ.ರಮೇಶ್, ದಕ್ಷಿಣ ಕನ್ನಡ–ಜಾ.ಕೆ.ಮಾಧವಗೌಡ, ಉಡುಪಿ–ಯೋಗೇಶ್ ವಿ.ಶೆಟ್ಟಿ, ಬೆಳಗಾವಿ ಲೋಕಸಭಾ ಕ್ಷೇತ್ರ–ಶಂಕರ ಭಮರಪ್ಪ ಮಾಡಲಗಿ ಅವರು ಚುನಾಯಿತರಾಗಿದ್ದಾರೆ.

ಬಾಗಲಕೋಟೆ–ಹನುಮಂತ್ ಬಿ.ಮಾವಿನಮರದ, ಧಾರವಾಡ ಗ್ರಾಮಾಂತರ–ಬಿ.ಬಿ.ಗಂಗಾಧರ ಮಠ, ಹುಬ್ಬಳ್ಳಿ ಧಾರವಾಡ–ಗುರುರಾಜ ಹುಣಶಿಮರದ, ಹಾವೇರಿ–ಮಂಜುನಾಥ್ ಎಸ್.ಗೌಡ ಶಿವಣ್ಣನವರ್, ಉತ್ತರ ಕನ್ನಡ–ಸೂರಜ್ ನಾಯಕ್ ಸೋನಿ, ಬೀದರ್–ರಮೇಶ್ ಪಾಟೀಲ್ ಸೋಲಾಪುರ್, ಬಳ್ಳಾರಿ–ಮೀನಳ್ಳಿ ತಾಯಣ್ಣ, ಕೊಪ್ಪಳ–ಸುರೇಶ್ ಭೂಮರೆಡ್ಡಿ ಚುನಾಯಿತರಾಗಿದ್ದಾರೆ.

ದಾವಣಗೆರೆ ಜಿಲ್ಲೆಯ ವಾಲ್ಮೀಕಿ ಗುರುಪೀಠದಲ್ಲಿ ಮಹರ್ಷಿ ವಾಲ್ಮೀಕಿ ರಥೋತ್ಸವ ಸೋಮವಾರ ವಿಜೃಂಭಣೆಯಿಂದ ನಡೆಯಿತು –ಚಿತ್ರ: ಸತೀಶ ಬಡಿಗೇರ್

'ವಾಲ್ಮೀಕಿ ರತ್ನ ಪ್ರಶಸ್ತಿ'ಯನ್ನು ನಿವೃತ್ತ ನ್ಯಾಯಮೂರ್ತಿ ಎನ್‌.ವೈ. ಹನುಮಂತಪ್ಪ ಪರವಾಗಿ ಅವರ ಪುತ್ರ ವಿಜಯಕುಮಾರ್ ಹಾಗೂ 'ಮದಕರಿ ನಾಯಕ' ಪ್ರಶಸ್ತಿಯನ್ನು ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯ ಡಿಐಜಿ ರವಿ ಡಿ. ಚನ್ನಣ್ಣನವರ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು. ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ, ಸಚಿವರಾದ ಡಾ.ಎಚ್‌.ಸಿ.ಮಹದೇವಪ್ಪ, ಸತೀಶ ಜಾರಕಿಹೊಳಿ, ಜಾತ್ರಾ ಸಮಿತಿ ಅಧ್ಯಕ್ಷ ಬಸನಗೌಡ ದದ್ದಲ್, ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಇದ್ದಾರೆ

'ಮೀಸಲು ಏರಿಕೆ 9ನೇ ಪರಿಚ್ಛೇದಕ್ಕೆ ಸೇರಿಸಿ'

ಒತ್ತಡ ಹೇರಲು ಶೀಘ್ರ ದೆಹಲಿಗೆ ನಿಯೋಗ
ವಾಲ್ಮೀಕಿ ಜಾತ್ರಾ ಮಹೋತ್ಸವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಹರಿಹರ (ದಾವಣಗೆರೆ): 'ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೀಸಲಾತಿ ಪ್ರಮಾಣ ಏರಿಕೆಯನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಬೇಕು ಎಂದು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಲು ಶೀಘ್ರವೇ ದೆಹಲಿಗೆ ನಿಯೋಗ ತೆರಳಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ತಾಲ್ಲೂಕಿನ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ಸೋಮವಾರ ನಡೆದ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಜನಜಾಗೃತಿ ಸಮ್ಮೇಳನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಜನಸಂಖ್ಯೆಗೆ ಅನುಗುಣವಾಗಿ ಪರಿಶಿಷ್ಟ ಜಾತಿ, ಪಂಗಡದ ಮೀಸಲಾತಿಯನ್ನು ಶೇ 24.1ಕ್ಕೆ ಏರಿಸಿರುವುದರ ಪರವಾಗಿ ನಾನಿದ್ದೇನೆ. ಇದು ಸಂವಿಧಾನದ 9ನೇ ಪರಿಚ್ಛೇದದಡಿ ಸೇರದಿದ್ದರೆ ರಾಜ್ಯ ಸರ್ಕಾರದ ಪ್ರಯತ್ನ ವ್ಯರ್ಥವಾಗುತ್ತದೆ. ಸಂಸದರೂ ಕೇಂದ್ರ ಸರ್ಕಾರದ ಮೇಲೆ ಈ ಬಗ್ಗೆ ಒತ್ತಡ ಹೇರಬೇಕು' ಎಂದು ಕೋರಿದರು.

> ಮೀಸಲಾತಿ ಏರಿಕೆಗೆ ಸಂಬಂಧಿಸಿದ ನಿರ್ಣಯವನ್ನು ಅಧಿವೇಶನದಲ್ಲಿ ಕೈಗೊಂಡು ಕೇಂದ್ರಕ್ಕೆ ಶಿಫಾರಸು ಮಾಡಲಾಗಿದೆ. ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿದಾಗ ಮಾತ್ರ ಸೌಲಭ್ಯ ಅನುಭವಿಸಲು ಸಾಧ್ಯ
> **ರುದ್ರಪ್ಪ ಲಮಾಣಿ,** ಉಪಾಧ್ಯಕ್ಷ, ವಿಧಾನಸಭೆ

'2013ಕ್ಕೂ ಮುನ್ನ ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ₹6,000 ಕೋಟಿ ಮಾತ್ರ ವೆಚ್ಚವಾಗುತ್ತಿತ್ತು. ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆ (ಟಿಎಸ್‌ಪಿ) ಕಾಯ್ದೆಯನ್ನು ಜಾರಿಗೊಳಿಸಿದ ಪರಿಣಾಮವಾಗಿ ವೆಚ್ಚ ₹42,018 ಕೋಟಿಗೆ ಏರಿದೆ. ಈ ಕಾಯ್ದೆಯಲ್ಲಿ ನ್ಯೂನತೆಗಳು ಇರಬಹುದು. ಇವುಗಳನ್ನು ಸರಿಪಡಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ' ಎಂದು ಭರವಸೆ ನೀಡಿದರು.

'ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣಗಳಲ್ಲಿ ಮಾತ್ರ ಜಾರಿಗೆ ಬಂದಿದೆ. ಸರ್ಕಾರಿ ನೌಕರರ ಬಡ್ತಿಯಲ್ಲಿ ಮೀಸಲಾತಿ ಹಾಗೂ ₹ 1 ಕೋಟಿವರೆಗಿನ ಗುತ್ತಿಗೆಯಲ್ಲಿ ಮೀಸಲಾತಿ ನೀಡುವ ಕಾಯ್ದೆಗಳು ರಾಜ್ಯದಲ್ಲಿ ಮಾತ್ರ ಜಾರಿಗೊಂಡಿವೆ. ಪರಿಶಿಷ್ಟ ಜಾತಿ ಮತ್ತು ಪಂಗಡದವರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ಬಿಜೆಪಿ, ಪಕ್ಷದ ಆಡಳಿತವಿರುವ ರಾಜ್ಯಗಳಲ್ಲಿ ಏಕೆ ಜಾರಿಗೊಳಿಸಿಲ್ಲ?' ಎಂದು ಪ್ರಶ್ನಿಸಿದರು.

ಪ್ರಶಸ್ತಿ ಪ್ರದಾನ: ನಿವೃತ್ತ ನ್ಯಾಯಮೂರ್ತಿ ಎನ್‌.ವೈ. ಹನುಮಂತಪ್ಪ ಅವರಿಗೆ 'ವಾಲ್ಮೀಕಿ ರತ್ನ' ಹಾಗೂ ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಇಲಾಖೆಯ ಡಿಐಜಿ ರವಿ ಚನ್ನಣ್ಣನವರ್ ಅವರಿಗೆ 'ಮದಕರಿ ನಾಯಕ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ವಾಲ್ಮೀಕಿ ಗುರುಪೀಠದ ಪ್ರಸನ್ನಾನಂದ ಸ್ವಾಮೀಜಿ, ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಚಿವ ಡಾ.ಎಚ್‌.ಸಿ. ಮಹದೇವಪ್ಪ, ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಸಂಸದ ಜಿ.ಕುಮಾರ ನಾಯಕ, ರಾಜ್ಯ ಸರ್ಕಾರದ ದೆಹಲಿ ಪ್ರತಿನಿಧಿ ಟಿ.ಬಿ. ಜಯಚಂದ್ರ ಅವರು ಹಾಜರಿದ್ದರು.

'ಬಡವರಿಗೆ ನಿವೇಶನ, ಅನುದಾನ ನೀಡಿ'

'ಪರಿಶಿಷ್ಟ ಜಾತಿ ಮತ್ತು ಪಂಗಡದ ಬಡವರಿಗೆ ನಿವೇಶನ ನೀಡುವ ಯೋಜನೆಯನ್ನು ಸಮಾಜ ಕಲ್ಯಾಣ ಇಲಾಖೆ ರೂಪಿಸಿದೆ. ಇದಕ್ಕೆ ₹40 ಕೋಟಿ ಅನುದಾನ ಮೀಸಲಿಟ್ಟಿದೆ. ಅಂಬೇಡ್ಕರ್ ಹಾಗೂ ವಾಲ್ಮೀಕಿ ಕಾಲೊನಿ ನಿರ್ಮಿಸುವ ಈ ಯೋಜನೆಗೆ ಶೀಘ್ರ ಅನುದಾನ ಬಿಡುಗಡೆ ಮಾಡಬೇಕು' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಕೋರಿದರು.

'ದಲಿತ ಸಮುದಾಯ ಹೆಚ್ಚಾಗಿ ಅವಲಂಬಿತರಾಗಿರುವ ಸರ್ಕಾರಿ ಶಾಲೆ, ಸರ್ಕಾರಿ ಆಸ್ಪತ್ರೆಗಳನ್ನು ಸಶಕ್ತಗೊಳಿಸಬೇಕು. ವಸತಿ ಶಾಲೆಗಳಿಗೆ ಅಗತ್ಯ ಸೌಲಭ್ಯ ಕಲ್ಪಿಸಬೇಕು. ಹಂಪಿ, ಕಿತ್ತೂರು, ದಸರಾ ಉತ್ಸವ ಮಾದರಿಯಲ್ಲಿ ನಾಯಕ ಸಮುದಾಯದ ಇತಿಹಾಸ ಸಾರುವ ದುರ್ಗೋತ್ಸವವನ್ನು ಚಿತ್ರದುರ್ಗದಲ್ಲಿ ಮಾಡಬೇಕು' ಎಂದೂ ಮನವಿ ಮಾಡಿದರು.

ಸಂಪುಟ ವಿಸ್ತರಣೆ ವೇಳೆ ಪರಿಗಣನೆ

'ವಾಲ್ಮೀಕಿ ಸಮುದಾಯದ ಇಬ್ಬರು ಸಚಿವರು ಕಾರಣಾಂತರಗಳಿಂದ ರಾಜೀನಾಮೆ ನೀಡುವ ಸ್ಥಿತಿ ಸೃಷ್ಟಿಯಾಯಿತು. ಸಚಿವ ಸ್ಥಾನಕ್ಕಾಗಿ ಸಮುದಾಯ ಬೇಡಿಕೆ ಇಟ್ಟಿದೆ. ಸಚಿವ ಸಂಪುಟ ವಿಸ್ತರಣೆ ವೇಳೆ ಪರಿಗಣಿಸಲಾಗುವುದು' ಎಂದು ಮುಖ್ಯಮಂತ್ರಿ ಅವರು ಕಾರ್ಯಕ್ರಮ ನಂತರ ನಂತರ ಸುದ್ದಿಗಾರರ ಜೊತೆಗೆ ಮಾತನಾಡುತ್ತಾ ತಿಳಿಸಿದರು.

'ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ ರಾಜೀನಾಮೆ ಸಲ್ಲಿಸಿದ್ದಾರೆ ಎಂಬುದು ಸತ್ಯಕ್ಕೆ ದೂರವಾದುದು. ಅವರು ನನ್ನನ್ನು ಭೇಟಿ ಮಾಡಿಲ್ಲ' ಎಂದರು.

ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಮಾಧ್ಯಮ ಪ್ರತಿನಿಧಿಗಳಿಂದ ಪ್ರಶ್ನೆ ಎದುರಾದಾಗ ಸಿದ್ದರಾಮಯ್ಯ ಅವರು ಸಿಡಿಮಿಡಿಗೊಂಡರು.

ಸುದ್ದಿ 2 ನಿಮಿಷ

'ಮಾಂಜಾ'ಗೆ ಸಿಲುಕಿ ವ್ಯಕ್ತಿ ಸಾವು ಎ.ಸಿ ಗಳ ವಿರುದ್ಧ ಪ್ರಕರಣ'

ಬೀದರ್: ಚಿಟಗುಪ್ಪ ತಾಲ್ಲೂಕಿನ ತಾಳಮಡಗಿಯಲ್ಲಿ ಜ.16ರಂದು ಮಾಂಜಾ ದಾರಕ್ಕೆ ಸಿಲುಕಿ ಬೈಕ್ ಸವಾರ ಮೃತಪಟ್ಟಿದ್ದ ಪ್ರಕರಣದಲ್ಲಿ ಉಪವಿಭಾಗಾಧಿಕಾರಿ ಸೇರಿ ಆರು ಜನರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಲು ಉಪ ಲೋಕಾಯುಕ್ತ ಬಿ. ವೀರಪ್ಪ ಅವರು ನಿರ್ದೇಶನ ನೀಡಿದ್ದಾರೆ.

ಬೀದರ್ ಉಪವಿಭಾಗಾಧಿಕಾರಿ ಮುಹಮ್ಮದ್ ಶಕೀಲ್, ಬಸವಕಲ್ಯಾಣ ಉಪವಿಭಾಗಾಧಿಕಾರಿ ಪ್ರಕಾಶ್ ಕುದರಿ, ಚಿಟಗುಪ್ಪ ತಹಶೀಲ್ದಾರ್ ಮಂಜುನಾಥ ಪಂಚಾಳ, ಹುಮನಾಬಾದ್ ಡಿವೈಎಸ್ಪಿ ಮಡೋಳಪ್ಪ, ಚಿಟಗುಪ್ಪ ಪಿಐ ಶ್ರೀನಿವಾಸ್ ಅಲ್ಲಾಪುರ, ಸಬ್ ಇನ್‌ಸ್ಪೆಕ್ಟರ್ ಮಹೇಂದ್ರಕುಮಾರ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಬೇಕು.

ಬೀದರ್ ಜಿಲ್ಲೆಯಾದ್ಯಂತ ಸಂಪೂರ್ಣವಾಗಿ ಮಾಂಜಾ ನಿಷೇಧಿಸಿ, ಅದಕ್ಕೆ ಪೂರಕವಾದ ದಾಖಲೆಗಳೊಂದಿಗೆ ಮಾರ್ಚ್ 3ರಂದು ಖುದ್ದಾಗಿ ಹಾಜರಾಗಿ, ವರದಿ ಸಲ್ಲಿಸಬೇಕೆಂದು ಸರ್ಕಾರದ ಮುಖ್ಯ ಕಾರ್ಯದರ್ಶಿ, ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಬೀದರ್ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚನೆ ನೀಡಿದ್ದಾರೆ.

ಜ. 16ರಂದು 'ಪ್ರಜಾವಾಣಿ'ಯಲ್ಲಿ 'ಬೀದರ್; ಕತ್ತು ಸೀಳಿದ ಮಾಂಜಾ, ವ್ಯಕ್ತಿ ಸಾವು' ಶೀರ್ಷಿಕೆಯಡಿ ಪ್ರಕಟಗೊಂಡಿದ್ದ ವರದಿಯನ್ನು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಉತ್ಖನನ ಸ್ಥಳಕ್ಕೆ ಜನ; ಶೋಧ ಕಾರ್ಯಕ್ಕೆ ಅಡ್ಡಿ

ತೆಕ್ಕಲಕೋಟೆ (ಬಳ್ಳಾರಿ ಜಿಲ್ಲೆ): ಅಸ್ಥಿಪಂಜರಗಳು ಸಿಕ್ಕಿರುವ ವಿಷಯ ತಿಳಿಯುತ್ತಿದ್ದಂತೆಯೇ ತೆಕ್ಕಲಕೋಟೆಯ ಗೌಡ್ರಮೂಲೆ ಬೆಟ್ಟ ಪ್ರದೇಶಕ್ಕೆ ಸೋಮವಾರ ಭಾರಿ ಸಂಖ್ಯೆಯಲ್ಲಿ ಜನರು ಭೇಟಿ ನೀಡಿದರು.

ಇದರಿಂದ ಉತ್ಖನನಕ್ಕೆ ಅಡ್ಡಿಯಾಯಿತು. ಶಾಲಾ ವಿದ್ಯಾರ್ಥಿಗಳು, ಅಧ್ಯಯನಾಸಕ್ತರು, ಸ್ಥಳೀಯ ಗ್ರಾಮಸ್ಥರು, ಮುಖಂಡರು, ರಾಜಕೀಯ ವ್ಯಕ್ತಿಗಳು ಉತ್ಖನನ ವೀಕ್ಷಿಸಿದರು.

ಜನರ ವರ್ತನೆಯಿಂದ ಬೇಸರಗೊಂಡ ಉತ್ಖನನ ತಂಡದ ಸಹನಿರ್ದೇಶಕಿ ನಮಿತಾ ಎಸ್. ಸುಗಂಧಿ ಅವರು ಕಣ್ಣೀರಿಟ್ಟರು.

'ಇಲ್ಲಿ ಉತ್ಖನನಕ್ಕೆ ನಮಗೆ 2–3 ದಿನಗಳಷ್ಟೇ ಅವಕಾಶವಿದೆ. ದಯವಿಟ್ಟು ಸಹಕರಿಸಿ. ನಮ್ಮ ಕಾರ್ಯಾಚರಣೆ ಬಳಿಕ ಇತಿಹಾಸ ಅಧ್ಯಯನಾಸಕ್ತರು ಉತ್ಖನನ ನಡೆಸಿದರೆ, ಹೆಚ್ಚಿನ ಮಾಹಿತಿ ಜಗತ್ತಿಗೆ ಗೊತ್ತಾಗಲಿದೆ' ಎಂದರು.

ಕೌಶಲ ತರಬೇತಿ ನೀಡಿದವರು ಯಾರು?

ಒಂದನೇ ಪುಟದಿಂದ...

'2.30 ಲಕ್ಷ ಬ್ಯಾಚ್‌ಗಳಿಗೆ ತರಬೇತಿ ನೀಡಿದವರ ಹೆಸರು ಇರಬೇಕಾದ ಜಾಗದಲ್ಲಿ ಇಂಗ್ಲಿಷ್‌ನ 'ನಲ್ (NULL)', '0', '0.00' ಎಂದು ನಮೂದಿಸಲಾಗಿದೆ. ಕೆಲವೆಡೆ 'ಅನ್ವಯವಾಗುವುದಿಲ್ಲ (ಎನ್‌ಎ)' ಎಂದು ಉಲ್ಲೇಖಿಸಲಾಗಿದೆ. 3.30 ಲಕ್ಷ ಬ್ಯಾಚ್‌ಗಳಿಗೂ ಒಬ್ಬ ಮೇಲ್ವಿಚಾರಕರನ್ನು ಅನುಷ್ಠಾನ ಏಜೆನ್ಸಿಗಳು ನೇಮಕ ಮಾಡಿಕೊಳ್ಳಬೇಕು. ಮೇಲ್ವಿಚಾರಕರು ರಾಷ್ಟ್ರೀಯ ಕೌಶಲ್ಯಾಭಿವೃದ್ಧಿ ನಿಗಮದ (ಎನ್‌ಎಸ್‌ಡಿಸಿ) ಅಧಿಕಾರಿಗಳಿಗೆ ಉತ್ತರದಾಯಿಯಾಗಿರುತ್ತಾರೆ. ಆದರೆ 3.27 ಲಕ್ಷ ಬ್ಯಾಚ್‌ಗಳ ಮೇಲ್ವಿಚಾರಕರ ಹೆಸರಿನ ಮುಂದೆ '0', '0.00' ಎಂದು ಬರೆಯಲಾಗಿದೆ. ಇದು ಯೋಜನಾ ನಿಯಮದ ಉಲ್ಲಂಘನೆ' ಎಂದು ಸಿಎಜಿ ಹೇಳಿದೆ.

'ತರಬೇತುದಾರರಾಗಿ ಕಾರ್ಯನಿರ್ವಹಿಸಲು ಅರ್ಹತೆ ಪಡೆದವರನ್ನೇ ಆಯ್ಕೆ ಮಾಡಿಕೊಳ್ಳಬೇಕು ಎಂಬುದು ನಿಯಮ. ಆದರೆ ತರಬೇತುದಾರರ ಹೆಸರು, ವಿಳಾಸ, ಸಂಪರ್ಕ ಸಂಖ್ಯೆ, ಯಾವುದೂ ಲಭ್ಯವಿಲ್ಲ. ಆ ವಿವರ ದಾಖಲಿಸುವ ಅಗತ್ಯವಿಲ್ಲ ಎಂದು ಕೌಶಲ್ಯಾಭಿವೃದ್ಧಿ ಸಚಿವಾಲಯ ಸಮಜಾಯಿಷಿ ನೀಡಿದೆ. ಆದರೆ ಅದನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ. ತರಬೇತುದಾರರ ವಿವರ ಪಡೆದುಕೊಳ್ಳದೆ, ಅವರು ಅರ್ಹರು ಎಂಬುದನ್ನು ಹೇಗೆ ನಿರ್ಧರಿಸುತ್ತೀರಿ ಎಂಬ ಪ್ರಶ್ನೆಗೂ ಸಚಿವಾಲಯದ ಬಳಿ ಸಮರ್ಪಕ ಉತ್ತರವಿಲ್ಲ' ಎಂದಿದೆ.

'ಲೆಕ್ಕಪರಿಶೋಧನೆಯಲ್ಲಿ ಎತ್ತಲಾದ ಎಲ್ಲ ಅನುಮಾನ ಮತ್ತು ಪ್ರಶ್ನೆಗಳಿಗೆ ಕೌಶಲ್ಯಾಭಿವೃದ್ಧಿ ಸಚಿವಾಲಯವು, 'ಡಿಬಿಟಿ ರೂಪದಲ್ಲಿ ಹಣ ಪಾವತಿ ಮಾಡಲಾಗಿದೆ. ಹಣ ಪಾವತಿಯಲ್ಲಿ ಯಾವುದೇ ಅಕ್ರಮ ನಡೆದಿಲ್ಲ' ಎಂದು ಉತ್ತರ ನೀಡಿದೆ. ನಾವು ಕೇಳಿದ ಯಾವುದೇ ದಾಖಲೆಗಳನ್ನು ಒದಗಿಸಿಲ್ಲ. ಜತೆಗೆ ಸಂಬಂಧವೇ ಇಲ್ಲದ ಉತ್ತರವನ್ನು ಪದೇ–ಪದೇ ನೀಡಿದೆ. ಒಟ್ಟಾರೆಯಾಗಿ ತರಬೇತಿ ನಡೆದಿದೆ ಎಂಬುದನ್ನು ನಂಬಲು ಯಾವ ಸಾಕ್ಷ್ಯವೂ ಲಭ್ಯವಿಲ್ಲ' ಎಂದು ಸಿಎಜಿ ಕಳವಳ ವ್ಯಕ್ತಪಡಿಸಿದೆ.

ಇಲ್ಲದ ಕಂಪನಿಗಳಿಂದ ತರಬೇತಿ

ನೀಲಿಮಾ ಮೂವಿಂಗ್ ಪಿಕ್ಚರ್ಸ್ ಸಲ್ಲಿಸಿರುವ ಚಿತ್ರ ದಾಖಲೆಗಳು. ಬಿಹಾರದ ಗಯಾದಲ್ಲಿ (57241ನೇ ಬ್ಯಾಚ್) ತರಬೇತಿ ಪಡೆದವರೇ, ಉತ್ತರ ಪ್ರದೇಶದ ಬಹ್ರೇಚ್‌ನಲ್ಲೂ (67518ನೇ ಬ್ಯಾಚ್) ತರಬೇತಿ ಪಡೆದಿದ್ದಾರೆ ಎಂಬ ಸುಳ್ಳು ದಾಖಲೆಯನ್ನು ಕೌಶಲ್ಯಾಭಿವೃದ್ಧಿ ಸಚಿವಾಲಯವು ಲೆಕ್ಕಪರಿಶೋಧನೆಗೆ ಕಳುಹಿಸಿದೆ. ಇಂತಹ ನೂರಾರು ಚಿತ್ರಗಳು ಲೆಕ್ಕಪರಿಶೋಧನೆ ವೇಳೆ ಪತ್ತೆಯಾಗಿವೆ ಎಂದು ಸಿಎಜಿ ಹೇಳಿದೆ

ಒಂದನೇ ಪುಟದಿಂದ...

'114ಕ್ಕೂ ಹೆಚ್ಚು ಕಂಪನಿಗಳು ಈ ರೀತಿಯ ಅಕ್ರಮ ಎಸಗಿವೆ. ಒಂದೇ ಚಿತ್ರವನ್ನು ಬಳಸಿಕೊಂಡು ಮಹಾರಾಷ್ಟ್ರ, ರಾಜಸ್ಥಾನ, ಕೇರಳ, ಒಡಿಶಾ, ಉತ್ತರ ಪ್ರದೇಶ, ಬಿಹಾರದಲ್ಲಿ ತರಬೇತಿ ಕಾರ್ಯಕ್ರಮ ನಡೆಸಿದ್ದೇವೆ ಎಂದು ದಾಖಲೆ ಅಪ್‌ಲೋಡ್ ಮಾಡಿವೆ. ಈ ಎಲ್ಲ ಅಕ್ರಮಗಳ ಬಗ್ಗೆ ವಿವರಣೆ ಕೇಳಿದರೆ, ಸಚಿವಾಲಯವು ಹಾರಿಕೆಯ ಉತ್ತರ ನೀಡಿದೆ' ಎಂದು ಸಿಎಜಿ ಕಟುವಾಗಿ ಹೇಳಿದೆ.

ಬಿರ್ಲಾ ಪದಚ್ಯುತಿ ನಿರ್ಣಯಕ್ಕೆ 'ಕೈ' ಸಿದ್ಧತೆ

ಒಂದನೇ ಪುಟದಿಂದ...

ಆ ಬಳಿಕ ಕಾಂಗ್ರೆಸ್ ನಾಯಕರು ಅನೇಕ ಸಂಸದರ ಸಹಿ ಸಂಗ್ರಹಿಸಿದರು. ಆದರೆ, ಈ ಪ್ರಸ್ತಾವಕ್ಕೆ ಟಿಎಂಸಿ ಹಾಗೂ ಸಮಾಜವಾದಿ ಪಕ್ಷ ಹೆಚ್ಚು ಒಲವು ತೋರಲಿಲ್ಲ. ಹೀಗಾಗಿ, ಉಳಿದ ಪಕ್ಷಗಳ ಸಂಸದರಿಂದ ಕಾಂಗ್ರೆಸ್ ನಾಯಕರು ಸಹಿ ಸಂಗ್ರಹಿಸಲಿಲ್ಲ. 'ಕಗ್ಗಂಟು ಬಗೆಹರಿಸುವ ಬಗ್ಗೆ ಓಂ ಬಿರ್ಲಾ ಅವರೊಂದಿಗೆ ಚರ್ಚೆ ನಡೆಯುತ್ತಿವೆ. ಒಂದು ವೇಳೆ, ರಾಹುಲ್ ಗಾಂಧಿಗೆ ಮಂಗಳವಾರ ಮಾತನಾಡಲು ಅವಕಾಶ ನೀಡದಿದ್ದರೆ ಸಹಿ ಸಂಗ್ರಹ ಪ್ರಕ್ರಿಯೆ ಮುಂದುವರಿಸಲಾಗುವುದು. ಆ ಬಳಿಕ ನೋಟಿಸ್ ನೀಡಲಾಗುವುದು' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ

ಜಲಾಶಯ ಮಟ್ಟ ಎತ್ತರ, ಯುಕೆಪಿ 3ನೇ ಹಂತ ಅನುಷ್ಠಾನಕ್ಕೆ ಆಗ್ರಹ

ಆಲಮಟ್ಟಿ: ರೈತರ ಬೃಹತ್ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಆಲಮಟ್ಟಿ: ಆಲಮಟ್ಟಿ ಜಲಾಶಯದ ಮಟ್ಟವನ್ನು 519.60 ಮೀಟರ್‌ದಿಂದ 524.256 ಮೀಟರ್‌ಗೆ ಎತ್ತರಿಸಿ, ನೀರಾವರಿ ಕ್ಷೇತ್ರ ವಿಸ್ತರಿಸಲು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ರೈತ ಸೇನೆಯ ಯಾದಗಿರಿ ಭಾಗದ ರೈತರು ಸೋಮವಾರ, ಜಲಾಶಯದ ಪ್ರವೇಶದ್ವಾರದ ಬಳಿ ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ರೈತ ಸಂಘದ ರಾಜ್ಯ ಘಟಕದ ಉಪಾಧ್ಯಕ್ಷ ಲಕ್ಷ್ಮಿಕಾಂತ ಪಾಟೀಲ ಅವರು, 'ಜಲಾಶಯದ ಮಟ್ಟ ಎತ್ತರಿಸಿದರೇ, ಹೆಚ್ಚುವರಿಯಾಗಿ 5.94 ಲಕ್ಷ ಹೆಕ್ಟೇರ್ ಪ್ರದೇಶಕ್ಕೆ ನೀರು ಸಿಗಲಿದೆ. ಜೊತೆಗೆ ಕೃಷ್ಣಾ ಮೇಲ್ದಂಡೆ ಯೋಜನೆ (ಯುಕೆಪಿ) ಮೂರನೇ ಹಂತದ ಯೋಜನೆಗೆ ಆದ್ಯತೆ ನೀಡಬೇಕು' ಎಂದು ಒತ್ತಾಯಿಸಿದರು.



ವಿಜಯಪುರ ಜಿಲ್ಲೆಯ ಆಲಮಟ್ಟಿ ಜಲಾಶಯದ ಬಳಿ ಸೋಮವಾರ ರೈತರು ಪ್ರತಿಭಟನೆ ನಡೆಸಿದರು

'ಬಜೆಟ್‌ನಲ್ಲಿ ಯುಕೆಪಿಗೆ ₹10 ಸಾವಿರ ಕೋಟಿ ಮೀಸಲಿಡಬೇಕು, ಯೋಜನೆ ಹಂತ-3 ರ ಭೂಸ್ವಾಧೀನಕ್ಕೆ ನೀಡುವ ಪರಿಹಾರದಷ್ಟೇ ಹಣ ಹಂತ-1, ಹಂತ-2 ರ ಯೋಜನೆಯಡಿ ಭೂಸ್ವಾಧೀನ ಆಗುವ ಜಮೀನಿಗೂ ನೀಡಬೇಕು. ಆಲಮಟ್ಟಿ, ನಾರಾಯಣಪುರ ಜಲಾಶಯದಲ್ಲಿನ ಹೂಳು ತೆರವುಗೊಳಿಸಬೇಕು' ಎಂದರು.

ಕೆಬಿಜೆಎನ್‌ಎಲ್ ಬೆಂಗಳೂರು ಕಚೇರಿಯ ಅಧಿಕಾರಿ ವಿ.ಆರ್. ಹಿರೇಗೌಡರ, ಮುಖ್ಯ ಎಂಜಿನಿಯರ್ ಡಿ.ಬಸವರಾಜ, ಅಭಿಮನ್ಯು, ಬಿ.ಎಸ್. ಪಾಟೀಲ, ತಾರಾಸಿಂಗ್ ದೊಡಮನಿ, ರವಿ ಚಂದ್ರಗಿರಿ ಅವರು ಮನವೊಲಿಸಲು ಯತ್ನಿಸಿದರೂ, ಪ್ರತಿಭಟನಕಾರರು ಮಣಿಯಲಿಲ್ಲ.

ಆಗ ವಿಡಿಯೊ ಕರೆ ಮಾಡಿ ಮಾತನಾಡಿದ ಕೆಬಿಜೆಎನ್‌ಎಲ್ ವ್ಯವಸ್ಥಾಪಕ ನಿರ್ದೇಶಕ ಕೃಷ್ಣಮೂರ್ತಿ ಕುಲಕರ್ಣಿ, 'ಜಲಾಶಯ ಮಟ್ಟ ಏರಿಕೆ ಪ್ರಶ್ನಿಸಿ ವಿವಿಧ ರಾಜ್ಯಗಳು ಹಾಕಿರುವ ಪ್ರಕರಣಗಳು ಸುಪ್ರಿಂಕೋರ್ಟ್‌ನಲ್ಲಿ ಬಾಕಿ ಉಳಿದಿವೆ. ಕೇಂದ್ರ ಸರ್ಕಾರ ಗೆಜೆಟ್ ನೋಟಿಫಿಕೇಶನ್ ಮಾಡಿಲ್ಲ' ಎಂಬುದನ್ನು ಗಮನಕ್ಕೆ ತಂದರು.

ನಂತರ ರೈತರು ಪ್ರತಿಭಟನೆ ಹಿಂಪಡೆದರು. ರೈತ ಹೋರಾಟಗಾರರಾದ ಭೂತಾಳಿ ಕಾರಗುಂಡ, ಬಸವರಾಜ ರಂಜಣಗಿ, ಮಹಾವೀರ ಲಿಂಗೇರಿ, ಇಂದ್ರಜಿತ್ ಯಾದವ, ಮಲ್ಲಿಕಾರ್ಜುನ ಪಾಟೀಲ, ಸಿದ್ಧಲಿಂಗ ಪೂಜಾರಿ, ಮಾಳಿಂಗರಾಯ ಕಾರಣಗುಂಡ, ಶಂಕರಲಿಂಗ ಹುರಸಗುಂಡಗಿ ಇದ್ದರು.

'ಶೇ 70ರಷ್ಟು ಹುಲಿಗಳು ಭಾರತದಲ್ಲಿ'

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): 'ವಿಶ್ವದಲ್ಲಿರುವ ಹುಲಿಗಳಲ್ಲಿ ಶೇ 70ರಷ್ಟು ಭಾರತದಲ್ಲಿಯೇ ಇವೆ' ಎಂದು ಅಂತರರಾಷ್ಟ್ರೀಯ ಬಿಗ್ ಕ್ಯಾಟ್ ಅಲಯನ್ಸ್ ನಿರ್ದೇಶಕ ಡಾ.ಎಸ್.ಪಿ.ಯಾದವ್ ತಿಳಿಸಿದರು.

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮೇಲುಕಾಮನಹಳ್ಳಿಯಲ್ಲಿ ಸೋಮವಾರ ಆರಂಭವಾದ ಅಂತರರಾಷ್ಟ್ರೀಯ ಬಿಗ್ ಕ್ಯಾಟ್ ಅಲಯನ್ಸ್ ಶೃಂಗಸಭೆಯಲ್ಲಿ ಅವರು ಮಾತನಾಡಿದರು.

'ವಿಶ್ವದಲ್ಲಿರುವ ಬಿಗ್ ಕ್ಯಾಟ್ಸ್ ಪ್ರಬೇಧಗಳಾದ ಹುಲಿ, ಸಿಂಹ, ಚಿರತೆ, ಚೀತಾ, ಹಿಮ ಚಿರತೆ, ಜಾಗ್ವಾರ್ ಹಾಗೂ ಪ್ಯೂಮಾಗಳನ್ನು ರಕ್ಷಣೆ ಈ ಶೃಂಗಸಭೆಯ ಪ್ರಮುಖ ಉದ್ದೇಶವಾಗಿದೆ' ಎಂದು ಹೇಳಿದರು.

'ದೇಶದಲ್ಲಿ 14,000ದಿಂದ 15,000ದಷ್ಟು ಚಿರತೆಗಳಿವೆ. ಸಿಂಹಗಳ ಸಂಖ್ಯೆಯೂ ಗಣನೀಯವಾಗಿ ಹೆಚ್ಚಾಗಿದ್ದು ಬಿಗ್ ಕ್ಯಾಟ್ಸ್‌ಗಳ ಸಂತತಿಯನ್ನು ಸಂರಕ್ಷಿಸುವಲ್ಲಿ ಭಾರತವು ಮಾದರಿಯಾಗಿದೆ' ಎಂದರು.

'1952ರಲ್ಲಿ ದೇಶದಲ್ಲಿ ಚೀತಾ ಸಂತತಿ ಸಂಪೂರ್ಣ ನಶಿಸಿತ್ತು. ನಮೀಬಿಯಾ ಹಾಗೂ ದಕ್ಷಿಣ ಆಫ್ರಿಕಾದಿಂದ ಚೀತಾಗಳನ್ನು ತರಿಸಿಕೊಂಡು ಪೋಷಿಸಿದ ಫಲವಾಗಿ ಪ್ರಸ್ತುತ 35 ಚೀತಾಗಳಿವೆ' ಎಂದು ಹೇಳಿದರು.

'ಶೃಂಗಸಭೆಯಲ್ಲಿ ವಿಶ್ವದ 23 ದೇಶಗಳ 39 ಪ್ರತಿನಿಧಿಗಳು ಭಾಗವಹಿಸಿದ್ದಾರೆ' ಎಂದು ಮಾಹಿತಿ ನೀಡಿದರು.

ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸುಭಾಷ್ ಮಾಲ್ಕಡೆ, ಎಪಿಪಿಸಿಎಫ್ ಮನೋರಂಜನ್, ಬಿಸ್ವಜಿತ್ ಮಿಶ್ರಾ, ಹುಲಿ ಯೋಜನೆ ನಿರ್ದೇಶಕ ರಮೇಶ್‌ಕುಮಾರ್, ಚಾಮರಾಜನಗರ ಸಿಸಿಎಫ್ ಮಾಲತಿ ಪ್ರಿಯಾ, ಬಂಡೀಪುರ ಹುಲಿ ಯೋಜನೆ ನಿರ್ದೇಶಕ ಎಸ್.ಪ್ರಭಾಕರನ್, ಎಸಿಎಫ್ ನವೀನ್‌ಕುಮಾರ್ ಇದ್ದರು.

ಲೋಕಸಭೆಯಲ್ಲಿ ನಡೆದ ಘಟನೆಗಳ ಚರ್ಚೆಗೆ ಅವಕಾಶ ನೀಡುವಂತೆ ಆಗ್ರಹ • ಮನವಿ ತಿರಸ್ಕರಿಸಿದ ಸಭಾಪತಿ

ರಾಜ್ಯಸಭೆ: ವಿಪಕ್ಷಗಳ ಆಕ್ರೋಶ, ಸಭಾತ್ಯಾಗ

ನವದೆಹಲಿ (ಪಿಟಿಐ): ಲೋಕಸಭೆಯಲ್ಲಿ ನಡೆದ ಘಟನೆಗಳ ಕುರಿತು ಚರ್ಚೆಗೆ ಅವಕಾಶ ನೀಡುವಂತೆ ರಾಜ್ಯಸಭೆಯಲ್ಲಿ ಸೋಮವಾರ ಆಗ್ರಹಿಸಿದ ವಿರೋಧ ಪಕ್ಷಗಳ ಸದಸ್ಯರು, ಅವಕಾಶ ದೊರೆಯದ ಕಾರಣ ಆಕ್ರೋಶ ವ್ಯಕ್ತಪಡಿಸಿ ಸಭಾತ್ಯಾಗ ಮಾಡಿದರು.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಮಾತನಾಡಲು ಅವಕಾಶ ಸಿಗದ ಕುರಿತು ಮತ್ತು ಲೋಕಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಆಸನದ ಬಳಿ ಮಹಿಳಾ ಸಂಸದರು ಮುತ್ತಿಗೆ ಹಾಕಲು ಮುಂದಾದ ಘಟನೆ ಕುರಿತು ಚರ್ಚಿಸಲು ಅವಕಾಶ ನೀಡಬೇಕು ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಪಟ್ಟು ಹಿಡಿದರು.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಪ್ರಶ್ನೋತ್ತರ ಅವಧಿ ಆರಂಭವಾದ ತಕ್ಷಣ (ಮಧ್ಯಾಹ್ನ 12 ಗಂಟೆಗೆ) ಈ ವಿಷಯ ಪ್ರಸ್ತಾಪಿಸಿದರು. ಆದರೆ ರಾಜ್ಯಸಭೆ ಸಭಾಪತಿ ಸಿ.ಪಿ.ರಾಧಾಕೃಷ್ಣನ್ ಅವರು ಖರ್ಗೆ ಅವರಿಗೆ ಮಾತನಾಡಲು ಅವಕಾಶ ನೀಡಲಿಲ್ಲ. 'ಇನ್ನೊಂದು ಸದನದಲ್ಲಿ ನಡೆದ ಯಾವುದೇ ವಿಷಯದ ಬಗ್ಗೆ ಇಲ್ಲಿ ಮಾತನಾಡಬಾರದು' ಎಂದು ಸಭಾಪತಿ ಸೂಚಿಸಿದರು.

ಆಗ ಪ್ರತಿಕ್ರಿಯಿಸಿದ ಖರ್ಗೆ ಅವರು, 'ನಾನು ಸಾಂವಿಧಾನಿಕ ಪ್ರಶ್ನೆಗಳನ್ನು ಎತ್ತುತ್ತಿದ್ದೇನೆ. ಸಂಸತ್ತು ರಾಜ್ಯಸಭೆ ಮತ್ತು ಲೋಕಸಭೆ ಎರಡನ್ನೂ ಒಳಗೊಂಡಿದೆ. ಸಂವಿಧಾನ ಈ ಎರಡೂ ಸದನಗಳನ್ನು ಗುರುತಿಸಿದೆ. ನಾವು ಅದರ ಕಾರ್ಯವಿಧಾನ ಮತ್ತು ನಿಯಮಗಳ ಪ್ರಕಾರವೇ ನಡೆಯಬೇಕು' ಎಂದರು. ಅದರ ಬೆನ್ನಲ್ಲೇ ಅವರು ಲೋಕಸಭೆಯ ವಿಷಯಗಳ ಕುರಿತು ಮಾತನಾಡಲು ಮುಂದಾದರು.

ಆಗ ಮಧ್ಯಪ್ರವೇಶಿಸಿದ ಸಭಾಪತಿ ಅವರು, 'ನೀವು ಹೇಳುವುದು ಯಾವುದೂ ಕಡತದಲ್ಲಿ ದಾಖಲಾಗುವುದಿಲ್ಲ' ಎಂದು, ಪ್ರಶ್ನೋತ್ತರ ಅವಧಿ ಮುಂದುವರಿಸಲು ಸೂಚಿಸಿದರು. ಆಗ ಖರ್ಗೆ ಮತ್ತು ಇತರ ವಿರೋಧ ಪಕ್ಷಗಳ ನಾಯಕರು ತಮ್ಮ ಸ್ಥಾನದಲ್ಲಿಯೇ ನಿಂತು ಮಾತನಾಡಲು ಅವಕಾಶ ನೀಡುವಂತೆ ಒತ್ತಾಯಿಸಿದರು.

ಅಲ್ಲದೆ, ಆಡಳಿತಾರೂಢ ಬಿಜೆಪಿಯು ವಿರೋಧ ಪಕ್ಷಗಳ ಮಹಿಳಾ ಸಂಸದರನ್ನು ಅವಮಾನಿಸಿದೆ ಎಂದು ಆರೋಪಿಸಿ ಘೋಷಣೆಗಳನ್ನು ಕೂಗಿದರು. ಬಳಿಕ ವಿಪಕ್ಷಗಳ ಸಂಸದರು ಸಭಾತ್ಯಾಗ ಮಾಡಿದರು. ನಂತರ, ಪ್ರಶ್ನೋತ್ತರ ಅವಧಿಯು ಮುಂದುವರಿಯಿತು.

ಲೋಕಸಭೆ: ಕಲಾಪ ಕಗ್ಗಂಟು

ಒಂದನೇ ಪುಟದಿಂದ....

ಜನರಲ್ ನರವಣೆ ಅವರ ಪುಸ್ತಕದ ಕುರಿತು ರಾಹುಲ್‌ಗೆ ಮಾತನಾಡಲು ಅವಕಾಶ ನೀಡದ ಕಾರಣ ಕೆಳಮನೆಯಲ್ಲಿ ಗದ್ದಲ ಉಂಟಾಯಿತು. ಆದರೆ, ಕೇಂದ್ರ ಬಜೆಟ್ ಕುರಿತ ಚರ್ಚೆಗೆ ಅವಕಾಶ ಕಲ್ಪಿಸುವ ಸಂಬಂಧ ಲೋಕಸಭಾಧ್ಯಕ್ಷರು ವಿರೋಧ ಪಕ್ಷದ ನಾಯಕ ಮತ್ತು ಇತರ ನಾಯಕರೊಂದಿಗೆ ಒಂದೆರಡು ಸಭೆಗಳನ್ನು ನಡೆಸಿದರು.

ಬಜೆಟ್ ಚರ್ಚೆಗೆ ಮುನ್ನ ಕೆಲವೊಂದು ವಿಷಯಗಳನ್ನು ಪ್ರಸ್ತಾಪಿಸಲು ಲೋಕಸಭಾಧ್ಯಕ್ಷರ ಜತೆಗಿನ ಸಭೆಯಲ್ಲಿ ಒಪ್ಪಂದ ಆಗಿದೆ. ಆದರೆ, ಸಭಾಧ್ಯಕ್ಷರು ಈಗ ಒಪ್ಪಂದ ಉಲ್ಲಂಘಿಸಿದ್ದಾರೆ ಎಂದು ರಾಹುಲ್ ಅವರು ಸದನದಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

'ಅಂತಹ ಯಾವುದೇ ಒಪ್ಪಂದದ ಬಗ್ಗೆ ನನಗೆ ತಿಳಿದಿಲ್ಲ. ಈ ಬಗ್ಗೆ ಕಾರ್ಯಸೂಚಿಯಲ್ಲೂ ಉಲ್ಲೇಖ ಇಲ್ಲ. ನೋಟಿಸ್ ಇಲ್ಲದೆ ಯಾವುದೇ ವಿಷಯ ಪ್ರಸ್ತಾಪಿಸಲು ಯಾರಿಗೂ ಅವಕಾಶ ನೀಡುವುದಿಲ್ಲ' ಎಂದು ಸಭಾಧ್ಯಕ್ಷರ ಪೀಠದಲ್ಲಿದ್ದ ಬಿಜೆಪಿ ಸದಸ್ಯೆ ಸಂಧ್ಯಾ ರೇ ಸ್ಪಷ್ಟಪಡಿಸಿದರು.

ಈ ಹಂತದಲ್ಲಿ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮಧ್ಯಪ್ರವೇಶಿಸಿ, 'ಅಂತಹ ಯಾವುದೇ ಒಪ್ಪಂದ ಆಗಿಲ್ಲ. ಸ್ಪೀಕರ್ ಬಗ್ಗೆ ರಾಹುಲ್ ಏನಾದರೂ ಹೇಳಲು ಬಯಸಿದರೆ, ಆಗ ಬಿರ್ಲಾ ಕೂಡ ಸದನದಲ್ಲಿ ಹಾಜರಿರಬೇಕು' ಎಂದರು.

'ಸ್ಪೀಕರ್ ವಿರುದ್ಧ ಆರೋಪಗಳನ್ನು ಮಾಡಿದರೆ, ಸದನದ ಇತರ ನಾಯಕರಿಗೂ ಮಾತನಾಡಲು ಅವಕಾಶ ನೀಡಲಾಗುವುದು ಮತ್ತು ಸರ್ಕಾರವು ಪ್ರತಿಕ್ರಿಯಿಸಲಿದೆ' ಎಂದರು.

ಎರಡೂ ಕಡೆಯವರು ತಮ್ಮ ನಿಲುವಿನಿಂದ ಹಿಂದೆ ಸರಿಯದ ಕಾರಣ, ರೇ ಅವರು ಕಲಾಪವನ್ನು ದಿನದ ಮಟ್ಟಿಗೆ ಮುಂದೂಡಿದರು. ಇದಕ್ಕೂ ಮುನ್ನ ಕಲಾಪವನ್ನು ಎರಡು ಸಲ ಮುಂದೂಡಲಾಗಿತ್ತು. ಆ ಬಳಿಕ ರಾಹುಲ್ ಅವರು ಟಿಎಂಸಿಯ ಅಭಿಷೇಕ್ ಬ್ಯಾನರ್ಜಿ, ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಮತ್ತು ಡಿಎಂಕೆಯ ಟಿ.ಆರ್. ಬಾಲು ಅವರೊಂದಿಗೆ ಓಂ ಬಿರ್ಲಾ ಅವರನ್ನು ಭೇಟಿಯಾದರು. ಈ ವೇಳೆ, ಸದನದ ಬಿಕ್ಕಟ್ಟು ಬಗೆಹರಿಸುವ ಬಗ್ಗೆ ಚರ್ಚೆ ನಡೆಯಿತು.

'ನರವಣೆ ಅವರ ಪುಸ್ತಕ, ಪುಸ್ತಕಗಳನ್ನು ಉಲ್ಲೇಖಿಸಿ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಮಾಡಿರುವ ಆರೋಪಗಳು, ಎಂಟು ಸಂಸದರ ಅಮಾನತು ಮತ್ತು ಪ್ರಧಾನಿ ಮೇಲೆ ಸಂಸದರು ದಾಳಿಗೆ ಸಂಚು ರೂಪಿಸಿದ್ದರು ಎಂಬ ಆರೋಪಗಳ ಬಗ್ಗೆ ಪ್ರಸ್ತಾಪಿಸಲು ಅವಕಾಶ ನೀಡುವ ಬಗ್ಗೆ ಒಪ್ಪಂದ ಆಗಿದೆ' ಎಂದು ರಾಹುಲ್ ಗಾಂಧಿ ಸುದ್ದಿಗಾರರಿಗೆ ತಿಳಿಸಿದರು.

'ರತ್ನಮ್ಮ ಹೆಗ್ಗಡೆ ಪ್ರಶಸ್ತಿ'ಗೆ ಐವರು ಲೇಖಕಿಯರ ಆಯ್ಕೆ

ಪ್ರಜಾವಾಣಿ ವಾರ್ತೆ

ಧಾರವಾಡ: ಕರ್ನಾಟಕ ವಿದ್ಯಾವರ್ಧಕ ಸಂಘವು 2024ನೇ ಸಾಲಿನ 'ಮಾತೋಶ್ರೀ ರತ್ನಮ್ಮ ಹೆಗ್ಗಡೆ ಮಹಿಳಾ ಗ್ರಂಥ' ಬಹುಮಾನಕ್ಕೆ ಐವರು ಲೇಖಕಿಯರ ಕೃತಿಗಳನ್ನು ಆಯ್ಕೆ ಮಾಡಿದೆ.

ಶಿವಮೊಗ್ಗದ ಸವಿತಾ ನಾಗಭೂಷಣ ಅವರ 'ದಿನದ ಪ್ರಾರ್ಥನೆ' ಕಥಾ ಸಂಕಲನ, ಉಡುಪಿಯ ಕಾತ್ಯಾಯಿನಿ ಕುಂಜುಬೆಟ್ಟು 'ತಂಬೂರಿ' ಕವನ ಸಂಕಲನ, ಬೆಂಗಳೂರಿನ ರೇಣುಕಾ ಕೋಡಗುಂಟಿ ಅವರ 'ಚಿಗುರೊಡೆದ ಬೇರು' ಕಥಾ ಸಂಕಲನ, ಮೈಸೂರಿನ ಗೀತಾ ಸೀತಾರಾಮ ಅವರ 'ಮಾಳ್ವ ಸಾಮ್ರಾಜ್ಯದ ರಾಜಯೋಗಿನಿ ಅಹಲ್ಯಾಬಾಯಿ ಹೋಳ್ಕರ್' ಕಾದಂಬರಿ ಮತ್ತು ಶಿವಮೊಗ್ಗದ ಕೆ.ಎಸ್. ಪವಿತ್ರಾ ಅವರ 'ಧೀತನನ' ಅಂಕಣ ಕೃತಿಗಳು ಆಯ್ಕೆಯಾಗಿವೆ.

ಪ್ರಶಸ್ತಿಯು ತಲಾ ₹15 ಸಾವಿರ ನಗದು ಒಳಗೊಂಡಿದೆ. ಮಾರ್ಚ್ ಮೊದಲ ವಾರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ತಿಳಿಸಿದ್ದಾರೆ.

ಸವಿತಾ ನಾಗಭೂಷಣ

ಕಾತ್ಯಾಯಿನಿ ಕುಂಜುಬೆಟ್ಟು

ರೇಣುಕಾ ಕೋಡಗುಂಟಿ

ಗೀತಾ ಸೀತಾರಾಮ

ಕೆ.ಎಸ್. ಪವಿತ್ರಾ

‘ಎಸ್‌ಐಆರ್: ಅಡ್ಡಿಪಡಿಸಲು ಬಿಡಲ್ಲ’

ರಾಜ್ಯಗಳಿಗೆ ‘ಸುಪ್ರೀಂ’ ಎಚ್ಚರಿಕೆ: ಕರ್ತವ್ಯಕ್ಕೆ ಹಾಜರಾಗಲು ಅಧಿಕಾರಿಗಳಿಗೆ ಸೂಚನೆ

ಮುಖ್ಯಾಂಶಗಳು
- ದಾಖಲೆಗಳ ಪರಿಶೀಲನೆ– 1 ವಾರ ಗಡುವು ವಿಸ್ತರಣೆ
- ರಾಜಕೀಯ ಬೇಡ– ಸಿಜೆಐ ಎಚ್ಚರಿಕೆ

ನವದೆಹಲಿ (ಪಿಟಿಐ): ‘ಪಶ್ಚಿಮ ಬಂಗಾಳವೂ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ನಡೆಯುತ್ತಿರುವ ಎಸ್‌ಐಆರ್ ಪ್ರಕ್ರಿಯೆಗೆ ಅಡ್ಡಿಪಡಿಸಲು ಯಾರಿಗೂ ಅವಕಾಶ ನೀಡುವುದಿಲ್ಲ’ ಎಂದು ಸುಪ್ರೀಂ ಕೋರ್ಟ್ ತಿಳಿಸಿದೆ.

ಮತದಾರರಿಗೆ ನೀಡಿದ್ದ ನೋಟಿಸ್ ಹರಿದುಹಾಕಿದ ಪ್ರಕರಣದ ಕುರಿತು ಪ್ರಮಾಣಪತ್ರ ಸಲ್ಲಿಸುವಂತೆ ಪಶ್ಚಿಮ ಬಂಗಾಳ ಡಿಜಿಪಿಗೂ ಇದೇ ಸಂದರ್ಭದಲ್ಲಿ ನಿರ್ದೇಶನ ನೀಡಿದೆ.

ಮತದಾರರನ್ನು ಸಾಮೂಹಿಕವಾಗಿ ಹೊರಗಿಡುತ್ತಿರುವ ಕುರಿತು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕಳವಳ ವ್ಯಕ್ತಪಡಿಸಿರುವ ನಡುವೆಯೇ, ಸುಪ್ರೀಂ ಕೋರ್ಟ್ ಈ ಎಚ್ಚರಿಕೆ ನೀಡಿದೆ.

‘ಈ ವಿಷಯದಲ್ಲಿ ಯಾವುದೇ ಸ್ಪಷ್ಟನೆ ಅಗತ್ಯವಿದ್ದರೆ, ಈ ಕುರಿತು ಆದೇಶವನ್ನು ಹೊರಡಿಸಲಾಗುತ್ತದೆ’ ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾ.ಜಾಯ್‌ಮಾಲ್ಯ ಬಾಗ್ಚಿ, ನ್ಯಾ.ಅಂಜಾರಿಯಾ ಅವರಿದ್ದ ಪೀಠವು ಸೋಮವಾರ ತಿಳಿಸಿದೆ.

ಎಸ್‌ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹಾಗೂ ಇತರರು ಸಲ್ಲಿಸಿರುವ ಅರ್ಜಿಗಳ ವಿಚಾರಣೆ ನಡೆಸಿದ ಪೀಠವು, ‘ಎಸ್‌ಐಆರ್ ಪ್ರಕ್ರಿಯೆಯಲ್ಲಿ ಯಾರಿಗೂ ಅಡಚಣೆ ಉಂಟು ಮಾಡಲು ನಾವು ಅವಕಾಶ ನೀಡುವುದಿಲ್ಲ. ಈ ವಿಚಾರದಲ್ಲಿ ರಾಜ್ಯಗಳಿಗೂ ಸ್ಪಷ್ಟಪಡಿಸುತ್ತಿದ್ದೇವೆ’ ಎಂದು ತಿಳಿಸಿತು.

ಕೆಲವು ದುಷ್ಕರ್ಮಿಗಳು ನಮ್ಮ ನೋಟಿಸ್‌ಗಳನ್ನು ಹರಿದುಹಾಕಿದ್ದಾರೆ. ಇದುವರೆಗೂ ಯಾವುದೇ ಎಫ್‌ಐಆರ್ ಕೂಡ ದಾಖಲಾಗಿಲ್ಲ ಎಂದು ಚುನಾವಣಾ ಆಯೋಗವು ಸಲ್ಲಿಸಿದ ಪ್ರಮಾಣ ಪತ್ರವನ್ನು ಗಂಭೀರವಾಗಿ ಪರಿಗಣಿಸಿದ ಸುಪ್ರೀಂ ಕೋರ್ಟ್, ಈ ವಿಚಾರದ ಕುರಿತು ಪ್ರಮಾಣಪತ್ರ ಸಲ್ಲಿಸಬೇಕು ಎಂದು ಪಶ್ಚಿಮ ಬಂಗಾಳದ ಡಿಜಿಪಿಗೆ ಸೂಚಿಸಿದೆ.

‘ಈ ವಿಚಾರದಲ್ಲಿ ರಾಜ್ಯ ಸರ್ಕಾರದ ಯಾವುದೇ ಪಾತ್ರವಿಲ್ಲ’ ಎಂದು ರಾಜ್ಯದ ಪರ ಹಾಜರಾದ ವಕೀಲರು ತಿಳಿಸಿದರು.

‘ದೇಶದ ಎಲ್ಲಾ ರಾಜ್ಯಗಳಿಗೂ ಭಾರತದ ಸಂವಿಧಾನವು ಅನ್ವಯವಾಗುತ್ತದೆ ಎಂಬ ಸಂದೇಶ ತಲುಪಬೇಕು’ ಎಂದು ಕೇಂದ್ರ ಸರ್ಕಾರದ ಪರ ಹಾಜರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಪೀಠದ ಗಮನಸೆಳೆದರು.

‘ಇಡೀ ಪ್ರಕ್ರಿಯೆಯನ್ನು ಸರಾಗವಾಗಿ ನಡೆಯಲು ಜಿಲ್ಲಾಧಿಕಾರಿಗಳು ನಿಗಾ ವಹಿಸುವ ಜೊತೆಗೆ ಜಿಲ್ಲೆಗಳ ವ್ಯಾಪ್ತಿಯಲ್ಲಿ ಕಾನೂನು– ಸುವ್ಯವಸ್ಥೆ ಸಮಸ್ಯೆ ಉಂಟಾಗದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಕ್ರಮ ವಹಿಸಬೇಕು’ ಎಂದು ನ್ಯಾಯಪೀಠವು ಸೂಚನೆ ನೀಡಿದೆ.

‘ನಿಯೋಜನೆ: ಚುನಾವಣಾ ಆಯೋಗವೇ ನಿರ್ಧರಿಸಲಿ’

‘ಎಸ್‌ಐಆರ್‌ಗೆ 8,505 ‘ಬಿ’ ಗ್ರೂಪ್ ಅಧಿಕಾರಿಗಳನ್ನು ನಿಯೋಜಿಸುವುದಾಗಿ ಪಶ್ಚಿಮ ಬಂಗಾಳ ಸರ್ಕಾರ ತಿಳಿಸಿದೆ. ಇವರಿಗೆ ತರಬೇತಿ ನೀಡಿ ಎಸ್‌ಐಆರ್ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಬಹುದು, ಉದ್ಯೋಗ ಹಾಗೂ ಕೆಲಸದ ನಿಯೋಜನೆಯನ್ನು ಆಯೋಗವೇ ನಿರ್ಧರಿಸಲಿದೆ. ಎಸ್‌ಐಆರ್‌ನಿಂದ ಸಮಸ್ಯೆ ಎದುರಿಸಿದ ವ್ಯಕ್ತಿಗಳು ಸಲ್ಲಿಸುವ ದಾಖಲೆಗಳ ಪರಿಶೀಲನೆಗೆ ಫೆಬ್ರುವರಿ 14ರವರೆಗೆ ವಿಧಿಸಿದ ಗಡುವನ್ನು ಒಂದು ವಾರ ವಿಸ್ತರಿಸಿದೆ. ಈ ಕುರಿತು ಮತದಾರರ ನೋಂದಣಾಧಿಕಾರಿಗಳು (ಇಆರ್‌ಒ) ಸೂಕ್ತ ನಿರ್ಧಾರ ತೆಗೆದುಕೊಳ್ಳಬೇಕು’ ಎಂದು ನ್ಯಾಯಪೀಠ ತಿಳಿಸಿದೆ.

‘8,505 ‘ಬಿ’ ಗ್ರೂಪ್ ಅಧಿಕಾರಿಗಳು ಮಂಗಳವಾರ ಸಂಜೆ 5 ಗಂಟೆ ಒಳಗಾಗಿ ಜಿಲ್ಲಾ ಚುನಾವಣಾ ಅಧಿಕಾರಿ ಹಾಗೂ ಇಆರ್‌ಒ ಮುಂದೆ ಕರ್ತವ್ಯಕ್ಕೆ ಹಾಜರಾಗಬೇಕು’ ಎಂದು ಸ್ಪಷ್ಟಪಡಿಸಿದೆ.

‘ಈಗಾಗಲೇ ಕರ್ತವ್ಯದಲ್ಲಿರುವ ಇಆರ್‌ಒಗಳ ಬದಲಾವಣೆ ಹಾಗೂ ನೋಂದಣಿ ಅಧಿಕಾರಿಗಳನ್ನು ಅಗತ್ಯ ಸ್ಥಳಗಳಿಗೆ ನಿಯೋಜಿಸುವ ಸಂಪೂರ್ಣ ಅಧಿಕಾರ ಆಯೋಗಕ್ಕಿದೆ. ಮತರದಾರರ ಪಟ್ಟಿಯ ಪರಿಷ್ಕರಣೆಯ ಅಂತಿಮ ನಿರ್ಧಾರವನ್ನು ಚುನಾವಣಾ ಅಧಿಕಾರಿಗಳೇ ತೆಗೆದುಕೊಳ್ಳಲಿದ್ದಾರೆ’ ಎಂದು ನ್ಯಾಯಪೀಠವು ಸ್ಪಷ್ಟಪಡಿಸಿದೆ.

ಕೋಲ್ಕತ್ತ: ವಾಸಸ್ಥಳ ದೃಢೀಕರಣ ಪ್ರಮಾಣಪತ್ರಕ್ಕಾಗಿ 18,600 ಅರ್ಜಿ

ಕೋಲ್ಕತ್ತ (ಪಿಟಿಐ): ಕಳೆದ ಒಂದೂವರೆ ತಿಂಗಳಿನಲ್ಲಿ ವಾಸಸ್ಥಳ ದೃಢೀಕರಣ ಪ್ರಮಾಣಪತ್ರಕ್ಕಾಗಿ 18,600 ಅರ್ಜಿಗಳು ಕೋಲ್ಕತ್ತ ನಗರ ಪಾಲಿಕೆಗೆ (ಕೆಎಂಸಿ) ಸಲ್ಲಿಕೆಯಾಗಿವೆ.

ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಗೆ (ಎಸ್‌ಐಆರ್) ಮುಂದಾದ ನಂತರದಲ್ಲಿ ವಾಸಸ್ಥಳ ದೃಢೀಕರಣ ಪ್ರಮಾಣಪತ್ರಕ್ಕಾಗಿ ಅರ್ಜಿ ಸಲ್ಲಿಸುವವರ ಸಂಖ್ಯೆ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಡಿಜಿಟಲ್ ಅರೆಸ್ಟ್; ತನಿಖೆಗೆ ‘ಸುಪ್ರೀಂ’ ಸೂಚನೆ

ನವದೆಹಲಿ (ಪಿಟಿಐ): ದೇಶದ ವಿವಿಧೆಡೆ ನಡೆದಿರುವ ‘ಡಿಜಿಟಲ್ ಅರೆಸ್ಟ್’ ಪ್ರಕರಣಗಳನ್ನು ಪತ್ತೆ ಹಚ್ಚಿ, ತನಿಖೆ ನಡೆಸುವಂತೆ ಸುಪ್ರೀಂಕೋರ್ಟ್ ಸಿಬಿಐಗೆ ಸೂಚಿಸಿದೆ.

ಜತೆಗೆ, ‘ಡಿಜಿಟಲ್ ಅರೆಸ್ಟ್’ ಪ್ರಕರಣಗಳ ತನಿಖೆ ಮುಂದುವರಿಸಲು ಸಿಬಿಐಗೆ ಅನುಮತಿ ನೀಡುವಂತೆ ಗುಜರಾತ್ ಮತ್ತು ದೆಹಲಿ ಸರ್ಕಾರಕ್ಕೆ ನ್ಯಾಯಪೀಠ ನಿರ್ದೇಶಿಸಿದೆ.

‘ಡಿಜಿಟಲ್ ಅರೆಸ್ಟ್’ ಪ್ರಕರಣಗಳಲ್ಲಿ, ಗ್ರಾಹಕರಿಗೆ ಪರಿಹಾರ ವಿತರಿಸಲು ಆರ್‌ಬಿಐ ಮತ್ತು ದೂರಸಂಪರ್ಕ ಇಲಾಖೆ ಜಂಟಿಯಾಗಿ ಚೌಕಟ್ಟು ರೂಪಿಸುವಂತೆಯೂ ಸುಪ್ರೀಂಕೋರ್ಟ್ ಹೇಳಿದೆ.

ಡಿಜಿಟಲ್ ವಂಚನೆಗೆ ಒಳಗಾದವರಿಗೆ ಪರಿಹಾರ ವಿತರಿಸಲು ಅಮಿಕಸ್ ಕ್ಯೂರಿ ಮಂಡಿಸಿದ್ದ ಸಲಹೆಗಳನ್ನು ಪರಿಶೀಲಿಸುವಂತೆ ಸುಪ್ರೀಂಕೋರ್ಟ್ ಡಿಸೆಂಬರ್ 16ರಂದು ಸೂಚನೆ ನೀಡಿತ್ತು. ಸೈಬರ್ ಅಪರಾಧಿಗಳು ದೇಶದಿಂದ ದೋಚುತ್ತಿರುವ ಅಪಾರ ಪ್ರಮಾಣದ ಹಣದ ಬಗ್ಗೆ ಕಳವಳ ವ್ಯಕ್ತಪಡಿಸಿತ್ತು.

ಸೈಬರ್ ಅಪರಾಧಿಗಳ ಜಾಡನ್ನು ಪತ್ತೆ ಹಚ್ಚಲು ಮತ್ತು ಅಕ್ರಮ ವಹಿವಾಟು ನಡೆಯುವ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲು ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನವನ್ನು ಯಾಕೆ ಬಳಸುತ್ತಿಲ್ಲ ಎಂದೂ ಆರ್‌ಬಿಐಗೆ ಸುಪ್ರೀಂಕೋರ್ಟ್ ಪ್ರಶ್ನಿಸಿತ್ತು.

ಅಧಿಕಾರಿಗಳ ಪಾತ್ರ ಪರಿಶೀಲಿಸಿ: ಡಿಜಿಟಲ್ ವಂಚನೆ ಪ್ರಕರಣಗಳಲ್ಲಿ, ಸೈಬರ್ ಅಪರಾಧಿಗಳು ಮಾತ್ರವಲ್ಲ, ಬ್ಯಾಂಕ್ ಅಧಿಕಾರಿಗಳ ಶಾಮೀಲು ಹಾಗೂ ನಿರ್ಲಕ್ಷ್ಯವನ್ನೂ ಆಗಾಗ್ಗ ಪರಿಶೀಲನೆಗೆ ಒಳಪಡಿಸುತ್ತಿರಬೇಕು. ಈ ನಿಟ್ಟಿನಲ್ಲಿ ಆರ್‌ಬಿಐ ಬ್ಯಾಂಕ್‌ಗಳಿಗೆ ಸೂಚನೆ ನೀಡಬೇಕು, ನಿಗಾ ವಹಿಸಬೇಕು ಎಂದೂ ನ್ಯಾಯಪೀಠ ಹೇಳಿದೆ.

ಪ್ರಾಣಿಬಲಿ ನಿಷೇಧ: ಹೈಕೋರ್ಟ್ ತೀರ್ಪು ಎತ್ತಿಹಿಡಿದ ಸುಪ್ರೀಂ ಕೋರ್ಟ್

ನವದೆಹಲಿ: ಮದುರೆ ಬಳಿ ಇರುವ ತಿರುಪರನ್‌ಕುಂದ್ರಂ ಬೆಟ್ಟದ ಸುಬ್ರಹ್ಮಣ್ಯ ದೇವಾಲಯದ ಬಳಿ ಪ್ರಾಣಿ ಬಲಿ ನಿಷೇಧಿಸಿದ ಮತ್ತು ಬೆಟ್ಟದ ಮೇಲಿನ ದರ್ಗಾದಲ್ಲಿ ಪ್ರಾರ್ಥನೆ ಸಲ್ಲಿಸಲು ಮುಸ್ಲಿಂ ಭಕ್ತರಿಗೆ ಸೀಮಿತ ಹಕ್ಕುಗಳನ್ನು ನೀಡಿರುವ ಮದ್ರಾಸ್ ಹೈಕೋರ್ಟ್ ಆದೇಶವನ್ನು ಸುಪ್ರೀಂಕೋರ್ಟ್ ಸೋಮವಾರ ಎತ್ತಿಹಿಡಿದಿದೆ.

ನ್ಯಾಯಮೂರ್ತಿ ಅರವಿಂದ್ ಕುಮಾರ್ ಮತ್ತು ಪಿ.ಬಿ ವರಾಳೆ ನೇತೃತ್ವದ ಸುಪ್ರೀಂಕೋರ್ಟ್ ಪೀಠವು, 2025ರ ಅಕ್ಟೋಬರ್‌ನಲ್ಲಿ ಮದ್ರಾಸ್ ಹೈಕೋರ್ಟ್ ನೀಡಿದ ತೀರ್ಪಿನಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂದು ಹೇಳಿತಲ್ಲದೆ, ಹೈಕೋರ್ಟ್ ತೀರ್ಪು ಸಮತೋಲಿತವಾಗಿದೆ ಎಂದಿತು.

ಅರ್ಜಿದಾರ ಎಂ.ಇಮಾಮ್ ಹುಸೇನ್ ಪರವಾಗಿ ಹಾಜರಾದ ವಕೀಲ ಪ್ರಶಾಂತ್ ಭೂಷಣ್, ‘ತಿರುಪರನ್‌ಕುಂದ್ರಂ ಬೆಟ್ಟದಲ್ಲಿ ಯಾವತ್ತೂ ಕಾನೂನು ಸುವ್ಯವಸ್ಥೆ ಸಮಸ್ಯೆ ಉಂಟಾಗಿಲ್ಲ’ ಎಂದು ಪೀಠದ ಗಮನಕ್ಕೆ ತಂದರು.

ಬೆಟ್ಟದ ಮೇಲಿರುವ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಸಾಂಪ್ರದಾಯಿಕ ಆಚರಣೆಗಳಿಗೆ ಧಕ್ಕೆ ಆಗದಂತೆ ಬಕ್ರೀದ್ ಮತ್ತು ರಂಜಾನ್ ಮಾಸದಲ್ಲಿ ನೆಲ್ಲಿತೊಪ್ಪು ಪ್ರದೇಶದಲ್ಲಿ ಪ್ರಾರ್ಥನೆಗೆ ಮತ್ತು ಸಭೆ ಸೇರಲು ಹೈಕೋರ್ಟ್ ಇತ್ತೀಚೆಗೆ ಅನುಮತಿ ನೀಡಿತ್ತು. ಈ ತೀರ್ಪನ್ನು ಎತ್ತಿ ಹಿಡಿಯುವುದಾಗಿ ನ್ಯಾಯಪೀಠ ಹೇಳಿತು.

ಬೆಟ್ಟದಲ್ಲಿ ಪ್ರಾಣಿಬಲಿ ನಿಷೇಧಿಸಲಾಗಿದೆ. ಮಾಂಸಾಹಾರ ತಯಾರಿಸುವುದು, ಭಕ್ತರಿಗೆ ಬಡಿಸುವುದನ್ನೂ ನ್ಯಾಯಾಲಯದ ಅಂತಿಮ ಆದೇಶ ಬರುವವರೆಗೆ ಅನುಮತಿಸಲಾಗುವುದಿಲ್ಲ ಎಂದು ಕೋರ್ಟ್ ಹೇಳಿದೆ.

ತಿರುಪರನ್‌ಕುಂದ್ರಂ ಬೆಟ್ಟದಲ್ಲಿರುವ ದೀಪ ಸ್ತಂಭದಲ್ಲಿ ದೀಪ ಹಚ್ಚಲು ಹೈಕೋರ್ಟ್ ಇತ್ತೀಚೆಗೆ ಅನುಮತಿ ನೀಡಿತ್ತು.

ಮನೆಗಳಿಗೆ ಬೆಂಕಿ

ಇಂಫಾಲ್ (ಪಿಟಿಐ): ತಾಂಗುಖುಲ್ ನಾಗಾ ಸಮುದಾಯದ ಸದಸ್ಯರೊಬ್ಬರ ಮೇಲೆ ಗುಂಪೊಂದು ಹಲ್ಲೆ ನಡೆಸಿದೆ ಎಂಬ ಕಾರಣಕ್ಕೆ ಶಸ್ತ್ರಸಜ್ಜಿತ ಬಂಡುಕೋರರು ಮಣಿಪುರದ ಉಖ್ರುಲ್ ಜಿಲ್ಲೆಯಲ್ಲಿ ಹಲವು ಮನೆಗಳಿಗೆ ಬೆಂಕಿ ಹಚ್ಚಿದ್ದರಿಂದ ಬಿಗುವಿನ ಪರಿಸ್ಥಿತಿ ನಿರ್ಮಾಣವಾಯಿತು ಎಂದು ಸೋಮವಾರ ಅಧಿಕಾರಿಗಳು ತಿಳಿಸಿದ್ದಾರೆ.

ನರವಣೆ ಅಪ್ರಕಟಿತ ಕೃತಿ ಹಂಚಿಕೆ ಎಫ್‌ಐಆರ್ ದಾಖಲು

ನವದೆಹಲಿ (ಪಿಟಿಐ): ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎಂ.ಎಂ. ನರವಣೆ ಅವರ ಅಪ್ರಕಟಿತ ಕೃತಿಯನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳುತ್ತಿರುವ ಬಗ್ಗೆ ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

‘ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ’ ಎಂಬ ಶೀರ್ಷಿಕೆಯ ಕೃತಿಯ ಮುದ್ರಣ ಪೂರ್ವ ಪ್ರತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿ ಪಡೆಯದೆ ಸಾಮಾಜಿಕ ಜಾಲತಾಣ ಮತ್ತು ಆನ್‌ಲೈನ್ ಸುದ್ದಿ ವೇದಿಕೆಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ ಎಂಬ ಮಾಹಿತಿ ಆಧರಿಸಿ ಈ ಕ್ರಮಕ್ಕೆ ಮುಂದಾಗಿದ್ದಾರೆ.

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ಬೆವಿಕಂ BESCOM
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಮುಖ್ಯ ಅಭಿಯಂತರರು, ವಿದ್ಯುತ್., ಬೆಂಗಳೂರು ಗ್ರಾಮೀಣ ಕ್ಷೇತ್ರ ವಲಯ ಇವರು ಬೆಂಗ್ರಾ ಕ್ಷೇತ್ರ ವಲಯದ ವಿವಿಧ ಉಪವಿಭಾಗಗಳಿಗೆ ಐಟಂವಾರು ದರ ಸ್ಥಿರ ಒಪ್ಪಂದದಡಿಯಲ್ಲಿ ಶೇಕಡವಾರು ಕೋಟಿಂಗ್ ಅಡಿಯಲ್ಲಿ ಭಾಗಶಃ ಟರ್ನ್ ಕೀ (ಡಿಟಿಸಿ ಪ್ರಮುಖ ಸಾಮಾಗ್ರಿಗಳನ್ನು ಬೆವಿಕಂನಿಂದ ಪೂರೈಸಲಾಗುವುದು) ಆಧಾರದ ಮೇಲೆ ಸಕ್ರಮಗೊಳಿಸಿದ ಐಪಿ ಸೆಟ್‌ಗಳಿಗೆ 11 ಕೆವಿ ಮಾರ್ಗಗಳನ್ನು ವಿಸ್ತರಿಸಿ 25 ಕೆವಿಎ ಸ್ಟಾರ್ 1 (4ಸ್ಟಾರ್) ದರ್ಜೆಯ ವಿತರಣಾ ಪರಿವರ್ತಕಗಳನ್ನು ಸ್ಥಾಪಿಸಿ ಮತ್ತು ಎಲ್‌ಟಿ ಮಾರ್ಗಗಳನ್ನು ವಿಸ್ತರಿಸಿ ವಿದ್ಯುತ್ ಮೂಲ ಸೌಕರ್ಯವನ್ನು ಒದಗಿಸುವುದಕ್ಕೆ ಒಂದು ವರ್ಷದ ಅವಧಿಗೆ ಕೆಪಿಪಿ ಪೋರ್ಟಲ್‌ನಲ್ಲಿ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಕೆಳಕಂಡಂತೆ ಆಹ್ವಾನಿಸಲಾಗಿದೆ.

ವಿಚಾರಣಾ ಸಂಖ್ಯೆ SC category	ವಿಚಾರಣಾ ಸಂಖ್ಯೆ ST category	ವಿಚಾರಣಾ ಸಂಖ್ಯೆ CAT-II-(A) category	ವಿಚಾರಣಾ ಸಂಖ್ಯೆ CAT-I category	ವಿಚಾರಣಾ ಸಂಖ್ಯೆ Others	ವಿಚಾರಣಾ ಸಂಖ್ಯೆ above one Crore
CEBRAZ/SEO/ AEE-1/2025-26/ ET 158, 169, 181, 182,185	CEBRAZ/ SEO/ AEE-1/ 2025-26/ ET 163, 186	CEBRAZ/SEO/ AEE-1/ 2025-26/ ET 166, 174, 177, 180	CEBRAZ/SEO/ AEE-1/ 2025-26/ ET 172	CEBRAZ/SEO/ AEE-1/ 2025-26/ ET 159, 160, 161, 162, 164, 165, 167, 168, 170, 171, 173, 175, 176, 178, 179, 183, 184	CEBRAZ/SEO/ AEE-1/ 2025-26/ ET 187, 188, 189, 190, 191, 192

Note:1) The amount put to tender for **more than Rs. 1 crore, hence anyone can participate**
2) The EMD shall be paid is 2.5% for the amount put to tender upto Rs. 20.00 lakhs and 2% for the amount put to tender above Rs. 20.00 lakhs upto Rs. 1crore for General category subject to minimum of **Rs. 50,000/-**
3) The EMD shall be paid 1.5% for the amount put to tender above Rs. 1crore, subject to minimum to Rs. **2,00,000**/-.
4) Incase of SC , ST , CAT –II (A) category, the EMD shall be paid is 1.25 % for the amount put to tender upto Rs. 20.00 lakhs and 1% for the amount put to tender above Rs. 20.00 lakhs and upto Rs. 1 crore , subject to minimum of **Rs. 25,000/-**

ಟೆಂಡರ್ ವೇಳಾಪಟ್ಟಿ (1) ಬಿಡ್ ದಾಖಲೆಯು ಇ-ಪೋರ್ಟಲ್‌ನಲ್ಲಿ ದಿನಾಂಕ:**13–02–2026** ನಂತರ ಲಭ್ಯವಿರುತ್ತದೆ. (2) ಪೂರ್ವಭಾವಿ ಸಭೆಯ ದಿನಾಂಕ: **23–02–2026** @ **11:00** Hrs, IST. (3) ಆಕ್ಷೇಪಣೆಗಳನ್ನು ಸಲ್ಲಿಸಲು ದಿನಾಂಕ: **24–02–2026** upto **17:00** Hrs, IST.(4) ಬಿಡ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **03–03–2026** upto **17:00** Hrs, IST.(5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ **05–03–2026** @ **11:00** Hrs, IST. ಟೆಂಡರ್‌ನಲ್ಲಿ ಭಾಗವಹಿಸುವ ಮಾಹಿತಿಗಾಗಿ ಕೆಪಿಪಿ ಪೋರ್ಟಲ್ ವೆಬ್‌ಸೈಟ್ **kpppusers@karnataka.gov.in** ನಲ್ಲಿ ದಿನಾಂಕ **13–02–2026**ರ ನಂತರ ಪಡೆದುಕೊಳ್ಳಬಹುದು. ಆಸಕ್ತ ಬಿಡ್ಡರುದಾರರು ಕೆಪಿಪಿ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು. ಟೆಂಡರ್ ಮೊತ್ತ, ಇಎಂಡಿ ಇತ್ಯಾದಿ ಪಾವತಿಗಳನ್ನು ಇ–ಪಾವತಿ ಮೂಲಕ ಮಾಡತಕ್ಕದ್ದು. ಇತರೆ ವಿಚಾರಣೆಗಳಿಗೆ, ಸಹಾಯವಾಣಿ: 09240214000 & 09240214001 ಹಾಗೂ support@eprochelpdesk.com ನಲ್ಲಿ ಪಡೆಯಬಹುದು ಮತ್ತು 080–23500164 ಅಥವಾ 9449844798

ಸಹಿ/–
ಮುಖ್ಯ ಇಂಜಿನಿಯರ್ (ವಿದ್ಯುತ್),
ಬೆಂಗ್ರಾ ಕ್ಷೇತ್ರ ವಲಯ, ಬೆವಿಕಂ

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ

ನಗರ ಯೋಜನಾ ಪ್ರಾಧಿಕಾರ, ಸಿಂದಗಿ
ರೈತ ಭವನ ಕಟ್ಟಡ, ಎ.ಪಿ.ಎಂ.ಸಿ. ಮಾರುಕಟ್ಟೆ, ಸಿಂದಗಿ. ಇ–ಮೇಲ್: **tpasindagi@gmail.com**
ಸಂಖ್ಯೆ: ನಯೋಪ್ರಾಸಿಂ:ಭೂ.ಉ.ಬ:ಪ್ರಕಟಣೆ:04/2025–26 ದಿನಾಂಕ: 02.02.2026

ಪತ್ರಿಕಾ ಪ್ರಕಟಣೆ
(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಪ್ರಕರಣ 69 (2) ಪ್ರಕಾರ)

ಸಿಂದಗಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಅನುಮೋದನೆಯಾದ ಮಹಾಯೋಜನೆಯಲ್ಲಿ ಸಿಂದಗಿ ತಾಲೂಕು ಸಿಂದಗಿ ಗ್ರಾಮದ ಕೆಳಕಂಡ ಜಮೀನು ಉದ್ಯಾನವನ ಹಾಗೂ ಬಯಲುಜಾಗೆ ವಲಯದಲ್ಲಿ ಬರುತ್ತದೆ. ಅನುಮೋದಿತ ಮಹಾಯೋಜನೆಯಲ್ಲಿ ಕಾಯ್ದಿರಿಸಿದ ಉದ್ಯಾನವನ ಹಾಗೂ ಬಯಲುಜಾಗೆಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 69(2) ಪ್ರಕಾರ, 5 ವರ್ಷಗಳ ಅವಧಿಯಲ್ಲಿ ಭೂ ಉಪಯೋಗದಂತೆ ಪ್ರಾಧಿಕಾರ ಭೂ ಸ್ವಾಧೀನಪಡಿಸಿಕೊಂಡು ಅಭಿವೃದ್ಧಿ ಪಡಿಸಲು ವಿಫಲವಾದಲ್ಲಿ ಕಾಯ್ದಿರಿಸಿದ ಭೂ ಉಪಯೋಗ ರದ್ದಾಗುತ್ತದೆ. ಸದರಿ ಜಮೀನನ್ನು ಪ್ರಾಧಿಕಾರವು ನಿಗದಿತ ಅವಧಿಯಲ್ಲಿ ಕಾಯ್ದೆಯಂತೆ ಭೂ ಸ್ವಾಧೀನಪಡಿಸಿಕೊಂಡು ಅಭಿವೃದ್ಧಿಪಡಿಸಲು ಆರ್ಥಿಕ ಸ್ಥಿತಿಗತಿಯಿಂದ ಸಾಧ್ಯವಾಗಿರುವುದಿಲ್ಲ. ಆದ್ದರಿಂದ ಅರ್ಜಿದಾರರು ನಿಗದಿತ 5 ವರ್ಷ ಕಾಲಾವಧಿ ಮುಗಿದಿರುವುದರಿಂದ ಪ್ರಸ್ತಾಪಿತ ಜಮೀನನ್ನು ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗದಿಪಡಿಸಲು ಕೋರಿರುತ್ತಾರೆ. ನಗರಕ್ಕೆ ವಲಸೆ ಬರುವ ಕರಕುಶಲ ಕಾರ್ಮಿಕರಿಗೆ ಹಾಗೂ ಸಾರ್ವಜನಿಕರಿಗೆ ನಿವೇಶನ/ಕೆಲಸ ಸಿಗುವ ಸಾರ್ವಜನಿಕ ಹಿತಾಸಕ್ತಿ ಮೇರೆಗೆ ಹಾಗೂ ಅರ್ಜಿದಾರರೇ ಎಲ್ಲಾ ಮೂಲಭೂತ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡು ಯೋಗ್ಯ ದರದಲ್ಲಿ ನಿವೇಶನ ಮಾರಾಟ ಮಾಡುವ ಸಾರ್ವಜನಿಕ ಹಿತದೃಷ್ಟಿಯಿಂದ ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಭೂ ಉಪಯೋಗ ಬದಲಾವಣೆ ಮಾಡುವ ವಿವರ ಕೆಳಗಿನಂತಿದೆ.

ಕ್ರ.ಸಂ.	ಗ್ರಾಮದ ಹೆಸರು	ಸ.ನಂ.	ವಿಸ್ತೀರ್ಣ	ಭೂ ಮಾಲೀಕರ ಹೆಸರು	ಮಹಾಯೋಜನೆಯಲ್ಲಿ ಕಾಯ್ದಿರಿಸಿದ ಭೂ ಉಪಯೋಗ	ಅರ್ಜಿದಾರರು ಬದಲಾವಣೆ ಕೋರಿರುವ ಭೂ ಉಪಯೋಗ
1	ಸಿಂದಗಿ	747/6	02ಎ–04 ಗುಂಟೆ	ಶ್ರೀ ಗಂಗಾಧರ ತಂದೆ ಸಂಗಪ್ಪ ರೆಬಿನಾಳ. ಸಾ: ಸಿಂದಗಿ	ಉದ್ಯಾನವನ ಹಾಗೂ ಬಯಲುಜಾಗೆ ವಲಯ	ವಸತಿ

ಆದ್ದರಿಂದ ಪ್ರಸ್ತಾವನೆಯ ಕುರಿತು ಸಾರ್ವಜನಿಕರಿಂದ ಯಾವುದೇ ಸಲಹೆ/ಸೂಚನೆ/ಆಕ್ಷೇಪಣೆಗಳು ಇದ್ದಲ್ಲಿ, ಸದರಿ ಸಲಹೆ/ಸೂಚನೆ/ಆಕ್ಷೇಪಣೆಗಳು ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗೆ ಈ ಕಚೇರಿಗೆ ಖುದ್ದಾಗಿಯಾಗಲಿ ಅಥವಾ ನೋಂದಾಯಿತ ಅಂಚೆ ಮುಖಾಂತರವಾಗಲಿ ಲಿಖಿತವಾಗಿ ಸದಸ್ಯ ಕಾರ್ಯದರ್ಶಿ, ನಗರ ಯೋಜನಾ ಪ್ರಾಧಿಕಾರ, ಸಿಂದಗಿ ಇವರಿಗೆ ಸಲ್ಲಿಸತಕ್ಕದ್ದು. ನಂತರ ಬಂದ ಸಲಹೆ/ಸೂಚನೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಸದಸ್ಯ ಕಾರ್ಯದರ್ಶಿ,
ನಗರ ಯೋಜನಾ ಪ್ರಾಧಿಕಾರ, ಸಿಂದಗಿ

ವಾಸಾಸಂಇ/ವಿಜಯಪುರ/681/ಕೆಎಸ್‌ಎಂಸಿಎ/2025–26

ಬೆಂಗಳೂರು ಉತ್ತರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ವಲಯ–2,
ದಾಸರಹಳ್ಳಿ ವಿಭಾಗ, ಎಂಇಐ ಲೇಔಟ್, ಹೆಸರಘಟ್ಟ ಮುಖ್ಯರಸ್ತೆ,
ಬಾಗಲಗುಂಟೆ, ಟಿ. ದಾಸರಹಳ್ಳಿ, ಬೆಂಗಳೂರು – 560073.

ಸಂಖ್ಯೆ: ಬೆಂಉನಪಾ/ಕಾಅ/ದಾವಿ/ಟೆಂಡರ್/05/2025–26 ದಿನಾಂಕ: 07–02–2026

ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) – (ಅಲ್ಪಾವಧಿ)
(ದ್ವಿ–ಟೆಂಡರ್ ದಸ್ತಾವೇಜು ಪದ್ಧತಿ) (ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೆಂಉನಪಾ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. (**ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್– ಕೆಡಬ್ಲ್ಯೂ–1, 2, 3 & 4**)

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ವಾರ್ಡ್ ಸಂಖ್ಯೆ. 15, ಕಮ್ಮಗೊಂಡನಹಳ್ಳಿಯಲ್ಲಿ 2025–26 ನೇ ಸಾಲಿಗೆ ಹೂಳು ಮತ್ತು ಟ್ರ್ಯಾಕ್ಟರ್ ಮೂಲಕ ಚರಂಡಿಗಳಲ್ಲಿ ಹೂಳು ತೆಗೆಯುವಿಕೆ ಹಾಗೂ ನಿರ್ವಹಣೆ ಕಾಮಗಾರಿ. (ಎಸ್.ಸಿ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 28.41, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 28,410/–**
2	ವಾರ್ಡ್ ಸಂಖ್ಯೆ. 16, ಮಲ್ಲಸಂದ್ರದಲ್ಲಿ 2025–26 ನೇ ಸಾಲಿಗೆ ಹೂಳು ಮತ್ತು ಟ್ರ್ಯಾಕ್ಟರ್ ಮೂಲಕ ಚರಂಡಿಗಳಲ್ಲಿ ಹೂಳು ತೆಗೆಯುವಿಕೆ ಹಾಗೂ ನಿರ್ವಹಣೆ ಕಾಮಗಾರಿ. (ಎಸ್.ಟಿ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 28.41, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 28,410/–**
3	ವಾರ್ಡ್ ಸಂಖ್ಯೆ. 17, ಚಿಕ್ಕಸಂದ್ರದಲ್ಲಿ 2025–26 ನೇ ಸಾಲಿಗೆ ಹೂಳು ಮತ್ತು ಟ್ರ್ಯಾಕ್ಟರ್ ಮೂಲಕ ಚರಂಡಿಗಳಲ್ಲಿ ಹೂಳು ತೆಗೆಯುವಿಕೆ ಹಾಗೂ ನಿರ್ವಹಣೆ ಕಾಮಗಾರಿ. (ಇತರೆ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 28.41, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 56,820/–**
4	ವಾರ್ಡ್ ಸಂಖ್ಯೆ. 18, ಬಾಗಲಗುಂಟೆಯಲ್ಲಿ 2025–26 ನೇ ಸಾಲಿಗೆ ಹೂಳು ಮತ್ತು ಟ್ರ್ಯಾಕ್ಟರ್ ಮೂಲಕ ಚರಂಡಿಗಳಲ್ಲಿ ಹೂಳು ತೆಗೆಯುವಿಕೆ ಹಾಗೂ ನಿರ್ವಹಣೆ ಕಾಮಗಾರಿ. (ಪ್ರವರ್ಗ–I) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 28.41, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 28,410/–**
5	ವಾರ್ಡ್ ಸಂಖ್ಯೆ. 19, ಟಿ. ದಾಸರಹಳ್ಳಿಯಲ್ಲಿ 2025–26 ನೇ ಸಾಲಿಗೆ ಹೂಳು ಮತ್ತು ಟ್ರ್ಯಾಕ್ಟರ್ ಮೂಲಕ ಚರಂಡಿಗಳಲ್ಲಿ ಹೂಳು ತೆಗೆಯುವಿಕೆ ಹಾಗೂ ನಿರ್ವಹಣೆ ಕಾಮಗಾರಿ. (ಇತರೆ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 28.41, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 56,820/–**
6	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 15, ಮೇಡರಹಳ್ಳಿ ಕಾಲೋನಿಯಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆಗಳ ಕಾಮಗಾರಿ. (ಪ್ರವರ್ಗ–II(A)) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 73.72, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 73,720/–**
7	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 15, ಮೇಡರಹಳ್ಳಿ ಕಾಲೋನಿಯಲ್ಲಿ ಸಮುದಾಯ ಭವನ ನಿರ್ಮಾಣ ಕಾಮಗಾರಿ. (ಇತರೆ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 125, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,87,500/–**
8	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 15, ಕಮ್ಮಗೊಂಡನಹಳ್ಳಿ, ಕೆ.ಜಿ. ಹಳ್ಳಿ, ಎ.ಕೆ. ಕಾಲೋನಿಯಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಯ ಕಾಮಗಾರಿ. (ಇತರೆ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 80.69, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,61,380/–**
9	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 15, ಮೇಡರಹಳ್ಳಿ ಕಾಲೋನಿಯಲ್ಲಿ ಉದ್ಯಾನವನ ಅಭಿವೃದ್ಧಿ ಕಾಮಗಾರಿ. (ಇತರೆ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 21.18, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 42,360/–**
10	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 15, ಲಕ್ಷ್ಮೀಪುರದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಯ ಕಾಮಗಾರಿ. (ಇತರೆ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 72.01, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,44,020/–**
11	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 15, ಕಾನ್ಷೀರಾಂ ನಗರದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಯ ಕಾಮಗಾರಿ. (ಇತರೆ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 69.61, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,39,220/–**
12	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 15, ಲಕ್ಷ್ಮೀಪುರದ ಸರ್ಕಾರಿ ಶಾಲಾ ಸುತ್ತಮುತ್ತ ಪ್ರದೇಶದ ಅಡ್ಡರಸ್ತೆಗಳಲ್ಲಿ ಚರಂಡಿಗಳ ನಿರ್ಮಾಣ ಕಾಮಗಾರಿ. (ಪ್ರವರ್ಗ–II(A)) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 40.23, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 40,230/–**
13	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 16, ಶೆಟ್ಟಿಹಳ್ಳಿ ಕಾಲೋನಿಯಲ್ಲಿ ರಸ್ತೆಗಳು ಹಾಗೂ ಚರಂಡಿಗಳ ನಿರ್ಮಾಣ ಕಾಮಗಾರಿ. (ಎಸ್.ಸಿ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 29.11, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 29,110/–**
14	ಶೆಟ್ಟಿಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 16, ಶೆಟ್ಟಿಹಳ್ಳಿ ಕಾಲೋನಿಯಲ್ಲಿ ‘ಇ’ ಲೈಬ್ರರಿ ಕಟ್ಟಡ ಹಾಗೂ ಶೌಚಾಲಯ ನಿರ್ಮಾಣ ಕಾಮಗಾರಿ. (ಇತರೆ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 52.54, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,05,080/–**
15	ಟಿ. ದಾಸರಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ. 19, ಕಾಳಸ್ತಿನಗರದಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆ ಕಾಮಗಾರಿ. (ಇತರೆ) – **ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ): 16.14, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 32,280/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **12–02–2026** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಆನ್‌ಲೈನ್ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸುವ ದಿನಾಂಕ: **23–02–2026 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 3) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್: **https://kppp.karnataka.gov.in ನಲ್ಲಿ ದಿನಾಂಕ: 24–02–2026 ರಂದು 16.30 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, ಬೆಂಉನಪಾ ಇಲ್ಲಿ ತೆರೆಯಲಾಗುವುದು.** 4) ಆರ್ಥಿಕ ಬಿಡ್‌ಗಳನ್ನು ವೆಬ್‌ಸೈಟ್: **https://kppp.karnataka.gov.in ನಲ್ಲಿ ದಿನಾಂಕ: 25–02–2026 ರಂದು 16.30 ಗಂಟೆಗೆ (ಸಾಧ್ಯವಾದಲ್ಲಿ) ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, ಬೆಂಉನಪಾ ಇಲ್ಲಿ ತೆರೆಯಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೆಂಉನಪಾ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ
ಉಪ ಪ್ರಧಾನ ವ್ಯವಸ್ಥಾಪಕರು–2 ರವರ ಕಛೇರಿ,
1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತನಗರ, ಬೆಂಗಳೂರು – 560052.

ಸಂಖ್ಯೆ: ಉಪ್ರವ್ಯ–2/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/26/2025–26 ದಿನಾಂಕ: 09–02–2026

ಬಿಡ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) ಅಲ್ಪಾವಧಿ ಬಿಡ್ ಅಧಿಸೂಚನೆ
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

1) ಈ ಕೆಳಕಂಡ ಕೆಲಸಗಳಿಗೆ ಎಸ್‌ಬಿಎಂ 2.0 ಅನುದಾನಗಳ (ರಾಜ್ಯ ಮತ್ತು ಕೇಂದ್ರ ಹಂಚಿಕೆ) ಯುಎಲ್‌ಬಿ ಹಂಚಿಕೆಯ ಅಡಿಯಲ್ಲಿ ಅನುದಾನವನ್ನು ಒದಗಿಸಲಾಗಿದೆ.
2) ಈ ನಿಟ್ಟಿನಲ್ಲಿ, **ಉಪ ಪ್ರಧಾನ ವ್ಯವಸ್ಥಾಪಕರು–2, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ ರವರು ವ್ಯವಸ್ಥಾಪಕ ನಿರ್ದೇಶಕರು, ಬಿಎಸ್‌ಡಬ್ಲ್ಯೂಎಂಎಲ್, ಬೆಂಗಳೂರು** ರವರ ಪರವಾಗಿ, ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಗಳಿಗಾಗಿ ಅರ್ಹ ಬಿಡ್‌ದಾರರಿಂದ ಬಿಡ್‌ಗಳನ್ನು ಆಹ್ವಾನಿಸುತ್ತಿದ್ದಾರೆ. ಬಿಡ್ಡುದಾರರು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ (**ಅಂದರೆ https://kppp.karnataka.gov.in**) ಮೂಲಕ ಕೆಳಗಿನ ಕೋಷ್ಟಕದಲ್ಲಿ ನೀಡಲಾದ ಕೆಲಸಗಳಿಗೆ ಬಿಡ್‌ಗಳನ್ನು ಸಲ್ಲಿಸಬಹುದು. ಬಿಡ್ಡುದಾರರು ಒಪ್ಪಂದದ ಪ್ರದಾನಕ್ಕೆ ಅರ್ಹತೆ ಪಡೆಯಲು ಬಿಡ್‌ದಾರರಿಗೆ ಸೂಚನೆಗಳ ಷರತ್ತು–3 ರಲ್ಲಿ ನಿರ್ದಿಷ್ಟಪಡಿಸಿದ ಕನಿಷ್ಠ ಅರ್ಹತೆಯ ಮಾನದಂಡಗಳನ್ನು ಗಮನಿಸಲು ಸಲಹೆ ನೀಡಲಾಗುತ್ತದೆ.
3) ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.
4) ಇತರೆ ವಿವರಗಳನ್ನು ಟೆಂಡರ್ ದಾಖಲೆಗಳಲ್ಲಿ ನೋಡಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) ಜಿಎಸ್‌ಟಿಯನ್ನು ಹೊರತುಪಡಿಸಿ	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ಬಿಡ್ ಡಾಕ್ಯೂಮೆಂಟ್ ವೆಚ್ಚ	ಗುತ್ತಿಗೆ ಪೂರ್ಣಗೊಳಿಸಲು ಅವಧಿ (ಮಳೆಗಾಲ ಅವಧಿ ಸೇರಿದಂತೆ)
1	Turnkey, Lump Sum, Fixed Price, No Variation Tender Based on Tenderers Own Design for the work of Design, Construction, Supplying, Installation & Commissioning of 4 Nos. of Transfer Station having closed Compaction System for handling 260-265 TPD of MSW at Selected Locations of Hebbal, Pulikeshi Nagar, C.V. Raman Nagar and Shanthi Nagar. **Package-1 (CALL-2).**	**4442.75**	**ರೂ. 1,00,000/–** ಅನ್ನು ಈ ಕೆಳಗಿನವುಗಳ ಅಡಿಯಲ್ಲಿ ಇ–ಪಾವತಿಯ ಮೂಲಕ ಅಂದರೆ ಆನ್‌ಲೈನ್ / ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಮತ್ತು ಉಳಿದ **ರೂ. 43,42,750/–** ಅನ್ನು ರಾಷ್ಟ್ರೀಕೃತ / ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡಲಾದ ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ ಪಾವತಿಸುವುದು.	ಕೆ.ಪಿ.ಪಿ. ಪೋರ್ಟಲ್ ಅನುಸಾರ	**9 ತಿಂಗಳು**
2	Turnkey, Lump Sum, Fixed Price, No Variation Tender Based on Tenderers Own Design for the work of Design, Construction, Supplying, Installation & Commissioning of 3 Nos. of Transfer Station having closed Compaction System for handling 260-265 TPD of MSW at Selected Locations in Bengaluru Urban Area. **Package-6 (CALL-2).**	**3332.06**	**ರೂ. 1,00,000/–** ಅನ್ನು ಈ ಕೆಳಗಿನವುಗಳ ಅಡಿಯಲ್ಲಿ ಇ–ಪಾವತಿಯ ಮೂಲಕ ಅಂದರೆ ಆನ್‌ಲೈನ್ / ಆರ್‌ಟಿಜಿಎಸ್ / ಎನ್‌ಇಎಫ್‌ಟಿ / ಓಟಿಸಿ ಮತ್ತು ಉಳಿದ **ರೂ. 32,32,060/–** ಅನ್ನು ರಾಷ್ಟ್ರೀಕೃತ / ಶೆಡ್ಯೂಲ್ಡ್ ಬ್ಯಾಂಕ್‌ನಿಂದ ನೀಡಲಾದ ಬ್ಯಾಂಕ್ ಗ್ಯಾರಂಟಿ / ಎಫ್‌ಡಿಆರ್ ಮೂಲಕ ಪಾವತಿಸುವುದು.	ಕೆ.ಪಿ.ಪಿ. ಪೋರ್ಟಲ್ ಅನುಸಾರ	**9 ತಿಂಗಳು**

1) ಬಿಡ್ ಪೂರ್ವಭಾವಿ ಸಭೆ ದಿನಾಂಕ: **16–02–2026 ರಂದು 15.00 ಗಂಟೆಗೆ ಮುಖ್ಯ ಅಭಿಯಂತರರು ಮತ್ತು ಮುಖ್ಯ ಪ್ರಧಾನ ವ್ಯವಸ್ಥಾಪಕರು (ಟೆಕ್) ರವರ ಕಚೇರಿ, ಬಿಎಸ್‌ಡಬ್ಲ್ಯೂಎಂಎಲ್, 1ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು – 560052 ಈ ಕಚೇರಿಯಲ್ಲಿ ನಡೆಯಲಿದೆ.**
2) ಟೆಂಡರ್ ಡಾಕ್ಯೂಮೆಂಟ್ ಪ್ರಕಾರ ಅಗತ್ಯ ಮಾಹಿತಿ / ದಾಖಲೆಗಳೊಂದಿಗೆ ತಾಂತ್ರಿಕ ದಾಖಲೆಗಳನ್ನು ದಿನಾಂಕ: **25–02–2026 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ** ಕೆಪಿಪಿ ಪೋರ್ಟಲ್ **https://kppp.karnataka.gov.in** ಗೆ ಅಪ್‌ಲೋಡ್ ಮಾಡಬೇಕು. ತಾಂತ್ರಿಕ ಬಿಡ್‌ನ್ನು ಬಿಡ್ಡುದಾರರು ಅಥವಾ ಆರಂಭಿಕ ಪ್ರಕ್ರಿಯೆಗೆ ಹಾಜರಾಗಲು ಬಯಸುವ ಅವರ ಅಧಿಕೃತ ಪ್ರತಿನಿಧಿಗಳ ಉಪಸ್ಥಿತಿಯಲ್ಲಿ ಕೆಪಿಪಿ – ಪೋರ್ಟಲ್ ಮೂಲಕ ದಿನಾಂಕ: **26–02–2026 ರಂದು 16.30 ಗಂಟೆಯ ನಂತರ ನಿಗದಿತ ಸ್ಥಳದಲ್ಲಿ ತೆರೆಯಲಾಗುತ್ತದೆ.** ನಿರ್ದಿಷ್ಟಪಡಿಸಿದಂತೆ ಬಿಡ್‌ಗಳನ್ನು ತೆರೆಯುವ ದಿನಾಂಕದಂದು ಕಚೇರಿಗೆ ರಜೆ ಇದ್ದಲ್ಲಿ, ಬಿಡ್‌ಗಳನ್ನು ಮುಂದಿನ ಕೆಲಸದ ದಿನದಂದು ಅದೇ ಸಮಯದಲ್ಲಿ ಮತ್ತು ಸ್ಥಳದಲ್ಲಿ ಕೆ.ಪಿ.ಪಿ. ಪೋರ್ಟಲ್ ಮೂಲಕ ತೆರೆಯಲಾಗುತ್ತದೆ.
3) ತನ್ನ ನಿಯಂತ್ರಣವನ್ನು ಮೀರಿ ಸಿಸ್ಟಮ್ ವೈಫಲ್ಯದ ಕಾರಣದಿಂದ ಯಾವುದೇ ವಿಳಂಬಗಳಿಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. ಯಾವುದೇ ಟೆಂಡರ್ ನವೀಕರಣಗಳನ್ನು ಟೆಂಡರ್‌ದಾರರಿಗೆ ತಿಳಿಸಲು ಸಿಸ್ಟಮ್ ಪ್ರಯತ್ನಿಸಿದರೂ ಸಹ, ಟೆಂಡರ್‌ದಾರರು ಸ್ವೀಕರಿಸದ ಯಾವುದೇ ಮಾಹಿತಿಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ. ಟೆಂಡರ್‌ಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿಗಾಗಿ ಕೆಪಿಪಿ ಪೋರ್ಟಲ್‌ನ್ನು ಪರಿಶೀಲಿಸುವುದು ಟೆಂಡರ್‌ದಾರರ ಜವಾಬ್ದಾರಿಯಾಗಿದೆ, ಸಹಾಯವಾಣಿಯ ಇ–ಮೇಲ್ ವಿಳಾಸ: **hphelpdesk.blr@intarvo.com** ಕೆಪಿಪಿ ಪೋರ್ಟಲ್ ಹೆಲ್ಪ್‌ಡೆಸ್ಕ್ ದೂರವಾಣಿ ಸಂಖ್ಯೆ: **080–22371090 / 22373788**. ಟೆಂಡರ್‌ದಾರರು ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯಕ್ಕೆ ಮುಂಚಿತವಾಗಿ ಕಂಪ್ಯೂಟರ್‌ನ ಬ್ರೌಸರ್ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಬೇಕು. ಇಂಟರ್ನೆಟ್ ಸಂಪರ್ಕದ ಸಮಸ್ಯೆಗಳು ಮತ್ತು ತಾಂತ್ರಿಕ ದೋಷಗಳಿಂದಾಗಿ ಕೆಪಿಪಿ ಪೋರ್ಟಲ್‌ಗೆ ಪ್ರವೇಶಿಸಲಾಗದಿರುವಿಕೆಗೆ ಉದ್ಯೋಗದಾತನು ಜವಾಬ್ದಾರನಾಗಿರುವುದಿಲ್ಲ.
4) ಯಾವುದೇ ಕೊರಿಜೆಂಡಮ್/ಅಡೆಂಡಮ್ ಅನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–2
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/5545/ಅಡ್ವಟೋರ್/2025–26

ಕರ್ನಾಟಕ ಸರ್ಕಾರ
ರಾಯಚೂರು ಮಹಾನಗರ ಪಾಲಿಕೆ
E-mail:itstaff_ulb_raichura@yahoo.com Website:-www.raichurcity.gov.in
Phone No:08532-226768 Fax No:08532-226316

ಸಂ.ರಾಮಪ/ತಾಂತ್ರಿಕ/ಕಾ/ಅ/2025–26 ದಿನಾಂಕ:07–02–2026.

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗೆ ಕೆ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ಅರ್ಹ ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್ WWW.raichurcity.mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

ಕ್ರ. ಸಂ	ಅನುದಾನದ ವಿವರ	ಕಾಮಗಾರಿಗಳ ವಿವರ	ಇಂಡೆಂಟ್ ನಂಬರ
1	2023–24 ಸಾಲಿನ 15ನೇ ಹಣಕಾಸು ನಿರ್ಬಂಧಿತ ಅನುದಾನ	Purchasing of Power Rod Machine **Estimate Cost Rs.15,00,000/-**	DMA/2025-26/ IND5594/ Call-2
2	ಎಸ್.ಬಿ.ಎಂ 2.0 ಅನುದಾನ	Construction of Two Community Toilet Blocks near the New Deputy Commissioners Office Category - IIA **Estimate Cost Rs. 27,00,000/-**	DMA/2025-26/ BD/ WORK_ INDENT54132/ Call-2
3	2022–23 ಸಾಲಿನ 15ನೇ ಹಣಕಾಸು ನಿರ್ಬಂಧಿತ ಅನುದಾನ	Purchesing of Dust Respratent Machine for SWM in Raichur City. **Estimate Amount Rs. 47,60,000/-**	DMA/2025-26/ IND5948
4	2025–26 ಕೆ.ಕೆ.ಆರ್.ಡಿ.ಬಿ ಅನುದಾನ	Pipe Line for Improving Water Supply and Public Health of Raichur City. **Estimate Cost Rs. 400.00 Lakhs.**	DMA/2025-26/ WS/ WORK_ INDENT53780 /Call-2
5	2025–26 ಮಹಾನಗರ ಪಾಲಿಕೆ ರಾಯಚೂರು ಅನುದಾನ	Upgradation of Record Room in City Corporation Raichur Office. **Estimate Cost Rs. 100.00 Lakhs.**	DMA/2025-26/ BD/WORK_ INDENT 55092
6	2025–26 ಮಹಾನಗರ ಪಾಲಿಕೆ ರಾಯಚೂರು ಅನುದಾನ	Greenification of Raichur City. **Estimate Cost Rs. 100.00 Lakhs.**	DMA/2025-26/ OW/WORK_ INDENT 55094
7	2025–26 ಮಹಾನಗರ ಪಾಲಿಕೆ ರಾಯಚೂರು ಅನುದಾನ	Supply and Installation of desktop computers, printers and laptops to Raichur City Corporation Office, Raichur City. **Estimate Cost Rs. 44.60 Lakhs.**	DMA/2025-26/ IND5959

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.

DIP/RCR/700/KSMCA/703/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಸುಭಾಷಿತ

ದೀನರು, ದುಃಖಿಗಳು ದೇವರಲ್ಲವೇ? ಮೊದಲು ಅವರನ್ನು ಪೂಜಿಸಬೇಕು.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

ನಿಂತಲ್ಲೇ ನಿಂತಿರುವ ಸಿನಿಮಾಬಂಡಿ ಆರಕ್ಕೇರದ ಬೆಂಗಳೂರು ಚಿತ್ರೋತ್ಸವ

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ (ಬಿಫೆಸ್) 17ನೇ ಆವೃತ್ತಿ ನಿರಾಶಾದಾಯಕವಾಗಿ ಕೊನೆಗೊಂಡಿದೆ. ಇದರೊಂದಿಗೆ, ಮತ್ತೊಂದು ಔಪಚಾರಿಕ ಸಿನಿಮಾಋತು ಕೊನೆಗೊಂಡಿದೆ. ಎಂದಿನಂತೆ ಈ ಬಾರಿಯೂ ಗೊಂದಲ, ತರಾತುರಿ, ಅಸ್ಪಷ್ಟತೆ ಮತ್ತು ಮಹತ್ವಾಕಾಂಕ್ಷೆಯ ಕೊರತೆ ಚಿತ್ರೋತ್ಸವದಲ್ಲಿ ಎದ್ದು ಕಾಣಿಸುವಂತಿತ್ತು. ನಾಡಿನ ಐತಿಹಾಸಿಕ ಪರಂಪರೆ, ವೈಜ್ಞಾನಿಕ ಸಾಧನೆ, ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಮತ್ತು ಸಿನಿಮಾ ಕ್ಷೇತ್ರಗಳ ಸಾಧನೆಯ ನಡುವೆಯೇ ಭಾರತೀಯ ಮತ್ತು ಅಂತರರಾಷ್ಟ್ರೀಯ ಸಿನಿಮಾ ಸಂಸ್ಕೃತಿಯ ಮುಖ್ಯಕೇಂದ್ರವಾಗಿ ಬೆಂಗಳೂರು ಬೆಳೆದು ನಿಂತಿದೆ ಎನ್ನುವ 'ಬಿಫೆಸ್'ನ ಆಶಯ ಹೇಳಿಕೆಯಾಗಿಯಷ್ಟೇ ಉಳಿದಿದ್ದು, ರಾಜ್ಯದಲ್ಲಿ ಸಿನಿಮಾ ಸಂಸ್ಕೃತಿ ರೂಪುಗೊಳ್ಳಲು ಅಗತ್ಯವಾದ ರಚನಾತ್ಮಕ ಚಟುವಟಿಕೆಯಾಗಿ ಬೆಳೆಯುವಲ್ಲಿ ಚಿತ್ರೋತ್ಸವ ವಿಫಲವಾಗಿದೆ. ಈ ವೈಫಲ್ಯಕ್ಕೆ ರಾಜ್ಯ ಸರ್ಕಾರ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿಯ ಹೊಣೆಗೇಡಿತನವೇ ನೇರ ಕಾರಣವಾಗಿದೆ. ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಾಧ್ಯತೆಗಳ ರೂಪದಲ್ಲಿ ಅಂತರರಾಷ್ಟ್ರೀಯ ಚಿತ್ರೋತ್ಸವವನ್ನು ರೂಪಿಸುವುದು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಸಾಂಪ್ರದಾಯಿಕ ಆಚರಣೆಗಷ್ಟೇ ಚಿತ್ರೋತ್ಸವಗಳು ಸೀಮಿತವಾಗುವ ಮೂಲಕ ಸಾರ್ವಜನಿಕರ ತೆರಿಗೆ ಹಣ ಪೋಲಾಗುತ್ತಿದೆ. ವೃತ್ತಿಪರತೆ ಹಾಗೂ ಶಿಸ್ತನ್ನು ಮೈಗೂಡಿಸಿಕೊಳ್ಳಲು ವಿಫಲವಾಗುವುದರೊಂದಿಗೆ, ಅಂತರರಾಷ್ಟ್ರೀಯ ಸಿನಿಮಾದ ಗಮನವನ್ನು ರಾಜ್ಯದತ್ತ ಸೆಳೆಯುವುದಕ್ಕೂ 'ಬಿಫೆಸ್'ಗೆ ಸಾಧ್ಯವಾಗಿಲ್ಲ. ಚಿತ್ರೋತ್ಸವ ನಡೆಸುವುದಕ್ಕೆ ಅಗತ್ಯವಾದ ನಿರ್ದೇಶನಾಲಯವೊಂದನ್ನು ರೂಪಿಸುವ ಇಚ್ಛಾಶಕ್ತಿಯನ್ನೂ ಸರ್ಕಾರ ಪ್ರದರ್ಶಿಸಿಲ್ಲ. ಇದರ ಫಲವಾಗಿಯೇ ಸಂತೆಗೆ ಮೂರು ಮೊಳ ಎನ್ನುವಂತೆ ಚಿತ್ರೋತ್ಸವಗಳನ್ನು ನಡೆಸಲಾಗುತ್ತಿದೆ.

ಇಪ್ಪತ್ತು ವರ್ಷಗಳ ನಂತರವೂ ಬೆಂಗಳೂರು ಚಿತ್ರೋತ್ಸವಕ್ಕೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುವುದು ಹಾಗೂ ಸಿನಿಮಾ ಸಂಸ್ಕೃತಿಯ ಅಭಿವ್ಯಕ್ತಿಯಾಗುವುದು ಸಾಧ್ಯವಾಗಿಲ್ಲ.

ಯಾವುದೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಪ್ರಮುಖ ಲಕ್ಷಣ, ನಿಗದಿತ ಕ್ಯಾಲೆಂಡರ್ ಹೊಂದಿರುವುದು. ಆದರೆ, ನಿರ್ದಿಷ್ಟ ಕ್ಯಾಲೆಂಡರ್ ಹೊಂದದಿರುವ ಕಾರಣದಿಂದಾಗಿಯೇ 'ಬಿಫೆಸ್' ಅಂತರರಾಷ್ಟ್ರೀಯ ಮಾನ್ಯತೆ ಪಡೆಯುವುದರಿಂದ ವಂಚಿತವಾಗಿದೆ. 'ಬಿಫೆಸ್'ನ ಮೊದಲ ಆವೃತ್ತಿ ನಡೆದುದು 2006ರಲ್ಲಿ. ಎರಡು ದಶಕಗಳ ನಂತರವೂ ಚಿತ್ರೋತ್ಸವಕ್ಕೊಂದು ಕ್ಯಾಲೆಂಡರ್ ಗೊತ್ತುಪಡಿಸುವುದು ಸರ್ಕಾರಕ್ಕೆ ಸಾಧ್ಯವಾಗದಿರುವುದು ದುರದೃಷ್ಟಕರ. 'ಬಿಫೆಸ್' ನಂತರ ಪ್ರಾರಂಭವಾದ ಚಿತ್ರೋತ್ಸವಗಳು ಕ್ಯಾಲೆಂಡರ್ ಹೊಂದುವ ಮೂಲಕ ವಿಶ್ವದ ಗಮನಸೆಳೆದಿರುವಾಗ, ನಾವಿನ್ನೂ ದಿನಾಂಕ ಸ್ಪಷ್ಟಪಡಿಸಿಕೊಳ್ಳಲೇ ಒದ್ದಾಡುತ್ತಿದ್ದೇವೆ. ಸರ್ಕಾರಕ್ಕೆ ಮನಸ್ಸು ಬಂದಾಗ ಚಿತ್ರೋತ್ಸವ ನಡೆಯುವಂತಾಗಿದೆ. ಜನರ ತೆರಿಗೆಯ ಹಣದಲ್ಲಿ ನಡೆಯುವ ಚಿತ್ರೋತ್ಸವಕ್ಕೆ ಅಗತ್ಯವಾದುದು ಅದ್ದೂರಿತನವಲ್ಲ, ಅರ್ಥಪೂರ್ಣ ಸಾಧ್ಯತೆಗಳು ಎನ್ನುವುದು ಚಿತ್ರೋತ್ಸವದ ಸಂಘಟಕರಿಗೆ ಅರ್ಥವಾದಂತಿಲ್ಲ. ಚಿತ್ರೋತ್ಸವವನ್ನು ಕಲಿಕೆಯ ಕಮ್ಮಟವಾಗಿ ರೂಪಿಸುವ ಪ್ರಯತ್ನಗಳು ಪರಿಣಾಮಕಾರಿಯಾಗಿ ನಡೆದಿಲ್ಲ. ಅಂತರರಾಷ್ಟ್ರೀಯ ಸಿನಿಮಾ ನಿರ್ಮಾತೃಗಳು ಕನಿಷ್ಠ ಸಂಖ್ಯೆಯಲ್ಲಿ ಭಾಗವಹಿಸುತ್ತಿರುವುದು ಬೆಂಗಳೂರು ಚಿತ್ರೋತ್ಸವದ ಚೌಕಟ್ಟನ್ನೇ ಕುಗ್ಗಿಸುವಂತಿದೆ.

ಈ ವರ್ಷ ಪ್ರದರ್ಶನಗೊಂಡ ಸಿನಿಮಾಗಳ ಗುಣಮಟ್ಟ ಹಾಗೂ ಪ್ರದರ್ಶನದ ಸ್ಥಳವೂ ಚಿತ್ರರಸಿಕರ ಟೀಕೆಗೆ ಗುರಿಯಾಗಿದೆ. ಪ್ರತಿ ವರ್ಷ ಸಿನಿಮಾ ಪ್ರದರ್ಶನಗಳು ನಡೆಯುತ್ತಿದ್ದ ಸ್ಥಳವನ್ನು ಸಕಾರಣವಿಲ್ಲದೆ ಈ ವರ್ಷ ಬದಲಾಯಿಸಲಾಗಿತ್ತು. ಈ ಮೊದಲು ಉತ್ಸವ ನಡೆಯುತ್ತಿದ್ದ ಸ್ಥಳ ಸಾರ್ವಜನಿಕರಿಗೆ ಬಂದುಹೋಗಲು ಆಯಕಟ್ಟಿನ ಪ್ರದೇಶದಲ್ಲಿತ್ತು. ಸ್ಥಳಾವಕಾಶದ ದೃಷ್ಟಿಯಿಂದಲೂ ಹಿಂದಿನ ಸ್ಥಳ ಅನುಕೂಲಕರವಾಗಿತ್ತು. ಸ್ಪರ್ಧಾತ್ಮಕ ವಿಭಾಗದಲ್ಲಿನ ಕನ್ನಡ ಸಿನಿಮಾಗಳ ಆಯ್ಕೆಯ ಬಗ್ಗೆಯೂ ಅಸಮಾಧಾನ ವ್ಯಕ್ತವಾಗಿದೆ. ಕನ್ನಡ ಸಾಹಿತ್ಯ, ಕಲೆ ಮತ್ತು ಸಂಸ್ಕೃತಿಯ ರೂಪದಲ್ಲಿ ತನ್ನನ್ನು ಗುರ್ತಿಸಿಕೊಳ್ಳುವ ಚಿತ್ರೋತ್ಸವ, ಕನ್ನಡದ ಆದಿಕವಿ ಪಂಪನ ಜೀವನ–ಸಾಧನೆಯ ಕಥನವಾದ 'ಮಹಾಕವಿ' ಸಿನಿಮಾವನ್ನೇ ಸ್ಪರ್ಧಾತ್ಮಕ ವಿಭಾಗದಿಂದ ದೂರವಿಟ್ಟಿದೆ. ಗುಣಮಟ್ಟ, ಸಾಮಾಜಿಕ ಜವಾಬ್ದಾರಿ ಹಾಗೂ ನಾಡಿನ ಹಿರಿಮೆಯು ಮಾನದಂಡ ಆಗುವುದರ ಬದಲು ವೈಯಕ್ತಿಕ ಆಶೋತ್ತರಗಳು ಸಿನಿಮಾ ಆಯ್ಕೆಯಲ್ಲಿ ಮುಖ್ಯವಾಗುತ್ತಿವೆ ಎನ್ನುವ ಟೀಕೆಯಿಂದ ತಪ್ಪಿಸಿಕೊಳ್ಳುವುದು 'ಬಿಫೆಸ್'ಗೆ ಈ ವರ್ಷವೂ ಸಾಧ್ಯವಾಗಿಲ್ಲ. ಈ ವೈಫಲ್ಯದ ಹಿಂದೆ ಚಲನಚಿತ್ರ ಅಕಾಡೆಮಿಯ ಬೌದ್ಧಿಕ ದಾರಿದ್ರ್ಯವೂ ಇದೆ. ಸಿನಿಮಾದ ಶೈಕ್ಷಣಿಕ ಚಟುವಟಿಕೆಗಳ ವೇದಿಕೆಯಾಗಿದ್ದ ಅಕಾಡೆಮಿ, ಕಳೆದ ಕೆಲವು ವರ್ಷಗಳಿಂದ ತನ್ನನ್ನು ಚಿತ್ರೋತ್ಸವಕ್ಕೆ ಮಾತ್ರ ಸೀಮಿತಗೊಳಿಸಿಕೊಂಡಿದೆ. 'ಬಿಫೆಸ್' ಹಿಂದುಮುಂದಿನ ಎರಡು ಮೂರು ತಿಂಗಳುಗಳಲ್ಲಷ್ಟೇ ಅಕಾಡೆಮಿಯ ಅಸ್ತಿತ್ವ ಪ್ರಕಟಗೊಳ್ಳುತ್ತದೆ. ರಾಜಕೀಯ ಆಯ್ಕೆಗಳ ಮೂಲಕ ಅಕಾಡೆಮಿಯನ್ನು ಪ್ರವೇಶಿಸುವವರಿಂದ ಹೆಚ್ಚಿನದನ್ನು ನಿರೀಕ್ಷಿಸುವುದು ಹೇಗೆ ಸಾಧ್ಯ? ಬೆಂಗಳೂರು ಚಲನಚಿತ್ರೋತ್ಸವದ ಫಲಶ್ರುತಿಯ ಬಗ್ಗೆ ಸರ್ಕಾರ ಗಂಭೀರವಾಗಿ ಚಿಂತಿಸಬೇಕು. ಈಗಿನ ರೂಪದಲ್ಲಿ ಚಿತ್ರೋತ್ಸವವನ್ನು ಉಳಿಸಿಕೊಳ್ಳುವುದರಿಂದ ಹಣವನ್ನು ಪೋಲು ಮಾಡಿದಂತಾಗುತ್ತದೆಯೇ ಹೊರತು, ಅದರಿಂದ ಸಿನಿಮಾ ಸಂಸ್ಕೃತಿಗೆ ಯಾವ ಪ್ರಯೋಜನವೂ ಇಲ್ಲ ಎನ್ನುವುದನ್ನು ಸರ್ಕಾರ ಅರ್ಥ ಮಾಡಿಕೊಳ್ಳಬೇಕು.

ಎಪ್‌ಸ್ಟೈನ್ ಸತ್ಯ

ಎಪ್‌ಸ್ಟೈನ್ ತನ್ನ ಸಂದರ್ಶನದಲ್ಲಿ ಹೇಳಿದ ಮಾತೊಂದು ಗಮನಾರ್ಹ: 'ಜಗತ್ತಿನ ಬಹಳಷ್ಟು ರಾಜಕೀಯ ನಾಯಕರಲ್ಲಿ ನಾನು ಕಂಡಿದ್ದು ಆರ್ಥಿಕ ಅನಕ್ಷರತೆ'. ಈ ಮಾತಲ್ಲಿ ಬಂಡವಾಳವಾದಿ ಕಲ್ಪನೆಯ 'ಆರ್ಥಿಕ ಸಾಕ್ಷರತೆ'ಯ ವ್ಯಾಖ್ಯಾನ ಇದ್ದಂತಿದೆ. ಅದೆಂದರೆ, ಲಾಭಕ್ಕಾಗಿ ಮಕ್ಕಳ ಮೇಲಿನ ಅತ್ಯಾಚಾರ ಒಳಗೊಂಡಂತೆ ಏನೂ ಮಾಡಬಹುದು ಎಂಬ ಅಮಾನುಷತೆ. ಅಲ್ಲಿ ಪ್ರಜ್ಞೆ, ಕರುಣೆ, ಮೈತ್ರಿಗಳ ಪ್ರಶ್ನೆಯೇ ಇರುವುದಿಲ್ಲ.

ರಹಮತ್ ತರೀಕೆರೆ, ಲೇಖಕ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಶೂನ್ಯ ಅಭಿವೃದ್ಧಿ, ಅಧಿಕಾರಕ್ಕಾಗಿ ಕುರ್ಚಿ ಕಿತ್ತಾಟ, ಕಾನೂನು-ಸುವ್ಯವಸ್ಥೆಯ ವೈಫಲ್ಯ ಹಾಗೂ ದಿವಾಳಿಯಾಗಿರುವ ಅರ್ಥವ್ಯವಸ್ಥೆಯಿಂದಾಗಿ ಕರ್ನಾಟಕವನ್ನು ಅಂಧಕಾರಕ್ಕೆ ತಳ್ಳಿರುವ ಕಾಂಗ್ರೆಸ್ ಸರ್ಕಾರ, ಈಗ ನಿಗಮ–ಮಂಡಳಿಗಳಿಗೆ ಕ್ಯಾಬಿನೆಟ್ ದರ್ಜೆ ನೀಡಿ, ಸರ್ಕಾರಿ ಬೊಕ್ಕಸವನ್ನು ಲೂಟಿ ಮಾಡುತ್ತಿದೆ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಶನಿವಾರ, 10-2-2001

• **ರಾಜ್ಯದಲ್ಲಿ ಜನಗಣತಿ ಆರಂಭ**

ಬೆಂಗಳೂರು, ಫೆ. 9– ರಾಷ್ಟ್ರೀಯ ಮಹತ್ವವುಳ್ಳ ಜನಗಣತಿ ಕಾರ್ಯವು ರಾಜ್ಯವ್ಯಾಪಿ ಇಂದು ಬೆಳಗ್ಗೆ ಆರಂಭವಾಯಿತು. ಎಲ್ಲ ಜನರ ಸ್ಥಿತಿಗತಿ ಬಗ್ಗೆ ವಿವರಗಳನ್ನು ಸಂಗ್ರಹಿಸುವ ಈ ಗಣತಿಯು ಈ ತಿಂಗಳ 28ರವರೆಗೆ ನಡೆಯಲಿದೆ.

ರಾಜಭವನದಲ್ಲಿ ರಾಜ್ಯಪಾಲರಾದ ವಿ.ಎಸ್. ರಮಾದೇವಿ ಹಾಗೂ 'ಅನುಗ್ರಹ'ದಲ್ಲಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರು ತಮ್ಮ ತಮ್ಮ ಕುಟುಂಬದ ವಿವರಗಳನ್ನು ಉತ್ಸಾಹದಿಂದಲೇ ಗಣತಿ ಸಿಬ್ಬಂದಿಗೆ ತಿಳಿಸಿದರು. ಆ ಮೂಲಕ ಗಣತಿ ಕಾರ್ಯಕ್ಕೆ ಸಾಂಕೇತಿಕವಾಗಿ ಚಾಲನೆ ನೀಡಿದರು.

75 ವರ್ಷಗಳ ಹಿಂದೆ

ಶನಿವಾರ, 10-2-1951

• **ಸ್ವತಂತ್ರ ಭಾರತದ ಪ್ರಪ್ರಥಮ ಜನಗಣತಿ**

ನವದೆಹಲಿ, ಫೆ. 9– ವಿಶ್ವದ ಬೃಹತ್ತಮ ವೈಜ್ಞಾನಿಕ ಹಾಗೂ ಅತಿ ಸುಲಭ ವೆಚ್ಚದ ಜನಗಣತಿ ಫೆಬ್ರುವರಿ 9ರಂದು ಭಾರತದಾದ್ಯಂತ ಹತ್ತಾರು ಮಹಾನಗರಗಳಲ್ಲಿ, ನೂರಾರು ನಗರಗಳಲ್ಲಿ, ಲಕ್ಷಾಂತರ ಗ್ರಾಮಗಳಲ್ಲಿ ಆರಂಭವಾಗಿ 35 ಕೋಟಿ ಜನರ ವಿವರ ಗಣತಿಯಾಗುವುದು.

ಭಾರತದ ರಾಜಧಾನಿ ದೆಹಲಿಯಲ್ಲಿ ಗಣತಿಯಾಗುವ ಪ್ರಥಮ ವ್ಯಕ್ತಿಯೆಂದರೆ ಅಧ್ಯಕ್ಷ ರಾಜೇಂದ್ರ ಪ್ರಸಾದರು. ಇಪ್ಪತ್ತು ದಿನಗಳ ಕಾಲ ನಡೆಯುವ ಈ ಜನಗಣತಿಗೆ 1951ರ ಮಾರ್ಚ್ ತಿಂಗಳ 1ನೇ ತಾರೀಖಿನ ಸೂರ್ಯೋದಯದ ಕಾಲದಲ್ಲಿನ ಅಂಕಿ ಅಂಶಗಳನ್ನೇ ಪ್ರಾಸ್ತಾವಿಕ ಅಂಶಗಳೆಂದು ಗಣಿಸಲಾಗುವುದು. ಈ ವಿಶಾಲ ಭೂಭಾಗದಲ್ಲಿನ ಪ್ರತಿ ವ್ಯಕ್ತಿಗೆ ಸಂಬಂಧಪಟ್ಟ ಇಪ್ಪತ್ತೆರಡು ಅಂಶಗಳನ್ನು ಸಂಗ್ರಹಿಸಲು ಆರು ಲಕ್ಷ ಗಣನೆದಾರರು ಆರಂಭಿಸುವರು.

ಮೈಸೂರು ಮುಂತಾದ 12 ಸಂಸ್ಥಾನಗಳಲ್ಲಿ ನಿರುದ್ಯೋಗದ ಅಂಕಿಅಂಶ ಸಂಗ್ರಹಿಸಲಾಗುವುದು.

ಚಿರತೆ ಕಣ್ಣಲ್ಲಿ ಕಂಡ ಬದುಕು

ವಿಶ್ಲೇಷಣೆ

ಸಂಜಯ್ ಗುಬ್ಬಿ

ಆ ಭಾನುವಾರದ (ಫೆಬ್ರುವರಿ 7, 2016) ಮಧ್ಯಾಹ್ನ, ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಯಿಂದ ಬಂದ ಒಂದು ಕರೆ ನನ್ನನ್ನು ಬೆಂಗಳೂರಿನ ಐ.ಟಿ ಕೇಂದ್ರವಾದ ವೈಟ್‌ಫೀಲ್ಡ್‌ನ ವಿಬ್‌ಗ್ಯೋರ್ ಶಾಲೆಗೆ ಕರೆದೊಯ್ದಿತು. ಶಾಲೆಯನ್ನು ಪ್ರವೇಶಿಸಿದ್ದ ಚಿರತೆಯೊಂದನ್ನು ಹಿಡಿಯುವ ಕಾರ್ಯಾಚರಣೆಯಲ್ಲಿ ಇಲಾಖೆಗೆ ನೆರವಾಗುವಂತೆ ನನ್ನನ್ನು ಕೋರಲಾಗಿತ್ತು. ಕಾರ್ಯಾಚರಣೆಯ ವೇಳೆ ತೀವ್ರ ಒತ್ತಡದಲ್ಲಿದ್ದ ಚಿರತೆಯಿಂದ ನನಗೆ ಗಂಭೀರವಾದ ಗಾಯಗಳಾದವು. ಹಲವು ಶಸ್ತ್ರಚಿಕಿತ್ಸೆಗಳು, ತಿಂಗಳುಗಳ ಕಾಲದ ಪುನಶ್ಚೇತನದ ಚಿಕಿತ್ಸೆ ಮತ್ತು ಭಾರೀ ಆರ್ಥಿಕ ಹೊರೆಯೊಂದಿಗೆ ಗುಣಮುಖನಾದೆ.

ಘಟನೆಯ ನಂತರ ವರ್ಷವಾದರೂ, ಟ್ಯಾಕ್ಸಿ ಚಾಲಕರು, 'ಸರ್, ಚಿರತೆ ನುಗ್ಗಿದ್ದ ಶಾಲೆಯಲ್ಲಿದ್ದವರು ನೀವೇನಾ?' ಎಂದು ಕೇಳುತ್ತಿದ್ದರು. 'ಹೌದು' ಎಂದಾಗ, 'ಬುಕಿಂಗ್‌ನಲ್ಲಿ ನಿಮ್ಮ ಹೆಸರನ್ನು ನೋಡಿದಾಗಲೇ ನನಗೆ ಗೊತ್ತಾಯಿತು' ಎಂದು ಹೇಳುತ್ತಿದ್ದರು. ಆ ಘಟನೆ ಸಾರ್ವಜನಿಕ ನೆನಪಿನಲ್ಲಿ ಅಷ್ಟು ಆಳವಾಗಿ ನೆಲಸಿತ್ತು. ಇಂದಿಗೂ ಕೆಲವರು, 'ಓಹ್, ಶಾಲೆಯಲ್ಲಿ ಈಜುಕೊಳದ ಬಳಿ ಚಿರತೆಯಿಂದ ಗಾಯಗೊಂಡವರು ನೀವೇನಾ?' ಎಂದು ಕೇಳುತ್ತಾರೆ. ಈಗ ಆ ಘಟನೆ ಜನರ ನೆನಪಿನಿಂದ ನಿಧಾನವಾಗಿ ಮಾಯವಾಗುತ್ತಿರಬಹುದು. ಆದರೆ, ಅದು ನನಗೆ ಮಾನವ ಮತ್ತು ವನ್ಯಜೀವಿ ಸಂಘರ್ಷದ ಕಠಿಣ ವಾಸ್ತವಗಳನ್ನು– ವಿಶೇಷವಾಗಿ ಬದುಕುಳಿದವರು ಅನುಭವಿಸುವ ನೋವು ಮತ್ತು ಅದರ ದೀರ್ಘಕಾಲೀನ ಪರಿಣಾಮಗಳನ್ನು– ಸ್ಪಷ್ಟವಾಗಿ ತಿಳಿಸಿತು.

ಈಗ ನಾನು ಚಿರತೆ ಸಂಘರ್ಷದಿಂದ ಬಳಲುವ ಸಮುದಾಯಗಳೊಂದಿಗೆ ಚರ್ಚಿಸುವಾಗ, ಅವರು ನನ್ನ ಮಾತುಗಳನ್ನು ಗಂಭೀರವಾಗಿ ಪರಿಗಣಿಸುತ್ತಾರೆ. ಅವರ ಆತಂಕ, ನಷ್ಟ ಮತ್ತು ಅನಿಶ್ಚಿತತೆಯ ಬಗ್ಗೆ ನನಗೆ ಚೆನ್ನಾಗಿ ಅರಿವಿದೆ ಎಂದು ಹೇಳುತ್ತಾರೆ. ಈ ಅನುಭವವೇ ಮಾನವ–ವನ್ಯಜೀವಿ ಸಂಘರ್ಷಕ್ಕೆ ಒಳಗಾಗುವವರಿಗೆ ನಾವು ಹೆಚ್ಚು ಮಾನವೀಯ ಮತ್ತು ಸಹಾನುಭೂತಿಯ ಪ್ರತಿಕ್ರಿಯೆ ನೀಡಬೇಕು ಎಂಬುದರ ಪರವಾಗಿ ನನ್ನನ್ನು ದೃಢವಾದ ವಕ್ತಾರನನ್ನಾಗಿ ಮಾಡಿದೆ. ವನ್ಯಜೀವಿಗಳಿಂದ ನಷ್ಟ ಅನುಭವಿಸುವ ಕುಟುಂಬಗಳಿಗೆ ಸರ್ಕಾರ ಮತ್ತು ಅಧಿಕಾರಿಗಳು ಹೆಚ್ಚು ದಯಾಳು ಮತ್ತು ಉದಾರ ಆಗಿರಬೇಕು ಎಂದು ನಿರಂತರವಾಗಿ ಹೇಳುತ್ತಿರುತ್ತೇನೆ.

ಚಿರತೆಯಿಂದ ಗಾಯಗೊಂಡ ಘಟನೆಯ ನಂತರ ನನ್ನ ಆರೋಗ್ಯದ ಮೇಲೆ ತೀವ್ರವಾದ ಪರಿಣಾಮಗಳಾದವು. ದೀರ್ಘಕಾಲ ನನಗೆ ನಡೆದಾಡುವುದೇ ಒಂದು ಸವಾಲಾಗಿ ಪರಿಣಮಿಸಿತು. ಸಕ್ರಿಯ ಜೀವನ ನಡೆಸುತ್ತಿದ್ದವನು ಸ್ವಲ್ಪ ದೂರ ನಡೆಯುವುದಕ್ಕೂ ಹೋರಾಡುವ ಸ್ಥಿತಿ ಎದುರಾಯಿತು. ಇದರ ಪರಿಣಾಮ ದೇಹದ ಮೇಲಷ್ಟೇ ಅಲ್ಲ, ಮಾನಸಿಕ ಆರೋಗ್ಯದ ಮೇಲೂ ಉಂಟಾಯಿತು. ವೈದ್ಯಕೀಯ ವಿಜ್ಞಾನದಲ್ಲಿನ ಪ್ರಗತಿ ಮತ್ತು ನನ್ನ ಕುಟುಂಬದ ಅಚಲ ಬೆಂಬಲದಿಂದಾಗಿ, 2022ರಲ್ಲಿ ನಾನು ಯಥಾಸ್ಥಿತಿಗೆ ಮರಳಲು ಸಾಧ್ಯವಾಯಿತು.

ನನ್ನ ಚೇತರಿಕೆ ಅಳೆಯಲು ವೈಯಕ್ತಿಕ ಗುರಿಯನ್ನು ನಿಗದಿಪಡಿಸಿಕೊಂಡಿದ್ದೆ. ಪಶ್ಚಿಮ ಘಟ್ಟಗಳಲ್ಲಿರುವ, ನನ್ನ ಪ್ರೀತಿಯ ಕುದುರೆಮುಖ ಶಿಖರವನ್ನು ಏರುವ ಗುರಿಯದು. 2023ರ ನವೆಂಬರ್‌ನಲ್ಲಿ ಕೊನೆಗೂ ಆ ಶಿಖರದ ಮೇಲೆ ನಿಂತೆ. ಆ ಕ್ಷಣ ಉಲ್ಲಾಸಭರಿತವಾಗಿತ್ತು. ಕೇವಲ ದೈಹಿಕ ಸಾಧನೆಯಷ್ಟೇ ಅಲ್ಲ, ಅನಿರೀಕ್ಷಿತ ಸಂಕಷ್ಟಗಳನ್ನೂ ದೃಢತೆಯಿಂದ ಎದುರಿಸಬಹುದು ಎಂದು ಮನದಟ್ಟಾಯಿತು. ವಿಚಿತ್ರವೆಂದರೆ, ದೃಢತೆಯ ಜೀವನತತ್ತ್ವವನ್ನು ನನಗೆ ಕಲಿಸಿದ್ದು ಒಂದು ಚಿರತೆ. ಆದರೆ, ಅದೇ ಪ್ರಭೇದದ ಹಾಗೂ ಅನೇಕ ಇತರ ವನ್ಯಜೀವಿಗಳ ಭವಿಷ್ಯ ಇಂದು ಹೆಚ್ಚು ಕತ್ತಲೆಯಾಗಿದೆ.

ಚಿರತೆಗಳೊಂದಿಗಿನ ಮಾನವನ ಸಂಘರ್ಷ ಹಲವು ಪಟ್ಟು ಹೆಚ್ಚಾಗಿದೆ. ನೂರಾರು ಚಿರತೆಗಳನ್ನು ಹಿಡಿದು ಸ್ಥಳಾಂತರಿಸಲಾಗಿದೆ ಅಥವಾ ಪುನರ್ವಸತಿ ಕೇಂದ್ರಗಳಿಗೆ ಸಾಗಿಸಲಾಗಿದೆ. ಕೆಲವು ಜನರು ಪ್ರಾಣ ಕಳೆದುಕೊಂಡಿದ್ದಾರೆ; ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ. ಈ ಸಂಘರ್ಷದ ಕಾರಣಗಳು ಎಲ್ಲರಿಗೂ ತಿಳಿದಿರುವುದೇ: ಆವಾಸಸ್ಥಾನಗಳ ನಾಶ, ಬಲಿಪ್ರಾಣಿಗಳ ಬೇಟೆ, ಮತ್ತು ಮಾನವ–ಚಿರತೆ ಸಂಘರ್ಷದ ಬಗ್ಗೆ ಅರಿವಿನ ಅಭಾವ. ಆದರೆ, ಪರಿಸ್ಥಿತಿ ಬದಲಾಗುತ್ತಿಲ್ಲ.

> ವನ್ಯಜೀವಿ ಹಾಗೂ ಮಾನವ ಸಂಘರ್ಷದ ಬಗೆಗಿನ ಬಹುತೇಕ ಚಿತ್ರಣಗಳು ಏಕಮುಖವಾಗಿವೆ. ಈ ಸಂಘರ್ಷದಲ್ಲಿ ಪ್ರಾಣಿಗಳ ಬಗೆಗಿನ ಕರುಣೆಯಂತೆಯೇ ಬಾಧಿತರನ್ನೂ ಸಹಾನುಭೂತಿಯಿಂದ ನೋಡಬೇಕಾಗಿದೆ. 'ಸಹಬಾಳ್ವೆ'ಯ ಪ್ರಯತ್ನ ಹಾಗೂ ವಿಶ್ಲೇಷಣೆಗಳು ವಸ್ತುಸ್ಥಿತಿಯ ಆಧಾರದಲ್ಲಿ ನಡೆಯಬೇಕೇ ಹೊರತು, ಭಾವುಕತೆಯನ್ನು ಆಧರಿಸಿ ಅಲ್ಲ.

ಬಾಧಿತರಲ್ಲಿ ಹೆಚ್ಚಿನವರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳು. ಅವರ ಅಸಹಾಯಕತೆಯಿಂದಾಗಿ ಪ್ರತೀಕಾರದ ಕ್ರಮಗಳನ್ನು ಕೈಗೊಳ್ಳಲು ಹೆದರುತ್ತಾರೆ. ಕಳವಳಕಾರಿಯಾದ ವಿಷಯವೆಂದರೆ, ಈ ಅಸಹಾಯಕತೆಯನ್ನು ಕೆಲವು ಎನ್‌ಜಿಒಗಳು 'ಮಾನವ–ವನ್ಯಜೀವಿ ಸಹಬಾಳ್ವೆ' ಎಂಬ ನಾಮಕರಣ ಮಾಡಿ ಅನುದಾನ, ಪ್ರಶಸ್ತಿಗಳು, ಮತ್ತು ಅಂತರರಾಷ್ಟ್ರೀಯ ಮಟ್ಟದ ಮನ್ನಣೆಗೆ ಉಪಯೋಗಿಸಿಕೊಳ್ಳುತ್ತಿವೆ. ಈ ಕಥಾನಕ ಚಿರತೆಗಳಿಗೆ ಮಾತ್ರ ಸೀಮಿತವಲ್ಲ; ಆನೆ, ಹುಲಿ, ಕರಡಿ, ಮೊಸಳೆ ಇನ್ನಿತರ ಹಲವು ವನ್ಯಜೀವಿಗಳ ಸಂಘರ್ಷವನ್ನು ಇದೇ ರೀತಿಯಲ್ಲಿ ಚಿತ್ರಿಸಲಾಗುತ್ತಿದೆ.

ಸಕಲೇಶಪುರ ತಾಲ್ಲೂಕಿನಲ್ಲಿ ಕೆಲಸ ಮಾಡುವ ಸಂಸ್ಥೆಯೊಂದು ಅಲ್ಲಿ ಸಂಘರ್ಷದ ಕಾರಣಕ್ಕೆ ಹಿಡಿಯುತ್ತಿದ್ದ ಆನೆಗಳ ಬಗ್ಗೆ ಸಾಕ್ಷ್ಯಚಿತ್ರವೊಂದನ್ನು ನಿರ್ಮಿಸಿತು. ಅದರಲ್ಲಿ ಆನೆಗಳಿಗೆ ಆಗುತ್ತಿದ್ದ ಹಿಂಸೆಯನ್ನು ಬಹು ಹೃದಯಸ್ಪರ್ಶಿಯಾಗಿ ವಿವರಿಸಲಾಗಿತ್ತು, ಮತ್ತು ಆನೆಗಳನ್ನು ಹಿಡಿಯಲೇಬಾರದು ಎಂದು ವಾದಿಸಲಾಗಿತ್ತು. ಆ ಸಂಸ್ಥೆಗೆ ಸಕಲೇಶಪುರ ತಾಲ್ಲೂಕಿನಲ್ಲಿ ಮಾನವ–ಆನೆ ಸಂಘರ್ಷದ ಬಗ್ಗೆ ಕೆಲಸ ಮಾಡಲು ವಿದೇಶಗಳಿಂದ ಹಣ ಬರಲು ಪ್ರಾರಂಭವಾದೊಡನೆ ಆನೆಗಳ ಬಗ್ಗೆ ಮಾತನಾಡುವುದನ್ನು ನಿಲ್ಲಿಸಿ ಬಿಟ್ಟಿತು. ಅಲ್ಲೀಗ ಹತ್ತಾರು ಆನೆಗಳನ್ನು ಹಿಡಿದರೂ, ವಿದ್ಯುತ್ ಬೇಲಿಯಿಂದ, ಗುಂಡೇಟಿನಿಂದ, ಹಲವು ಅನೈಸರ್ಗಿಕ ಕಾರಣಗಳಿಂದ ಆನೆಗಳು ಸಾಯುತ್ತಿದ್ದರೂ ಆನೆಗಳ ಬಗ್ಗೆ ಇದ್ದ ಅವರ ಪ್ರೀತಿ ಯಾಕೋ ಬತ್ತಿಹೋಗಿಬಿಟ್ಟಿದೆ. ಒಂದೆಡೆ ಆನೆಗಳು ಯಾತನಾಸ್ಥಿತಿಯಲ್ಲಿವೆ, ಅವುಗಳ ಆವಾಸಸ್ಥಾನ ಕಾಣೆಯಾಗುತ್ತಿದೆ, ಇನ್ನೊಂದೆಡೆ ಜನರೂ ಸಾಯುತ್ತಿದ್ದಾರೆ. ಆದರೆ, ಆ ಸಂಸ್ಥೆ ಈ ಸನ್ನಿವೇಶವನ್ನು ಆನೆ–ಮಾನವ ಸಹಬಾಳ್ವೆ ಎಂದು ಬಿಂಬಿಸಿ ರಾಷ್ಟ್ರೀಯ, ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ 'ಒಗ್ಗರಣೆ ಎಣ್ಣೆ ಪಾತ್ರೆ ಮುನ್ನೆಲೆಗೆ ಬಂದ ಹಾಗೆ' ಡೋಲು, ತುತ್ತೂರಿ ಊದಿಸಿಕೊಳ್ಳುತ್ತಿದೆ. ಈ ಮಧ್ಯೆ ಸಮುದಾಯಗಳು ಮತ್ತು ಆನೆಗಳು ಬೆಲೆ ತೆರುತ್ತಲೇ ಇವೆ.

ಇತ್ತೀಚೆಗೆ ಮಹಾರಾಷ್ಟ್ರದ ಜುನ್ನಾರ್ ವಿಧಾನಸಭಾ ಕ್ಷೇತ್ರದ ಶಾಸಕ ಶರದ್ ಸೋನಾವನೆ ಅವರು ಚಿರತೆಯ ಉಡುಗೆಯನ್ನು ತೊಟ್ಟು ಶಾಸಕಾಂಗ ಸಭೆಗೆ ಬಂದಿದ್ದರು. ಅವರ ಕ್ಷೇತ್ರದಲ್ಲಿ ಚಿರತೆ ಸಂಘರ್ಷ ಅತಿಯಾಗಿದೆಯೆಂದು ಪ್ರತಿಭಟನೆ ವ್ಯಕ್ತಪಡಿಸಿದರು. ಜುನ್ನಾರ್ ತಾಲ್ಲೂಕಿನಲ್ಲಿ ಬಹುತೇಕ ಚಿರತೆಗಳಿರುವುದು ಕಬ್ಬಿನಗದ್ದೆಗಳಲ್ಲಿ ಮತ್ತು ಅವುಗಳಿಗೆ ಹೆಚ್ಚಾಗಿ ಜಾನುವಾರುಗಳು ಮತ್ತು ನಾಯಿಗಳೇ ಆಹಾರ. ದುರದೃಷ್ಟವಶಾತ್, ಆ ಪರಿಸರದಲ್ಲಿ ಅತಿಯಾದ ಜಾನುವಾರು ನಷ್ಟ, ಪ್ರಾಣಹಾನಿ ಆಗುತ್ತಲೇ ಇದೆ. ವನ್ಯಜೀವಿ ವಿಜ್ಞಾನಿಯೊಬ್ಬರು ಅಲ್ಲಿ ಅಧ್ಯಯನ ನಡೆಸಿ, ಚಿರತೆಗಳು ಮಾನವರೊಡನೆ ಯಾವ ತೊಂದರೆ ಇಲ್ಲದೆ ಸಹಬಾಳ್ವೆ ನಡೆಸುತ್ತಿದ್ದಾರೆಂದು ಏಕಪಕ್ಷೀಯವಾಗಿ ಘೋಷಿಸಿಬಿಟ್ಟರು. ಅವರಿಗೆ ಅಂತರರಾಷ್ಟ್ರೀಯ ಮಟ್ಟದ ಹಾರ–ತುರಾಯಿಗಳ, ಸಹಾಯಧನದ ಜೇನಿನ ಹೊಳೆ ಹರಿದುಬಂತು. ಕೆಲವೇ ತಿಂಗಳುಗಳಲ್ಲಿ ಆ ವಿಜ್ಞಾನಿ 'ಜೇನು ಕಿತ್ತ ಮೇಲೆ ನಂದೇನ್ ಕೆಲ್ಸ' ಎನ್ನುವಂತೆ ಇನ್ನೊಂದು ಜೇನುಗೂಡಿಗೆ ಹಾರಿಬಿಟ್ಟರು. ಇಂದು ಜುನ್ನಾರ್ ತಾಲ್ಲೂಕು ದೇಶದಲ್ಲೇ ಮಾನವ–ಚಿರತೆ ಸಂಘರ್ಷಕ್ಕೆ ಅಪಖ್ಯಾತಿ ಪಡೆದಿದೆ. ಭಯ ಮತ್ತು ಅಸಹಾಯಕತೆಯನ್ನು ಸಹಬಾಳ್ವೆ ಎಂದು ಕರೆಯುವುದು ಘೋರ ಅಪರಾಧ.

ಸರ್ಕಾರದ ಪ್ರತಿಕ್ರಿಯೆಗಳು ಸಾಮಾನ್ಯವಾಗಿ ತಡವಾಗುತ್ತವೆ; ಕ್ರಮ ಕೈಗೊಳ್ಳುವ ಹೊತ್ತಿಗೆ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿರುತ್ತದೆ. ಕೆಲವು ಎನ್‌ಜಿಒಗಳು ಗೆದ್ದೆತ್ತಿನ ಬಾಲ ಹಿಡಿಯುತ್ತಿವೆ. ಸಂಘರ್ಷ ಹೆಚ್ಚಿದಂತೆ ವನ್ಯಜೀವಿ ಸಂರಕ್ಷಣೆಗೆ ಸ್ಥಳೀಯ ಸಮುದಾಯಗಳ ಬೆಂಬಲ ಕುಸಿದಿದೆ, ಪ್ರತೀಕಾರದ ಹೊಗೆಯಾಡುತ್ತಿದೆ. ವನ್ಯಜೀವಿ ಸಂರಕ್ಷಣೆ ಎಂದರೆ ಶಾಸಕಾಂಗ ತಿರಸ್ಕಾರದ ಪ್ರತಿಕ್ರಿಯೆ ತೋರುತ್ತಿದೆ. ಒತ್ತಡಗಳಿಂದ ವನ್ಯಜೀವಿಗಳ ಪರವಾಗಿ ಪ್ರಬಲವಾದ ನಿಲುವುಗಳನ್ನು ಕಾರ್ಯಾಂಗ ತೆಗೆದುಕೊಳ್ಳುತ್ತಿಲ್ಲ. ಮಾಧ್ಯಮಗಳು ಜನರಲ್ಲಿ ಅರಿವು ಮೂಡಿಸುವ ಬದಲು ಭಯದ ವಾತಾವರಣ ನಿರ್ಮಿಸುವ ಹಾಗೆ ಸುದ್ದಿಗಳನ್ನು ಬಿತ್ತರಿಸುತ್ತಿವೆ. ಈ ಎಲ್ಲ ಗೊಂದಲಗಳ ಮಧ್ಯೆ, ಅತಿದೊಡ್ಡ ನಷ್ಟ ಅನುಭವಿಸುತ್ತಿರುವುದು ವನ್ಯಜೀವಿಗಳು.

ಆ ದಿನದ ಗಾಯದ ಗುರುತುಗಳು ಈಗ ನನ್ನ ಜೀವನದ ಶಾಶ್ವತ ಭಾಗವಾಗಿವೆ. ಕೆಲವು ಕಾಣಿಸುವ ಹಾಗಿವೆ, ಕೆಲವು ಅಡಗಿವೆ. ಆದರೆ, ನನಗೆ ಹೆಚ್ಚಿನ ನೋವು ತಂದಿರುವುದು ಆ ದಿನದ ಘಟನೆಯಲ್ಲ, ಪ್ರಸ್ತುತ ದೇಶದಲ್ಲಿ ಮಾನವ–ವನ್ಯಜೀವಿ ಸಂಘರ್ಷ ಸಾಗುತ್ತಿರುವ ದಿಕ್ಕು. ಗಾಯದ ಗುರುತುಗಳನ್ನು ನನ್ನ ವೈಫಲ್ಯದ ಸಂಕೇತಗಳೆಂದು ನೋಡಬಹುದಿತ್ತು. ಆದರೆ, ಅವು ನಾನು ಬದುಕಿ ಉಳಿದ ಸಾಕ್ಷ್ಯಗಳು. 7ನೇ ಫೆಬ್ರುವರಿ 2016 ನನ್ನ ಅಂತಿಮ ದಿನವಾಗಿರಲಿಲ್ಲ, ಅದು ನನ್ನ ಉಳಿದ ಜೀವನದ ಮೊದಲ ದಿನವಾಗಿದೆ. ಆ ದೃಷ್ಟಿಕೋನವೇ ನನ್ನನ್ನು ಮಾನವ–ವನ್ಯಜೀವಿ ಸಂಘರ್ಷದ ಬಗ್ಗೆ ಮಾತನಾಡುವಂತೆ ಮಾಡುತ್ತದೆ.

ನಮಗೆ ನಿಜವಾಗಿಯೂ ಸಹಬಾಳ್ವೆಯಲ್ಲಿ ನಂಬಿಕೆ ಇದ್ದರೆ, ಘೋಷಣೆಗಳನ್ನು ಮೀರಿ ನಿಲ್ಲಬೇಕು. ಮಾನವ–ವನ್ಯಜೀವಿ ಸಂಘರ್ಷವನ್ನು ಎದುರಿಸಲು ಸಹಾನುಭೂತಿ, ಸಮಯೋಚಿತ ಪ್ರತಿಕ್ರಿಯೆ, ಬಾಧಿತ ಸಮುದಾಯಗಳೊಂದಿಗೆ ಪ್ರಾಮಾಣಿಕ ಸಂವಹನ ಮತ್ತು ಸಂಘರ್ಷದ ಮೂಲ ಕಾರಣಗಳನ್ನು ಎದುರಿಸುವ ಪ್ರಾಮಾಣಿಕ ಪ್ರಯತ್ನಗಳು ಅಗತ್ಯ. ಆಗ ಮಾತ್ರ ಸಹಬಾಳ್ವೆಗೆ ನಿಜವಾದ ಅವಕಾಶ (ಘೋಷಣೆಯಾಗಿ ಅಲ್ಲ) ನೀಡಲು ಸಾಧ್ಯವಾಗುತ್ತದೆ.

ವಾಚಕರ ವಾಣಿ

ಭಾವೈಕ್ಯದ ಮದುವೆ: ಸಮಾಜಕ್ಕೆ ಮಾದರಿ

ಹುಕ್ಕೇರಿ ತಾಲ್ಲೂಕಿನ ಬಸ್ತವಾಡ ಗ್ರಾಮದ ಮುಸ್ಲಿಂ ದಂಪತಿಯು ಹಿಂದೂ ಧರ್ಮದ ಇಬ್ಬರು ಅನಾಥ ಮಕ್ಕಳನ್ನು ಸಾಕಿ, ಒಬ್ಬರ ಮದುವೆ ಮಾಡಿರುವುದು ವರದಿಯಾಗಿದೆ. ಪ್ರಸ್ತುತ ಸ್ವಂತ ಮಕ್ಕಳ ಮದುವೆ ಮಾಡುವುದೇ ಕಷ್ಟಕರವಾಗಿದೆ. ಇಂತಹ ಸ್ಥಿತಿಯಲ್ಲಿ ಅನ್ಯಧರ್ಮದ ಮಕ್ಕಳನ್ನು ಸಾಕಿ ಸಲಹುವುದು ಸಾಮಾನ್ಯ ಸಂಗತಿಯಲ್ಲ. ಭಾವೈಕ್ಯದ ದ್ಯೋತಕವಾದ ಇಂತಹ ಬೆಳವಣಿಗೆಯು ಕನ್ನಡದ ನೆಲದಲ್ಲಿನ ಬಹುತ್ವ ಸಂಸ್ಕೃತಿಯನ್ನು ಜಗತ್ತಿಗೆ ಪರಿಚಯಿಸುತ್ತದೆ. ಪ್ರಚೋದನಕಾರಿ ಮಾತುಗಳ ಮೂಲಕ ಧಾರ್ಮಿಕ ಭಾವನೆ ಕೆರಳಿಸುವುದೇ ಕೆಲವರಿಗೆ ಚಟವಾಗಿದೆ. ಅಂತಹವರಿಗೆ ಮೆಹಬೂಬ್ ಹಸನ್ ನಾಯಿಕವಾಡಿ (ಮುಲ್ಲಾ) ಹಾಗೂ ನೂರಜಾನ್ ದಂಪತಿಯ ಬದುಕು ಪಾಠವಾಗಬೇಕಿದೆ. ಕರ್ನಾಟಕವು ಎಲ್ಲ ಧರ್ಮಗಳನ್ನು ಪ್ರೀತಿಸುವ ನಾಡೆಂದು ಯುವಜನತೆಗೆ ಮನವರಿಕೆ ಮಾಡಿಕೊಡಬೇಕಿದೆ.

ಮಾದಪ್ಪ ಎಸ್. ಕಠಾರಿ, ವಿಜಯಪುರ

ಕೃಷಿಕರ ಇಳಿಕೆ: ಭೂಸ್ವಾಧೀನವೇ ಕಾರಣ

ದೇಶದಲ್ಲಿ ಕೃಷಿಕರ ಸಂಖ್ಯೆ ಶೇ 82ರಿಂದ ಶೇ 62ಕ್ಕೆ ಇಳಿದಿದೆ. 140 ಕೋಟಿಯಷ್ಟಿರುವ ಜನರಿಗೆ ಅಗತ್ಯ ಇರುವಷ್ಟು ಆಹಾರಧಾನ್ಯ ಉತ್ಪಾದಿಸಲಾಗುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಒಪ್ಪಿಕೊಂಡಿದ್ದಾರೆ. ಆದರೂ, ಅಭಿವೃದ್ಧಿ ಹೆಸರಿನಲ್ಲಿ ಕೃಷಿ ಜಮೀನುಗಳನ್ನು ಭೂಸ್ವಾಧೀನ ಮಾಡುತ್ತಿರುವುದು ಏಕೆ? ಕೈಗಾರಿಕೆಗಳು ಸ್ಥಾಪನೆಯಾಗಬೇಕು ನಿಜ. ಆದರೆ, ರೈತರ ಹಿತಾಸಕ್ತಿ ಕಡೆಗಣಿಸುವುದರಿಂದ ಅವರ ಸಂಖ್ಯೆ ಕಡಿಮೆಯಾಗುತ್ತಿದೆ ಎಂಬ ಅರಿವು ಆಡಳಿತ ನಡೆಸುವವರಿಗೆ ಇರಬೇಕಲ್ಲವೇ? ಇತ್ತೀಚೆಗೆ ವಿದ್ಯಾವಂತರು ಕೃಷಿಯತ್ತ ಒಲವು ತೋರುತ್ತಿದ್ದಾರೆ ಎಂಬುದು ಗಮನಾರ್ಹ. ಮುಖ್ಯಮಂತ್ರಿಯವರ ಸಲಹೆಯಂತೆ ಕೃಷಿಕರು ಉದ್ಯಮಿಗಳಾಗಬೇಕು. ವಿದ್ಯಾವಂತರು ಕೈಗಾರಿಕೆಗಳಿಗಿಂತ ಕೃಷಿಯಲ್ಲಿ ತೊಡಗಿಸಿಕೊಳ್ಳುವುದನ್ನು ಪ್ರೋತ್ಸಾಹಿಸಬೇಕಲ್ಲವೇ? ಸರ್ಕಾರ ಕೃಷಿ ಜಮೀನುಗಳನ್ನು ಸ್ವಾಧೀನ ಮಾಡಿಕೊಳ್ಳದೆ ಬರಡು ಭೂಮಿಯ ಬಳಕೆಗೆ ಮುಂದಾಗಲಿ.

ಜಿ. ಬೈರೇಗೌಡ ಕೊಡಿಗೇಹಳ್ಳಿ, ನೆಲಮಂಗಲ

ಸರ್ಕಾರಿ ಶಿಕ್ಷಕರ ಮೇಲಿನ ಹೊರೆ ತಗ್ಗಿಸಿ

ರಾಜ್ಯದಲ್ಲಿ ಮುಚ್ಚುತ್ತಿರುವ ಸರ್ಕಾರಿ ಶಾಲೆಗಳ ಸಂಖ್ಯೆ ಹೆಚ್ಚುತ್ತಿದೆ. ಇದರಿಂದ ಬಡ ಹಾಗೂ ಕೆಳವರ್ಗದ ಮಕ್ಕಳ ಶೈಕ್ಷಣಿಕ ಬದುಕು ಸಂಕಷ್ಟಕ್ಕೆ ಸಿಲುಕಲಿದೆ. ಸರ್ಕಾರ ಶಾಲೆಗಳ ಉಳಿವಿಗೆ ಗಮನಹರಿಸಬೇಕು. ಈ ಶಾಲೆಗಳನ್ನು ಕೆಪಿಎಸ್ ಶಾಲೆಗಳಿಗೆ ವರ್ಗಾಯಿಸಲು ಮುಂದಾಗಿರುವುದು ಗಂಭೀರ ಸಮಸ್ಯೆ. ಶಿಕ್ಷಕರ ಕೊರತೆ ನೀಗಿಸಬೇಕು. ಜೊತೆಗೆ, ಶಿಕ್ಷಕರನ್ನು ಸರ್ಕಾರದ ಯಾವುದೇ ಕೆಲಸಗಳಿಗೆ ನಿಯೋಜಿಸಬಾರದು. ಸಮೀಕ್ಷೆಗಳ ಹೊರೆ ತಪ್ಪಿದರೆ ಬೋಧನೆಗೆ ನೆರವಾಗಲಿದೆ. ಇದು ಮಕ್ಕಳ ಕಲಿಕೆಗೆ ಸಹಕಾರಿಯಾಗಲಿದೆ. ಬೇರೆ ಕ್ಷೇತ್ರಗಳಲ್ಲಿರುವ ಉದ್ಯೋಗಿಗಳನ್ನು ಸಮೀಕ್ಷೆಗೆ ಬಳಸಿಕೊಳ್ಳಬಹುದು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಈ ಬಗ್ಗೆ ಗಮನಹರಿಸಬೇಕಿದೆ.

ಶ್ರೀಧರ ವಂದಾಲ, ಅಥಣಿ

ಅಭಿವೃದ್ಧಿ ನೆಪ; ಕೆಸರೆರಚಾಟದ್ದೇ ಜಪ

'ನಮ್ಮ ಮೆಟ್ರೊ' ಪ್ರಯಾಣ ದರ ಕುರಿತಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಕೆಸರೆರಚಾಟದಲ್ಲಿ ತೊಡಗಿವೆ. ಜನಸಾಮಾನ್ಯರ ಜೀವನದ ಜೊತೆಗೆ ಚೆಲ್ಲಾಟವಾಡುತ್ತಿವೆ. ಸರ್ಕಾರಗಳು ನಡೆಸುವ ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ಸೇವಾ ಮನೋಭಾವವಿರಬೇಕೇ ಹೊರತು ವ್ಯಾಪಾರಿ ಮನೋಭಾವವಿರಬಾರದು. ಆದರೆ, ಜನಪ್ರತಿನಿಧಿಗಳು ಸಾರ್ವಜನಿಕ ಹಿತಾಸಕ್ತಿ ಮರೆತು ಒಬ್ಬರ ಮೇಲೊಬ್ಬರು ಆರೋಪ ಮಾಡುವುದನ್ನು ಬಿಟ್ಟು ಸರ್ಕಾರಗಳ ಕಿವಿ ಹಿಂಡುವ ಕೆಲಸ ಮಾಡಲಿ. ಈಗಾಗಲೇ, ರೈಲ್ವೆ ಇಲಾಖೆಯಲ್ಲಿ ಕನ್ನಡಿಗರ ಕಡೆಗಣನೆ ನಡೆಯುತ್ತಿದೆ. ಈಗ ಮೆಟ್ರೊ ಟಿಕೆಟ್ ದರ ಹೆಚ್ಚಿಸಿದರೆ ಬಡವರ ಜೀವನ ದುಸ್ತರವಾಗಲಿದೆ. ಬಿಜೆಪಿ ನಾಯಕರು ರಾಜ್ಯ ಸರ್ಕಾರದ ವಿರುದ್ಧ ವೃಥಾ ಆರೋಪ ಮಾಡುವುದನ್ನು ಬಿಡಬೇಕು. ಕೇಂದ್ರದ ಮೇಲೆ ಒತ್ತಡ ಹೇರಿ ರಾಜ್ಯದ ಅಭಿವೃದ್ಧಿಗೆ ಶ್ರಮಿಸಬೇಕು.

ಚಿ. ಉಮಾ ಶಂಕರ್ ಲಕ್ಷ್ಮೀಪುರ, ಬೆಂಗಳೂರು

ಶಾಸಕರ ಸ್ವಹಿತಾಸಕ್ತಿ ಪರಾಕಾಷ್ಠೆ ಸರಿಯೆ?

'ಡಿಕೆಶಿ ಕೇಳಿದರೆ ಪ್ರಾಣವನ್ನೇ ಕೊಡುತ್ತೇನೆ' ಎಂದು ಚನ್ನಗಿರಿಯ ಕಾಂಗ್ರೆಸ್ ಶಾಸಕ ಶಿವಗಂಗಾ ಬಸವರಾಜು ಹೇಳಿದ್ದಾರೆ. ಪ್ರಾಣ ಕೇಳುವುದಾಗಲೀ, ಪ್ರಾಣ ಕೊಡುವುದಾಗಲೀ ವಾಸ್ತವದಲ್ಲಿ ಸಾಧ್ಯವಿಲ್ಲದಿದ್ದರೂ, ಆ ಶಾಸಕರು ಈ ರೀತಿ ಹೇಳಿರುವುದನ್ನು ಕೇಳಿದರೆ, ಇದೊಂದು ಅಂಧಭಕ್ತಿಯ ಅಥವಾ ಸ್ವಹಿತಾಸಕ್ತಿಯ ಪರಾಕಾಷ್ಠೆ ಎನಿಸುತ್ತದೆ. ವೈಚಾರಿಕ ಮತ್ತು ವೈಜ್ಞಾನಿಕ ಚಿಂತನೆ ಕಳೆದುಕೊಳ್ಳುತ್ತಿರುವ ಇಂದಿನ ಪ್ರಜಾಪ್ರಭುತ್ವ ದಿನೇ ದಿನೇ ರಾಜಪ್ರಭುತ್ವದ ಕಡೆಗೆ ಸಾಗುತ್ತಿದೆಯೇನೋ ಅನ್ನಿಸುತ್ತಿದೆ. ವಾಸ್ತವಿಕ ಸ್ಥಿತಿಗತಿಯನ್ನು ಅರ್ಥ ಮಾಡಿಕೊಳ್ಳಲು ಸಾಮರ್ಥ್ಯವಿಲ್ಲದ ಇಂತಹ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತಿರುವ ಮತದಾರರು ಎಚ್ಚರಿಕೆವಹಿಸಬೇಕು.

ತಾ.ಸಿ. ತಿಮ್ಮಯ್ಯ, ಬೆಂಗಳೂರು

ಖಾದಿ ಬಟ್ಟೆಯತ್ತ ಹೆಚ್ಚಲಿ ಜನರ ಒಲವು

ಸರ್ಕಾರಿ ನೌಕರರು ತಿಂಗಳಲ್ಲಿ ಒಂದು ದಿನ ಸ್ವಯಂಪ್ರೇರಣೆಯಿಂದ ಖಾದಿ ಬಟ್ಟೆ ಧರಿಸುವಂತೆ ಸುತ್ತೋಲೆ ಹೊರಡಿಸಿರುವುದು ಪ್ರಶಂಸನೀಯ. ಜನಸಾಮಾನ್ಯರು ಕೂಡ ಖಾದಿ ಬಟ್ಟೆ ತೊಡಲು ಮುಂದಾಗ ಬೇಕಿದೆ. ಉತ್ತರ ಕರ್ನಾಟಕದ ಕಪ್ಪು ನೆಲ ಹತ್ತಿ ಬೆಳೆಯಲು ಉಪಯುಕ್ತವಾಗಿದೆ. ದಶಕಗಳ ಹಿಂದೆ ದಾವಣಗೆರೆ ಹಾಗೂ ಕೊಟ್ಟೂರು ಭಾಗದಲ್ಲಿ ಕಾಟನ್ ಮಿಲ್‌ಗಳ ಸಂಖ್ಯೆ ಹೆಚ್ಚಿದ್ದವು. ಹತ್ತಿ ಬೆಳೆಯುವ ಪ್ರದೇಶದ ಕಡಿಮೆಯಾಗಿರುವುದು ಹಾಗೂ ವಾಣಿಜ್ಯ ಬೆಳೆಗಳತ್ತ ರೈತರು ಚಿತ್ತ ಹರಿಸಿದ್ದು ಮಿಲ್‌ಗಳು ಮುಚ್ಚಲು ಕಾರಣವಾಗಿದೆ. ಸರ್ಕಾರ ರೈತರ ಸಮಾಲೋಚಕ ಸಭೆ ನಡೆಸಿ ಹತ್ತಿ ಬೆಳೆಯಲು ಪ್ರೋತ್ಸಾಹಿಸಬೇಕು. ಜನರು ಖಾದಿ ಬಟ್ಟೆ ಧರಿಸುವುದನ್ನು ರೂಢಿಸಿಕೊಂಡರೆ ಗ್ರಾಮೋದ್ಯೋಗಕ್ಕೆ ನೆರವಾಗಲಿದೆ.

ರೇಷ್ಮಾ ಗುಳೇದಗುಡ್ಡಾಕರ್, ಕೊಟ್ಟೂರು

ಚುರುಮುರಿ



ಅಮೆರಿಕ ಮಗಾ...

• ಲಿಂಗರಾಜು ಡಿ.ಎಸ್.

'ಲಂಚ, ಕಮೀಶನ್, ಲಂಚ, ಕಮೀಶನ್... ಐ ಡೋಂಟ್ ಲೈಕ್ ಇಟ್. ಐ ಅವಾಯ್ಡ್. ಬಟ್ ಲಂಚ, ಕಮೀಶನ್ ಲೈಕ್ಸ್ ಮೀ' ತುರೇಮಣೆ ಸತ್ಯ ಸ್ಫೋಟಿಸಿದರು.

'ಹಂಗೆ ಹೇಳೇಳಿಕ್ಯಂದೇ ಲಂಚ, ಕಮೀಶನ್ ಇಸುಗಳೋ ಚಾಲು ರಾಜಕಾರಣಿಗಳಿಗೆ, ಅಧಿಕಾರಿಗಳಿಗೆ ಹೆಸರುಬಲದಲ್ಲೇ ಬಂದ್ಬುಟ್ಟದೆ. ಯಾರು ಇಸುಗಂದೋರು ಅಂದ್ರೆ 'ನಾನವನಲ್ಲ, ನಾನವನಲ್ಲ' ಅಂತ ತಾರಮ್ಮಯ್ಯ ಆಡಿಸ್ತಾರೆ' ಅಂತಂದೆ.

'ಬುಡಿ ಅತ್ತಗೆ. ರಾಜ್ಯದೇಲಿ ಕುರ್ಚಿ ಇಚಾರದೇಲಿ ಸದ್ಯಕ್ಕಂತೂ ಸಿಎಂ ಬದಲಾವಣೆ ಗೊಂದಲ ಇಲ್ಲ ಅಂತ 'ವೈ'ಕಮಾಂಡ್ ಹೇಳ್ಕಬತ್ತಾದಲ್ಲಣ್ಣೆ' ಅಂತ ವೈಕಾರ ಹಾಕಿದ ತಿಪ್ಪಣ್ಣ.

'ಈಗ ಹೊಸದಾಗಿ ಚಿಗುರಾಡ್ತಿರೋ ವೈ–ಕಮಾಂಡು ವೈಲೆಂಟಾಗಿ ಮದಗುಡ್ತಾದೆ ಕಪ್ಪಾ. ಇದ್ಯಾಕಿಂಗೆ ಅಂತ ಕಾಲವೇ ಉತ್ತರಿಸಬೇಕು' ಎಂದು ತುರೇಮಣೆ ಅಡ್ಡಗೋಡೆಯ ಮೇಲೆ ದೀಪ ಇಟ್ಟರು.

'ದಿಟ. ಈ ಬಗ್ಗೆ ತನಿಖೆ ಮಾಡಿ ವರದಿ ತರಿಸಿಕೊಂಡು ಆಮೇಲೆ ಮಾತಾಡ್ತೀನಿ ಅಂತ ಪರಮಣ್ಣ ಹೇಳ್ಲೇ ಇಲ್ಲಪ್ಪ' ಯಂಟಪ್ಪಣ್ಣ ಒಗ್ಗರಣೆ ಹಾಕಿತು.

'ಅಣೈ, ಯುರೋಪ್ ಜೊತೆಗೆ ಸಾಲಾವಳಿ ಚೆನ್ನಾಗದೆ ಅಂತ ಒಪ್ಪಂದ ಮಾಡಿಕೋವಾಗ, ಇದು ಎಲ್ಲಾ ಒಪ್ಪಂದಗಳ ತಾಯಿ ಅಂದುದ್ರು. ಈಗ ಅಮೆರಿಕದ ಜೊತೆಗೆ ಒಪ್ಪಂದ ಅದಮ್ಯಾಲೆ, ಇದು ಎಲ್ಲಾ ಒಪ್ಪಂದಗಳ ತಂದೆ ಅಂತ ಯಾಕೆ ಹೇಳಲಿಲ್ಲವೋ ಗೊತ್ತಾತಿಲ್ಲ' ಎಂದು ಸೋಜಿಗದಿಂದ ತುರೇಮಣೆಗೆ ಕೇಳಿದೆ.

'ನೋಡ್ಲಾ, 'ಕಾಶ್ಮೀರ ನಿಮಗೇ ಬುಡುಸಿ ಕೊಡ್ತೀವಿ. ರಷ್ಯಾ, ಚೀನಾದ ಬಡ್ಡೇಗೂ ಹೋಗಕುಲ್ಲ ಅಂತ ಗಾಡ್ ಪ್ರಾಮಿಸ್ ಮಾಡ್ರಿ. ಮೇಕ್ ಅಮೆರಿಕ ಗ್ರೇಟ್ ಅಗೈನ್ ಮಗಾ' ಅಂತ ಟ್ರಂಪಣ್ಣ ಹೇಳಿಕ್ಯಂದಿರತನೆ'.

'ಇಲ್ಲಿ ಯಾರು ಯಾರಿಗೆ ಸೈಲೆಂಟಾಗಿ ತಲೆ ಬಾಚಿದ್ರೋ, ಯಾರು ಯಾರಿಗೆ ಪೌಡರ್ ಹಾಕಿದ್ರೋ ಒಂದೂ ತಿಳೀವಲ್ದಾಗೇತಲ್ಲಣ್ಣೈ...'

ತುರೇಮಣೆ ಸತ್ಯ ಹೇಳ್ತಾವ್ರೋ ಸುಳ್ಳು ಹೇಳ್ತಾವ್ರೋ ಅಂತ ಗೊತ್ತಾಗ್ದೆ ಗೊಂದಲಕ್ಕೆ ಬಿದ್ದ ನನ್ನ ನೋಡಿ ಎಲ್ಲಾ ನಗಕ್ಕೆ ಮುಟ್ಟಿಕ್ಯಂದ್ರು.

ಸಂಗತ

ಖಡ್ಗ ಇದ್ದ ಮಾತ್ರಕ್ಕೆ ಯುದ್ಧ ಗೆಲ್ಲಲಾಗದು!

ಕೃತಕ ಬುದ್ಧಿಮತ್ತೆ ಬಳಕೆ ಶಿಕ್ಷಣ ಕ್ಷೇತ್ರದ ಅಂತಃಸತ್ತ್ವವನ್ನೇ ಕುಗ್ಗಿಸುತ್ತಿದೆ. ಮನಸ್ಸುಗಳ ಬದಲಿಗೆ ಯಂತ್ರಗಳ ಜೊತೆ ವ್ಯವಹರಿಸಿದರೆ ಶಿಕ್ಷಣದ ಉದ್ದೇಶ ಈಡೇರುವುದೆ?

• ಆರತಿ ಪಟ್ರಮೆ

ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಬಳಕೆಯು ಶಿಕ್ಷಕರನ್ನು ಮೂಲೆಗುಂಪು ಮಾಡಬಹುದೇ ಎಂಬ ಆತಂಕವೊಂದು ಶಿಕ್ಷಕರ ಮನಸ್ಸಿನಲ್ಲಿ ಎದ್ದಿದೆ. ಈ ಮೊದಲು, ಶಿಕ್ಷಣ ಸಂಸ್ಥೆಗಳಲ್ಲಿ ಸೃಜನಶೀಲ ಬರವಣಿಗೆಗೆ ಸಂಬಂಧಿಸಿದ ಯಾವುದೇ ಕೆಲಸಗಳಿದ್ದರೂ, ಬರವಣಿಗೆಯನ್ನು ಅಭ್ಯಾಸ ಮಾಡಿದವರಿಗೆ ಅಥವಾ ಭಾಷಾ ಉಪನ್ಯಾಸಕರಿಗೆ ಕರೆ ಬರುತ್ತಿತ್ತು. ಯಾವಾಗ ಕೃತಕ ಬುದ್ಧಿಮತ್ತೆಯೆಂಬುದು ಹೆಚ್ಚು ಬಳಕೆಗೆ ಬಂತೋ ಅಲ್ಲಿಂದ ಎಲ್ಲರೂ ಬರಹಗಾರರೇ ಆದರು. ನಿಜವೇ, ಚಾಟ್‌ಜಿಪಿಟಿಯಂಥ ಆ್ಯಪ್‌ಗಳು ಸೂಚನೆಗಳನ್ನು ಸರಿಯಾಗಿ ಕೊಟ್ಟರೆ ಸಾಕು, ಎಂತಹ ಬರವಣಿಗೆಯನ್ನಾದರೂ ಕೊಟ್ಟುಬಿಡುತ್ತವೆ. ಎಷ್ಟೋ ಬಾರಿ ನೈಜ ಬರಹಗಾರರು ಯಾರು, ಎಐ ಬರಹಗಾರರು ಯಾರು ಎಂದೇ ಗೊತ್ತಾಗುವುದಿಲ್ಲ. ಸಾಮಾಜಿಕ ಜಾಲತಾಣಗಳ ಕೆಲವು ಪೋಸ್ಟ್‌ಗಳನ್ನು ನೋಡಿದರೂ ಅದನ್ನು ನಿಜವಾಗಿಯೂ ಪೋಸ್ಟ್ ಮಾಡಿದವರೇ ಬರೆದದ್ದಾ ಎಂದು ಗೊಂದಲಪಡುವ ಸ್ಥಿತಿ ಓದುಗರದ್ದಾಗಿದೆ.

ಪ್ರಶ್ನೆ ಇರುವುದು ಶಿಕ್ಷಣ ಸಂಸ್ಥೆಗಳಲ್ಲಿ ನಾವು ವ್ಯವಹರಿಸುವುದು ಮನಸ್ಸುಗಳ ಜತೆಗಲ್ಲವೇ ಎಂಬುದು. ಅವರಿಗೆ ಬೇಕಾದಂತೆ ಪಠ್ಯವನ್ನು ರೂಪಿಸಬೇಕಾದರೆ, ಅವರು ಅನುಸರಿಸಬೇಕಾದ ಸೂಚನೆಗಳನ್ನು ನೀಡಬೇಕಾದರೆ, ಮಾನವೀಯ ಗುಣಗಳನ್ನು ಹೊಂದಿದ ಪಠ್ಯವನ್ನು ಕೊಡಬೇಕೇ ಹೊರತು, ಯಾಂತ್ರೀಕೃತ ಪಠ್ಯ ಅಲ್ಲ.

ಸಾಮಾನ್ಯವಾಗಿ, ಎಐ ಬಳಕೆ ಆರಂಭದಲ್ಲಿ ಎಲ್ಲರಿಗೂ ಖುಷಿ ನೀಡುತ್ತದೆ. ನಮ್ಮ ಯೋಚನಾಶಕ್ತಿಯನ್ನು ಬಳಸದೆ ಒಂದೊಳ್ಳೆಯ ಪಠ್ಯ ಸಿದ್ಧವಾಯಿತು ಎಂದುಕೊಳ್ಳುತ್ತೇವೆ. ಆದರೆ, ಬರುಬರುತ್ತಾ ಅದರಲ್ಲಿನ ಏಕತಾನತೆ ನಮಗರ್ಥವಾದಂತೆ, ನಾವು ಬರೆಯುವುದೇ ಚೆನ್ನ ಅನಿಸುತ್ತದೆ. ಅಗತ್ಯವಿದ್ದಲ್ಲಿ ವ್ಯಾಕರಣ ದೋಷಗಳನ್ನು ತಿದ್ದುವಂತೆ ಅದರ ಸಹಾಯವನ್ನು ಪಡೆಯಬಹುದೇನೋ. ಅದೂ ಇಂಗ್ಲಿಷ್ ಮಾತ್ರ. ಕನ್ನಡದ ಸೂಚನೆಗಳನ್ನೂ ಅದು ಪಾಲಿಸುವುದು ಪಠ್ಯವನ್ನು ಕೊಡುವುದು ಹೌದಾದರೂ, ಅದರಲ್ಲಿ ಸಾಕಷ್ಟು ತಿದ್ದುಪಡಿಗಳು ಅಗತ್ಯವಿರುತ್ತವೆ. ಅವನ್ನು ಗಮನಿಸದೇ ಹಾಗೆಯೇ ಇನ್ನೆಲ್ಲೋ ಹಂಚಿಕೊಂಡರೆ ಮುಜುಗರಕ್ಕೀಡಾಗುವ ಸಾಧ್ಯತೆಗಳೂ ಇರುತ್ತವೆ. ಗೂಗಲ್ ಟ್ರಾನ್ಸ್‌ಲೇಟ್‌ನದ್ದೂ ಬಹುತೇಕ ಅದೇ ಸಮಸ್ಯೆ. ನಮ್ಮ ಅವಸರಕ್ಕೆಂದು ಇಂಗ್ಲಿಷ್ ಪಠ್ಯವನ್ನು ಅನುವಾದಿಸಿಕೊಂಡೆವೋ ಮತ್ತೆ ಮೊದಲಿನಿಂದ ಹೊಸತಾಗಿಯೇ ಬರೆಯುವಂತೆ ಅದನ್ನು ತಿದ್ದಬೇಕಾಗುತ್ತದೆ.



ತಾಂತ್ರಿಕ ವಿಷಯಗಳಲ್ಲಿ ಮುಂದಿರುವವರು ಈ ಸೂಕ್ಷ್ಮವನ್ನು ಅರ್ಥ ಮಾಡಿಕೊಳ್ಳುವುದು ಕಡಿಮೆ. ಎಲ್ಲವನ್ನೂ ತಾವೇ ಮಾಡಿ ಮೆಚ್ಚುಗೆ ಪಡೆಯಬೇಕೆಂಬ ಹಂಬಲದಲ್ಲಿ ಇತರ ಉಪನ್ಯಾಸಕರನ್ನು ಕೇಳುವ ಗೋಜಿಗೆ ಹೋಗುವುದಿಲ್ಲ. ಭಾಷಾ ಉಪನ್ಯಾಸಕರೂ ಇದಕ್ಕೆ ಹೊರತಲ್ಲ. ಹತ್ತು ನಿಮಿಷ ಸಮಾಧಾನವಾಗಿ ಬರೆಯಬೇಕಾದ ವಿಷಯವನ್ನು ಎಐಗೆ ಹಾಕಿ ತೆಗೆಯುವುದೇ ಸುಲಭ ಎಂಬ ಮನಃಸ್ಥಿತಿಯನ್ನು ಕೆಲವರು ಬೆಳೆಸಿಕೊಂಡಿದ್ದಾರೆ. 'ಬೇಗ ಕೆಲಸ ಮುಗಿದುಬಿಡಬೇಕು' ಎಂಬ ಧಾವಂತದಲ್ಲಿ ಕೆಲಸ ಮಾಡುವವರು 'ಸಮರ್ಪಕವಾಗಿ ಮಾಡಬೇಕು' ಎಂಬುದನ್ನು ಗಮನಿಸುವುದಿಲ್ಲ.

ಹೆಚ್ಚಿನ ವಿದ್ಯಾರ್ಥಿಗಳು ತಮಗೆ ಬೇಕಾದ ನೋಟ್ಸ್, ತಾವು ಸಲ್ಲಿಸಬೇಕಾದ ಅಸೈನ್‌ಮೆಂಟ್‌ಗಳನ್ನು ಎಐ ಮೂಲಕ ಸಿದ್ಧಪಡಿಸುತ್ತಾರೆ. ಅದರಲ್ಲಿನ ಪದಪುಂಜಗಳು ತಮಗೆ ಸುಲಲಿತ ಎನ್ನುವಂತೆ ಆಡುತ್ತಾರೆ. ತಮಗೆ ಗೊತ್ತಿರುವಷ್ಟು ಶಿಕ್ಷಕರಿಗೆ ಗೊತ್ತಿಲ್ಲ ಎಂಬ ಭ್ರಮೆ ಬೆಳೆಸಿಕೊಳ್ಳುತ್ತಾರೆ. ವಾಸ್ತವದಲ್ಲಿ ಶಿಕ್ಷಕರಿಗಾಗಲೀ ವಿದ್ಯಾರ್ಥಿಗಳಿಗಾಗಲೀ ಸಹಜವಾಗಿ ಭಾಷೆಯ ಅಭಿವ್ಯಕ್ತಿ ಏನು ಎಂಬುದೇ ಮರೆತುಹೋಗಿರುತ್ತದೆ. ಕಂಪ್ಯೂಟರ್‌ಗೆ ಎಲ್ಲವೂ ಗೊತ್ತಿದೆ, ಅಥವಾ ಎಲ್ಲವೂ ಇಂಟರ್ನೆಟ್‌ನಲ್ಲಿ ಲಭ್ಯವಿದೆ ಎಂಬುದಷ್ಟೇ ಶಿಕ್ಷಣವೇ? ವಿದ್ಯಾರ್ಥಿಗಳ ಮನಸ್ಸಿನೊಳಗೆ ನಾವು ಕಲಿಸಿದ್ದು ಎಷ್ಟರ ಮಟ್ಟಿಗಿದೆ, ಅಥವಾ ವರ್ಷದಿಂದ ವರ್ಷಕ್ಕೆ ತನ್ನ ಬೋಧನಾ ಕ್ರಮವನ್ನು ಸುಧಾರಿಸಲು ಏನು ಮಾಡಬೇಕು ಎಂಬುದನ್ನು ಶಿಕ್ಷಕರೂ ಯೋಚಿಸುವುದಕ್ಕೆ ಇದು ಸಕಾಲ.

ಭಾಷಾ ಬೋಧನೆ ಸಣ್ಣ ಸಂಗತಿಯಲ್ಲ. ಗಣಿತದ ಸೂತ್ರಗಳನ್ನು ಅರ್ಥಮಾಡಿಕೊಳ್ಳುವುದು ಎಷ್ಟು ಕಷ್ಟವೋ, ವ್ಯಾಕರಣವನ್ನು ಅರ್ಥ ಮಾಡಿಕೊಳ್ಳುವುದು ಅಷ್ಟೇ ಕಷ್ಟ. ಗಣಿತದ ಪ್ರಮೇಯಗಳನ್ನು ಬರೆಯುವಾಗ ಚಿಹ್ನೆಗಳು ಎಷ್ಟು ಮುಖ್ಯವಾಗುತ್ತವೋ ಭಾಷೆಯಲ್ಲಿ ಅದಕ್ಕಿಂತ ಕಡಿಮೆಯೇನಲ್ಲ. ಆದರೆ, ಗಣಿತದಲ್ಲಿ ಒಂದು ಬಿಂದುವಿನ ಮೌಲ್ಯವನ್ನು ಅರಿಯುವ ಮಕ್ಕಳು ಭಾಷೆಯಲ್ಲಿ ಅರ್ಧವಿರಾಮ, ಪೂರ್ಣವಿರಾಮಗಳನ್ನು ಸರಿಯಾಗಿ ಹಾಕುವ ಮನಃಸ್ಥಿತಿ ತೋರುವುದಿಲ್ಲ. ಹಾಕದೇ ಇರುವುದು ತಪ್ಪು ಎಂಬುದನ್ನು ಅರ್ಥಮಾಡಿಕೊಳ್ಳಲೂ ಹೋಗುವುದಿಲ್ಲ. ಕನ್ನಡದ ಕಾಗುಣಿತದ ವಿಷಯಕ್ಕೆ ಬಂದರೆ ಉಪನ್ಯಾಸಕರೇ ತಪ್ಪಾಗಿ ಬರೆದರೆ ವಿದ್ಯಾರ್ಥಿಗಳು ಅವರನ್ನು ಸ್ವೀಕರಿಸಲಂತೂ ಸಾಧ್ಯವೇ ಇಲ್ಲ.

'ಗೀತಾರಾಣಿ' ಎಂಬ ತಮಿಳು ಸಿನಿಮಾ ಇತ್ತೀಚೆಗೆ ನೋಡಿದೆ. ಸೇನೆಯಲ್ಲಿ ಉನ್ನತ ಹುದ್ದೆಯಲ್ಲಿದ್ದ ಗೀತಾರಾಣಿ ಅಲ್ಲಿಂದ ಸ್ವಯಂನಿವೃತ್ತಿ ಪಡೆದು ಶಾಲೆಯೊಂದಕ್ಕೆ ಮುಖ್ಯಸ್ಥೆಯಾಗಿ ಹೋಗುತ್ತಾಳೆ. ಅಲ್ಲಿನ ಎಲ್ಲಾ ಬೋಧನಾ ವಿಷಯಗಳ ಶಿಕ್ಷಕರಿಗೆ ಅವಳು ತಲಾ ಮೂರು ಪ್ರಶ್ನೆಗಳನ್ನು ಕೇಳಿ, ಒಂದು ತಿಂಗಳ ಸಮಯ ಕೊಟ್ಟು ಉತ್ತರ ಕಲಿಯಲು ಹೇಳುತ್ತಾಳೆ. ಮೊದಲಿಗೆ ಎಲ್ಲರಿಂದ ಪ್ರತಿರೋಧ ಬಂದರೂ, ನಂತರ ಅವಳ ಶಿಸ್ತು, ಶ್ರದ್ಧೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗುತ್ತದೆ. ಅಂದರೆ, ಶಿಕ್ಷಕರು ಸದಾ ಕಾಲವೂ ವಿದ್ಯಾರ್ಥಿಗಳೇ ಆಗಿದ್ದುಕೊಂಡು ಹೊಸತನ್ನು ಕಲಿಯುವ ಮನಃಸ್ಥಿತಿ ಇದ್ದರೆ ಮಾತ್ರ ಶಿಕ್ಷಕರಾಗಿ ಮುಂದುವರಿಯಬಹುದು.

ಈಗ ನಾವು ಯೋಚಿಸಬೇಕಿರುವುದು ಎಐ ಬಳಕೆಯನ್ನು ಹತ್ತಿಕ್ಕುವುದರ ಬಗೆಗಲ್ಲ. ನಮ್ಮ ಬೋಧನೆಗೆ ಅದನ್ನು ಎಷ್ಟರ ಮಟ್ಟಿಗೆ ಉಪಯೋಗಿಸಿಕೊಳ್ಳಬಹುದು ಎಂಬುದರ ಬಗೆಗೆ. ಖಡ್ಗ ನಮ್ಮಲ್ಲಿದ್ದ ಕೂಡಲೇ ಯುದ್ಧ ಗೆಲ್ಲಲಾಗುವುದಿಲ್ಲ. ಅದನ್ನು ಹೇಗೆ, ಯಾವಾಗ ಉಪಯೋಗಿಸಬೇಕೆಂಬ ಅರಿವಿರಬೇಕು. ಶಿಕ್ಷಣ ಕ್ಷೇತ್ರಕ್ಕೆ ಸವಾಲಾಗುವುದು ಕಲಿಕೆಯಲ್ಲಿ ಹಿಂದುಳಿಯುವ ವಿದ್ಯಾರ್ಥಿಗಳಲ್ಲ, ಶಿಕ್ಷಕರು!

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಮೆರಿಕದ ಆಂತ್ರೊಪಿಕ್ ಕೃತಕ ಬುದ್ಧಿಮತ್ತೆ ಕಂಪನಿಯು ತನ್ನ ಕ್ಲಾಡ್ ಕೋವರ್ಕ್ ಪ್ಲಾಟ್‌ಫಾರ್ಮ್‌ನಲ್ಲಿ ಹೊಸ ಪ್ಲಗ್–ಇನ್‌ಗಳನ್ನು ಬಿಡುಗಡೆ ಮಾಡಿದೆ. ಈ ಹೊಸ ಎಐ ಟೂಲ್ ದಾಖಲೆ, ದತ್ತಾಂಶ, ವಿವಿಧ ರೀತಿಯ ಪ್ರಕ್ರಿಯೆಗಳಿಗೆ ಸಂಬಂಧಿಸಿದ ಸಂಕೀರ್ಣ ಕೆಲಸಗಳನ್ನು ಸ್ವಯಂಚಾಲಿತವಾಗಿ ಮಾಡುವ ಸಾಮರ್ಥ್ಯ ಹೊಂದಿವೆ. ಇದು ಐಟಿ ಕ್ಷೇತ್ರದಲ್ಲಿ, ವಿಶೇಷವಾಗಿ ಐಟಿ ಸೇವೆ ಒದಗಿಸುವ ಕಂಪನಿಗಳಲ್ಲಿ ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗಕ್ಕೆ ಕಾರಣವಾಗಲಿದೆ ಎನ್ನಲಾಗುತ್ತಿದೆ. ಅಮೆರಿಕ ಮತ್ತು ಭಾರತದ ಮಾಹಿತಿ ತಂತ್ರಜ್ಞಾನ ಉದ್ಯಮದಲ್ಲಿ ಈ ಬಗ್ಗೆ ಭಾರಿ ಚರ್ಚೆ ನಡೆಯುತ್ತಿದೆ. ಭಾರತದ ಟಿಸಿಎಸ್, ವಿಪ್ರೊ, ಇನ್ಫೊಸಿಸ್‌ನಂಥ ಐಟಿ ಕಂಪನಿಗಳಲ್ಲಿನ ಉದ್ಯೋಗಗಳಿಗೆ ಪೆಟ್ಟು ಬೀಳುವ ಸಂಭವ ಇದೆ ಎಂದು ಹೇಳಲಾಗುತ್ತಿದೆ

ಐಟಿ ಕೆಲಸಕ್ಕೆ ಎಐ ಟೂಲ್ ಕನ್ನ?

ಪ್ರಜಾವಾಣಿ ವಾರ್ತೆ

ಫೆಬ್ರುವರಿ 4ರಂದು ಅಮೆರಿಕ, ಭಾರತದಲ್ಲಿ ಐಟಿ ಸೇವೆಗಳು, ಕಾನೂನು ಸೇವೆಗಳನ್ನು ಒದಗಿಸುವ ಕೆಲವು ಕಂಪನಿಗಳ ಷೇರುಗಳ ಮೌಲ್ಯವು ಭಾರಿ ಪ್ರಮಾಣದಲ್ಲಿ ಕುಸಿದಿತ್ತು. ಒಂದೇ ದಿನ ಷೇರುಪೇಟೆ 28,500 ಕೋಟಿ ಡಾಲರ್‌ಗಳ ನಷ್ಟ ಅನುಭವಿಸಿತ್ತು. ಭಾರತದ ಷೇರು ಪೇಟೆಯಲ್ಲಿ ಇನ್ಫೊಸಿಸ್, ವಿಪ್ರೊ, ಟಿಸಿಎಸ್ ಮುಂತಾದ ಐಟಿ ಕಂಪನಿಗಳ ಷೇರುಗಳ ಮೌಲ್ಯ ಶೇ 7ರಷ್ಟು ಕುಸಿತ ಕಂಡರೆ, ಅಮೆರಿಕದ ಕಂಪನಿಗಳ ಷೇರುಗಳು ಶೇ 12ರಷ್ಟು ಕುಸಿತ ದಾಖಲಿಸಿದವು. ‘ಸಾಫ್ಟ್‌ವೇರ್ ಸೇವೆಗಳಲ್ಲಿ ಮಹಾಪ್ರಳಯ’ (SaaSpocalypse) ಎಂದೇ ಅದನ್ನು ಕರೆಯಲಾಯಿತು. ಇಂಥ ಮಹಾಪತನಕ್ಕೆ ಕಾರಣವಾಗಿದ್ದು ಒಂದು ಎಐ ಟೂಲ್.

ಆಂತ್ರೊಪಿಕ್ ಎನ್ನುವ ಕೃತಕ ಬುದ್ಧಿಮತ್ತೆ (ಎಐ) ಕಂಪನಿಯು ಇದೇ ಜನವರಿಯಲ್ಲಿ ಕ್ಲಾಡ್ ಕೋವರ್ಕ್ (Claude Cowork) ಎನ್ನುವ ಎಐ ಏಜೆಂಟ್ ಅನ್ನು ಬಿಡುಗಡೆ ಮಾಡಿತ್ತು. ಆಂತ್ರೊಪಿಕ್‌ನ ಕ್ಲಾಡ್ ಚಾಟ್‌ಬಾಟ್ ಅಲ್ಪ ಅವಧಿಯಲ್ಲೇ ಭಾರಿ ಜನಪ್ರಿಯತೆ ಗಳಿಸಿತ್ತು. ಸಾಫ್ಟ್‌ವೇರ್ ಕೋಡಿಂಗ್ ಮಾಡುವವರಿಗಾಗಿಯೇ ಕ್ಲಾಡ್ ಕೋಡ್ ವಿಶೇಷ ಆವೃತ್ತಿ ಬಿಡುಗಡೆ ಮಾಡಿತ್ತು. ಅದರ ಕ್ಷಿಪ್ರ ಯಶಸ್ಸಿನಿಂದ ಸ್ಫೂರ್ತಿ ಪಡೆದ ಆಂತ್ರೊಪಿಕ್ ಕಂಪನಿಯು, ಕ್ಲಾಡ್‌ಗೆ ಹೆಚ್ಚುವರಿ ಜನವರಿ ಅಂತ್ಯದಲ್ಲಿ ಪ್ಲಗ್–ಇನ್‌ಗಳನ್ನು ಬಿಡುಗಡೆ ಮಾಡಿತು. ಸ್ವಯಂಚಾಲಿತವಾಗಿ ಕೆಲಸ ಮಾಡುವ ಇವುಗಳು ವಿಶ್ಲೇಷಣೆ, ಕೋಡಿಂಗ್‌ನಂತಹ ಸಂಕೀರ್ಣ ಕೆಲಸಗಳನ್ನೂ ಮಾಡುತ್ತವೆ. ಫೆಬ್ರುವರಿ ಮೊದಲ ವಾರದಲ್ಲಿ ಅದರ ಕಾರ್ಯನಿರ್ವಹಣೆಯ ವಿವರಗಳು ಬಹಿರಂಗಗೊಂಡಿದ್ದು ಷೇರು ಮಾರುಕಟ್ಟೆಯಲ್ಲಿ ತಲ್ಲಣ ಉಂಟು ಮಾಡಿತು.

ಹೇಗೆ ಕೆಲಸ ಮಾಡುತ್ತದೆ?: ಕ್ಲಾಡ್ ಕೋವರ್ಕ್ ಎಐ ಏಜೆಂಟ್‌ಗೆ ಹೊಸದಾಗಿ 11 ಪ್ಲಗ್ ಇನ್‌ಗಳನ್ನು ಆಂತ್ರೊಪಿಕ್ ಸೇರಿಸಿದ್ದು, ಈ ಹೊಸ ಟೂಲ್ ಕಂಪ್ಯೂಟರ್ ಮೂಲಕ ನಡೆಸುವ ಕಾನೂನು (ಲೀಗಲ್), ಮಾರಾಟ (ಸೇಲ್ಸ್), ಮಾರುಕಟ್ಟೆ (ಮಾರ್ಕೆಟಿಂಗ್) ಮತ್ತು ದತ್ತಾಂಶ ವಿಶ್ಲೇಷಣೆ (ಡೇಟಾ ಅನಾಲಿಸಿಸ್) ವಲಯದ ಕೆಲಸಗಳನ್ನು ಸ್ವಯಂಚಾಲಿತವಾಗಿ ಮಾಡುತ್ತದೆ. ಸಾಫ್ಟ್‌ವೇರ್ ಕೋಡಿಂಗ್ ಮಾಡುವುದಷ್ಟೇ ಅಲ್ಲದೇ, ವೇತನ ಲೆಕ್ಕಾಚಾರ, ಷೇರುಪೇಟೆಯ ವಿಶ್ಲೇಷಣೆಯಂತಹ ವಿವಿಧ ಕೆಲಸಗಳನ್ನು ನಿರ್ವಹಿಸುತ್ತವೆ. ಸಾಫ್ಟ್‌ವೇರ್ ಪ್ಲಾಟ್‌ಫಾರ್ಮ್‌ಗಳು ಮತ್ತು ಮನುಷ್ಯರು ಮಾಡುವ ಕೆಲಸಗಳಿಗೆ ಇದು ಪರ್ಯಾಯವಾಗಬಲ್ಲುದು ಎಂದು ವಿಶ್ಲೇಷಿಸಲಾಗುತ್ತಿದೆ.

ಭಾರಿ ಪ್ರಮಾಣದಲ್ಲಿರುವ ದಾಖಲೆಗಳ ಪರಿಶೀಲನೆ, ತಿದ್ದುಪಡಿ ಮಾಡುವುದು, ಕರಡು ಸಿದ್ಧಪಡಿಸುವುದು, ಕೋಡಿಂಗ್ ಕೆಲಸಗಳು ಸೇರಿದಂತೆ ಹಲವು ಜನರ ತಂಡವು ದೀರ್ಘ ಸಮಯದವರೆಗೆ ಮಾಡುವ ಪ್ರಾಜೆಕ್ಟ್ (ಕೆಲಸ) ಅನ್ನು ಈ ಟೂಲ್ ಯಾರ ಸಹಾಯವಿಲ್ಲದೇ ಬಹುಬೇಗ ಮಾಡಿ ಕೊಡಬಲ್ಲದು. ಇದಕ್ಕಾಗಿ ಕಂಪ್ಯೂಟರ್ ಬಳಕೆದಾರ ಕೆಲಸ ಮಾಡಲು ಅನುಮತಿ ನೀಡಿದರೆ ಸಾಕು.

ಸರಳವಾಗಿ ಹೇಳುವುದಾದರೆ, ಹೊಸ ಎಐ ಟೂಲ್ ಒಳಗೊಂಡ ಕ್ಲಾಡ್ ಕೋವರ್ಕ್, ಬಳಕೆದಾರನೊಂದಿಗೆ ಕೇವಲ ಸಂವಾದ (ಕಾನ್‌ವರ್ಸೇಷನ್) ಮಾಡುವುದಲ್ಲ. ಕಂಪ್ಯೂಟರ್‌ನಲ್ಲಿರುವ ನಿರ್ದಿಷ್ಟ ಫೋಲ್ಡರ್‌ನ ಪರಿಶೀಲನೆಗೆ ಅನುಮತಿ ಕೊಟ್ಟರೆ (ಆ್ಯಕ್ಸೆಸ್) ನೀಡಿದರೆ ಸಾಕು. ಅದು ಆ ಫೋಲ್ಡರ್‌ನಲ್ಲಿರುವ ಅಂಶಗಳನ್ನು ಓದಿ, ತಿದ್ದುಪಡಿ, ಹೊಸದೊಂದು ಫೋಲ್ಡರ್ ಅನ್ನು ಸೃಷ್ಟಿಸಿ ಎಲ್ಲವನ್ನೂ ವ್ಯವಸ್ಥಿತವಾಗಿ ಜೋಡಿಸಿ ಮಾಡಿಕೊಡುತ್ತದೆ. ಕೇವಲ ಮಾತುಕತೆಗೆ ಸೀಮಿತವಾಗದೆ, ಬಳಕೆದಾರನಿಗೆ ಬೇಕಾದ ಎಲ್ಲ ಕೆಲಸವನ್ನೂ ಹಂತ ಹಂತವಾಗಿ ಮಾಡಿ ಕೊಡುತ್ತದೆ. ಕಂಪನಿಯ ಪ್ರಕಾರ, ಈ ಎಐ ಏಜೆಂಟ್ ಸಹಉದ್ಯೋಗಿಯ (ಕೋವರ್ಕರ್) ರೀತಿ ಕೆಲಸ ಮಾಡುತ್ತದೆ. ಪ್ರಾಜೆಕ್ಟ್‌ಗಳನ್ನು ಮಾಡುವ ತಂಡಗಳಿಗೆ ಮತ್ತು ಉದ್ದಿಮೆಗಳಿಗೆ ಈ ಟೂಲ್ ಹೆಚ್ಚು ಅನುಕೂಲಕಾರಿ.

ಹಲವು ಮಂದಿ, ಹಲವು ತಿಂಗಳು / ವರ್ಷಗಳು ಮಾಡುವ ಕೆಲಸವನ್ನು ಈ ಎಐ ಟೂಲ್‌ನಿಂದ ಅಲ್ಪ ಕಾಲದಲ್ಲಿ ಮುಗಿಸಬಹುದು ಎನ್ನಲಾಗುತ್ತಿದೆ. ಇದರಿಂದಾಗಿ ಸಾಫ್ಟ್‌ವೇರ್ ಸೇವೆಗಳು, ಹಣಕಾಸು ಸೇವೆ, ಕಾನೂನು ಸೇವೆಯಂಥ ವಲಯಗಳಲ್ಲಿ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ. ಉದ್ಯೋಗ ಕಡಿತಕ್ಕೂ ಕಾರಣವಾಗಲಿದೆ ಎನ್ನುವ ಆತಂಕ ವ್ಯಕ್ತವಾಗಿದೆ.

ಆಧಾರ: ಆಂತ್ರೊಪಿಕ್.ಕಾಮ್, ಫೋಬ್ಸ್ ಇಂಡಿಯಾ, ರಾಯಿಟರ್ಸ್, ಮಾಧ್ಯಮ ವರದಿಗಳು



ಪ್ರಮುಖ ಹುದ್ದೆಯಲ್ಲಿ ಕನ್ನಡಿಗ

ರಾಹುಲ್ ಪಾಟೀಲ

ಆಂತ್ರೊಪಿಕ್, ಅಮೆರಿಕದ ಎಐ ಸ್ಟಾರ್ಟ್‌ಅಪ್ ಆಗಿದ್ದು, ಎಐ ಭದ್ರತೆ ಮತ್ತು ಸಂಶೋಧನೆಯಲ್ಲಿ ತೊಡಗಿಕೊಂಡಿದೆ. ವಿಶ್ವಾಸಾರ್ಹವಾದ ಎಐ ವ್ಯವಸ್ಥೆಯನ್ನು ನಿರ್ಮಿಸುವುದು, ಎಐಗೆ ಸಂಬಂಧಿಸಿದ ಅವಕಾಶಗಳು ಮತ್ತು ಅಪಾಯಗಳ ಬಗ್ಗೆ ಸಂಶೋಧನೆ ಮಾಡುವುದು ತನ್ನ ಗುರಿ ಎಂದು ಕಂಪನಿ ಹೇಳಿಕೊಂಡಿದೆ. ಓಪನ್ ಎಐನಲ್ಲಿದ್ದ ತಂತ್ರಜ್ಞರು ಸೇರಿ 2021ರಲ್ಲಿ ಸ್ಥಾಪಿಸಿದ ಈ ಕಂಪನಿಯು ಕ್ಲಾಡ್ ಕೋಡ್‌ನಿಂದ ಅತ್ಯಲ್ಪ ಅವಧಿಯಲ್ಲೇ ಭಾರಿ ಯಶಸ್ಸು ಗಳಿಸಿದೆ.

ಆಂತ್ರೊಪಿಕ್ ಕಂಪನಿಯಲ್ಲಿ ಮುಖ್ಯ ತಂತ್ರಜ್ಞಾನ ಅಧಿಕಾರಿ ಆಗಿರುವುದು (ಸಿಟಿಒ) ಕನ್ನಡಿಗ ರಾಹುಲ್ ಪಾಟೀಲ. ಇವರು ಬೆಂಗಳೂರಿನಲ್ಲಿ ಹುಟ್ಟಿ ಬೆಳೆದವರು. ನಗರದ ಬಾಲ್ಡ್‌ವಿನ್ ಬಾಲಕರ ಪ್ರೌಢಶಾಲೆ, ಸೇಂಟ್ ಜೋಸೆಫ್ಸ್ ಪದವಿ ಪೂರ್ವ ಕಾಲೇಜು ಮತ್ತು ಪಿಇಎಸ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಓದಿದ ಇವರು, ಅರಿಝೋನಾ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ಮತ್ತು ವಾಷಿಂಗ್ಟನ್ ವಿಶ್ವವಿದ್ಯಾಲಯದಿಂದ ಎಂಬಿಎ ಪದವಿ ಪಡೆದರು. ಮೈಕ್ರೊಸಾಫ್ಟ್, ಅಮೆಜಾನ್ ವೆಬ್ ಸರ್ವೀಸಸ್ ಮತ್ತು ಒರಾಕಲ್ ಕ್ಲೌಡ್ ಇನ್‌ಫ್ರಾಸ್ಟ್ರಕ್ಚರ್ ಮುಂತಾದ ಕಂಪನಿಗಳಲ್ಲಿ ದಶಕಕ್ಕೂ ಹೆಚ್ಚು ಕಾಲದ ದುಡಿದ ಇವರು, 2025ರ ಅಕ್ಟೋಬರ್‌ನಲ್ಲಿ ಸಿಟಿಒ ಆಗಿ ಆಂತ್ರೊಪಿಕ್ ಸೇರಿದರು. ಕಂಪನಿಯು ಎಐ ಕ್ಷೇತ್ರದಲ್ಲಿ ವೇಗವಾಗಿ ಪ್ರಗತಿ ಸಾಧಿಸುತ್ತಿದ್ದು, ರಾಹುಲ್ ಅವರ ಕೌಶಲವೂ ಆಂತ್ರೊಪಿಕ್ ಬೆಳವಣಿಗೆಯ ಹಿಂದಿದೆ. ಅಮೆರಿಕದ ಹೊರಗೆ ಟೋಕಿಯೊದಲ್ಲಿ ಕಾರ್ಪೊರೇಟ್ ಕಚೇರಿ ಹೊಂದಿರುವ ಆಂತ್ರೊಪಿಕ್, ಮುಂದಿನ ದಿನಗಳಲ್ಲಿ ಬೆಂಗಳೂರಿನಲ್ಲಿಯೂ ಕಚೇರಿ ಆರಂಭ ಮಾಡಲಿದೆ ಎನ್ನಲಾಗುತ್ತಿದೆ.

ಐಟಿ ಕ್ಷೇತ್ರದ ಮೇಲೆ ಏನು ಪರಿಣಾಮ?

ಕಳೆದ ಬುಧವಾರ ಷೇರುಮಾರುಕಟ್ಟೆಯಲ್ಲಿ ಕಂಡು ಬಂದ ‘ಮಹಾಪತನ’ದ ನಂತರ ಐಟಿ ಕಂಪನಿಗಳ ಷೇರುಗಳಲ್ಲಿ ದೊಡ್ಡ ಮಟ್ಟದ ಚೇತರಿಕೆ ಕಂಡು ಬಂದಿಲ್ಲ. ಐಟಿ ಉದ್ಯಮದಲ್ಲಿ ಇದರ ಬಗ್ಗೆ ಮಿಶ್ರ ಅಭಿಪ್ರಾಯಗಳು ವ್ಯಕ್ತವಾಗಿವೆ. ದೊಡ್ಡದೊಡ್ಡ ಕಂಪನಿಗಳು ಅಧಿಕೃತ ಪ್ರತಿಕ್ರಿಯೆ ನೀಡಿಲ್ಲ. ಆದರೆ, ಐಟಿ ವಲಯದಲ್ಲಿ, ವಿಶೇಷವಾಗಿ ಉದ್ಯೋಗಿಗಳ ಮಧ್ಯೆ ಈ ಟೂಲ್ ಬೀರಬಹುದಾದ ಪರಿಣಾಮಗಳ ಬಗೆಗಿನ ಚರ್ಚೆ ತೀವ್ರವಾಗಿ ನಡೆಯುತ್ತಿದೆ.

25 ಸಾವಿರ ಕೋಟಿ ಡಾಲರ್ ಮೌಲ್ಯದ (ಅಂದಾಜು ₹22.67 ಲಕ್ಷ ಕೋಟಿ) ಭಾರತದ ಐಟಿ ಕ್ಷೇತ್ರವು ಸೇವೆ ಆಧಾರಿತವಾಗಿದೆ. ಇಲ್ಲಿನ ಕಂಪನಿಗಳು ಸಾಫ್ಟ್‌ವೇರ್ ನಿರ್ವಹಣೆ, ಪರೀಕ್ಷೆ, ದತ್ತಾಂಶಗಳ ಪರಿಶೀಲನೆ, ಒಪ್ಪಂದಗಳ ವಿಶ್ಲೇಷಣೆ, ನಿಯಮಗಳ ಪಾಲನೆ ಮೇಲ್ವಿಚಾರಣೆ, ಗ್ರಾಹಕ ಸೇವೆಗಳು, ವ್ಯವಹಾರ ಪ್ರಕ್ರಿಯೆಯ ನಿರ್ವಹಣೆಯಂತಹ ಹೆಚ್ಚು ಮಾನವ ಸಂಪನ್ಮೂಲ ಬೇಡುವ ಹೊರಗುತ್ತಿಗೆ ಕೆಲಸಗಳನ್ನು ಮಾಡುತ್ತಾ ಬಂದಿವೆ. ದೇಶದ್ದಲ್ಲದೆ, ಹೊರದೇಶಗಳ ಕಂಪನಿಗಳಿಗೂ ಈ ಸೇವೆಗಳನ್ನು ಒದಗಿಸುತ್ತಿವೆ.

ತಾವು ಪ್ರಾಜೆಕ್ಟ್ ರೂಪದಲ್ಲಿ ಕೈಗೆತ್ತಿಕೊಂಡ ಕೆಲಸಗಳನ್ನು ಮಾಡಿಕೊಡಲು ಕಂಪನಿಗಳು ದೊಡ್ಡ ಪ್ರಮಾಣದಲ್ಲಿ ಎಂಜಿನಿಯರ್‌ಗಳನ್ನು ನೇಮಕ ಮಾಡುತ್ತವೆ. ಎಂಜಿನಿಯರ್‌ಗಳ ತಂಡಗಳನ್ನು ರಚಿಸಿ, ಅವುಗಳಿಗೆ ಪ್ರಾಜೆಕ್ಟ್‌ಗಳನ್ನು ನೀಡಿ ನಿರ್ದಿಷ್ಟ ಅವಧಿಯಲ್ಲಿ ಪೂರ್ಣಗೊಳಿಸಲು ಸೂಚಿಸುತ್ತವೆ. ಈ ಪ್ರಾಜೆಕ್ಟ್‌ಗಳನ್ನು ಎಂಜಿನಿಯರ್‌ಗಳ ಬದಲಾಗಿ ಸ್ವಯಂ ಚಾಲಿತವಾಗಿ ಕೆಲಸ ಮಾಡುವ ಎಐ ಟೂಲ್‌ಗೆ ಮಾಡಲು ಸಾಧ್ಯವಾದರೆ ಕಡಿಮೆ ಅವಧಿಯಲ್ಲಿ ಹೆಚ್ಚು ಮಾನವ ಸಂಪನ್ಮೂಲವಿಲ್ಲದೇ ಕೆಲಸ ಮುಗಿಸಬಹುದು. ಹಾಗಾದಲ್ಲಿ ವಿದೇಶಗಳ ಕಂಪನಿಗಳು ಸೇರಿದಂತೆ ವಿವಿಧ ಕಂಪನಿಗಳು ಪ್ರಾಜೆಕ್ಟ್‌ಗಳನ್ನು ಭಾರತದ ತಂತ್ರಜ್ಞಾನ ಕಂಪನಿಗಳಿಗೆ ಹೊರಗುತ್ತಿಗೆ ನೀಡದೇ ಇರಬಹುದು. ಇದು ಆ ಕಂಪನಿಗಳು ಮಾಡುವ ನೇಮಕಾತಿಯ ಮೇಲೆ ನೇರ ಪರಿಣಾಮ ಬೀರಲಿದೆ.

‘ಭಾರತದ ಐಟಿ ಕ್ಷೇತ್ರವು ಇನ್ನೂ ಪೂರ್ಣ ಪ್ರಮಾಣದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನಕ್ಕೆ ತೆರೆದುಕೊಂಡಿಲ್ಲ. ಒಂದು ವೇಳೆ ಪ್ರಾಜೆಕ್ಟ್‌ಗಳು ಕಡಿಮೆಯಾದರೆ ಅಥವಾ ಕಂಪನಿಗಳು ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಂಡರೆ, ಕೆಲವು ವರ್ಷಗಳವರೆಗೆ ಎಂಜಿನಿಯರ್‌ಗಳ ನೇಮಕಾತಿ ಪ್ರಕ್ರಿಯೆಗೆ ಕಡಿವಾಣ ಬೀಳಬಹುದು. ಆದರೆ, ಆ ನಂತರ ಈ ತಂತ್ರಜ್ಞಾನಕ್ಕೆ ಪೂರಕವಾದ ಪರ್ಯಾಯ ಉದ್ಯೋಗಗಳು ಸೃಷ್ಟಿಯಾಗಬಹುದು’ ಎಂದು ಹೇಳುತ್ತಾರೆ ಐಟಿ ಕ್ಷೇತ್ರದಲ್ಲಿ ತೊಡಗಿರುವವರು.

ಪ್ರಭಾವ ಬೀರದು: ನಾಸ್ಕಾಂ

‘ಆದರೆ, ಈಗ ಚರ್ಚೆಯಾಗುತ್ತಿರುವಂತೆ ಅತ್ಯಾಧುನಿಕ ಎಐ ಟೂಲ್‌ಗಳಿಂದ ದೇಶದ ಐಟಿ ಸೇವಾ ವಲಯಕ್ಕೆ ಯಾವುದೇ ಪರಿಣಾಮ ಬೀರದು. ಬದಲಿಗೆ ಈ ಟೂಲ್‌ಗಳು ವಲಯದ ಮಹತ್ವವನ್ನು ಮರುವ್ಯಾಖ್ಯಾನಗೊಳಿಸಲಿವೆ ಮತ್ತು ಇನ್ನಷ್ಟು ಹೆಚ್ಚಿಸಲಿವೆ’ ಎಂದು ಐಟಿ ಉದ್ದಿಮೆಯ ಒಕ್ಕೂಟ ನಾಸ್ಕಾಂ ಹೇಳಿದೆ.

‘ಭಾರತದ ತಂತ್ರಜ್ಞಾನ ಸೇವೆಗಳ ಕಂಪನಿಗಳು, ಸಂಕೀರ್ಣವಾದ ತಂತ್ರಜ್ಞಾನದ ವಾತಾವರಣದಲ್ಲಿ ಕಾರ್ಯಾಚರಿಸುತ್ತಿರುವ ಜಾಗತಿಕ ಮಟ್ಟದ ಕಂಪನಿಗಳೊಂದಿಗೆ ಕೆಲಸ ಮಾಡುತ್ತಿವೆ. ಎಐ ಆಧಾರಿತವಾದ ಮೌಲ್ಯಯುತ ಉದ್ದಿಮೆ ಸೃಷ್ಟಿಸಲು ಈ ಕ್ಷೇತ್ರದ ಬಗ್ಗೆ ಆಳವಾದ ಜ್ಞಾನ ಹೊಂದಿರುವ, ದೀರ್ಘ ಅನುಭವವುಳ್ಳ ಮತ್ತು ಉದ್ದಿಮೆಗೆ ಸಂಬಂಧಿಸಿದ ನಿರ್ದಿಷ್ಟ ವಿಷಯಗಳನ್ನು ಅರ್ಥೈಸಿಕೊಳ್ಳಬಲ್ಲವರ ನಡುವೆ ಉತ್ತಮ ಸಮನ್ವಯ ಇರಬೇಕು’ ಎಂದು ಹೇಳಿದೆ.

‘ದೊಡ್ಡ ಕಂಪನಿಗಳು ಎಐಯನ್ನು ಲಭ್ಯ ಮಾದರಿಯ ಹೊರತಾದ ಸರಳ ಪರಿಹಾರ ಎಂದುಕೊಂಡು ಅದನ್ನು ಅಳವಡಿಸಿಕೊಳ್ಳುವ ಸಾಧ್ಯತೆ ಕಡಿಮೆ’ ಎಂದು ನಾಸ್ಕಾಂ ಹೇಳಿಕೆಯಲ್ಲಿ ತಿಳಿಸಿದೆ.

ರಾಷ್ಟ್ರೀಯ

ಅದ್ನಾನ್ ಜತೆ ಭಾಗವತ್ ಭೋಜನ: ವಾಗ್ದಾಳಿ

ಮುಂಬೈನಲ್ಲಿ ಭಾನುವಾರ ಭೋಜನ ಕೂಟದಲ್ಲಿ ಮೋಹನ್ ಭಾಗವತ್ ಅವರ ಜತೆ ಭಾಗವಹಿಸಿರುವ ಚಿತ್ರವನ್ನು ಅದ್ನಾನ್‌ಸಮಿ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ

ಮುಂಬೈ (ಪಿಟಿಐ): ಆರ್‌ಎಸ್‌ಎಸ್ ಸರಸಂಘ ಚಾಲಕ ಮೋಹನ್ ಭಾಗವತ್ ಅವರು ಗಾಯಕ ಅದ್ನಾನ್ ಸಮಿ ಅವರೊಂದಿಗೆ ಭೋಜನ ಮಾಡಿರುವುದಕ್ಕೆ ಕಾಂಗ್ರೆಸ್, ಶಿವಸೇನಾ ವಾಗ್ದಾಳಿ ನಡೆಸಿವೆ.

‘ಅದ್ನಾನ್ ಸಮಿ ಅವರ ತಂದೆ ಅರ್ಷದ್ ಸಮಿ ಖಾನ್ ಪಾಕಿಸ್ತಾನ ವಾಯುಪಡೆಯ ಪೈಲಟ್ ಆಗಿದ್ದವರು. 1965ರ ಯುದ್ಧದ ಸಮಯದಲ್ಲಿ ಪಠಾಣ್‌ಕೋಟ್ ವಾಯುನೆಲೆಯನ್ನು ಅವರು ನಾಶಪಡಿಸಿದ್ದರು. ಆದರೆ, ಇದೀಗ ಮೋಹನ್ ಭಾಗವತ್ ಅವರು ಖಾನ್ ಅವರ ಪುತ್ರನೊಂದಿಗೆ ಭೋಜನ ಮಾಡಿದ್ದಾರೆ’ ಎಂದು ಕಾಂಗ್ರೆಸ್ ‘ಎಕ್ಸ್’ನಲ್ಲಿ ಟೀಕಿಸಿದೆ.

ರಾಷ್ಟ್ರೀಯ ಸ್ವಯಂಸೇವಕ ಸಂಘವು (ಆರ್‌ಎಸ್‌ಎಸ್) ‘ರಾಷ್ಟ್ರ ದ್ರೋಹಿ’ ಸಂಘಟನೆ ಎಂದೂ ವಾಗ್ದಾಳಿ ನಡೆಸಿದೆ.

‘ಅದ್ನಾನ್ ಜೊತೆ ಊಟ ಮಾಡುವ ಮೂಲಕ ಆರ್‌ಎಸ್‌ಎಸ್ ದೇಶಕ್ಕೆ ಏನು ಸ್ಫೂರ್ತಿ ನೀಡುತ್ತಿದೆ’ ಎಂದು ಶಿವಸೇನಾ (ಉದ್ಧವ್ ಬಣ) ಸಂಸದ ಸಂಜಯ್ ರಾವುತ್ ಪ್ರಶ್ನಿಸಿದ್ದಾರೆ.

ಮೋಹನ್ ಭಾಗವತ್ ಅವರ ಜೊತೆ ಭೋಜನ ಮಾಡಿದ ಫೋಟೊಗಳನ್ನು ಅದ್ನಾನ್ ಅವರು ಸಾಮಾಜಿಕ ಮಾಧ್ಯಮ ‘ಎಕ್ಸ್’ನಲ್ಲಿ ಭಾನುವಾರ ಹಂಚಿಕೊಂಡಿದ್ದರು. ಸರಸಂಘ ಚಾಲಕರ ಬಗ್ಗೆ ಮೆಚ್ಚುಗೆ ಸಹ ವ್ಯಕ್ತಪಡಿಸಿದ್ದರು.

ಚಾಪೆ ಕೆಳಗೆ ನುಸುಳುತ್ತಿರುವ ಆರ್‌ಎಸ್‌ಎಸ್: ಆರ್‌ಎಸ್‌ಎಸ್ ಶತಮಾನೋತ್ಸವದ ಅಂಗವಾಗಿ ಮುಂಬೈನಲ್ಲಿ ವಾರಾಂತ್ಯದಲ್ಲಿ ನಡೆದ ಎರಡು ದಿನದ ಕಾರ್ಯಕ್ರಮದಲ್ಲಿ ಗಾಯಕರು ಸೇರಿದಂತೆ ಬಾಲಿವುಡ್ ತಾರೆಯರಾದ ಸಲ್ಮಾನ್ ಖಾನ್, ವಿಕ್ಕಿ ಕೌಶಲ್, ರವೀನಾ ಟಂಡನ್ ಮತ್ತು ಶಿಲ್ಪಾ ಶೆಟ್ಟಿ ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.

‘ಆರ್ಥಿಕ ಅಪರಾಧಕ್ಕಾಗಿ ಲುಕ್‌ಔಟ್ ನೋಟಿಸ್ ಹೊಂದಿರುವ ನಟಿಯೂ ಈ ಕಾರ್ಯಕ್ರಮದಲ್ಲಿ ಇದ್ದರು. ಆಕೆಯ ಪತಿ ನೀಲಿಚಿತ್ರಗಳನ್ನು ಮಾಡುತ್ತಿದ್ದಾರೆ ಎಂಬ ಆರೋಪವಿದೆ’ ಎಂದು ಯಾರೊಬ್ಬರ ಹೆಸರನ್ನು ಪ್ರಸ್ತಾಪಿಸದೆ ರಾವುತ್ ಟೀಕಿಸಿದ್ದಾರೆ.

‘ದೇಶದ ಜನರಿಗೆ ಯಾವ ಸಂದೇಶ ನೀಡುತ್ತಿದ್ದೀರಿ? ಪಾಪಗಳನ್ನು ಪರಿಹರಿಸಲು ಚಾಪೆ ಕೆಳಗೆ ಸಂಘವು ಪ್ರಯತ್ನಿಸುತ್ತಿದೆಯೇ?’ ಎಂದು ವಾಗ್ದಾಳಿ ನಡೆಸಿದ್ದಾರೆ.

‘ದೇಶವು ಅಮೆರಿಕದ ‘ಗುಲಾಮ’ ಆಗುತ್ತಿದ್ದು, ಇದರ ಹೊಣೆಯನ್ನು ಸಂಘ ಹೊರಬೇಕು’ ಎಂದು ರಾವುತ್ ಆಗ್ರಹಿಸಿದ್ದಾರೆ.

ಹಕ್ಕಿಜ್ವರ: ಆಂಧ್ರದಲ್ಲಿ ಕಟ್ಟೆಚ್ಚರ

ಅಮರಾವತಿ (ಪಿಟಿಐ): ಆಂಧ್ರಪ್ರದೇಶದ ಕೆಲವೆಡೆ ಹಕ್ಕಿಜ್ವರದಿಂದಾಗಿ ಕೋಳಿಗಳು ಮೃತಪಟ್ಟಿರುವ ಕಾರಣ ಅಲ್ಲಿನ ಸರ್ಕಾರ ತೀವ್ರ ಕಟ್ಟೆಚ್ಚರ ವಹಿಸಿದೆ.

‘ಚಿತ್ತೂರು ಮತ್ತು ಅಣ್ಣಮಯ್ಯ ಜಿಲ್ಲೆಗಳ ಕೆಲ ಭಾಗಗಳಲ್ಲಿ ಶನಿವಾರ ಸುಮಾರು 40 ಮತ್ತು ಭಾನುವಾರ 50 ಕೋಳಿಗಳು ಮೃತಪಟ್ಟಿದ್ದವು. ಈ ಹಕ್ಕಿಗಳಲ್ಲಿ ಹಕ್ಕಿ ಜ್ವರ ಸೋಂಕು ಇದ್ದುದು ಪರೀಕ್ಷೆಯಲ್ಲಿ ದೃಢಪಟ್ಟಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಸರ್ಕಾರವು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದೆ. ಸೋಂಕು ಪತ್ತೆಯಾದ ಗ್ರಾಮಗಳಲ್ಲಿ ತುರ್ತು ಸ್ಪಂದನಾ ತಂಡಗಳನ್ನು ನಿಯೋಜಿಸಲಾಗಿದೆ’ ಎಂದು ಆಂಧ್ರ-ಪ್ರದೇಶದ ಪಶುಸಂಗೋಪನಾ ಸಚಿವ ಕಿಂಜರಪು ಅಚ್ಚನಾಯ್ಡು ಅವರು ತಿಳಿಸಿದ್ದಾರೆ.

‘ಹಕ್ಕಿಗಳಲ್ಲಿ ಮಾತ್ರ ಸೋಂಕು ಕಾಣಿಸಿಕೊಂಡಿದೆ. ಹಾಗಾಗಿ ಜನರು ಭಯಪಡುವ ಅಗತ್ಯವಿಲ್ಲ’ ಎಂದು ಹೇಳಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ರಸ್ತೆಯಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿರುವ, ವಾಹನಗಳ ಸಂಚಾರವನ್ನು ತಡೆದಿರುವ ವಿಡಿಯೊ ತುಣುಕೊಂದನ್ನು ಸಾಮಾಜಿಕ ಕಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ‘ಇದು ವಿಶ್ವವಿದ್ಯಾಲಯ ಧನಸಹಾಯ ಆಯೋಗ (ಯುಜಿಸಿ) ರೂಪಿಸಿರುವ ಹೊಸ ನಿಯಮಗಳನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿ ಬಿಹಾರದ ಪಟ್ನಾದಲ್ಲಿ ವಿದ್ಯಾರ್ಥಿಗಳು ನಡೆಸಿದ ಪ್ರತಿಭಟನೆಯ ದೃಶ್ಯ. ಈ ಪ್ರತಿಭಟನೆಯನ್ನು ಮುಖ್ಯವಾಹಿನಿಯ ಮಾಧ್ಯಮಗಳು ನಿರ್ಲಕ್ಷಿಸಿವೆ’ ಎಂದು ಪೋಸ್ಟ್‌ಗಳಲ್ಲಿ ಪ್ರತಿಪಾದಿಸಲಾಗುತ್ತಿದೆ. ಆದರೆ, ಇದು ಸುಳ್ಳು.

ವಿಡಿಯೊ ತುಣುಕಿನಿಂದ ಕೀಫ್ರೇಮ್ ಒಂದನ್ನು ಪ್ರತ್ಯೇಕಿಸಿ ರಿವರ್ಸ್ ಸರ್ಚ್ ವಿಧಾನದಲ್ಲಿ ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ, 2025ರ ಸೆಪ್ಟೆಂಬರ್ 21ರಂದು ‘ಮಹಾರಿಯಾಪ್ರಹ್ಲಾದ್’ ಎಂಬುವವರ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಇದೇ ವಿಡಿಯೊ ಪೋಸ್ಟ್ ಆಗಿತ್ತು. ಅದರಲ್ಲಿದ್ದ ಶೀರ್ಷಿಕೆಯ ಪ್ರಕಾರ, ಈ ವಿಡಿಯೊ ತುಣುಕನ್ನು ಅಸ್ಸಾಂನ ಗುವಾಹಟಿಯಲ್ಲಿ ಚಿತ್ರೀಕರಿಸಲಾಗಿದೆ. ಮೃತಪಟ್ಟಿದ್ದ ಅಸ್ಸಾಂನ ಗಾಯಕ ಜುಬಿನ್ ಗರ್ಗ್ ಅವರಿಗೆ ಅಂತಿಮ ನಮನ ಸಲ್ಲಿಸಲು ಸೇರಿದ್ದ ಜನಸ್ತೋಮದ ವಿಡಿಯೊ ಅದು. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಟ ನಡೆಸಿದಾಗ ವಿವಿಧ ಮಾಧ್ಯಮಗಳಲ್ಲಿ ಸೆಪ್ಟೆಂಬರ್ 11, 23ರಂದು ಇದೇ ವಿಡಿಯೊ ಹಾಗೂ ಫೋಟೊ ಸಹಿತ ವರದಿಗಳು ಪ್ರಕಟವಾಗಿದ್ದವು. ಹಳೆಯ ವಿಡಿಯೊವನ್ನು ಯುಜಿಸಿ ನಿಯಮ ಜಾರಿಗೆ ಒತ್ತಾಯಿಸಿ ನಡೆದ ಪ್ರತಿಭಟನೆಯ ವಿಡಿಯೊ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಯಾರೂ ಅರಿಯದ ವೀರರು

ನುಡಿ ಬೆಳಗು

ದೀಪಾ ಹಿರೇಗುತ್ತಿ

2018ನೇ ಇಸವಿಯ ಸೆಪ್ಟೆಂಬರ್ ಇಪ್ಪತ್ತೆಂಟನೇ ತಾರೀಕು. ಇಂಡೊನೇಷ್ಯಾದ ಸುಲಾವೆಸಿ ದ್ವೀಪದಲ್ಲಿ ಭೂಕಂಪ ಮತ್ತು ಸುನಾಮಿ ಒಟ್ಟೊಟ್ಟಿಗೇ ಅಪ್ಪಳಿಸಿದವು. ಪಾಲು ನಗರದ ವಿಮಾನ ನಿಲ್ದಾಣದ ವಾಯುಸಂಚಾರವನ್ನು ನಿಯಂತ್ರಿಸುವ ಗೋಪುರದಲ್ಲಿ ಎಂದಿನಂತೆಯೇ ವಿಮಾನಗಳಿಗೆ ದಾರಿ ಸುಗಮ-ಗೊಳಿಸಿಕೊಡುವ ಕೆಲಸ ಸಾಗಿತ್ತು. ಅಷ್ಟು ಹೊತ್ತಿಗೆ ಭೂಮಿ ಕಂಪಿಸಲು ಪ್ರಾರಂಭವಾಯಿತು. ನೋಡ-ನೋಡುತ್ತಿದ್ದಂತೆಯೇ ಸಮುದ್ರತೀರದ ನಗರ ಭೂಕಂಪಕ್ಕೆ ಒಳಗಾಯಿತು. ಒಂದು ವಿಮಾನ ಟೇಕ್ ಆಫ್ ಆಗಬೇಕಿತ್ತು. ಆದರೆ ಗೋಪುರದೊಳಗಿದ್ದ ಸಿಬ್ಬಂದಿ ಹೀಗಾಗುತ್ತಿದೆ ಎಂಬ ಫೋನ್ ಕರೆ ಬಂದ ತಕ್ಷಣ ಹೊರಗೆ ಓಡಿಹೋದರು. ಆದರೆ ಇಪ್ಪತ್ತೊಂದು ವರ್ಷದ ಏರ್ ಟ್ರಾಫಿಕ್ ನಿಯಂತ್ರಕ ಅಂಟೋನಿಯಸ್ ಗುನಾವಾನ್ ನಿಯಂತ್ರಣ ಗೋಪುರವನ್ನು ಬಿಟ್ಟು ಹೊರಬರಲಿಲ್ಲ. ಗೋಪುರ ಕುಸಿದು ಬೀಳುವ ಸಾಧ್ಯತೆ ದಟ್ಟವಾಗಿತ್ತು. ಸಹೋದ್ಯೋಗಿಗಳು ಹೊರಗೆ ಬರುವಂತೆ ಕರೆ ಮಾಡುತ್ತಿದ್ದರೂ ಆತ ಬರಲಿಲ್ಲ. 147 ಜನರನ್ನು ಹೊತ್ತಿದ್ದ ವಿಮಾನ ರನ್‌ವೇನಲ್ಲಿತ್ತು. ಗುನಾವಾನ್ ಅನುಮತಿ ಕೊಟ್ಟೊಡನೆ ವಿಮಾನ ಟೇಕ್ ಆಫ್ ಆಯಿತು. ಅಷ್ಟು ಹೊತ್ತಿಗಾಗಲೇ ಗೋಪುರ ಕುಸಿಯಲು ಪ್ರಾರಂಭವಾಗಿತ್ತು. ರನ್‌ವೇನಲ್ಲೂ ಬಿರುಕುಗಳುಂಟಾದವು. ಗೋಪುರದ ಮೆಟ್ಟಿಲುಗಳು ಅವಶೇಷಗಳಿಂದ ಮುಚ್ಚಿಹೋದವು. ಬೇರೆ ದಾರಿ ಇಲ್ಲದೇ ಗುನಾವಾನ್ ನಾಲ್ಕನೇ ಮಹಡಿಯಿಂದ ಜಿಗಿದರು. ತೀವ್ರಗಾಯಗಳಾದ ಅವರನ್ನು ಬೇರೆಡೆಗೆ ಕರೆದೊಯ್ಯಲು ಹೆಲಿಕಾಪ್ಟರ್ ಬೇಕಾಗಿತ್ತು. ದುರ್ದೈವವಶಾತ್ ಭೂಕಂಪ, ಸುನಾಮಿಯ ಕಾರಣದಿಂದ ಅದು ತಲುಪುವುದು ತಡವಾಗಿ ಗುನಾವಾನ್ ಮೃತಪಟ್ಟರು. ಅವತ್ತು ಸುಲಾವೆಸಿ ದ್ವೀಪದಲ್ಲಿ ಸಾವಿರದ ಇನ್ನೂರಕ್ಕೂ ಹೆಚ್ಚು ಜನ ಮೃತಪಟ್ಟರು. ಆದರೆ ಸಾವು ಬಾಗಿಲಲ್ಲಿದ್ದರೂ ಓಡದೇ ವಿಮಾನದಲ್ಲಿದ್ದ 147 ಜನರ ಪ್ರಾಣ ಉಳಿಸಿದ ಇಪ್ಪತ್ತೊಂದರ ಎಳೆಯನ ತ್ಯಾಗ ಅಂತಿಂಥದ್ದಲ್ಲ. ಏನೇ ಆದರೂ ತನ್ನ ಕರ್ತವ್ಯಪ್ರಜ್ಞೆಯನ್ನು ಮರೆಯದ ಅಪರೂಪದ ಉದ್ಯೋಗಿಯವರು. ಕಳೆದವಾರ ಮಧ್ಯ-ಪ್ರದೇಶದಲ್ಲಿ ತನ್ನ ಅಂಗನವಾಡಿಯ ಇಪ್ಪತ್ತು ಮಕ್ಕಳನ್ನು ಜೇನುನೊಣಗಳ ದಾಳಿಯಿಂದ ಬಚಾವು ಮಾಡಿ, ಅವುಗಳ ಕಡಿತದಿಂದ ಮೃತಪಟ್ಟ ಕಂಚನ್ ಬಾಯಿ ಎಂಬ ಅಂಗನವಾಡಿ ಸಹಾಯಕಿಯ ತ್ಯಾಗವೂ ಈ ಕರ್ತವ್ಯಪ್ರಜ್ಞೆಯ ಮತ್ತೊಂದು ಉದಾತ್ತ ಉದಾಹರಣೆ.

ಕುವೆಂಪು ಅವರ ‘ಯಾರೂ ಅರಿಯದ ವೀರ’ ಕಥೆ ಅನಾಮಧೇಯ ತ್ಯಾಗಿಗಳ ತ್ಯಾಗದ ಪ್ರಾಮುಖ್ಯ-ತೆಯನ್ನು ಕುರಿತು ಹೇಳುತ್ತದೆ. ದೋಣಿಯಲ್ಲಿ ಜನ ಜಾಸ್ತಿಯಾಗಿ ಮುಳುಗುವ ಸಂದರ್ಭ ಬಂದಾಗ ಗೌಡರ ಮನೆಯ ಆಳು ಲಿಂಗ ದೋಣಿಯಿಂದ ನದಿಗೆ ಹಾರಿ ಅವರೆಲ್ಲರ ಪ್ರಾಣ ಉಳಿಸಿದ್ದಷ್ಟೇ ಅಲ್ಲ, ವಾಪಾಸು ಈಜಿ ಬಚಾವಾಗಿ ಬಂದ ಮೇಲೂ ತಾನು ನೀರಿಗೆ ಹಾರಿದ ವಿಚಾರ ಯಾರಿಗೂ ಹೇಳದೇ ಮುಗ್ಗರಿಸಿ ಬಿದ್ದೆ ಎಂದೇ ಹೇಳುವುದು ವಿಶೇಷ. ಅದು ಈ ಯಾರೂ ಅರಿಯದ ವೀರನ ಮಹಾನ್ ಗುಣ. ಸಾಮಾನ್ಯರಾಗಿ-ದ್ದೂ ಅಸಾಮಾನ್ಯರಾದ ಇಂತಹ ಯಾರೂ ಅರಿಯದ ವೀರರು ಇರುವುದರಿಂದಲೇ ಜಗತ್ತು ಇಂದಿಗೂ ವಾಸಿಸಲು ಯೋಗ್ಯವಾದ ಸ್ಥಳವಾಗಿಯೇ ಉಳಿದಿದೆ. ಯಾವುದೇ ಹಾರ ತುರಾಯಿಗಳ ಅಪೇಕ್ಷೆ ಇಲ್ಲದೇ ಇಂಥವರು ಸಮಾಜಕ್ಕಾಗಿ ಕೆಲಸ ಮಾಡುತ್ತಲೇ ಇರುತ್ತಾರೆ. ಮತ್ತೆ ಕೆಲವರು ತಮಗೆ ಸಂಬಂಧವೇ ಇಲ್ಲದ ಜನರಿಗಾಗಿ ಸಾವನ್ನೂ ಅಪ್ಪಿಕೊಳ್ಳುತ್ತಾರೆ. ಈ ಹಿಂದೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕೂಡ ಕೋಟ್ಯಂತರ ಜನರು ತಮ್ಮದೇ ಆದ ರೀತಿಯಲ್ಲಿ ದೇಶಕ್ಕಾಗಿ ತ್ಯಾಗ ಮಾಡಿದ್ದಾರೆ. ಇಂತಹ ಎಲ್ಲ ಯಾರೂ ಅರಿಯದ ವೀರರಿಗೆ ನಮ್ಮ ಕೃತಜ್ಞತೆಗಳು ಸದಾ ಸಲ್ಲಬೇಕು.

ಗುಂಡಣ್ಣ

ಪದಬಂಧ 6311

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಲ್ವತ್ತೆಂಟನೆಯ ಸಂವತ್ಸರ ಸಂತೋಷವನ್ನೂ ತಂದಿದೆ (3)
5.ಹಸನ್ಮುಖ ವದನವಿದು (4)
6.ದೇವರನ್ನು ರಥದಲ್ಲಿಟ್ಟು ಮಾಡುವ ಮೆರವಣಿಗೆ (4)
8.ಜರಿಯದಿರಿ! ಇದು ಮುಸಲ್ಮಾನರ ಕಾಲಗಣನೆ! (3)
11.ಕುದುರೆಯನ್ನೇರುವ ಬಳೆ (3)
13.ಮಣಿ ಧರಿಸಿರುವ ಸೂರ್ಯ! (4)
17.ಯಕ್ಷಿಣಿಗಾರನಿಲ್ಲಿ ತಿರುಗಿದ್ದಾನಲ್ಲಾ? (4)
18.ಯೋಗವಿದ್ದಾಗಲೇ ಈ ಅದೃಷ್ಟ! (3)

ಮೇಲಿಂದ ಕೆಳಕ್ಕೆ

1.ದೇವೋಭವ ಎನಿಸಿಕೊಳ್ಳುವ ಗುರು (3)
2.ಈತ ದನಗಳನ್ನು ಕಾಯುವವನು (4)
3.ನವಿಲಿನ ಕುಣಿತ (3)
4.ಕಾವ್ಯದ ನವರಸಗಳಲ್ಲಿ ಇದು ಜಿಗುಪ್ಸೆಯನ್ನುಂಟು ಮಾಡಿದೆ (3)
7.ವರ್ಣದಿಂದಲೇ ವಿಸ್ತಾರವಾದ ನಿರೂಪಣೆ (3)
9.ಪೇರಿ ಕಿತ್ತಾಗಲೇ ಮಾಡಿರುವ ದುರಸ್ತಿ! (3)
10.ವಿಷಯದ ಕ್ರಮಬದ್ಧವಾದ ನಿರೂಪಣೆ (3)
12.ಗಾಡಿಯಲ್ಲಿದ್ದವನ ಚಿಲ್ಲರೆ ಹಣವಿದು (4)
14.ಹಿತವಾದ ಮಾತು (3)
15.ಗೋ ಜಾತಿಯ ಪ್ರಾಣಿಗಳ ತ್ಯಾಜ್ಯ ಉಲ್ಟಾ ಕಾಣುತ್ತಿದೆ (3)
16.ಹೂವಿನಲ್ಲಿರುವ ಹುಡಿ ಇಲ್ಲಿದೆ (3)



6310ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚಕ್ಷುಃಪ್ರೀತಿ 4.ಲವಾಜಮೆ
6.ವಿಧುರ 7.ಮನವಿ
8.ದನುಜ 10.ದಮನ
12.ಲಲಾಟ 13.ಅಪಾತ್ರ
14.ಅಂಗಾರಕ 16.ವಿನಿಯೋಗ

ಮೇಲಿಂದ ಕೆಳಕ್ಕೆ:
1.ಚಮ್ಮಾರ 2.ತಿಲ
3.ಭ್ರಮೆ 5.ವಾಕ್ಕೋವಿದ
6.ವಿಷಾದ 7.ಮರ್ಕಟ
9.ಜಲಚರ 11.ನಕ್ಷತ್ರ
13.ಅನಂಗ 14.ಅಂಧ 15.ಕವಿ

ಸುಡೊಕು 6695

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		7		8			2	6
							7	8
6		5		9		4		
	2		6				3	
5		3	2		1	8		9
	1				9		4	2
	6			2				4
3		8	9				5	
	5				4			1

6694 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

10 ಫೆಬ್ರುವರಿ 2026 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣ ಅಷ್ಟಮಿ ಗಂ 7-28 ನಕ್ಷತ್ರ: ವಿಶಾಖ ಗಂ.7-55 ಯೋಗ: ಧ್ರುವ ಗಂ. 25-42 ಕರಣ: ಕೌಲವ ಗಂ 7-28 ಮಕರ ಮಾಸದ 27 ನೇ ದಿನ. ಮಳೆ ನಕ್ಷತ್ರ : ಧನಿಷ್ಠ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 ಸೂರ್ಯೋದಯ : 06-59 ಸೂರ್ಯಾಸ್ತ : 06-31, ಮುಸ್ಲಿಂ ದಿನಾಂಕ : 21 ಶಬನ್, ಅದೃಷ್ಟ ಸಂಖ್ಯೆ : 11, 6

ಮೇಷ: ಕೆಲವು ವೈಯಕ್ತಿಕ ವಿಚಾರಗಳನ್ನು ಆಪ್ತ ಮಿತ್ರರೊಬ್ಬರಲ್ಲಿ ಹೇಳಿಕೊಳ್ಳಬೇಕಾದ ಸಂದರ್ಭ ಬರಲಿದೆ. ಗೃಹಸೌಖ್ಯ ಉತ್ತಮವಿದ್ದು ಸಾಮಾಜಿಕವಾಗಿ ಸ್ಥಾನಮಾನ ಪ್ರಾಪ್ತಿ. ಆದಾಯವು ಸಾಕಷ್ಟು ಕೂಡಿ ಬರಲಿದೆ.

ವೃಷಭ: ಮಕ್ಕಳ ಕೆಲಸಗಳ ಬಗ್ಗೆ ನೆರೆಯವರಿಂದ ಪ್ರಶಂಸೆಯ ಮಾತು ಕೇಳಿ ಬರುತ್ತದೆ. ಆಂಜನೇಯನ ಸೇವೆ ಮಾಡುವುದರಿಂದ ಗೊಂದಲ ನಿವಾರಣೆ. ತೆರಿಗೆ ಅಧಿಕಾರಿಗಳಿಗೆ ಉತ್ತಮವಾದ ಹೊಗಳಿಕೆಯು ಇರುವುದು.

ಮಿಥುನ: ಮಾತು ಇನ್ನೊಬ್ಬರ ಮನಸ್ಸಿಗೆ ನೋವಾಗದಂತೆ ಇರುವ ಬಗ್ಗೆ ಗಮನ ನೀಡಿ. ಕದಡಿದ ಮನಸ್ಸಿಗೆ ಸಂಜೆಯ ವೇಳೆಗೆ ತಣ್ಣನೆಯ ವಾತಾವರಣ ಸಂತೋಷ ನೀಡುತ್ತದೆ. ಎಲ್ಲರೊಂದಿಗೂ ತಾಳ್ಮೆಯಿಂದ ವರ್ತಿಸಿ.

ಕರ್ಕಾಟಕ: ಮಹಿಳೆಯರಿಗೆ ಋಣಾತ್ಮಕ ಚಿಂತನೆಯಿಂದ ಆರೋಗ್ಯ ಹಾಳಾಗಬಹುದು. ವಿದೇಶ ಪ್ರವಾಸದ ಯೋಜನೆಗಳು ಲಾಭ ನೀಡಲಿವೆ. ವಿದ್ಯುತ್ ಉಪಕರಣಗಳ ಬಳಕೆಯಲ್ಲಿ ಜಾಗ್ರತೆ ವಹಿಸಿ.

ಸಿಂಹ: ಅಪರಿಚಿತ ವ್ಯಕ್ತಿಯೊಬ್ಬರು ಉತ್ತಮ ಉಪಾಯಗಳನ್ನು ಮತ್ತು ಅವರ ಅನುಭವಗಳನ್ನು ನೀಡುವುದಾಗಿ ಹೇಳಿ ದಾರಿ ತಪ್ಪಿಸುವ ಮಾರ್ಗಕ್ಕೆ ಎಳೆಯಲಿದ್ದಾರೆ. ಬುದ್ಧಿವಂತಿಕೆಯಿಂದ ಬದುಕ ಬೇಕಾದ ದಿನ.

ಕನ್ಯಾ: ಬಿಡುವಿಲ್ಲದ ಕೆಲಸದಿಂದ ಬಳಲಿದ ವಿಶ್ರಾಂತಿಗೆ ಸೂಕ್ತ ಸಮಯ ಸಿಗುವುದು. ಯಾವುದೇ ಉದ್ವೇಗಕ್ಕೆ ಒಳಗಾಗದೆ ಹೊಸ ಸ್ಫೂರ್ತಿಯಿಂದ ಗೃಹಕಾರ್ಯ ನಿರ್ವಹಿಸುವಿರಿ. ಯೋಗಾಭ್ಯಾಸ ಮನಸ್ಸಿಗೆ ಹಿತವೆನಿಸುವುದು.

ತುಲಾ: ತೆರೆಮರೆಯಲ್ಲಿ ನಡೆಸಿದ ಕೆಲಸಗಳಿಂದ ಅಧಿಕಾರವನ್ನು ಪಡೆದುಕೊ-ಳ್ಳುವಿರಿ. ಆಫೀಸಿನ ಕೆಲಸಗಳನ್ನು ಮಾಡಿ ಮುಗಿಸುವಲ್ಲಿ ಆತುರ ತೋರುವುದು ಸರಿಯಲ್ಲ. ರಾಜಕೀಯದಲ್ಲಿನ ಬದಲಾವಣೆಯ ಲಾಭ ಪಡೆಯುವಿರಿ.

ವೃಶ್ಚಿಕ: ಮಕ್ಕಳು ಮಾಡುವ ಸಣ್ಣಪುಟ್ಟ ತಪ್ಪುಗಳನ್ನು ಕ್ಷಮಿಸಿ ತಿಳಿ ಹೇಳಿ, ಈ ದಿನ ಮಕ್ಕಳನ್ನು ಶಿಕ್ಷಿಸಬೇಡಿ. ಗುತ್ತಿಗೆದಾರರ ಹತ್ತಿರ ಗೃಹ ನಿರ್ಮಾಣದ ವಿಚಾರದಲ್ಲಿ ಪುನಃ ಪುನಃ ಪಾಠ ಕಲಿಯುವಂತಾಗಲಿದೆ.

ಧನು: ಭಾವನಾ ಪ್ರಪಂಚ ಈ ದಿನ ನಿಮ್ಮನ್ನು ಮತ್ತೆ ಮತ್ತೆ ಸೆಳೆಯುತ್ತದೆ. ಮನೆ ಕಟ್ಟುವ ಸಲುವಾಗಿ ಹಣಕಾಸಿನ ವ್ಯವಸ್ಥೆಯಲ್ಲಿ ತಂದೆಗೆ ಸಹಕರಿಸುವಿರಿ. ಜನರ ಸಂಪರ್ಕ ಬೆಳೆಸಿಕೊಳ್ಳುವುದನ್ನು ಅಭ್ಯಾಸಮಾಡಿ.

ಮಕರ: ಕೆಲಸ ಆರಂಭಿಸುವ ಮುನ್ನ ಆಮೂಲಾಗ್ರ ಚಿಂತನೆ ಅಗತ್ಯ ಎಂಬುದು ತಿಳಿದು ಬಂದಿದೆ. ವಿವಾಹದ ವಿಚಾರದಲ್ಲಿ ತೀರ್ಮಾನಕ್ಕೆ ಬರುವುದು ಉತ್ತಮವೆಂದು ಕಾಣುತ್ತದೆ. ಅಧಿಕ ಹೊತ್ತು ವಿಶ್ರಾಂತಿ ಬೇಕೆನಿಸಲಿದೆ.

ಕುಂಭ: ಕೆಲಸ ಕಾರ್ಯಗಳಿಗೆ ಅಡ್ಡಿ ಆತಂಕಗಳು ಇರುವುದಿಲ್ಲ. ಶುಭ ಸಮಾ-ಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ.

ಮೀನ: ಗಡಿಬಿಡಿಯ ಸ್ವಭಾವದಿಂದಾಗಿ ಕಂಪನಿಯಲ್ಲಿ ಉಂಟಾದ ತಪ್ಪುಗಳಿಗೆ ನೇರ ಹೊಣೆಗಾರಿಕೆ ಇರುತ್ತದೆ. ಕಲಾವಿದರು ಅದರಲ್ಲೂ ಸಂಗೀತ ಕಲಾವಿದರಿಗೆ ಸಿಕ್ಕ ಅವಕಾಶವನ್ನು ತಿರಸ್ಕರಿಸಬೇಡಿ.

ಷೇರುಪೇಟೆ ವಹಿವಾಟು — ಹಿಂದಿನ ಅಂತ್ಯ 83,580 | 485 | ಇಂದಿನ ಅಂತ್ಯ 84,065

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	25,693
ಇಂದಿನ ಅಂತ್ಯ	25,867
ದಿನದ ಗರಿಷ್ಠ	25,922
	173

ಮೊಟ್ಟೆ ಧಾರಣೆ (ನೆಕ್‌ಇಸಿಸಿ)		
ಬೆಂಗಳೂರು	100 ಕ್ಕೆ	₹560
	12 ಕ್ಕೆ	₹80
ಮೈಸೂರು	100 ಕ್ಕೆ	₹562

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹203
ಆರ್‌ಎಸ್‌ಎಸ್-5	₹198
ಗುಡ್ ಲಾಟ್	₹186

ರಾಮನಗರ ರೇಷ್ಮೆಗೂಡು	
ಮಿಶ್ರತಳಿ (ಪ್ರ.ಕೆ)	₹612-773
ದ್ವಿತಳಿ (ಪ್ರ.ಕೆ)	₹390-946

ಮುದ್ರಮನೆ ಕಾಫಿ	
ಎಪಿ	₹23250
ಎಬಿ	₹12600
ಆರ್‌ಪಿ	₹18000
ಆರ್‌ಸಿ	₹10125

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಹಿಂದಿನ ವಹಿವಾಟಿನ ದರ) (10 ಕೆ.ಜಿ)	
ಶೇಂಗಾ (ರಿಫೈನ್ಡ್)	₹1740 (1735)
ಸೋಯಾ (ರಿಫೈನ್ಡ್)	₹1410 (1405)
ಸೂರ್ಯಕಾಂತಿ (ರಿಫೈನ್ಡ್)	₹1630 (1615)
ಪಾಮೋಲೀನ್	₹1330 (1325)

ಎಂಎಸ್‌ಇಗಳಿಗೆ ಅಡಮಾನ ರಹಿತ ಸಾಲ: ಆರ್‌ಬಿಐ

ಮುಂಬೈ (ಪಿಟಿಐ): ಅತಿಸಣ್ಣ ಹಾಗೂ ಸಣ್ಣ ಗಾತ್ರದ (ಎಂಎಸ್‌ಇ) ಉದ್ದಿಮೆಗಳಿಗೆ ಬ್ಯಾಂಕ್‌ಗಳು ಯಾವುದೇ ಅಡಮಾನ ಇಲ್ಲದೆ ₹25 ಲಕ್ಷದವರೆಗೆ ಸಾಲ ನೀಡಬಹುದು ಎಂದು ಆರ್‌ಬಿಐ ಸೋಮವಾರ ಹೇಳಿದೆ. ಬ್ಯಾಂಕ್‌ಗಳು ಎಂಎಸ್‌ಇ ಉದ್ಯಮಗಳ ಹಣಕಾಸಿನ ಸ್ಥಿತಿ ಹಾಗೂ ಅವುಗಳ ಹಣಕಾಸಿನ ಹಿನ್ನೆಲೆಯನ್ನು ಪರಿಗಣಿಸಿ ಈ ಸಾಲ ನೀಡಬಹುದಾಗಿದೆ.

ಎಂಎಸ್‌ಇ ವಲಯಕ್ಕೆ ಸಾಲ ನೀಡುವುದರ ಕುರಿತ ನಿರ್ದೇಶನಗಳಿಗೆ ಆರ್‌ಬಿಐ ತಿದ್ದುಪಡಿ ತಂದಿದೆ.

'ಎಂಎಸ್‌ಇ ಉದ್ಯಮಗಳ ಇದುವರೆಗಿನ ಹಣಕಾಸಿನ ಹಿನ್ನೆಲೆ ಪರಿಗಣಿಸಿ, ಅವುಗಳ ಈಗಿನ ಹಣಕಾಸಿನ ಸ್ಥಿತಿ ಪರಿಗಣಿಸಿ ಬ್ಯಾಂಕ್‌ಗಳು ತಮ್ಮ ಆಂತರಿಕ ನೀತಿಗೆ ಅನುಗುಣವಾಗಿ ₹25 ಲಕ್ಷದವರೆಗೆ ಸಾಲವನ್ನು ಅಡಮಾನ ಇಲ್ಲದೆ ಕೊಡಬಹುದು' ಎಂದು ಹೇಳಿದೆ.

ಲಭ್ಯವಿರುವೆಡೆಗಳಲ್ಲಿ ಸಾಲ ಖಾತರಿ ಯೋಜನೆಯ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಅದು ತಿಳಿಸಿದೆ. 'ಆದರೆ ಇಲ್ಲಿ ಹೇಳಿರುವ ಮಿತಿಯವರೆಗಿನ ಸಾಲಕ್ಕೆ, ಸಾಲ ಪಡೆಯುವವರು ಸ್ವಇಚ್ಛೆಯಿಂದ ಚಿನ್ನವನ್ನು ಮತ್ತು ಬೆಳ್ಳಿಯನ್ನು ಅಡಮಾನವಾಗಿ ಇರಿಸಿದರೆ ಅದನ್ನು ನಿಯಮಗಳ ಉಲ್ಲಂಘನೆ ಎಂದು ಪರಿಗಣಿಸಲಾಗುವುದಿಲ್ಲ' ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

ತಿದ್ದುಪಡಿ ಕಂಡಿರುವ ಈ ನಿಯಮಗಳು ಏಪ್ರಿಲ್ 1ರಿಂದ ಅನ್ವಯ ಆಗಲಿವೆ.

ಅಡಿಕೆ ಧಾರಣೆ

ಚಿತ್ರದುರ್ಗ	
ಅಪಿ	54219-54629
ರಾಶಿ	53739-54169
ಕುಮಟಾ	
ಚಾಲಿ	48669-51099
ಚಿಪ್ಪು	32089-38569
ಕೋಕ	15099-35569
ಫ್ಯಾಕ್ಟರಿ	12569-28370
ಹೊಸಚಾಲಿ	42699-48421
ಪುತ್ತೂರು	
ಕೋಕ	28000-37000
ಹೊಸತು	26000-47000
ಸಾಗರ	
ಬಿಳಿಗೋಟು	19127-37100
ಚಾಲಿ	24129-44570
ಕೋಕ	16999-36199
ಕೆಂಪುಗೋಟು	30569-44499
ರಾಶಿ	40009-56829
ಸಿಪ್ಪೆಗೋಟು	20099-23700
ಶಿವಮೊಗ್ಗ	
ಬೆಟ್ಟೆ	50100-66572
ಗೊರಬಲು	19000-44501
ರಾಶಿ	45396-56799
ಸರಕು	62699-86610
ಸಿದ್ದಾಪುರ	
ಬಿಳಿಗೋಟು	27900-36219
ಚಾಲಿ	43009-50009
ಕೋಕ	22199-30199
ಹೊಸಚಾಲಿ	40609-46299
ಕೆಂಪುಗೋಟು	30089-38599
ರಾಶಿ	48099-55009
ತಟ್ಟಿಬೆಟ್ಟೆ	38099-52899
ಶಿರಸಿ	
ಬೆಟ್ಟೆ	30689-52611
ಬಿಳಿಗೋಟು	24099-38709
ಚಾಲಿ	41899-48099
ಕೆಂಪುಗೋಟು	23199-37218
ರಾಶಿ	50879-55899
ಯಲ್ಲಾಪುರ	
ಅಪಿ	62779-74001
ಬಿಳಿಗೋಟು	19699-39699
ಕೋಕ	13009-32899
ಹಳೆಚಾಲಿ	38312-51199
ಹೊಸಚಾಲಿ	42369-48299
ಕೆಂಪುಗೋಟು	16099-39019
ರಾಶಿ	49599-59055
ತಟ್ಟಿಬೆಟ್ಟೆ	38819-51209

ಬೆಳ್ಳಿ ₹17 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಏರಿಕೆ ಆಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹1,300 ಹೆಚ್ಚಳವಾಗಿ, ₹1,58,500ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹17 ಸಾವಿರ ಏರಿಕೆಯಾಗಿ, ₹2.72 ಲಕ್ಷಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ದೇಶೀಯ ಮಾರುಕಟ್ಟೆಯಲ್ಲಿ ಅಮೂಲ್ಯ ಲೋಹಗಳ ಖರೀದಿ ಹೆಚ್ಚಳವಾಗಿದೆ. ಅಲ್ಲದೆ, ಡಾಲರ್ ಮೌಲ್ಯ ಇಳಿಕೆ ಆಗಿದೆ. ಇದು ಚಿನ್ನ ಮತ್ತು ಬೆಳ್ಳಿ ದರ ಏರಿಕೆಗೆ ಕಾರಣ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಧಾರಣೆ (ಶೇಂಗಾ) 09-02-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1750 (1745)
ಒಂದು ವಾರದ ಡೆಲಿವರಿ	1745 (1740)
ಪಾಮ್ ವಾರದ ಡೆಲಿವರಿ	1328 (1323)
ಸೂರ್ಯಕಾಂತಿ ಎಣ್ಣೆ ಕಚ್ಚಾ	1530 (1520)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,54,000 (1,54,000)
ಬೆಳ್ಳಿ ಕೆ.ಜಿಗೆ	2,52,000 (2,55,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪ್ಯಾನ್ ಉಲ್ಲೇಖ: ಮಿತಿ ಹೆಚ್ಚಳ

ಐ.ಟಿ. ಕರಡು ನಿಯಮ ಪ್ರಕಟ • ಮಾರ್ಚ್ ಮೊದಲ ವಾರದಲ್ಲಿ ಅಧಿಸೂಚನೆ?

ನವದೆಹಲಿ (ಪಿಟಿಐ): ₹50 ಸಾವಿರ ಹಾಗೂ ಅದಕ್ಕಿಂತ ಹೆಚ್ಚಿನ ಮೊತ್ತ ಜಮಾ ಮಾಡುವಾಗಲೆಲ್ಲ ಪ್ಯಾನ್ ಸಂಖ್ಯೆ ಉಲ್ಲೇಖಿಸುವ ಬದಲು, ವ್ಯಕ್ತಿಯೊಬ್ಬನ ಕಡೆಯಿಂದ ಆರ್ಥಿಕ ವರ್ಷವೊಂದರಲ್ಲಿ ಒಟ್ಟು ಜಮಾ ಮೊತ್ತ ಅಥವಾ ಹಣ ಹಿಂಪಡೆಯುವ ಮೊತ್ತವು ₹10 ಲಕ್ಷ ಮೀರಿದ್ದರೆ ಮಾತ್ರ ಪ್ಯಾನ್ ಉಲ್ಲೇಖ ಸಾಕು ಎಂದು ಆದಾಯ ತೆರಿಗೆ ಕರಡು ನಿಯಮಗಳಲ್ಲಿ ಹೇಳಲಾಗಿದೆ.

ಕ್ರಿಪ್ಟೊ ವಿನಿಮಯ ಕೇಂದ್ರಗಳು ತಮ್ಮಲ್ಲಿನ ಕೆಲವು ಮಾಹಿತಿಗಳನ್ನು ತೆರಿಗೆ ಇಲಾಖೆಯ ಜೊತೆ ಹಂಚಿಕೊಳ್ಳುವುದು ಕಡ್ಡಾಯ ಎಂದು ಕರಡು ನಿಯಮಗಳಲ್ಲಿ ಹೇಳಲಾಗಿದೆ. ಅಲ್ಲದೆ, ಕೇಂದ್ರೀಯ ಬ್ಯಾಂಕ್‌ನ ಡಿಜಿಟಲ್ ಕರೆನ್ಸಿಯು (ಸಿಬಿಡಿಸಿ) ಒಪ್ಪಿತ ಎಲೆಕ್ಟ್ರಾನಿಕ್ ಪಾವತಿ ವಿಧಾನಗಳಲ್ಲಿ ಒಂದು ಎಂದು ಅದು ಹೇಳಿದೆ.

ಮನೆ ಬಾಡಿಗೆ ಭತ್ಯೆ (ಎಚ್‌ಆರ್‌ಎ) ಕ್ಲೇಮ್‌ಗಾಗಿ 'ವರ್ಗ 1'ರ ವ್ಯಾಪ್ತಿಯ ಮಹಾನಗರಗಳ ಪಟ್ಟಿಗೆ ಬೆಂಗಳೂರು, ಪುಣೆ, ಅಹಮದಾಬಾದ್ ಮತ್ತು ಹೈದರಾಬಾದ್ ನಗರಗಳನ್ನು ಸೇರಿಸಲಾಗಿದೆ.

ಕರಡು ನಿಯಮಗಳಿಗೆ ಬರುವ ಸಲಹೆಗಳನ್ನು ಸ್ವೀಕರಿಸಿದ ನಂತರದಲ್ಲಿ ನೇರ ತೆರಿಗೆಗಳ ಕೇಂದ್ರೀಯ ಮಂಡಳಿಯು (ಸಿಬಿಡಿಟಿ) ನಿಯಮಗಳನ್ನು ಅಂತಿಮಗೊಳಿಸಲಿದೆ. ನಿಯಮಗಳನ್ನು ಮಾರ್ಚ್ ಮೊದಲ ವಾರದ ಹೊತ್ತಿಗೆ ಅಧಿಸೂಚನೆಯಲ್ಲಿ ಪ್ರಕಟಿಸಲಾಗುತ್ತದೆ ಎಂದು ಕೇಂದ್ರ ಹಣಕಾಸು ಸಚಿವಾಲಯದ ಮೂಲಗಳು ಹೇಳಿವೆ.

'ಆದಾಯ ತೆರಿಗೆ ಕಾಯ್ದೆ – 2025' ಏಪ್ರಿಲ್ 1ರಿಂದ ಅನುಷ್ಠಾನಕ್ಕೆ ಬರುತ್ತಿದೆ. ಇದಕ್ಕಾಗಿ ಆದಾಯ ತೆರಿಗೆ ನಿಯಮಗಳನ್ನು ಅಂತಿಮಗೊಳಿಸಲಾಗುತ್ತಿದೆ.

ಕರಡು ನಿಯಮಗಳ ಅನ್ವಯ, ದ್ವಿಚಕ್ರ ವಾಹನ ಸೇರಿದಂತೆ ₹5 ಲಕ್ಷಕ್ಕಿಂತ ಹೆಚ್ಚಿನ ಬೆಲೆಯ ಯಾವುದೇ ಮೋಟಾರು ವಾಹನ ಖರೀದಿಸುವಾಗ ಪ್ಯಾನ್ ಉಲ್ಲೇಖಿಸುವುದು ಕಡ್ಡಾಯ ಆಗುತ್ತದೆ. ಆದರೆ ಈಗಿರುವ ನಿಯಮಗಳ ಪ್ರಕಾರ ದ್ವಿಚಕ್ರ ವಾಹನ ಖರೀದಿ ವೇಳೆ ಪ್ಯಾನ್ ಉಲ್ಲೇಖಿಸುವುದು ಕಡ್ಡಾಯ ಅಲ್ಲ.

ಹೋಟೆಲ್ ಅಥವಾ ರೆಸ್ಟೋರೆಂಟ್ ಬಿಲ್ ಮೊತ್ತ, ಸಭಾಭವನಗಳಿಗೆ ಅಥವಾ ಬ್ಯಾಂಕ್ವೆಟ್ ಹಾಲ್‌ಗಳಿಗೆ ಅಥವಾ ಕಾರ್ಯಕ್ರಮ ನಿರ್ವಹಣೆ ಮಾಡುವ ವ್ಯಕ್ತಿಗೆ ಮಾಡುವ ಪಾವತಿ ಮೊತ್ತ ₹1 ಲಕ್ಷಕ್ಕಿಂತ ಹೆಚ್ಚಿದ್ದರೆ ಪ್ಯಾನ್ ಸಂಖ್ಯೆ ನಮೂದು ಕಡ್ಡಾಯ ಆಗಲಿದೆ. ಈಗಿರುವ ನಿಯಮಗಳ ಪ್ರಕಾರ ಹೋಟೆಲ್ ಅಥವಾ ರೆಸ್ಟೋರೆಂಟ್ ಶುಲ್ಕವು ₹50 ಸಾವಿರಕ್ಕಿಂತ ಹೆಚ್ಚಿದ್ದರೆ ಪ್ಯಾನ್ ಸಂಖ್ಯೆ ಉಲ್ಲೇಖಿಸಬೇಕಾಗುತ್ತದೆ.

ಕರಡು ನಿಯಮದಲ್ಲಿ ಉಲ್ಲೇಖ...

- ಯಾವುದೇ ಸ್ಥಿರ ಆಸ್ತಿಯ ಖರೀದಿ, ಮಾರಾಟ, ಉಡುಗೊರೆ ನೀಡುವಿಕೆ ಅಥವಾ ಅದರ ಜಂಟಿ ಅಭಿವೃದ್ಧಿ ಒಪ್ಪಂದದ ವಹಿವಾಟಿನ ಮೊತ್ತವು ₹20 ಲಕ್ಷಕ್ಕಿಂತ ಹೆಚ್ಚಿದ್ದರೆ ಪ್ಯಾನ್ ನಮೂದು ಕಡ್ಡಾಯವಾಗಲಿದೆ. ಈಗ ಈ ಮಿತಿ ₹10 ಲಕ್ಷ ಇದೆ
- ವಿಮಾ ಕಂಪನಿಯಲ್ಲಿ ಖಾತೆ ತೆರೆದು, ಆ ಕಂಪನಿಯ ಗ್ರಾಹಕ ಆಗಲು ಪ್ಯಾನ್ ಸಂಖ್ಯೆ ನಮೂದಿಸಬೇಕಾಗುತ್ತದೆ. ಈಗಿನ ನಿಯಮಗಳ ಪ್ರಕಾರ ವಾರ್ಷಿಕ ಜೀವ ವಿಮಾ ಪ್ರೀಮಿಯಂ ಮೊತ್ತವು ₹50 ಸಾವಿರಕ್ಕಿಂತ ಹೆಚ್ಚಿದ್ದರೆ ಮಾತ್ರ ಪ್ಯಾನ್ ಉಲ್ಲೇಖಿಸಬೇಕಾಗುತ್ತದೆ

ಸುದ್ದಿ 2 ನಿಮಿಷ

ಯುಪಿಐ ಮೂಲಕ ಪಿಎಫ್ ಹಣ

ನವದೆಹಲಿ (ಪಿಟಿಐ): ಉದ್ಯೋಗಿಗಳ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಸದಸ್ಯರಿಗೆ ಏಪ್ರಿಲ್ ನಂತರದಲ್ಲಿ ತಮ್ಮ ಹಣವನ್ನು ಯುಪಿಐ ಮೂಲಕ ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಮಾಡಿಸಿಕೊಳ್ಳುವ ಸೌಲಭ್ಯ ಸಿಗಲಿದೆ. ಇದಕ್ಕಾಗಿಯೇ ಪ್ರತ್ಯೇಕ ಆ್ಯಪ್ ಒಂದನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಪಿಎಫ್ ಖಾತೆಯಲ್ಲಿ ಇರುವ ಮೊತ್ತದಲ್ಲಿ ದೊಡ್ಡ ಭಾಗವನ್ನು ಯುಪಿಐ ವ್ಯವಸ್ಥೆಯ ಮೂಲಕ ಹಿಂಪಡೆಯುವುದು ಸಾಧ್ಯವಾಗಲಿದೆ. ಆದರೆ ಮೊತ್ತದಲ್ಲಿ ಒಂದು ಭಾಗವು ಪಿಎಫ್ ಖಾತೆಯಲ್ಲಿಯೇ ಉಳಿಯಲಿದೆ. ಕೇಂದ್ರ ಕಾರ್ಮಿಕ ಸಚಿವಾಲಯದಲ್ಲಿ ಈ ಆ್ಯಪ್‌ಗೆ ಸಂಬಂಧಿಸಿದಂತೆ ಕೆಲಸಗಳು ನಡೆಯುತ್ತಿವೆ.

ಪಿಎಫ್ ಖಾತೆಗೆ ಸಂಬಂಧಿಸಿದ ಪಾಸ್‌ಬುಕ್ ವಿವರಗಳನ್ನು ಕೂಡ ಈ ಆ್ಯಪ್ ಮೂಲಕವೇ ಪಡೆದುಕೊಳ್ಳಲು ಸಾಧ್ಯವಾಗಲಿದೆ ಎಂದು ಗೊತ್ತಾಗಿದೆ. ಈಗ ಇಪಿಎಫ್‌ಒ ಸದಸ್ಯರು ಯುಎಎನ್ ಪೋರ್ಟಲ್ ಅಥವಾ ಉಮಂಗ್ ಆ್ಯಪ್ ಬಳಸಿ ಪಿಎಫ್ ಖಾತೆಯ ವಿವರಗಳನ್ನು ತಿಳಿದುಕೊಳ್ಳುತ್ತಿದ್ದಾರೆ. ಅವುಗಳ ಮೂಲಕ ಕೆಲವು ಸೇವೆಗಳನ್ನು ಪಡೆಯುತ್ತಿದ್ದಾರೆ.

ಹೊಸ ಆ್ಯಪ್ ಬಳಕೆಗೆ ಲಭ್ಯವಾದ ನಂತರವೂ ಉಮಂಗ್ ಆ್ಯಪ್ ಮತ್ತು ಯುಎಎನ್ ಪೋರ್ಟಲ್ ಮೂಲಕ ಸೇವೆಗಳನ್ನು ಪಡೆಯಲು ಅವಕಾಶ ಇದ್ದೇ ಇರುತ್ತದೆ ಎಂದು ಮೂಲವೊಂದು ಖಚಿತಪಡಿಸಿದೆ. ಹೊಸ ಆ್ಯಪ್, ಇಪಿಎಫ್‌ಒ ಸದಸ್ಯರಿಗೆ ಸೇವೆಗಳನ್ನು ಹೆಚ್ಚು ಉತ್ತಮವಾಗಿ ನೀಡಲಿದೆ ಎನ್ನಲಾಗಿದೆ.

ಮೊಬೈಲ್ ಆ್ಯಪ್ ಬಳಸಿ ಇಪಿಎಫ್‌ಒ ಸದಸ್ಯರು ತಮ್ಮ ಖಾತೆಯಿಂದ ಹಿಂಪಡೆಯಲು ಲಭ್ಯ ಇರುವ ಮೊತ್ತ ಎಷ್ಟು ಎಂಬುದನ್ನು ಕೂಡ ಪರಿಶೀಲಿಸಬಹುದು. ಅವರು ತಮ್ಮ ವಹಿವಾಟು ಪೂರ್ಣಗೊಳಿಸಲು ಯುಪಿಐ ಪಿನ್ ಸಂಖ್ಯೆ ನಮೂದಿಸಬೇಕಾಗುತ್ತದೆ.

ಈಗ ಇಪಿಎಫ್‌ಒ ಅಧಿಕಾರಿಗಳು 100 ಖಾತೆಗಳನ್ನು ಬಳಸಿ ಈ ಹೊಸ ವ್ಯವಸ್ಥೆಯ ಪರಿಶೀಲನೆ ನಡೆಸುತ್ತಿದ್ದಾರೆ. ಕೇಂದ್ರ ಕಾರ್ಮಿಕ ಸಚಿವಾಲಯವು ಈ ಆ್ಯಪ್‌ಅನ್ನು ಏಪ್ರಿಲ್‌ನಲ್ಲಿ ಬಿಡುಗಡೆ ಮಾಡುವ ನಿರೀಕ್ಷೆ ಇದೆ.

96 ಲಕ್ಷ ಟನ್ ಅಡುಗೆ ಎಣ್ಣೆ ಉತ್ಪಾದನೆ ನಿರೀಕ್ಷೆ: ಐವಿಪಿಎ

ನವದೆಹಲಿ (ಪಿಟಿಐ): 'ಪ್ರಸಕ್ತ ತೈಲ ಮಾರುಕಟ್ಟೆ ವರ್ಷದಲ್ಲಿ ದೇಶದಲ್ಲಿ 96 ಲಕ್ಷ ಟನ್‌ನಷ್ಟು ಅಡುಗೆ ಎಣ್ಣೆ ಉತ್ಪಾದನೆ ಆಗುವ ಅಂದಾಜಿದೆ' ಎಂದು ಭಾರತದ ಅಡುಗೆ ಎಣ್ಣೆ ತಯಾರಕರ ಸಂಘದ (ಐವಿಪಿಎ) ಅಧ್ಯಕ್ಷ ಸುಧಾಕರ್ ದೇಸಾಯಿ ಹೇಳಿದ್ದಾರೆ.

ಇದೇ ಅವಧಿಯಲ್ಲಿ ದೇಶದಲ್ಲಿನ ಗ್ರಾಹಕರ ಬೇಡಿಕೆಯನ್ನು ಪೂರೈಸಲು 1.67 ಕೋಟಿ ಟನ್ ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳಲಾಗುವುದು ಎಂದು ಹೇಳಿದ್ದಾರೆ.

ಅಡುಗೆ ಎಣ್ಣೆ ಮಾರುಕಟ್ಟೆ ವರ್ಷವು ಅಕ್ಟೋಬರ್‌ನಿಂದ ಸೆಪ್ಟೆಂಬರ್‌ವರೆಗೆ ಇರುತ್ತದೆ. ಭಾರತವು ತನ್ನ ಒಟ್ಟು ಅಡುಗೆ ಎಣ್ಣೆ ಬಳಕೆಯಲ್ಲಿ ಶೇ 40ರಷ್ಟನ್ನು ಮಾತ್ರ ದೇಶೀ ಉತ್ಪಾದನೆಯಿಂದ ಪೂರೈಸಿಕೊಳ್ಳುತ್ತದೆ. ಉಳಿದಿದ್ದನ್ನು ಆಮದು ಮಾಡಿಕೊಳ್ಳುತ್ತದೆ.

ಭಾರತೀಯ ಎಣ್ಣೆ ಗಿರಣಿ ಮಾಲೀಕರ ಸಂಘದ (ಎಸ್‌ಇಎ) ಪ್ರಕಾರ, 2024–25ರ ತೈಲ ಮಾರುಕಟ್ಟೆ ವರ್ಷದಲ್ಲಿ 1.6 ಕೋಟಿ ಟನ್ ಅಡುಗೆ ಎಣ್ಣೆ ಆಮದು ಆಗಿತ್ತು. ಹಣಕಾಸಿನ ಮೌಲ್ಯದಲ್ಲಿ ಇದು ₹1.61 ಲಕ್ಷ ಕೋಟಿ ಆಗುತ್ತದೆ.

2025–26ರ ತೈಲ ಮಾರುಕಟ್ಟೆ ವರ್ಷದಲ್ಲಿ 85 ಲಕ್ಷ ಟನ್ ತಾಳೆ ಎಣ್ಣೆ, 55 ಲಕ್ಷ ಸೋಯಾ ಎಣ್ಣೆ, 30 ಲಕ್ಷ ಟನ್ ಸೂರ್ಯಕಾಂತಿ ಎಣ್ಣೆ ಮತ್ತು 2 ಲಕ್ಷ ಟನ್‌ನಷ್ಟು ಇತರೆ ಎಣ್ಣೆ ಆಮದಾಗುವ ನಿರೀಕ್ಷೆ ಇದೆ ಎಂದು ದೇಸಾಯಿ ತಿಳಿಸಿದ್ದಾರೆ.

ಬಾಗಲಕೋಟೆ: ಒಂದು ಅಂಡಿಗಿ ದರ ₹8,500ಕ್ಕೆ ಏರಿಕೆ

ವೀಳ್ಯದೆಲೆಗೆ ಉತ್ತಮ ಬೆಲೆ; ರೈತರಿಗೆ ಹರ್ಷ

• ಬಸವರಾಜ ಹವಾಲ್ದಾರ

ಬಾಗಲಕೋಟೆ ಜಿಲ್ಲೆಯ ಗಾಣದಾಳದ ರೈತ ನರಸಿಂಹ ದೇಸಾಯಿ ಅವರ ಹೊಲದಲ್ಲಿ ಬೆಳೆದಿರುವ ವೀಳ್ಯದೆಲೆ

ಬಾಗಲಕೋಟೆ: ವೀಳ್ಯದೆಲೆ ಬೆಲೆ ಏರಿಕೆಯಿಂದ ರೈತರು ಸಂತಸಗೊಂಡಿದ್ದಾರೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ 12,000 ಎಲೆಗಳಿರುವ ಒಂದು ಡಾಗ್ (ಅಂಡಿಗಿ) ₹2 ಸಾವಿರದಿಂದ ₹3 ಸಾವಿರಕ್ಕೆ ಮಾರಾಟವಾಗುತ್ತಿತ್ತು. ಈಗ ದರ ₹6,000 ದಿಂದ ₹8,500ಕ್ಕೆ ಏರಿಕೆಯಾಗಿದೆ.

ಜಿಲ್ಲೆಯಲ್ಲಿ ಜಗದಾಳ, ನಾವಲಗಿ, ಬಾದಾಮಿ ತಾಲ್ಲೂಕಿನ ಚೊಳಚಗುಡ್ಡ ಸುತ್ತಲಿನ ಪ್ರದೇಶದಲ್ಲಿ ವೀಳ್ಯದೆಲೆ ಬೆಳೆಯಲಿದ್ದು, ಮುಂಬೈ, ಪುಣೆ, ಹೈದರಾಬಾದ್, ಬೆಂಗಳೂರು, ಸತಾರಾ, ಬೆಳಗಾವಿ ಕಡೆ ರವಾನೆಯಾಗುತ್ತದೆ.

'ಒಂದು ಎಕರೆಯಲ್ಲಿ ವೀಳ್ಯದೆಲೆ ಕೃಷಿಗೆ ವರ್ಷಕ್ಕೆ ₹2.5ರಿಂದ ₹3 ಲಕ್ಷ ಖರ್ಚಾಗುತ್ತದೆ. ಈ ಬಾರಿ ಚಳಿ ಹೆಚ್ಚಿದ್ದ ಕಾರಣ ಇಳುವರಿ ತಗ್ಗಿದೆ. ಈಗ ಎಲೆಬಳ್ಳಿ ಕಟ್ಟುವುದರಿಂದ ಫಸಲು ಕಡಿಮೆ ಇರುತ್ತದೆ' ಎಂದು ಜಗದಾಳದ ರೈತ ಸದಾಶಿವ ಬಂಗಿ ತಿಳಿಸಿದರು.

ಶುಭ ಕಾರ್ಯಗಳು, ತಾಂಬೂಲ ಹಾಕುವವರಿಗೆ, ಪಾನ್‌ಶಾಪ್‌ಗಳಲ್ಲಿ ವೀಳ್ಯದೆಲೆಗಳು ಬೇಕು. ವೀಳ್ಯದೆಲೆಗಳಿಗೆ ವರ್ಷಪೂರ್ತಿ ಬೇಡಿಕೆ ಇರುತ್ತದೆ. ದರ ಏರಿಕೆಯಿಂದ ತಾಂಬೂಲ ಪ್ರಿಯರಿಗೆ ಬಿಸಿ ತಟ್ಟಿದೆ.

'₹10ಕ್ಕೆ 25–30 ಎಲೆಗಳನ್ನು ನೀಡುತ್ತಿದ್ದರು. ಈಗ ಪ್ರತಿ ಎಲೆಗೆ ₹1 ಇದೆ. ತಾಂಬೂಲದ ಉಳಿದ ವಸ್ತುಗಳ ಬೆಲೆ ಏರಿತ್ತು. ಈಗ ಎಲೆಗಳ ಬೆಲೆಯೂ ಹೆಚ್ಚಿದೆ' ಎನ್ನುತ್ತಾರೆ ಶಂಕರಗೌಡ ಪಾಟೀಲ.

ಮಧ್ಯವರ್ತಿಗಳ ಹಾವಳಿ: 'ಬೇರೆ, ಬೇರೆ ರಾಜ್ಯಗಳಿಗೆ ವೀಳ್ಯದೆಲೆಯನ್ನು ಕಳುಹಿಸಬೇಕು. ಭಾಷಾ ಸಮಸ್ಯೆಯಿಂದ ರೈತರು ಹೋಗುವುದಿಲ್ಲ. ಕೆಲವರೇ ಮಧ್ಯವರ್ತಿಗಳಾಗಿ, ಹೊರ ರಾಜ್ಯಗಳಿಗೆ ಎಲೆಗಳನ್ನು ಕಳುಹಿಸಿಕೊಡುತ್ತಾರೆ. ಸ್ಥಳೀಯವಾಗಿಯೇ ಮಾರುಕಟ್ಟೆಯಾದರೆ ಅನುಕೂಲವಾಗುತ್ತದೆ' ಎಂದು ಅವರು ತಿಳಿಸಿದರು.

> ಚೊಳಚಗುಡ್ಡ ಭಾಗದಲ್ಲಿ ಅಂಬಾಡಿ ಎಲೆ ಬೆಳೆಯಲಾಗುತ್ತದೆ. 10 ರಿಂದ 12 ದಿನ ಹಾಳಾಗುವುದಿಲ್ಲ. ಆದ್ದರಿಂದ ಇಲ್ಲಿನ ಎಲೆಗಳಿಗೆ ಉತ್ತಮ ಬೇಡಿಕೆ ಇದೆ
> **ಮೌನೇಶ ಮರಡಿ,** ರೈತ, ಚೊಳಚಗುಡ್ಡ

'ಜಿಡಿಪಿ ಪ್ರಗತಿ ಶೇ 6.4ರಷ್ಟು'

ನವದೆಹಲಿ (ಪಿಟಿಐ): ಮುಂದಿನ ಆರ್ಥಿಕ ವರ್ಷದಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರವು ಶೇ 6.4ರಷ್ಟು ಇರುವ ನಿರೀಕ್ಷೆ ಇದೆ ಎಂದು ಜಾಗತಿಕ ರೇಟಿಂಗ್ ಸಂಸ್ಥೆ ಮೂಡೀಸ್ ಸೋಮವಾರ ಹೇಳಿದೆ. ಇದು ಜಿ–20 ರಾಷ್ಟ್ರಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆ ಆಗಿರಲಿದೆ.

ದೇಶದಲ್ಲಿ ಜನರ ಖರೀದಿ ಸಾಮರ್ಥ್ಯ ಹೆಚ್ಚಳವಾಗಿದೆ. ಸರ್ಕಾರದ ನೀತಿ ನಿಯಮಗಳು ಮತ್ತು ಸದೃಢ ಬ್ಯಾಂಕಿಂಗ್ ವ್ಯವಸ್ಥೆಯು ಜಿಡಿಪಿ ಹೆಚ್ಚಳಕ್ಕೆ ನೆರವಾಗಲಿವೆ ಎಂದು ತಿಳಿಸಿದೆ.

ಬ್ಯಾಂಕ್‌ಗಳ ಆಸ್ತಿ ಗುಣಮಟ್ಟ ಉತ್ತಮವಾಗಿದೆ. ಎಂಎಸ್‌ಎಂಇ ವಲಯಕ್ಕೆ ನೀಡಿದ ಸಾಲದ ವಸೂಲಾತಿಯಲ್ಲಿ ಸಣ್ಣ ಪ್ರಮಾಣದ ಸಮಸ್ಯೆ ಕಾಣಬಹುದು. ಇದನ್ನು ಹೊರತುಪಡಿಸಿದರೆ, ಬ್ಯಾಂಕ್‌ಗಳು ಸಾಲದ ನಷ್ಟವನ್ನು ನಿಭಾಯಿಸಲು ಸಾಕಷ್ಟು ಸಂಪತ್ತನ್ನು ಹೊಂದಿವೆ ಎಂದು ಮೂಡೀಸ್ ಬ್ಯಾಂಕಿಂಗ್ ವ್ಯವಸ್ಥೆಯ ಮುನ್ನೋಟ ವರದಿಯಲ್ಲಿ ತಿಳಿಸಿದೆ.

ಕಳೆದ ವರ್ಷದ ಸೆಪ್ಟೆಂಬರ್‌ನಲ್ಲಿ ಜಿಎಸ್‌ಟಿ ದರ ಪರಿಷ್ಕರಣೆ ಆಗಿದೆ. ಅದಕ್ಕೂ ಮುಂಚಿತವಾಗಿ ವೈಯಕ್ತಿಕ ಆದಾಯ ತೆರಿಗೆಯ ಮಿತಿ ಹೆಚ್ಚಳ ಮಾಡಲಾಗಿದೆ. ಇವು ಗ್ರಾಹಕರ ಕೈಯಲ್ಲಿ ಹಣ ಉಳಿಯುವಂತೆ ಮಾಡಲಿವೆ ಮತ್ತು ಜನರ ಖರೀದಿ ಸಾಮರ್ಥ್ಯ ಹೆಚ್ಚಿಸಿವೆ. ಈ ಕ್ರಮಗಳು ಬೆಳವಣಿಗೆಗೆ ಸಹಕಾರಿಯಾಗಿವೆ ಎಂದು ತಿಳಿಸಿದೆ.

ಕಳೆದ ತಿಂಗಳು ಸಂಸತ್ತಿನಲ್ಲಿ ಮಂಡನೆಯಾದ ಆರ್ಥಿಕ ಸಮೀಕ್ಷೆ ವರದಿಯು ಮುಂದಿನ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 6.8ರಿಂದ ಶೇ 7.2ರಷ್ಟಾಗಲಿದೆ ಎಂದು ಅಂದಾಜಿಸಿದೆ. ಮೂಡೀಸ್ ಅಂದಾಜು ಇದಕ್ಕಿಂತ ಕಡಿಮೆ ಇದೆ.

ಸರ್ಕಾರದ ಅಂದಾಜಿನ ಪ್ರಕಾರ, ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಶೇ 7.4ರಷ್ಟಾಗುವ ನಿರೀಕ್ಷೆಯಿದೆ. 2024–25ರಲ್ಲಿ ಇದು ಶೇ 6.5ರಷ್ಟಾಗಿತ್ತು.

ಪ್ರಸ್ತುತ ಬ್ಯಾಂಕ್‌ಗಳ ಸಾಲದ ಬೆಳವಣಿಗೆ ದರ ಶೇ 10.6ರಷ್ಟಿದೆ. ಇದು ಮುಂದಿನ ಆರ್ಥಿಕ ವರ್ಷದಲ್ಲಿ ಶೇ 11ರಿಂದ ಶೇ 13ರಷ್ಟಾಗಬಹುದು ಎಂದು ಮೂಡಿಸ್ ಹೇಳಿದೆ.

ಜಿಎಸ್‌ಟಿ ಸರಳೀಕರಣ: ರಾಜ್ಯಗಳಿಗೆ ಪರಿಹಾರ ಇಲ್ಲ-ಕೇಂದ್ರ ಸರ್ಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಸರಳೀಕರಣದಿಂದ ರಾಜ್ಯಗಳಿಗೆ ಆಗಿರುವ ನಷ್ಟದ ಬಗ್ಗೆ ಪರಿಹಾರ ನೀಡುವ ಯಾವುದೇ ಪ್ರಸ್ತಾವ ಇಲ್ಲ ಎಂದು ಕೇಂದ್ರ ಹಣಕಾಸು ಸಚಿವಾಲಯ ಸ್ಪಷ್ಟಪಡಿಸಿದೆ.

ಲೋಕಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಕೇಳಿದ ಪ್ರಶ್ನೆಗೆ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ಈ ಬಗ್ಗೆ ಉತ್ತರ ನೀಡಿದ್ದಾರೆ. ಜಿಎಸ್‌ಟಿ ವ್ಯವಸ್ಥೆ ಸರಳೀಕರಣದಿಂದ ವಾರ್ಷಿಕ ₹15 ಸಾವಿರ ಕೋಟಿ ನಷ್ಟವಾಗಲಿದ್ದು, ಇದಕ್ಕೆ ಪರಿಹಾರ ನೀಡಬೇಕು ಎಂದು ಕರ್ನಾಟಕ ಸರ್ಕಾರ ಆಕ್ಷೇಪ ವ್ಯಕ್ತಪಡಿಸಿತ್ತು. ತಮ್ಮ ರಾಜ್ಯಗಳಿಗೆ ವಾರ್ಷಿಕ ತಲಾ ₹10 ಸಾವಿರ ಕೋಟಿ ನಷ್ಟವಾಗಲಿದೆ ಎಂದು ತಮಿಳುನಾಡು ಹಾಗೂ ಕೇರಳ ಸರ್ಕಾರಗಳು ದೂರಿದ್ದವು. ಬಿಜೆಪಿಯೇತರ ಸರ್ಕಾರಗಳ ಸಚಿವರು ನವದೆಹಲಿಯಲ್ಲಿ ಸಭೆ ನಡೆಸಿ ನಷ್ಟ ಪರಿಹಾರ ನೀಡುವಂತೆ ಒತ್ತಡ ಹೇರಿದ್ದವು. ರಾಜ್ಯ ಸರ್ಕಾರಗಳ ಬೇಡಿಕೆಯನ್ನು ಹಣಕಾಸು ಸಚಿವಾಲಯ ಸಾರಾಸಗಟಾಗಿ ತಳ್ಳಿ ಹಾಕಿದೆ.

ಕರ್ನಾಟಕದಲ್ಲಿ ₹1.30 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ಕರ್ನಾಟಕದಲ್ಲಿ 2025–26ನೇ ಸಾಲಿನಲ್ಲಿ ಜನವರಿ ಅಂತ್ಯದ ವರೆಗೆ ₹1.30 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ ಆಗಿದೆ ಎಂದು ಪಂಕಜ್ ಚೌಧರಿ ತಿಳಿಸಿದ್ದಾರೆ. ಕೇಂದ್ರ ಸರ್ಕಾರ ನೀಡಿರುವ ಮಾಹಿತಿ ಪ್ರಕಾರ, ರಾಜ್ಯದಲ್ಲಿ ಜಿಎಸ್‌ಟಿ ಸಂಗ್ರಹ ಕಳೆದ ವರ್ಷದಿಂದ ಈ ವರ್ಷ ಹೆಚ್ಚುವ ಸಾಧ್ಯತೆ ಇದೆ.

ಪ್ರತ್ಯೇಕ ಪ್ರಶ್ನೆಗೆ ಉತ್ತರ ನೀಡಿರುವ ಸಚಿವರು, 'ರಾಜ್ಯಗಳಿಗೆ ಜಿಎಸ್‌ಟಿ ನಷ್ಟ ಪರಿಹಾರ ಬಿಡುಗಡೆಗೆ ಬಾಕಿ ಇಲ್ಲ. ಕರ್ನಾಟಕಕ್ಕೆ 2022–23 ಹಾಗೂ 2023–24ರಲ್ಲಿ ₹21,482 ಕೋಟಿ ನಷ್ಟ ಪರಿಹಾರ ಬಿಡುಗಡೆ ಮಾಡಲಾಗಿದೆ' ಎಂದು ಮಾಹಿತಿ ನೀಡಿದ್ದಾರೆ.

ಜಿಎಸ್‌ಟಿ ಸಂಗ್ರಹ ಅಗ್ರ ರಾಜ್ಯಗಳು — ಮೊತ್ತ (₹ಕೋಟಿಗಳಲ್ಲಿ)

ರಾಜ್ಯ	ಮೊತ್ತ
ಮಹಾರಾಷ್ಟ್ರ	2,99,555
ಕರ್ನಾಟಕ	1,30,671
ಗುಜರಾತ್	1,11,535
ತಮಿಳುನಾಡು	1,08,271

ರಾಜ್ಯದಲ್ಲಿ ಜಿಎಸ್‌ಟಿ ಸಂಗ್ರಹ — ಮೊತ್ತ (₹ಕೋಟಿಗಳಲ್ಲಿ)

ವರ್ಷ	ಮೊತ್ತ
2021-22	86,457
2022-23	1,09,479
2023-24	1,28,414
2024-25	1,41,770
2025-26	1,30,671

ಕೆನಡಾ: ಗುಂಡೇಟಿಗೆ ಕನ್ನಡಿಗ ಬಲಿ

ಒಟ್ಟಾವ (ಕೆನಡಾ) (ಪಿಟಿಐ): ಟೊರಾಂಟೊದ ಶಾಪಿಂಗ್ ಸೆಂಟರ್‌ನ ವಾಹನ ನಿಲುಗಡೆ ಸ್ಥಳದಲ್ಲಿ ನಡೆದ ಗುಂಡಿನ ದಾಳಿಯಲ್ಲಿ ಭಾರತ-ಕೆನಡಾ ಪ್ರಜೆ, ಕರ್ನಾಟಕದ ನೆಲಮಂಗಲದ ಚಂದನ್ ಕುಮಾರ್ ರಾಜ ನಂದನ್‌ಕುಮಾರ್ (37) ಮೃತಪಟ್ಟಿದ್ದಾರೆ.

ದಾಳಿಗೆ ಕಾರಣ ಏನು ಎನ್ನುವುದು ತಿಳಿದುಬಂದಿಲ್ಲ. ಆದರೆ, ಸಿ.ಸಿ.ಟಿ.ವಿ ದೃಶ್ಯಗಳು ಮತ್ತು ಪ್ರಾಥಮಿಕ ತನಿಖೆ ಆಧರಿಸಿ ಇದೊಂದು 'ಪೂರ್ವಯೋಜಿತ ಕೃತ್ಯ' ಎಂದು ಕೆನಡಾ ಪೊಲೀಸರು ಹೇಳಿದ್ದಾರೆ.

ಐ.ಟಿ ವೃತ್ತಿಪರರಾದ ಚಂದನ್, ಗ್ರೇಟರ್ ಟೊರಾಂಟೊ ಪ್ರದೇಶದ ಬ್ರಾಂಪ್ಟನ್‌ನಲ್ಲಿ ನೆಲಸಿದ್ದರು.

'ಶನಿವಾರ ಮಧ್ಯಾಹ್ನ 3.31ರ ಸುಮಾರಿಗೆ ಹೆದ್ದಾರಿ 27, ರೆಕ್ಸ್‌ಡೇಲ್ ಬೊಲೆವಾರ್ಡ್ ಸಮೀಪದ ಶಾಪಿಂಗ್ ಸೆಂಟರ್ ಬಳಿ ಗುಂಡಿನ ದಾಳಿ ನಡೆದಿದೆ ಎಂಬ ತುರ್ತು ಕರೆ ಬಂತು. ಸ್ಥಳಕ್ಕೆ ಧಾವಿಸಿದಾಗ ಗುಂಡು ತಗುಲಿದ ವ್ಯಕ್ತಿ ರಕ್ತದ ಮಡುವಿನಲ್ಲಿ ಬಿದ್ದು ಒದ್ದಾಡುತ್ತಿದ್ದರು. ತಕ್ಷಣವೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಅವರು ಆಸ್ಪತ್ರೆಯಲ್ಲಿ ಮೃತಪಟ್ಟರು. ಗುಂಡಿನ ದಾಳಿ ನಡೆಸಿದವರು ಸ್ಥಳದಿಂದ ಪರಾರಿಯಾಗಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

ಈ ವರ್ಷ ಟೊರಾಂಟೊದಲ್ಲಿ ನಡೆದಿರುವ ಮೂರನೆಯ ಗುಂಡಿನ ದಾಳಿ ಇದಾಗಿದೆ.

ವಾಹನ ನಿಲುಗಡೆ ಸ್ಥಳದಲ್ಲಿ ನಿಲ್ಲಿಸಿದ್ದ ಎಸ್‌ಯುವಿಯ ಮುಂಭಾಗದ ಗಾಜಿಗೆ ಗುಂಡು ಹೊಕ್ಕಿರುವ ರಂಧ್ರಗಳು, ಚಾಲಕನ ಬದಿಯ ಕಿಟಕಿಯ ಗಾಜು ಒಡೆದಿರುವುದು ಪೊಲೀಸರ ಪರಿಶೀಲನೆಯಲ್ಲಿ ಕಂಡುಬಂದಿದೆ.

'ಶಾಪಿಂಗ್ ಮಾಲ್‌ನ ವಾಹನ ನಿಲುಗಡೆ ಪ್ರದೇಶದಲ್ಲಿ ಗುಂಡಿನ ದಾಳಿ ನಡೆದಿದೆ. ಶಂಕಿತರು ಮನಬಂದಂತೆ ದಾಳಿ ನಡೆಸಿಲ್ಲ. ಇದು ಒಬ್ಬ ವ್ಯಕ್ತಿಯನ್ನು ಕೇಂದ್ರೀಕರಿಸಿ ನಡೆಸಿದ ಪೂರ್ವಯೋಜಿತ ದಾಳಿ ಎನ್ನುವುದು ಗೊತ್ತಾಗಿದೆ. ಎಷ್ಟು ಸುತ್ತು ಗುಂಡು ಹಾರಿಸಿದ್ದಾರೆ ಎನ್ನುವುದೂ ಸೇರಿದಂತೆ ಎಲ್ಲ ಆಯಾಮಗಳಲ್ಲಿ ತನಿಖೆ ನಡೆಯುತ್ತಿದೆ' ಎಂದು ಇನ್‌ಸ್ಪೆಕ್ಟರ್ ಏರೋಲ್ ವಾಟ್ಸನ್ ಹೇಳಿದ್ದಾರೆ.

'ಮದುವೆ ಆಲೋಚನೆಯಲ್ಲಿದ್ದೆವು'

• ಮಹಾಂತೇಶ್ ಎಂ.ನೆಗಳೂರ

ನೆಲಮಂಗಲ: 'ಮದುವೆ ಮಾಡಿಕೊ ಎಂದು ನಾವು ಹೇಳುತ್ತಿದ್ದೆವು. ಕೆಲವೇ ತಿಂಗಳಲ್ಲಿ ಮದುವೆ ಮಾಡುವ ಆಲೋಚನೆಯೂ ಇತ್ತು. ಆದರೆ, ಇಂದು ಅವನ ಸಾವಿನ ಸುದ್ದಿ ಕೇಳಿ ಸಿಡಿಲು ಬಡಿದಂತಾಗಿದೆ....'

ಕೆನಡಾದಲ್ಲಿ ಗುಂಡಿನ ದಾಳಿಗೆ ಬಲಿಯಾದ ಚಂದನ್ ಅವರ ತಂದೆ ನಂದನ್‌ಕುಮಾರ್ ಅವರು ಮಾತುಗಳಿವು. ಚಂದನ್ ಅವರ ತಂದೆ–ತಾಯಿ ತ್ಯಾಮಗೊಂಡ್ಲುವಿನಲ್ಲಿ ವಾಸವಿದ್ದಾರೆ.

ಚಂದನ್

ಶಾಲಾ ಶಿಕ್ಷಕರಾಗಿ ನಿವೃತ್ತರಾದ ನಂದನ್ ಕುಮಾರ್ ದಂಪತಿಯ ಒಬ್ಬನೇ ಮಗ ಚಂದನ್. ಆತ ದೂರದ ದೇಶದಲ್ಲಿ ಹತ್ಯೆಗೀಡಾಗಿದ್ದಾನೆ ಎಂದು ತಿಳಿದು ತಂದೆ–ತಾಯಿ ಕಂಗಾಲಾಗಿದ್ದಾರೆ. ತಾಯಿ ಶೈಲಜಾ ಅವರು ಏನೂ ಮಾತನಾಡದೆ, ಕಣ್ಣೀರಾಗಿದ್ದಾರೆ. ಮನೆಯಲ್ಲಿ ದುಃಖ ಮಡುಗಟ್ಟಿದೆ.

'ಭಾನುವಾರ ರಾತ್ರಿ ಕೆನಡಾ ಪೊಲೀಸರು ಕರೆ ಮಾಡಿ ಮಾತನಾಡಿದ್ದಾರೆ. ನನಗೆ ಇಂಗ್ಲಿಷ್ ಅರ್ಥವಾಗದಿದ್ದನ್ನು ತಿಳಿದ ಅವರು, ಅಲ್ಲಿದ್ದ ಕನ್ನಡಿಗರ ಮೂಲಕ ಮಗನ ಸಾವಿನ ವಿಷಯ ತಿಳಿಸಿದರು. ವಿಷಯ ತಿಳಿದು ನಮಗೆ ದಿಕ್ಕೇ ತೋಚದಂತಾಯಿತು' ಎಂದು ನಂದನ್‌ಕುಮಾರ್ ಹೇಳಿದರು.

'ಆರು ವರ್ಷಗಳಿಂದ ಎಲ್ ಆ್ಯಂಡ್ ಟಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಚಂದನ್‌ಗೆ ಮದುವೆ ಮಾಡಿಕೊ ಎಂದು ಹೇಳುತ್ತಲೇ ಇದ್ದೆವು. ಇತ್ತೀಚೆಗೆ ಅದಕ್ಕೆ ಒಪ್ಪಿಕೊಂಡಿದ್ದ. ಕೆಲವೇ ತಿಂಗಳಲ್ಲಿ ಮದುವೆ ಮಾಡಲು ಯೋಚಿಸುತ್ತಿದ್ದೆವು. ಆದರೆ, ಈಗ ಅವನ ಸಾವಿನ ಸುದ್ದಿ ಕೇಳಿ ನಮಗೆ ಸಿಡಿಲು ಬಡಿದಂತಾಗಿದೆ. ಆರು ತಿಂಗಳ ಹಿಂದೆ ಬಂದಿದ್ದ. ಏಪ್ರಿಲ್‌ನಲ್ಲಿ ಮತ್ತೆ ಬರುತ್ತೇನೆ ಎಂದು ತಿಳಿಸಿದ್ದ. ಅಲ್ಲಿ ಕೆಲಸ ಬಿಟ್ಟು ಇಲ್ಲಿಗೇ ಬಂದುಬಿಡು ಎಂದು ಹಲವು ಬಾರಿ ಹೇಳಿದ್ದೆ' ಎಂದು ನೆನಪಿಸಿಕೊಂಡರು.

'ಮೃತದೇಹವನ್ನು ಶೀಘ್ರ ಕಳುಹಿಸಿಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಎಂದು ಪ್ರಧಾನಿ ಮೋದಿ ಅವರನ್ನು ಕೇಳಿಕೊಳ್ಳುತ್ತೇನೆ. ನಮ್ಮ ಭೂಮಿಯಲ್ಲೇ ಅವನ ಅಂತ್ಯಸಂಸ್ಕಾರ ನಡೆಯಬೇಕು' ಎಂದರು.

'ಚೀನಾ ಜತೆ ಮಾತುಕತೆಗೆ ಸಿದ್ಧ'

ಟೋಕಿಯೊ (ಪಿಟಿಐ/ಎಎಫ್‌ಪಿ): 'ಚೀನಾ ಜತೆಗಿನ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಆ ದೇಶದ ಜತೆ ಮಾತುಕತೆಗೆ ಸಿದ್ಧ' ಎಂದು ಜಪಾನ್ ಪ್ರಧಾನಿ ಸನೇ ತಕೈಚಿ ಸೋಮವಾರ ಹೇಳಿದ್ದಾರೆ.

ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ಸಾಧಿಸಿದ ಮರುದಿನ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಚೀನಾ ಜತೆ ಮಾತುಕತೆಗೆ ಮುಕ್ತರಾಗಿದ್ದೇವೆ. ನಾವು ಈಗಾಗಲೇ ಆ ದೇಶದ ಜತೆ ಅಭಿಪ್ರಾಯ ವಿನಿಮಯ ಮಾಡಿಕೊಂಡಿದ್ದು, ಆ ಪ್ರಕ್ರಿಯೆ ಮುಂದುವರಿಸುತ್ತೇವೆ' ಎಂದಿದ್ದಾರೆ.

ಸನೇ ತಕೈಚಿ

'ದ್ವೀಪ ರಾಷ್ಟ್ರ ತೈವಾನ್ ವಿರುದ್ಧ ಚೀನಾ ಕ್ರಮ ಕೈಗೊಂಡರೆ ತನ್ನ ಸೇನೆ ಮಧ್ಯಪ್ರವೇಶಿಸಲಿದೆ' ಎಂದು ತಕೈಚಿ ಅವರು ಕಳೆದ ನವೆಂಬರ್‌ನಲ್ಲಿ ಹೇಳಿದ್ದರು. ಹೀಗಾಗಿ, ಉಭಯ ರಾಷ್ಟ್ರಗಳ ನಡುವೆ ಉದ್ವಿಗ್ನತೆ ಉಂಟಾಗಿದೆ.

ತೆರಿಗೆ ಕಡಿತ-ಪುನರುಚ್ಚಾರ: ಆಹಾರ ಉತ್ಪನ್ನಗಳ ಮೇಲಿನ ಮಾರಾಟ ತೆರಿಗೆಯನ್ನು ಕಡಿತಗೊಳಿಸುವ ಭರವಸೆಯನ್ನು ತಕೈಚಿ ಪುನರುಚ್ಚರಿಸಿದ್ದಾರೆ.

ಆಹಾರ ಉತ್ಪನ್ನಗಳ ಮೇಲೆ ವಿಧಿಸಿರುವ ಶೇ 8ರಷ್ಟು ಮಾರಾಟ ತೆರಿಗೆಯನ್ನು ಎರಡು ವರ್ಷಗಳ ಕಾಲ ಸ್ಥಗಿತಗೊಳಿಸಿ ಜನರ ಜೀವನ ವೆಚ್ಚ ತಗ್ಗಿಸುವುದಾಗಿ ತಕೈಜಿ ಅವರು ಚುನಾವಣೆಗೂ ಮುನ್ನ ಹೇಳಿದ್ದರು. ಮತದಾರರಿಗೆ ನೀಡಿರುವ ಈ ಭರವಸೆ ಕೂಡಾ ಎಲ್‌ಡಿಪಿ ಪಕ್ಷದ ಭಾರಿ ಗೆಲುವಿಗೆ ಕಾರಣ ಎಂದು ವಿಶ್ಲೇಷಿಸಲಾಗಿದೆ.

'ಶೇ 8ರಷ್ಟು ತೆರಿಗೆಯನ್ನು ಸ್ಥಗಿತಗೊಳಿಸುವ ನಿರ್ಧಾರ ಸಾಧ್ಯವಾದಷ್ಟು ಬೇಗ ತೆಗೆದುಕೊಳ್ಳಲಾಗುವುದು' ಎಂದು ಹೇಳಿದ್ದಾರೆ.

ಐತಿಹಾಸಿಕ ಜಯ

ಭಾನುವಾರ ನಡೆದ ಚುನಾವಣೆಯಲ್ಲಿ ತಕೈಚಿ ನೇತೃತ್ವದ ಲಿಬರಲ್ ಡೆಮಾಕ್ರಟಿಕ್ ಪಕ್ಷವು (ಎಲ್‌ಡಿಪಿ) ಮೂರನೇ ಎರಡರಷ್ಟು ಬಹುಮತ ಪಡೆದಿದೆ. 465 ಸದಸ್ಯ ಬಲದ ಕೆಳಮನೆಯಲ್ಲಿ 316ರಲ್ಲಿ ಗೆಲುವು ಸಾಧಿಸಿದೆ. 1955ರಲ್ಲಿ ಸ್ಥಾಪನೆಯಾಗಿರುವ ಎಲ್‌ಡಿಪಿಯು ಚುನಾವಣೆಯಲ್ಲಿ ಇಷ್ಟೊಂದು ಸ್ಥಾನಗಳನ್ನು ಗೆದ್ದಿರುವುದು ಇದೇ ಮೊದಲು. 1986ರ ಚುನಾವಣೆಯಲ್ಲಿ 300 ಸ್ಥಾನಗಳನ್ನು ಗೆದ್ದದ್ದು ಎಲ್‌ಡಿಪಿಯ ಇದುವರೆಗಿನ ಉತ್ತಮ ಸಾಧನೆ ಆಗಿತ್ತು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಸಾರ್ವಜನಿಕ ಪ್ರಕಟಣೆ

[ಕಂಪನಿಗಳ (ಕಾಂಪ್ರೊಮೈಸಸ್, ಅರೇಂಜ್‌ಮೆಂಟ್ ಮತ್ತು ಅಮಲ್ಗಮೇಶನ್) ನಿಯಮಗಳು, 2016ರ ನಿಯಮ 16ರ ಪ್ರಕಾರ]
ಕಂಪನಿ ಕಾನೂನು ನ್ಯಾಯಾಧಿಕರಣ, ಬೆಂಗಳೂರು ಪೀಠ, ಇವರ ಸಮ್ಮುಖದಲ್ಲಿ ಕಂಪನಿ ಸ್ಕೀಮ್ ಅಪ್ಲಿಕೇಶನ್ ನಂ. 36/2025 ರಲ್ಲಿನ ಕಂಪನಿ ಸ್ಕೀಮ್ ಪಿಟಿಷನ್ ನಂ. 57/2025
ಐಸೊಟ್ರ್ಯಾಕ್ ಇನ್ನೋವೇಟಿವ್ ಇನ್ಫ್ರಾಸ್ಟ್ರಕ್ಚರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ...ಅರ್ಜಿದಾರ ಕಂಪನಿ 1 / ಟ್ರಾನ್ಸ್‌ಫರರ್ ಕಂಪನಿ
ಫಂಡರ್‌ಮ್ಯಾಕ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ...ಅರ್ಜಿದಾರ ಕಂಪನಿ 2 / ಟ್ರಾನ್ಸ್‌ಫರೀ ಕಂಪನಿ
ಕಂಪನಿಗಳ ಕಾಯ್ದೆ, 2013ರ ವಿಷಯದಲ್ಲಿ; ಮತ್ತು ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 230 ರಿಂದ 232ರ ವಿಷಯದಲ್ಲಿ ಮತ್ತು ಕೆಳಗಿನವರ ವಿಲೀನ ಯೋಜನೆಯ ವಿಷಯದಲ್ಲಿ
ಐಸೊಟ್ರ್ಯಾಕ್ ಇನ್ನೋವೇಟಿವ್ ಇನ್ಫ್ರಾಸ್ಟ್ರಕ್ಚರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ("ಅರ್ಜಿದಾರ ಕಂಪನಿ 1/ಟ್ರಾನ್ಸ್‌ಫರರ್ ಕಂಪನಿ") ಜೊತೆಗೆ ಫಂಡರ್‌ಮ್ಯಾಕ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ("ಅರ್ಜಿದಾರ ಕಂಪನಿ 2 / ಟ್ರಾನ್ಸ್‌ಫರೀ ಕಂಪನಿ") ಮತ್ತು ಅವರವರ ಷೇರುದಾರರು
ಅರ್ಜಿಯ ಅಂತಿಮ ವಿಚಾರಣಾ ಸೂಚನೆ
ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಐಸೊಟ್ರ್ಯಾಕ್ ಇನ್ನೋವೇಟಿವ್ ಇನ್ಫ್ರಾಸ್ಟ್ರಕ್ಚರ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ ("ಅರ್ಜಿದಾರ ಕಂಪನಿ 1 / ಟ್ರಾನ್ಸ್‌ಫರರ್ ಕಂಪನಿ") ಜೊತೆಗೆ ಫಂಡರ್‌ಮ್ಯಾಕ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ("ಅರ್ಜಿದಾರ ಕಂಪನಿ 2 / ಟ್ರಾನ್ಸ್‌ಫರೀ ಕಂಪನಿ") ಕಂಪನಿಯ ವಿಲೀನ ಯೋಜನೆಯ ಮಂಜೂರಾತಿಗಾಗಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 230 ರಿಂದ 232ರ ನಿಯಮಗಳ ಅಡಿಯಲ್ಲಿ ಒಂದು ಜಂಟಿ ಕಂಪನಿ ಸ್ಕೀಮ್ ಪಿಟಿಷನ್ ನಂ. 57/2025 ಸಲ್ಲಿಕೆಯಾಗಿದ್ದು, ದಿನಾಂಕ 5ನೇ ಜನವರಿ 2026 ರಂದು ಸದರಿ ಅರ್ಜಿಯು ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ, ಬೆಂಗಳೂರು ಪೀಠ, ಇವರಲ್ಲಿ ಅಂಗೀಕಾರ ಪಡೆದಿರುತ್ತದೆ. ಇದೀಗ, ಸದರಿ ಕಂಪನಿ ಅರ್ಜಿಯು ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ, ಬೆಂಗಳೂರು ಪೀಠ, ಇವರ ಸಮ್ಮುಖದಲ್ಲಿ, ದಿನಾಂಕ 27ನೇ ಫೆಬ್ರವರಿ 2026 ರಂದು ವಿಚಾರಣೆಗೆ ನಿಗದಿಯಾಗಿರುತ್ತದೆ.
ಯಾವುದೇ ವ್ಯಕ್ತಿಯು ಸದರಿ ಅರ್ಜಿಯನ್ನು ಬೆಂಬಲಿಸಲು ಅಥವಾ ವಿರೋಧಿಸಲು ಬಯಸುವುದಾದಲ್ಲಿ, ಅಂತಹವರು, ತಮ್ಮ ಉದ್ದೇಶದ ನೋಟಿಸ್ ತಯಾರಿಸಿ, ಅದಕ್ಕೆ ತನ್ನ ಅಥವಾ ತನ್ನ ವಕೀಲರ ಸಹಿ ಹಾಕಿ, ಸದರಿ ಅರ್ಜಿಯ ಅಂತಿಮ ವಿಚಾರಣೆಯ ದಿನಾಂಕಕ್ಕೆ ಎರಡು (2) ದಿನ ಮುಂಚಿತವಾಗಿ ತಲುಪುವಂತೆ, ಅರ್ಜಿದಾರರ ವಕೀಲರಾದ ಎಂ & ಎ ಅಸೋಸಿಯೇಟ್ಸ್, ಕಾರ್ಯನಿರತ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ, ನಂ. 47 ಮಣಿಪಾಲ್ ಸೆಂಟರ್, ಸೌಥ್ ಬ್ಲಾಕ್, ಸ್ಯೂಟ್ ನಂ. 218, 2ನೇ ಮಹಡಿ, ಡಿಕನ್ಸನ್ ರಸ್ತೆ, ಬೆಂಗಳೂರು – 560042 ವಿಳಾಸಕ್ಕೆ ಸಲ್ಲಿಸತಕ್ಕದ್ದು. ಒಂದು ವೇಳೆ, ಸದರಿ ಅರ್ಜಿಯನ್ನು ವಿರೋಧಿಸಲು ಬಯಸುವುದಾದಲ್ಲಿ, ಅಂತಹವರು, ಕಡ್ಡಾಯವಾಗಿ ತಮ್ಮ ವಿರೋಧದ ಹಿನ್ನಲೆಗಳನ್ನು ಉಲ್ಲೇಖಿಸಿರುವ ಅಥವಾ ತಮ್ಮ ಒಂದು ಅಫಿಡವಿಟ್ ಪ್ರತಿಯನ್ನು ಕೂಡ ತಮ್ಮ ನೋಟಿಸ್ ಜೊತೆಗೆ ಲಗತ್ತಿಸುವುದು.
ಅರ್ಜಿದಾರರ ವಕೀಲರು, ಅಗತ್ಯ ಇರುವವರಿಗೆ ಸದರಿ ಅರ್ಜಿಯ ಪ್ರತಿಯನ್ನು ಒದಗಿಸುತ್ತಿದ್ದು, ಅವಶ್ಯವಿದ್ದವರು, ನಿಗದಿತ ಶುಲ್ಕ ಪಾವತಿಸಿ ಪ್ರತಿಯನ್ನು ಪಡೆದುಕೊಳ್ಳಬಹುದು.
ಸಹಿ/–
ಎಂ & ಎ ಅಸೋಸಿಯೇಟ್ಸ್,
ಕಾರ್ಯನಿರತ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ, ನಂ. 47 ಮಣಿಪಾಲ್ ಸೆಂಟರ್, ಸೌಥ್ ಬ್ಲಾಕ್, ಸ್ಯೂಟ್ ನಂ. 218, 2ನೇ ಮಹಡಿ, ಡಿಕನ್ಸನ್ ರಸ್ತೆ, ಬೆಂಗಳೂರು – 560042
ದಿನಾಂಕ: 08ನೇ ಫೆಬ್ರವರಿ, 2026.

TRAVEL CORNER
Orchid TRAVEL & TOURS ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್
ನಿಮ್ಮ ಪ್ರವಾಸ ನಮ್ಮೊಂದಿಗೆ
ನಂ 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು – 560 004.
ರಿಯಾಯಿತಿ ದರದಲ್ಲಿ ಪ್ರವಾಸಗಳು–2026
99000 99252 / 9880079588
ಗ್ರಾಂಡ್ ಯು.ಕೆ. ಮತ್ತು ಯುರೋಪ್
18 ದಿನಗಳು – 10 ದೇಶಗಳು
6 ದಿನಗಳ ಬಾಲಿ
7/11 ದಿನಗಳ ಸಿಂಗಾಪುರ-ಮಲೇಶಿಯ-ಥೈಲ್ಯಾಂಡ್
11 ದಿನಗಳ ವಿಯೆಟ್ನಾಮ್-ಕಾಂಬೋಡಿಯಾ
6 ದಿನಗಳ ದುಬೈ-ಅಬುಧಾಬಿ-ಶಾರ್ಜ
8 ದಿನಗಳ ಭೂತಾನ್ ಸ್ಪೆಷಲ್
9 ದಿನಗಳ ಕಾಶಿ-ಪ್ರಯಾಗ್‌ರಾಜ್-ಅಯೋಧ್ಯೆ

ಸೌಂದರ್ಯ-ಆರೋಗ್ಯ
Health Clinic
5 ದಿನಗಳ ಶಿಬಿರ 10-02-26 ರಿಂದ 14-02-26 ಮಂಡಿನೋವು, ಬೆನ್ನುನೋವು, ಕೀಲುನೋವು, ಕತ್ತುನೋವು, ಲಕ್ವಾ, ವೆರಿಕೋಸ್ ವೇಯಿನ್ಸ್ ಯಾವುದೇ ರೀತಿಯ ಔಷಧಿ ಹಾಗೂ ಶಸ್ತ್ರಚಿಕಿತ್ಸೆ ಇಲ್ಲದೆ ಹೈಡ್ರೋಥೆರಪಿಯಿಂದ ಚಿಕಿತ್ಸೆ ಮಾಡಲಾಗುವುದು. ಶೇಷಾದ್ರಿಪುರಂ, ಬೆಂಗಳೂರು 9739986737

ಉದ್ಯೋಗಾವಕಾಶ
Part-Time Jobs
ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಆದ್ಯತೆ. 19,000 -25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 9964311522, 9742133993

General
ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ,ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆ ಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Walk-in
ಅಸೆಂಬ್ಲಿ ಲೈನ್ ಆಪರೇಟರ್ ಹುದ್ದೆಗೆ ನೇಮಕಾತಿ ಅರ್ಹತೆ: SSLC/PUC/ITI /ಯಾವುದೇ ಪದವಿ ವಯಸ್ಸು: 18 ರಿಂದ 28 ವರ್ಷಲಿಂಗ: ಮಹಿಳೆಯರು ವೇತನ: ₹18,100/ ಪ್ರತಿ ತಿಂಗಳು ಸೌಲಭ್ಯಗಳು: ಉಚಿತ ವಸತಿ ಮತ್ತು ಆಹಾರ ಕೆಲಸದ ಸ್ಥಳ: ದೇವನಹಳ್ಳಿ ಸಂಪರ್ಕಿಸಿ: 7019660476 / 8073496142

ಪ್ರವಾಸ
Travel
★ಶ್ರೇಯಸ್ ಟೂರ್ಸ್★ 22.03.2026 10ದಿನಗಳು ಅಖಂಡ ಆಂಧ್ರತೆಲಂಗಾಣ ರಾಜ್ಯಪ್ರವಾಸ.08.03.2026 4ದಿನಗಳು ರಾಮೇಶ್ವರಂ ಕನ್ಯಾಕುಮಾರಿ,ಮಧುರೈ,ಇತರೆ. 22.03.2026 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಪೂಂಚಲಿಂಗ್. 21.03.2026 7ದಿನಗಳು ಆಸ್ಸಾಂ,ಮೇಘಾಲಯ, ಕಾಜಿರಂಗ.8073824856 9206979202

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಏ.30ಕ್ಕೆ 'ಪೆದ್ದಿ' ರಿಲೀಸ್

ತೆಲುಗಿನ ಖ್ಯಾತ ನಟ ರಾಮ್‌ಚರಣ್ ನಟನೆಯ 'ಪೆದ್ದಿ' ಸಿನಿಮಾ ಮಾರ್ಚ್ 27ರ ಬದಲಾಗಿ ಏ.30ರಂದು ತೆರೆಕಾಣಲಿದೆ.

ಬುಚ್ಚಿ ಬಾಬು ಸನಾ ನಿರ್ದೇಶಿಸುತ್ತಿರುವ ಈ ಸಿನಿಮಾದಲ್ಲಿ ನಾಯಕಿಯಾಗಿ ಜಾಹ್ನವಿ ಕಪೂರ್ ನಟಿಸಿದ್ದು, ನಟ ಶಿವರಾಜ್‌ಕುಮಾರ್ ಪ್ರಮುಖ ಪಾತ್ರದಲ್ಲಿದ್ದಾರೆ. ಜಗಪತಿ ಬಾಬು, ದಿವೇಂದು ಶರ್ಮಾ ಸೇರಿದಂತೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ.

'ಪೆದ್ದಿ' ಸ್ಪೋರ್ಟ್ಸ್ ಆ್ಯಕ್ಷನ್ ಡ್ರಾಮಾ ಆಗಿದ್ದು, ಎ.ಆರ್. ರೆಹಮಾನ್ ಸಂಗೀತ ನಿರ್ದೇಶನ ಮಾಡಿದ್ದಾರೆ. ವೃದ್ಧಿ ಸಿನಿಮಾಸ್ ಬ್ಯಾನರ್ ಅಡಿಯಲ್ಲಿ ವೆಂಕಟ ಸತೀಶ್ ಕಿಲಾರು ಈ ಸಿನಿಮಾ ನಿರ್ಮಾಣ ಮಾಡುತ್ತಿದ್ದು, ಮೈತ್ರಿ ಮೂವಿ ಮೇಕರ್ಸ್ ಮತ್ತು ಸುಕುಮಾರ್ ರೈಟಿಂಗ್ಸ್ ಬ್ಯಾನರ್‌ಗಳು ಚಿತ್ರವನ್ನು ಪ್ರಸ್ತುತಪಡಿಸುತ್ತಿವೆ. ಆರ್. ರತ್ನವೇಲು ಛಾಯಾಚಿತ್ರಗ್ರಹಣ, ನವೀನ್ ನೂಲಿ ಸಂಕಲನ ಸಿನಿಮಾಗಿದೆ.


ರಾಮ್‌ಚರಣ್

ಫೆ.20ರಿಂದ ರಾಕ್ಷಸ ಸ್ಟ್ರೀಮಿಂಗ್

'ಅಯ್ಯನ ಮನೆ', 'ಮಾರಿಗಲ್ಲು' ವೆಬ್‌ಸರಣಿ ಬಳಿಕ ಜೀ5 ಮತ್ತೊಂದು ಕನ್ನಡ ವೆಬ್‌ಸರಣಿಯನ್ನು ಘೋಷಿಸಿದೆ. 'ರಾಕ್ಷಸ' ಎಂಬ ಶೀರ್ಷಿಕೆಯ ಈ ವೆಬ್‌ಸರಣಿಯನ್ನು ನಿರ್ದೇಶಕ ತರುಣ್ ಸುಧೀರ್ ತಮ್ಮ ತರುಣ್ ಸುಧೀರ್ ಪ್ರೊಡಕ್ಷನ್ಸ್‌ನಡಿ ನಿರ್ಮಿಸಿದ್ದಾರೆ.

ಕ್ರೈಮ್ ಥ್ರಿಲ್ಲರ್ ಜಾನರ್‌ನಲ್ಲಿ ಇರುವ ಈ ವೆಬ್‌ಸರಣಿಯನ್ನು ಸುಹಾನ್ ಪ್ರಸಾದ್ ಹಾಗೂ ಅಪೂರ್ವ ಬರೆದಿದ್ದಾರೆ. ಸುಹಾನ್ ಪ್ರಸಾದ್ ನಿರ್ದೇಶನ ಮಾಡಿದ್ದಾರೆ. ನಟ ವಿಜಯ ರಾಘವೇಂದ್ರ ಇದರ ಮೂಲಕ ವೆಬ್‌ಸರಣಿ ಲೋಕಕ್ಕೆ ಕಾಲಿಡುತ್ತಿದ್ದಾರೆ. ಮಯೂರಿ, ಅವಿನಾಶ್, ಮಾಳವಿಕ, ಅಪ್ಪಣ್ಣ ಮತ್ತು ಅಭಿಜಿತ್ ತಾರಾಬಳಗದಲ್ಲಿದ್ದಾರೆ.

'ಓರ್ವ ನಿರ್ಮಾಪಕನಾಗಿ ನಮ್ಮ ಮಣ್ಣಿನ, ತೀವ್ರತೆಯಿಂದ ಕೂಡಿದ ಭಾವನಾತ್ಮಕ ಕಥೆಯನ್ನು ಬೆಂಬಲಿಸಲು ಉತ್ಸುಕನಾಗಿದ್ದೆ. ಈ ಸಂದರ್ಭದಲ್ಲಿ ಈ ಕಥೆ ದೊರೆಯಿತು. ಗಟ್ಟಿಯಾದ ಬರವಣಿಗೆ ಕಥೆಯಿಲ್ಲಿದ್ದು, ಇದು ಉತ್ತರ ಕರ್ನಾಟಕದಲ್ಲಿ ನಡೆಯುವ ಘಟನೆಯ ಸುತ್ತ ಇದೆ' ಎಂದಿದ್ದಾರೆ ತರುಣ್ ಸುಧೀರ್.

ಹೇಮಂತ್, ಶ್ರೀಮುರಳಿ, ಕಾರ್ತಿಕ್

'ಆಲ್ಫಾ' ಸಿನಿಮಾಗೆ ಶ್ರೀಮುರಳಿ ಸಾಥ್

ವಿಜಯ್ ನಿರ್ದೇಶನದ ಹಾಗೂ ಹೇಮಂತ್ ಕುಮಾರ್ ನಾಯಕನಾಗಿ ನಟಿಸಿರುವ 'ಆಲ್ಫಾ-ಮೆನ್ ಲವ್ ವೆಂಜೆನ್ಸ್' ಸಿನಿಮಾದ ಟ್ರೇಲರ್ ಅನ್ನು ಇತ್ತೀಚೆಗೆ ನಟ ಶ್ರೀಮುರಳಿ ಬಿಡುಗಡೆಗೊಳಿಸಿದರು.

ಎಲ್.ಎ. ಪ್ರೊಡಕ್ಷನ್ಸ್ ಲಾಂಛನದಲ್ಲಿ ಆನಂದ್ ಕುಮಾರ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಟ್ರೇಲರ್ ಬಿಡುಗಡೆಗೊಳಿಸಿ ಮಾತನಾಡಿದ ಶ್ರೀಮುರಳಿ, 'ಇದು ಹೇಮಂತ್ ನಟನೆಯ ಚೊಚ್ಚಲ ಸಿನಿಮಾವಾಗಿದ್ದರೂ ಅವರ ತಯಾರಿ ಕಂಡು ಸಂತೋಷವಾಗಿದೆ. ತಂಡದ ಶ್ರಮ ಟ್ರೇಲರ್‌ನಲ್ಲಿ ಕಾಣುತ್ತದೆ' ಎನ್ನುತ್ತಾ ತಂಡಕ್ಕೆ ಶುಭಹಾರೈಸಿದರು.

'ನಾನು ಶ್ರೀಮುರಳಿ ಅವರ ಅಭಿಮಾನಿ. ನಾನು ನಾಯಕನಾಗಲು ಅವರ ನಟನೆಯ 'ಉಗ್ರಂ' ಸಿನಿಮಾವೇ ಸ್ಫೂರ್ತಿ. ನಾಯಕನಾಗಿ ನಟಿಸಲು ಬೇಕಾದ ಪೂರ್ವ ತಯಾರಿ ಮಾಡಿಕೊಂಡಿದ್ದೇನೆ. ಅಚ್ಯುತ್ ಕುಮಾರ್, ಅವಿನಾಶ್ ಅವರಂತಹ ಖ್ಯಾತ ನಟರ ಜೊತೆ ತೆರೆಹಂಚಿಕೊಂಡ ಹೆಮ್ಮೆ ಇದೆ. ಅನೂಪ್ ಸೀಳಿನ್ ಅವರ ಸಂಗೀತ ನಿರ್ದೇಶನದಲ್ಲಿ ಚಿತ್ರದ ಹಾಡುಗಳು ಚೆನ್ನಾಗಿ ಮೂಡಿಬಂದಿವೆ' ಎಂದರು ಹೇಮಂತ್ ಕುಮಾರ್.

ಸಿನಿಮಾ ಫೆ.20ರಂದು ತೆರೆಗೆ ಬರುತ್ತಿದೆ. 'ಬಿಗ್‌ಬಾಸ್' ಖ್ಯಾತಿಯ ಕಾರ್ತಿಕ್ ಮಹೇಶ್ ಸಿನಿಮಾದಲ್ಲಿ ಪಾತ್ರವೊಂದಕ್ಕೆ ಬಣ್ಣಹಚ್ಚಿದ್ದಾರೆ. ನಾಯಕಿಯರಾಗಿ ಅಯಾನ, ಗೋಪಿಕಾ ಸುರೇಶ್ ನಟಿಸಿದ್ದಾರೆ.

ಕಾಶಿಯಲ್ಲಿ 'ಲಕ್ಷ್ಮೀಪುತ್ರ' ಕ್ಲೈಮ್ಯಾಕ್ಸ್

ನಟ ಚಿಕ್ಕಣ್ಣ ನಟನೆಯ 'ಲಕ್ಷ್ಮೀಪುತ್ರ' ಸಿನಿಮಾದ ಕ್ಲೈಮ್ಯಾಕ್ಸ್‌ನ ಚಿತ್ರೀಕರಣ ಇತ್ತೀಚೆಗೆ ಕಾಶಿಯಲ್ಲಿ ನಡೆದಿದೆ.

ನಿರ್ದೇಶಕ ಎ.ಪಿ.ಅರ್ಜುನ್ ಕಥೆ ಬರೆದು ತಮ್ಮದೇ ಎಪಿ ಅರ್ಜುನ್ ಫಿಲ್ಮ್ ಬ್ಯಾನರ್‌ನಡಿ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಸಂಕ್ರಾಂತಿಯಂದು ಚಿಕ್ಕಣ್ಣ ಪಾತ್ರದ ಫಸ್ಟ್‌ಲುಕ್ ಬಿಡುಗಡೆ ಮಾಡಿದ್ದ ಚಿತ್ರತಂಡ ಮೂರು ದಿನ ಕಾಶಿಯಲ್ಲಿ ಕ್ಲೈಮ್ಯಾಕ್ಸ್ ಚಿತ್ರೀಕರಣ ಮಾಡಿದೆ. ಇದರಲ್ಲಿ ಚಿಕ್ಕಣ್ಣ, ನಟಿ ತಾರಾ ಸೇರಿದಂತೆ ಅರವತ್ತಕ್ಕೂ ಹೆಚ್ಚು ಕಲಾವಿದರು ಭಾಗಿಯಾಗಿದ್ದರು. ಕಾಶಿಯ ಮಣಿಕರ್ಣಿಕಾ ಘಾಟ್, ಗಂಗಾ ನದಿ ತೀರ, ಬನಾರಸ್ ಹಾಗೂ ಕಾಶಿಯ ಪ್ರಮುಖ ಸ್ಥಳಗಳಲ್ಲಿ ಚಿತ್ರೀಕರಣ ನಡೆದಿದೆ.

ಎರಡು ದಿನದ ಮಾತಿನ ಭಾಗದ ಚಿತ್ರೀಕರಣ ಬಾಕಿ ಇದ್ದು, ಶೀಘ್ರದಲ್ಲೇ ಹಾಡುಗಳ ಶೂಟಿಂಗ್ ಅನ್ನು ಚಿತ್ರತಂಡ ಆರಂಭಿಸಲಿದೆ. ಮೇ ಅಥವಾ ಜೂನ್‌ನಲ್ಲಿ ಸಿನಿಮಾವನ್ನು ರಿಲೀಸ್ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ವಿಜಯ್ ಸ್ವಾಮಿ ಆ್ಯಕ್ಷನ್ ಕಟ್ ಹೇಳುತ್ತಿರುವ ಈ ಸಿನಿಮಾದಲ್ಲಿ ಚಿಕ್ಕಣ್ಣ ಅವರಿಗೆ ಜೋಡಿಯಾಗಿ ವಂದಿತಾ ನಟಿಸಿದ್ದಾರೆ. ತಾರಾ, ಕುರಿ ಪ್ರತಾಪ್, ಧರ್ಮಣ್ಣ ಸೇರಿ ದೊಡ್ಡ ತಾರಾಗಣವೇ ಚಿತ್ರದಲ್ಲಿದೆ.

ಅರ್ಜುನ್ ಜನ್ಯ ಸಂಗೀತ ನಿರ್ದೇಶನ ಚಿತ್ರಕ್ಕಿದ್ದು, ಹಾಡುಗಳಿಗೆ ಎ.ಪಿ.ಅರ್ಜುನ್ ಅವರೇ ಸಾಹಿತ್ಯ ಬರೆದಿದ್ದಾರೆ. ಆ್ಯಕ್ಷನ್ ಸೀಕ್ವೆನ್ಸ್‌ಗೆ ಮಾಸ್ ಮಾದ ನಿರ್ದೇಶನ ಮಾಡಿದ್ದಾರೆ. ಗಿರೀಶ್ ಆರ್ ಗೌಡ ಛಾಯಾಚಿತ್ರಗ್ರಹಣ ಸಿನಿಮಾಗಿದೆ.

ಕಾಶಿಯಲ್ಲಿ 'ಲಕ್ಷ್ಮೀಪುತ್ರ' ಚಿತ್ರತಂಡ

ಗುಂಡು ಹಾರಿಸಿ ಸಹಪಾಠಿ ಕೊಂದ ಕಾನೂನು ವಿದ್ಯಾರ್ಥಿ

ಚಂಡೀಗಢ (ಪಿಟಿಐ): ಪಂಜಾಬ್‌ನ ತರನ್ ತಾರನ್ ಜಿಲ್ಲೆಯ ಉಸ್ಮಾ ಗ್ರಾಮದ ಕಾನೂನು ಕಾಲೇಜಿನ ವಿದ್ಯಾರ್ಥಿಯೊಬ್ಬ ತನ್ನ ಸಹಪಾಠಿ ವಿದ್ಯಾರ್ಥಿನಿಯನ್ನು ತರಗತಿ ಒಳಗೆ ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ. ನಂತರ, ತಾನೂ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾನೆ.

ಸಂದೀಪ್ ಕೌರ್ (19) ಕೊಲೆಯಾದ ವಿದ್ಯಾರ್ಥಿನಿ. ಪ್ರಿನ್ಸ್‌ರಾಜ್ (20) ಈ ಕೃತ್ಯ ಎಸಗಿರುವ ವಿದ್ಯಾರ್ಥಿ.

'ಘಟನೆಯಲ್ಲಿ ಗಂಭೀರವಾಗಿ ಗಾಯಗೊಂಡಿರುವ ಪ್ರಿನ್ಸ್ ರಾಜ್‌ನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಡಿಎಸ್‌ಪಿ ಜಗ್ಬೀರ್ ಸಿಂಗ್ ತಿಳಿಸಿದ್ದಾರೆ.

ಕಾಲೇಜು ಆವರಣದಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಕೊಲೆ ದೃಶ್ಯ ಸೆರೆಯಾಗಿದೆ. ಸೋಮವಾರ ಬೆಳಿಗ್ಗೆ ಪ್ರಿನ್ಸ್‌ರಾಜ್, ಸಂದೀಪ್ ಕೌರ್ ಮತ್ತು ಇನ್ನೊಬ್ಬ ವಿದ್ಯಾರ್ಥಿನಿ ತರಗತಿಯಲ್ಲಿ ಒಟ್ಟಿಗೆ ಕುಳಿತಿದ್ದರು. ಇದ್ದಕ್ಕಿದ್ದಂತೆ, ಪ್ರಿನ್ಸ್‌ರಾಜ್ ಸಂದೀಪ್ ಕೌರ್ ಮೇಲೆ ಗುಂಡು ಹಾರಿಸಿದ್ದಾನೆ. ನಂತರ ತಾನೂ ತಲೆಗೆ ಗುಂಡು ಹಾರಿಸಿಕೊಂಡಿದ್ದು, ನೆಲದ ಮೇಲೆ ಬಿದ್ದಿದ್ದಾನೆ. ಗುಂಡು ಹಾರಿದ ಶಬ್ದ ಕೇಳಿ ಕೆಲವು ವಿದ್ಯಾರ್ಥಿಗಳು ತರಗತಿಯೊಳಗೆ ಪ್ರವೇಶಿಸಿದರು. ಸಂದೀಪ್ ಕೌರ್ ಅವರನ್ನು ನೋಡಿದ ಕೂಡಲೇ ಅಲ್ಲಿಂದ ಓಡಿ ಹೋದರು.

'ಕಾಲೇಜಿಗೆ ತಕ್ಷಣ ಬರುವಂತೆ ಆಡಳಿತ ಮಂಡಳಿಯವರು ಮೊಬೈಲ್ ಕರೆ ಮಾಡಿ ಹೇಳಿದರು. ಮಗಳಿಗೆ ಗುಂಡು ಹಾರಿಸಿರುವ ವಿಷಯ ತಿಳಿಸಿರಲಿಲ್ಲ. ಕಾಲೇಜಿಗೆ ಬಂದು ನೋಡಿದಾಗ ಮಗಳು ಶವವಾಗಿ ಬಿದ್ದಿದ್ದಳು' ಎಂದು ಸಂದೀಪ್ ಅವರ ತಾಯಿ ಹರ್ಜಿಂದರ್ ಕೌರ್ ಕಣ್ಣೀರಿಟ್ಟಿದ್ದಾರೆ.

'ಮಗಳಿಗೆ ಮದುವೆ ನಿಶ್ಚಯವಾಗಿತ್ತು. ಆದರೆ, ಅವಳಿಗೆ ಪ್ರಿನ್ಸ್‌ರಾಜ್ ಕೆಲ ದಿನಗಳಿಂದ ಕಿರುಕುಳ ನೀಡುತ್ತಿದ್ದ. ಆತ ಬಂದೂಕಿನೊಂದಿಗೆ ಕಾಲೇಜಿಗೆ ಪ್ರವೇಶಿಸಲು ಹೇಗೆ ಸಾಧ್ಯ' ಎಂದು ಅವರು ಪ್ರಶ್ನಿಸಿದ್ದಾರೆ.

ಈ ಹುಡುಗಿ ಪ್ರಯೋಜನಕ್ಕೆ ಬರುತ್ತಾಳೆಯೇ: ರಾಬ್ಡಿ ಬಗ್ಗೆ ವ್ಯಂಗ್ಯ

ನಿತೀಶ್

ಪಟ್ನಾ: ಸದನದಲ್ಲಿ ಅಸಂಸದೀಯ ಪದ ಬಳಕೆ ಮಾಡಿ ಸುದ್ದಿಯಾಗಿದ್ದ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಮಾಜಿ ಮುಖ್ಯಮಂತ್ರಿ ರಾಬ್ಡಿ ದೇವಿ ಅವರ ಕುರಿತು, 'ಈ ಹುಡುಗಿ... ಯಾವುದಕ್ಕಾದರೂ ಪ್ರಯೋಜನಕ್ಕೆ ಬರುತ್ತಾಳೆಯೇ?' ಎಂದು ಹೇಳಿರುವುದು ವಿವಾದಕ್ಕೆ ಕಾರಣವಾಗಿದೆ.

ಸೋಮವಾರ ವಿಧಾನ ಪರಿಷತ್‌ನ ಕಲಾಪದ ವೇಳೆ, 'ಬಿಹಾರದಲ್ಲಿ ಅತ್ಯಾಚಾರ ಪ್ರಕರಣಗಳು ವರದಿಯಾಗದ ಒಂದೇ ಒಂದು ಜಿಲ್ಲೆಯೂ ಇಲ್ಲ' ಎಂದು ಪರಿಷತ್‌ನ ವಿಪಕ್ಷ ನಾಯಕಿ ರಾಬ್ಡಿ ದೇವಿ ಟೀಕಿಸಿದರು. ಈ ವೇಳೆ, ಆಡಳಿತ ಪಕ್ಷ ಹಾಗೂ ವಿರೋಧ ಪಕ್ಷದವರ ನಡುವೆ ಮಾತಿನ ಚಕಮಕಿ ನಡೆಯಿತು.

'ಈ ಹುಡುಗಿ ಎಂದಾದರೂ ಕೆಲಸ ಮಾಡಿದ್ದಾಳೆಯೇ? ಅವಳ ಗಂಡ (ಲಾಲೂ ಪ್ರಸಾದ್ ಯಾದವ್) ಅಧಿಕಾರದಿಂದ ಕೆಳಗಿಳಿದ ಬಳಿಕ ಮುಖ್ಯಮಂತ್ರಿಯನ್ನಾಗಿ ಮಾಡಿದ. ನಾವು 2005ರಲ್ಲಿ ಅಧಿಕಾರಕ್ಕೆ ಬಂದ ನಂತರವೇ ಬಿಹಾರ ಅಭಿವೃದ್ಧಿಯ ಹಾದಿಗೆ ಮರಳಿತು' ಎಂದು ನಿತೀಶ್ ಕುಮಾರ್ ಹೇಳಿದರು.

67 ವರ್ಷದ ರಾಬ್ಡಿ ದೇವಿ ಅವರು 1997ರಿಂದ 2005ರವರೆಗೆ ಬಿಹಾರದ ಮುಖ್ಯಮಂತ್ರಿಯಾಗಿದ್ದರು.

ಖಂಡನೆ: ನಿತೀಶ್ ಕುಮಾರ್ ಹೇಳಿಕೆಯನ್ನು ರಾಬ್ಡಿದೇವಿ ಅವರ ಪುತ್ರಿ ರೋಹಿಣಿ ಆಚಾರ್ಯ ಖಂಡಿಸಿದ್ದಾರೆ.

'ನಿಮ್ಮ ಭಾಷೆ ದಿನದಿಂದ ದಿನಕ್ಕೆ ಅಸಭ್ಯವಾಗುತ್ತಿದೆ. ಮಹಿಳೆಯರ ಬಗ್ಗೆ ಅಗೌರವ ತೋರುವುದು ನಿಮಗೆ ಅಭ್ಯಾಸವಾಗಿಬಿಟ್ಟಿದೆ. ಸದನದಲ್ಲಿ ಮತ್ತು ಸಾರ್ವಜನಿಕ ಸಭೆಗಳಲ್ಲಿ ಹತ್ತಕ್ಕೂ ಹೆಚ್ಚು ಬಾರಿ ಸಭ್ಯತೆಯ ಎಲ್ಲೆ ಮೀರಿ ಮಾತನಾಡಿದ್ದೀರಿ' ಎಂದು ಅವರು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ತರಾಟೆಗೆ ತೆಗೆದುಕೊಂಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಬಿಆರ್‌ಎಸ್‌ನಿಂದ ಸುಲಿಗೆ: ರೇವಂತ್ ರೆಡ್ಡಿ

ಹೈದರಾಬಾದ್ (ಪಿಟಿಐ): ಹಿಂದಿನ ಬಿಆರ್‌ಎಸ್ ಆಡಳಿತವು ಫೋನ್ ಕದ್ದಾಲಿಕೆ ಮೂಲಕ ಉದ್ಯಮಿಗಳಿಗೆ ಬ್ಲ್ಯಾಕ್‌ಮೇಲ್ ಮಾಡಿ ನೂರಾರು ಕೋಟಿ ರೂಪಾಯಿ ಸುಲಿಗೆ ಮಾಡಿದೆ ಎಂದು ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ದೂರಿದ್ದಾರೆ.

ಫೆ.11ರಂದು ನಡೆಯಲಿರುವ ಮುನ್ಸಿಪಲ್ ಚುನಾವಣೆ ಅಂಗವಾಗಿ ಜಯಶಂಕರ್ ಭೂಪಲಪಲ್ಲಿ ಜಿಲ್ಲೆಯ ಚೆಲ್ಪುರದಲ್ಲಿ ಭಾನುವಾರ ಆಯೋಜಿಸಿದ್ದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡಿದ ರೆಡ್ಡಿ, ಬಿಆರ್‌ಎಸ್ ಪಕ್ಷ 'ಬ್ಲ್ಯಾಕ್‌ಮೇಲ್ ರಾಜಕೀಯ ಸಮಿತಿ'. 'ಹಿಂದಿನ ಆಡಳಿತವು ಫೋನ್ ಕದ್ದಾಲಿಕೆಯಲ್ಲೇ ನಿರತವಾಗಿತ್ತು. ಅವರಿಗಿಂತ ದೊಡ್ಡ ಪಾಪಿ ಯಾರಿದ್ದಾರೆ?' ಎಂದು ರೆಡ್ಡಿ ವಾಗ್ದಾಳಿ ನಡೆಸಿದರು.

ಬಹುಮೂಲಗಳಿಂದ ತೈಲ ಖರೀದಿ: ಮಿಸ್ರಿ

ನವದೆಹಲಿ (ಪಿಟಿಐ): 'ಭಾರತವು ಬಹುಮೂಲಗಳಿಂದ ಕಚ್ಚಾ ತೈಲವನ್ನು ಖರೀದಿಸುತ್ತದೆ. ರಾಷ್ಟ್ರೀಯ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಪೂರೈಕೆ ಸರಪಳಿಯಲ್ಲಿ ಸ್ಥಿರತೆಯನ್ನು ಖಚಿತಪಡಿಕೊಳ್ಳುತ್ತದೆ' ಎಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ ಹೇಳಿದ್ದಾರೆ.

'ಭಾರತವು ರಷ್ಯಾದಿಂದ ತೈಲ ಖರೀದಿಸುವುದನ್ನು ನಿಲ್ಲಿಸಲು ಒಪ್ಪಿಕೊಂಡಿದೆ ಎಂಬ ಅಮೆರಿಕದ ಹೇಳಿಕೆಯ ನಡುವೆಯೇ ಮಿಸ್ರಿ ಪ್ರತಿಕ್ರಿಯೆ ಹೊರಬಿದ್ದಿದೆ.

ಭಾರತವು ರಷ್ಯಾದೊಂದಿಗಿನ ತೈಲ ಸಂಬಂಧವನ್ನು ಕಡಿದುಕೊಳ್ಳುವ ಸಾಧ್ಯತೆ ಕಡಿಮೆ ಎಂದು ಪರೋಕ್ಷವಾಗಿ ಹೇಳಿದ್ದಾರೆ.

ಮುಂಬೈಯನ್ನು ಮಣಿಸಿದ ಕರ್ನಾಟಕ

ರಾಹುಲ್ ಶತಕ • ಸ್ಮರಣ್ ಅಜೇಯ 83 • ರಣಜಿ ಸೆಮಿಫೈನಲ್‌ಗೆ ಪಡಿಕ್ಕಲ್ ಪಡೆ

ಪ್ರಜಾವಾಣಿ ವಾರ್ತೆ

ಮುಂಬೈ: ಕರ್ನಾಟಕ ತಂಡವು ಒಂಬತ್ತನೇ ಬಾರಿ ರಣಜಿ ಪ್ರಶಸ್ತಿ ಗೆಲ್ಲಲು ಇನ್ನು ಎರಡು ಗೆಲುವುಗಳಷ್ಟೇ ದೂರದಲ್ಲಿದೆ. ಕೆ.ಎಲ್.ರಾಹುಲ್ ಅವರ ಶತಕ ಮತ್ತು ರವಿಚಂದ್ರನ್ ಸ್ಮರಣ್ ಅವರ ಅಜೇಯ 83 ರನ್‌ಗಳ ನೆರವಿನಿಂದ ಕರ್ನಾಟಕ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಇನ್ನೂ ಒಂದು ದಿನ ಉಳಿದಿರುವಂತೆ ಮುಂಬೈ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಸೋಲಿಸಿತು.

ದೇವದತ್ತ ಪಡಿಕ್ಕಲ್ ನೇತೃತ್ವದ ತಂಡ ಇದೇ 15 ರಿಂದ ಡೆಹ್ರಾಡೂನ್‌ನಲ್ಲಿ ನಡೆಯಲಿರುವ ಸೆಮಿಫೈನಲ್ ಪಂದ್ಯದಲ್ಲಿ ಉತ್ತರಾಖಂಡ ತಂಡವನ್ನು ಎದುರಿಸಲಿದೆ.

ಟೆಸ್ಟ್ ತಂಡದ ಆರಂಭ ಆಟಗಾರ ಕೆ.ಎಲ್.ರಾಹುಲ್ ಅಮೋಘವಾಗಿ ಆಡಿ 130 ರನ್ (182 ಎಸೆತ, 4x14, 6x1) ಗಳಿಸಿ ತಂಡವನ್ನು ಗೆಲುವಿನ ಹಾದಿಯಲ್ಲಿ ಮುನ್ನಡೆಸಿದರು. ಅವರಿಗೆ ಎಡಗೈ ಬ್ಯಾಟರ್ ಸ್ಮರಣ್ ಸಮರ್ಥ ಬೆಂಬಲ ನೀಡಿದರು. 123 ಎಸೆತಗಳ ಅವರ ಅಜೇಯ ಇನಿಂಗ್ಸ್‌ನಲ್ಲಿ 11 ಬೌಂಡರಿ ಗಳಿದ್ದವು. ಇದರಲ್ಲಿ ಸೊಗಸಾದ ಪುಲ್ ಮತ್ತು ಡ್ರೈವ್ ಹೊಡೆತಗಳಿದ್ದವು.

ಕರ್ನಾಟಕ ತಂಡವು 2 ವಿಕೆಟ್‌ಗೆ 113 ರನ್‌ಗಳೊಡನೆ ಸೋಮವಾರ ನಾಲ್ಕನೇ ದಿನದಾಟ ಮುಂದುವರಿಸಿದಾಗ ಗೆಲುವಿಗೆ ಇನ್ನೂ 212 ರನ್‌ಗಳ ಅಗತ್ಯವಿತ್ತು. ಕರುಣ್ ನಾಯರ್ (13), ಮಧ್ಯಮ ವೇಗಿ ಶಾರ್ದೂಲ್ ಠಾಕೂರ್ ಬೌಲಿಂಗ್‌ನಲ್ಲಿ ಎಲ್‌ಬಿ ಬಲೆಗೆ ಬಿದ್ದರು. ಈ ವೇಳೆ ರಾಹುಲ್ ಜೊತೆಗೂಡಿದ ಸ್ಮರಣ್ ಅವರು ಹೊಣೆಯನ್ನು ಸಮರ್ಥವಾಗಿ ನಿಭಾಯಿಸಿದರು. ಕೇವಲ 159 ಎಸೆತಗಳಲ್ಲಿ ನಾಲ್ಕನೇ ವಿಕೆಟ್‌ಗೆ 147 ರನ್ ಸೇರಿಸಿ ಒತ್ತಡ ನಿವಾರಿಸಿದರು.

ಶಾರ್ದೂಲ್ ಠಾಕೂರ್ ಮತ್ತು ತುಷಾರ ದೇಶಪಾಂಡೆ ಅವರ ಶಾರ್ಟ್ ಪಿಚ್ ಅಸ್ತ್ರ ಫಲ ನೀಡಲಿಲ್ಲ. ರಾಹುಲ್‌ಗೆ ಅದೃಷ್ಟದ ಬಲವೂ ಇತ್ತು. ಠಾಕೂರ್ ಬೌಲಿಂಗ್‌ನಲ್ಲಿ ಬ್ಯಾಟಿಗೆ ತಗುಲಿದ ಚೆಂಡು ಮೊದಲ ಸ್ಲಿಪ್‌ನತ್ತ ಹಾರಿತ್ತು. ಆದರೆ ಜೈಸ್ವಾಲ್ ಕ್ಯಾಚ್ ಹಿಡಿಯುವಷ್ಟರಲ್ಲಿ ಸಿದ್ದೇಶ್ ಲಾಡ್ ಎರಡನೇ ಸ್ಲಿಪ್‌ನಿಂದ ಅಡ್ಡಬಂದರು. ಆಗ ಅವರ ಮೊತ್ತ 75. ನಂತರ ಅವರು ಮೊದಲ ದರ್ಜೆ ಕ್ರಿಕೆಟ್‌ನಲ್ಲಿ 24ನೇ ಶತಕ ಪೂರೈಸಿದರು.

ಲಂಚ್ ವೇಳೆಗೆ ಕರ್ನಾಟಕದ ಗೆಲುವಿಗೆ 60 ರನ್‌ಗಳು ಬೇಕಿದ್ದು ಏಳು ವಿಕೆಟ್‌ಗಳು ಉಳಿದಿದ್ದವು. ನಂತರ ಆತಂಕದ ಕ್ಷಣಗಳನ್ನು ಕಂಡಿತು. 7.2 ಓವರುಗಳ ಅಂತರದಲ್ಲಿ 3 ವಿಕೆಟ್‌ಗಳು ಬಿದ್ದವು. ರಾಹುಲ್ ಮೊದಲನೆಯರಾಗಿ ನಿರ್ಗಮಿಸಿದರು. ದೇಶಪಾಂಡೆ ಅವರ ಶಾರ್ಟ್ ಎಸೆತವನ್ನು ಆಡಲು ಹೋಗಿ ಶಾರ್ಟ್ ಥರ್ಡ್‌ಮ್ಯಾನ್‌ನಲ್ಲಿ ಯಶಸ್ವಿ ಜೈಸ್ವಾಲ್ ಹಿಡಿದ ಉತ್ತಮ ಕ್ಯಾಚಿಗೆ ನಿರ್ಗಮಿಸಬೇಕಾಯಿತು. ಶ್ರೇಯಸ್ ಗೋಪಾಲ್ ಮತ್ತು ಕೃತಿಕ್ ಕೃಷ್ಣ ಕೂಡ ಹೆಚ್ಚುಹೊತ್ತು ನಿಲ್ಲಲಿಲ್ಲ.

ಸ್ಮರಣ್ ಜೊತೆಗೂಡಿದ ವಿದ್ಯಾಧರ ಪಾಟೀಲ್ (ಔಟಾಗದೇ 31, 30ಎ, 4x3, 6x1) ಟೀ ವಿರಾಮಕ್ಕೆ ಅರ್ಧ ಗಂಟೆಯಿರುವಾಗ ಗೆಲುವು ಪೂರೈಸಿದರು.

ಸ್ಕೋರುಗಳು: ಮೊದಲ ಇನಿಂಗ್ಸ್: ಮುಂಬೈ: 120; ಕರ್ನಾಟಕ: 173; ಎರಡನೇ ಇನಿಂಗ್ಸ್: ಮುಂಬೈ: 98.3 ಓವರುಗಳಲ್ಲಿ 377; ಕರ್ನಾಟಕ: 73.4 ಓವರುಗಳಲ್ಲಿ 6 ವಿಕೆಟ್‌ಗೆ 325 (ಕೆ.ಎಲ್. ರಾಹುಲ್ 130, ಸ್ಮರಣ್ ರವಿಚಂದ್ರನ್ ಔಟಾಗದೇ 83, ವಿದ್ಯಾಧರ ಪಾಟೀಲ ಔಟಾಗದೇ 31; ಶಾರ್ದೂಲ್ ಠಾಕೂರ್ 55ಕ್ಕೆ2, ತುಷಾರ್ ದೇಶಪಾಂಡೆ 67ಕ್ಕೆ2, ತನುಷ್ ಕೋಟ್ಯಾನ್ 77ಕ್ಕೆ2).
ಪಂದ್ಯದ ಆಟಗಾರ: ಕೆ.ಎಲ್.ರಾಹುಲ್.

ಕೆ.ಎಲ್.ರಾಹುಲ್ (ಎಡ) ಹಾಗೂ ರವಿಚಂದ್ರನ್ ಸ್ಮರಣ್

ಮೊದಲ ಬಾರಿ ಸೆಮಿಗೆ ಜಮ್ಮು–ಕಾಶ್ಮೀರ

ಇಂದೋರ್ (ಪಿಟಿಐ): ವೇಗದ ಬೌಲರ್ ಅಕಿಬ್ ನಬಿ ಅವರ ಜೀವನ ಶ್ರೇಷ್ಠ ಸಾಧನೆ (110 ರನ್ನಿಗೆ 12 ವಿಕೆಟ್) ಜಮ್ಮು ಮತ್ತು ಕಾಶ್ಮೀರ ತಂಡ 56 ರನ್‌ಗಳಿಂದ ಪ್ರಬಲ ಮಧ್ಯ ಪ್ರದೇಶ ತಂಡವನ್ನು ಸೋಲಿಸಿ ಸೆಮಿಫೈನಲ್‌ಗೆ ಮುನ್ನಡೆಯಿತು.

67 ವರ್ಷಗಳ ಹಿಂದೆ ರಣಜಿ ಆಡತೊಡಗಿದ ನಂತರ ಇದೇ ಮೊದಲ ಬಾರಿ ಜಮ್ಮು–ಕಾಶ್ಮೀರ ತಂಡ ಈ ಸಾಧನೆಗೆ ಪಾತ್ರವಾಗಿದೆ. 29 ವರ್ಷ ವಯಸ್ಸಿನ ನಬಿ ಮೊದಲ ಇನಿಂಗ್ಸ್‌ನಲ್ಲಿ 40 ರನ್ನಿಗೆ 7 ವಿಕೆಟ್ ಪಡೆದರೆ ಎರಡನೇ ಇನಿಂಗ್ಸ್‌ನಲ್ಲಿ 70 ರನ್ನಿಗೆ 5 ವಿಕೆಟ್ ಗಳಿಸಿದರು.

ಗೆಲುವಿಗೆ 291 ರನ್ ಗಳಿಸಬೇಕಿದ್ದ ಮಧ್ಯಪ್ರದೇಶ (ಭಾನುವಾರ: 5 ವಿಕೆಟ್‌ಗೆ 87) ಎರಡನೇ ಇನಿಂಗ್ಸ್‌ನಲ್ಲಿ 234 ರನ್‌ಗಳಿಗೆ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರು: ಜಮ್ಮು ಮತ್ತು ಕಾಶ್ಮೀರ: 194 ಮತ್ತು 70.3 ಓವರುಗಳಲ್ಲಿ 248; ಮಧ್ಯಪ್ರದೇಶ: 152 ಮತ್ತು 234 (ಶುಭಂ ಶರ್ಮಾ 32, ಸಾರಾಂಶ್ ಜೈನ್ 64; ಅಖಿಬ್ ನಬಿ 70ಕ್ಕೆ5, ಅಬಿದ್ ಮುಷ್ತಾಕ್ 49ಕ್ಕೆ3).
ಕಲ್ಯಾಣಿ (ಪಶ್ಚಿಮ ಬಂಗಾಳ): ಮೊದಲ ಇನಿಂಗ್ಸ್: ಆಂಧ್ರ: 295; ಬಂಗಾಳ: 629 (ಸುದೀಪ್ ಕುಮಾರ್ ಘರಾಮಿ 299, ಹಬೀಬ್ ಗಾಂಧಿ 95, ಮೊಹಮ್ಮದ್ ಶಮಿ 53; ಎರಡನೇ ಇನಿಂಗ್ಸ್: ಆಂಧ್ರ: 24 ಓವರುಗಳಲ್ಲಿ 3 ವಿಕೆಟ್‌ಗೆ 64.

ಮತ್ತೆ ಗಮನ ಸೆಳೆದ ಸ್ಮರಣ್

'ಮುಂಬೈನಂಥ ಪ್ರಬಲ ತಂಡವನ್ನು ಅದರದೇ ನೆಲದಲ್ಲಿ ಸೋಲಿಸುವುದು ಖುಷಿ ನೀಡುತ್ತದೆ. ಕ್ವಾರ್ಟರ್‌ಫೈನಲ್‌ನಂಥ ಪಂದ್ಯದಲ್ಲಿ ಈ ಗೆಲುವು ದಕ್ಕಿರುವುದು ಹೆಚ್ಚು ಸಂತಸ ಮೂಡಿಸಿದೆ' ಎಂದು ಕರ್ನಾಟಕದ ಗೆಲುವಿನಲ್ಲಿ ಅಮೂಲ್ಯ ಕಾಣಿಕೆ ನೀಡಿದ ಬ್ಯಾಟರ್ ರವಿಚಂದ್ರನ್ ಸ್ಮರಣ್ ಹೇಳಿದರು. 2024–25ನೇ ಸಾಲಿನಲ್ಲಿ ರಣಜಿಗೆ ಪದಾರ್ಪಣೆ ಮಾಡಿದ ನಂತರ ರವಿಚಂದ್ರನ್ ಸ್ಮರಣ್ ತಮ್ಮ ಸ್ಥಿರ ಬ್ಯಾಟಿಂಗ್‌ನಿಂದ ಗಮನ ಸೆಳೆದಿದ್ದಾರೆ. ಈ ಋತುವಿನಲ್ಲಿ ಎರಡು ಶತಕ, ಮೂರು ಅರ್ಧಶತಕಗಳು ಸೇರಿದಂತೆ 86ರ ಸರಾಸರಿಯಲ್ಲಿ 688 ರನ್ ಗಳಿಸಿದ್ದಾರೆ.

ಮೊದಲ ಇನಿಂಗ್ಸ್‌ನಲ್ಲಿ ವಿಫಲರಾದ 22 ವರ್ಷ ವಯಸ್ಸಿನ ಆಟಗಾರ ಎರಡನೇ ಇನಿಂಗ್ಸ್‌ನಲ್ಲಿ ಅತ್ಯುಪಯುಕ್ತ ಅಜೇಯ 83 ರನ್ ಗಳಿಸಿದರು. ಶತಕ ಬಾರಿಸಿದ ಕೆ.ಎಲ್.ರಾಹುಲ್ ಅವರೊಡನೆ ಉಪಯುಕ್ತ ಜೊತೆಯಾಟದಲ್ಲೂ ಭಾಗಿಯಾದರು.

ಬಿ ದರ್ಜೆಯಲ್ಲಿ ಕೊಹ್ಲಿ, ರೋಹಿತ್

ವಿರಾಟ್ ಕೊಹ್ಲಿ

ನವದೆಹಲಿ (ಪಿಟಿಐ): ಭಾರತ ಏಕದಿನ ತಂಡದ ಸ್ಟಾರ್ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರು ಸೋಮವಾರ ಹೊಸದಾಗಿ ಪ್ರಕಟಿಸಲಾಗಿರುವ ಬಿಸಿಸಿಐ ವಾರ್ಷಿಕ ಕೇಂದ್ರೀಯ ಗುತ್ತಿಗೆಯಲ್ಲಿ 'ಬಿ' ದರ್ಜೆಯಲ್ಲಿ ಸೇರ್ಪಡೆಯಾಗಿದ್ದಾರೆ.

ಈವರೆಗೆ ಚಾಲ್ತಿಯಲ್ಲಿದ್ದ ಎ + ದರ್ಜೆಯನ್ನು ತೆಗೆದುಹಾಕಲಾಗಿದೆ. ಈ ದರ್ಜೆಯಲ್ಲಿದ್ದ ಆಟಗಾರರು ವಾರ್ಷಿಕ ರಿಟೇನರ್‌ಶಿಪ್ ಶುಲ್ಕವಾಗಿ ₹7 ಕೋಟಿ ಪಡೆಯುತ್ತಿದ್ದರು. 30 ಆಟಗಾರರು ಮತ್ತು 21 ಆಟಗಾರ್ತಿಯರನ್ನು ಕೇಂದ್ರೀಯ ಗುತ್ತಿಗೆ ಪಟ್ಟಿಯ ಎ, ಬಿ ಮತ್ತು ಸಿ ದರ್ಜೆಯಲ್ಲಿ ವಿಂಗಡಿಸಲಾಗಿದೆ.

ಎರಡು ಮಾದರಿಗಳಿಗೆ ನಾಯಕರಾಗಿರುವ ಶುಭಮನ್ ಗಿಲ್, ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಮತ್ತು ಟೆಸ್ಟ್ ಆಲ್‌ರೌಂಡರ್ ರವೀಂದ್ರ ಜಡೇಜ ಎ ಗುಂಪಿನಲ್ಲಿದ್ದಾರೆ. ಇವರು ವಾರ್ಷಿಕ ₹5 ಕೋಟಿ ಪಡೆಯಲಿದ್ದಾರೆ. ಬಿ ದರ್ಜೆಯ ಆಟಗಾರರು ₹ 3 ಕೋಟಿ ಮತ್ತು ಸಿ ದರ್ಜೆಯ ಆಟಗಾರರು ₹1 ಕೋಟಿ ಪಡೆಯಲಿದ್ದಾರೆ.

ಕೊಹ್ಲಿ ಮತ್ತು ರೋಹಿತ್ ಈಗ ಏಕದಿನ ಮಾದರಿಗೆ ಮಾತ್ರ ಸೀಮಿತಗೊಂಡಿರುವುದರಿಂದ ಅವರನ್ನು ಎ ಗುಂಪಿನಲ್ಲಿ ಉಳಿಸಿಕೊಂಡಿಲ್ಲ. ಬಿ ದರ್ಜೆಯಲ್ಲಿ ಅವರ ಜೊತೆ ವಾಷಿಂಗ್ಟನ್ ಸುಂದರ್, ಕೆ.ಎಲ್.ರಾಹುಲ್, ಮೊಹಮ್ಮದ್ ಸಿರಾಜ್ ಮತ್ತು ಹಾರ್ದಿಕ್ ಪಾಂಡ್ಯ ಸಹ ಇದ್ದಾರೆ.

ಮಹಿಳಾ ಕ್ರಿಕೆಟಿಗರ ವಾರ್ಷಿಕ ಗುತ್ತಿಗೆಯಲ್ಲಿ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಜೆಮಿಮಾ ರಾಡ್ರಿಗಸ್, ಸ್ಮೃತಿ ಮಂದಾನ ಮತ್ತು ದೀಪ್ತಿ ಶರ್ಮಾ 'ಎ' ಗುಂಪಿನಲ್ಲಿದ್ದಾರೆ.

ಕರ್ನಾಟಕಕ್ಕೆ ಮಣಿದ ಬರೋಡಾ

ಬೆಂಗಳೂರು: ನಾಯಕಿ ಶುಭ ಸತೀಶ್ ಅವರ ಅರ್ಧಶತಕದ ಬಲದಿಂದ ಕರ್ನಾಟಕ ತಂಡವು ಸೀನಿಯರ್ ಮಹಿಳಾ ಏಕದಿನ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ ಬರೋಡಾ ತಂಡವನ್ನು 70 ರನ್‌ಗಳಿಂದ ಮಣಿಸಿತು.

ರಾಜ್‌ಕೋಟ್‌ನಲ್ಲಿ ನಡೆದ ಪಂದ್ಯದಲ್ಲಿ ಶುಭ (94; 120ಎ, 4x8, 6x1) ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ನಿಕಿ (66; 56ಎ, 4x10, 6x1) ಹಾಗೂ ಸೌಮ್ಯ ವರ್ಮಾ (51; 33ಎ, 4x8, 6x1) ಬಿರುಸಿನ ಅರ್ಧಶತಕ ಗಳಿಸಿದರು. ಅದರಿಂದಾಗಿ ರಾಜ್ಯ ತಂಡವು 50 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 294 ರನ್ ಪೇರಿಸಿತು.

ಬರೋಡಾ ತಂಡವು 44 ಓವರ್‌ಗಳಲ್ಲಿ 224 ರನ್‌ಗಳಿಗೆ ಕುಸಿಯಿತು.

ಜಿಎಸ್‌ಟಿ ಸರಳೀಕರಣದ ನಷ್ಟವನ್ನು ರಾಜ್ಯಗಳಿಗೆ ಕೊಡದ ಹಣಕಾಸು ಸಚಿವಾಲಯದ ನಿರ್ಧಾರ ಸರಿಯೇ?

• ಸರಿ • ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಗುವಾಹಟಿ– ಒಡಿಶಾ ಮಾಸ್ಟರ್ಸ್ ಕೈಬಿಟ್ಟ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್

ನವದೆಹಲಿ (ಪಿಟಿಐ): ಜಾಗತಿಕ ಮಟ್ಟದ ಟೂರ್ನಿಗಳ ಸ್ವರೂಪ ಬದಲಿಸಿರುವ ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ (ಬಿಡಬ್ಲ್ಯುಎಫ್), ಲಖನೌನಲ್ಲಿ ನಡೆಯುವ ಸೈಯದ್ ಮೋದಿ ಅಂತರ-ರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ದರ್ಜೆಯನ್ನು ಸೂಪರ್ 300ರಿಂದ ಸೂಪರ್ 100ಕ್ಕೆ ಇಳಿಸಿದೆ.

ಅಲ್ಲದೆ, ಸೂಪರ್ 100 ದರ್ಜೆ ಹೊಂದಿದ್ದ ಗುವಾಹಟಿ ಹಾಗೂ ಒಡಿಶಾ ಮಾಸ್ಟರ್ಸ್ ಟೂರ್ನಿಗಳನ್ನು ಪಟ್ಟಿಯಿಂದ ಕೈಬಿಟ್ಟಿದೆ. ಆದರೆ, ಈ ಕ್ರಮ ಕೈಗೊಳ್ಳಲು ಕಾರಣವೇನು ಎಂಬುದನ್ನು ಬಿಡಬ್ಲ್ಯುಎಫ್ ಬಹಿರಂಗಪಡಿಸಿಲ್ಲ.

ದೆಹಲಿಯಲ್ಲಿ ನಡೆಯುವ ಇಂಡಿಯಾ ಓಪನ್ ಟೂರ್ನಿಯು ಸೂಪರ್ 750ರ ದರ್ಜೆಯನ್ನು ಉಳಿಸಿಕೊಂಡಿದೆ. ನೂತನ ಬದಲಾವಣೆಗಳು 2027–30ರ ನಡುವಿನ ಋತುಗಳಿಗೆ ಅನ್ವಯವಾಗಲಿವೆ.

ಹೊಸ ಬದಲಾವಣೆಯಂತೆ, ಬಿಡಬ್ಲ್ಯುಎಫ್ ವಿಶ್ವ ಟೂರ್ ಅಡಿಯಲ್ಲಿ 6 ಸ್ತರದ 36 ಟೂರ್ನಿಗಳು ನಡೆಯಲಿವೆ. ವಿಶ್ವ ಟೂರ್ ಫೈನಲ್ಸ್, ತಲಾ 5 ಸೂಪರ್ 1000 ಹಾಗೂ ಸೂಪರ್ 750 ಟೂರ್ನಿ, 9 ಸೂಪರ್ 500 ಟೂರ್ನಿ ಮತ್ತು ತಲಾ 8 ಸೂಪರ್ 300 ಹಾಗೂ ಸೂಪರ್ 100 ದರ್ಜೆಯ ಟೂರ್ನಿಗಳಿಗೆ ಬಿಡಬ್ಲ್ಯುಎಫ್ ಮಾನ್ಯತೆ ನೀಡಿದೆ.

ಈ ಮೊದಲು ಸೂಪರ್ 1000 ಮಟ್ಟದ ನಾಲ್ಕು ಟೂರ್ನಿಗಳು ನಡೆಯುತ್ತಿದ್ದವು.

ಟೂರ್ನಿಗಳ ಸ್ವರೂಪ ಬದಲು: ವಿಶ್ವ ಚಾಂಪಿಯನ್‌ಷಿಪ್‌ಗಳಲ್ಲಿ ನಾಕೌಟ್ ಸುತ್ತಿಗೆ ಮೊದಲು ಗುಂಪು ಹಂತವನ್ನು ಪರಿಚಯಿಸಲಾಗಿದೆ. ಇದರಿಂದಾಗಿ, ಪ್ರತಿ ಆಟಗಾರರು ಕನಿಷ್ಠ ಎರಡು ಪಂದ್ಯಗಳಲ್ಲಿ ಆಡಲು ಅವಕಾಶ ಸಿಗಲಿದೆ. ಪ್ರತಿಷ್ಠಿತ ಸುದೀರ್‌ಮನ್ ಕಪ್, ಥಾಮಸ್ ಕಪ್ ಹಾಗೂ ಊಬರ್ ಕಪ್ ಫೈನಲ್ಸ್ ಟೂರ್ನಿಗಳಲ್ಲಿ ಭಾಗವಹಿಸುವ ತಂಡಗಳ ಮಿತಿಯನ್ನು ಹೆಚ್ಚಿಸಲಾಗುತ್ತದೆ. ವಿಶ್ವ ಟೂರ್ ಫೈನಲ್ಸ್ ನಡೆಯುವ ತಾಣವನ್ನು ಮುಂದಿನ ದಿನಗಳಲ್ಲಿ ಪ್ರಕಟಿಸಲಾಗುವುದು ಎಂದು ಬಿಡಬ್ಲ್ಯುಎಫ್ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರಶಸ್ತಿ ಮೊತ್ತ ಹೆಚ್ಚಳ: ಪ್ರತಿಯೊಂದು ಸೂಪರ್ 1000 ಟೂರ್ನಿಗಳ ಒಟ್ಟು ಪ್ರಶಸ್ತಿ ಮೊತ್ತವನ್ನು ₹18 ಕೋಟಿಗೆ ಹೆಚ್ಚಿಸಲಾಗಿದೆ. ಸೂಪರ್ 750 ಟೂರ್ನಿಗೆ ₹10 ಕೋಟಿ ಹಾಗೂ ಸೂಪರ್ 500 ಟೂರ್ನಿಗೆ ₹5 ಕೋಟಿ ನಿಗದಿಪಡಿಸಲಾಗಿದೆ. ಸೂಪರ್ 300 ಹಾಗೂ ಸೂಪರ್ 100 ಟೂರ್ನಿಗಳ ಪ್ರಶಸ್ತಿ ಮೊತ್ತವನ್ನು ಕ್ರಮವಾಗಿ ₹2.6 ಕೋಟಿ ಮತ್ತು ₹1.26 ಕೋಟಿಗೆ ಏರಿಸಲಾಗಿದೆ.

ಸಿ.ಕೆ.ನಾಯ್ಡು ಟ್ರೋಫಿ: ರಾಜ್ಯ ತಂಡಕ್ಕೆ ಗೆಲುವು

ಬೆಂಗಳೂರು: ಸಾಂಘಿಕ ಬೌಲಿಂಗ್ ಪ್ರದರ್ಶನ ನೀಡಿದ ಕರ್ನಾಟಕ ತಂಡ, ರಾಮನಗರದ ಕೌಶಿಕಿ ಕ್ರಿಕೆಟ್ ಮೈದಾನದಲ್ಲಿ ನಡೆದ ಕರ್ನಲ್ ಸಿ.ಕೆ.ನಾಯ್ಡು ಟ್ರೋಫಿ ಎಲೀಟ್ ಡಿ ಗುಂಪಿನ ಪಂದ್ಯದಲ್ಲಿ ಆತಿಥೇಯ ಉತ್ತರಾಖಂಡ ತಂಡವನ್ನು 197 ರನ್‌ಗಳಿಂದ ಸೋಲಿಸಿತು.

ಈ ಗೆಲುವಿನೊಂದಿಗೆ ಕರ್ನಾಟಕ 51 ಅಂಕಗಳೊಡನೆ ಗುಂಪಿನಲ್ಲಿ ಮೂರನೇ ಸ್ಥಾನದಲ್ಲಿದೆ. ಛತ್ತೀಸಗಢ (60 ಅಂಕ) ಮತ್ತು ಉತ್ತರ ಪ್ರದೇಶ (52) ಮೊದಲ ಎರಡು ಸ್ಥಾನದಲ್ಲಿವೆ.

ಭಾನುವಾರ 7 ವಿಕೆಟ್‌ಗಳೊಡನೆ 122 ರನ್ ಗಳಿಸಿದ್ದ ಉತ್ತರಾಖಂಡ ಪಂದ್ಯದ ಅಂತಿಮ ದಿನವಾದ ಸೋಮವಾರ ಬೇಗ ಶರಣಾಗಬಹುದೆಂಬ ನಿರೀಕ್ಷೆಯಿತ್ತು. ಆದರೆ ಸೋಲುವ ಮೊದಲು ಹೋರಾಟ ತೋರಿತು. ಇಶಾಗ್ರ ಜಗೂರಿ (88) ಅವರು ದೇವಾಂಶ್ ಜೊತೆ ಎಂಟನೇ ವಿಕೆಟ್‌ಗೆ 103 ರನ್ ಸೇರಿಸಿದರು. ಕರ್ನಾಟಕ ತಂಡವು ತನ್ನ ಮುಂದಿನ ಪಂದ್ಯವನ್ನು ಇದೇ 13 ರಿಂದ 16ರ ವರೆಗೆ ಹಿಮಾಚಲ ಪ್ರದೇಶ ವಿರುದ್ಧ ಆಡಲಿದೆ.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 244 ಮತ್ತು 8ಕ್ಕೆ 368 ಡಿ; ಉತ್ತರಾಖಂಡ: 160 ಮತ್ತು 61.3 ಓವರುಗಳಲ್ಲಿ 255 (ಆದಿತ್ಯ ನೈತಾನಿ 31, ಇಶಾಗ್ರ ಜಗೂರಿ 88, ದೇವಾಂಶ್ 45; ಮನ್ವಂತಕುಮಾರ್ ಎಲ್. 62ಕ್ಕೆ3, ಸಮಿತ್ ದ್ರಾವಿಡ್ 39ಕ್ಕೆ2, ಹಾರ್ದಿಕ್ ರಾಜ್ 66ಕ್ಕೆ3, ಶಶಿ ಕುಮಾರ್ ಕೆ. 24ಕ್ಕೆ2).

ಸ್ವರ್ಣ ತಪ್ಪಿಸಿಕೊಂಡ ಮನು

ಪದಕದೊಂದಿಗೆ ಮನು ಭಾಕರ್, ಎನ್‌ಗುಯೆನ್ ಥುಯ್ ತ್ರಾಂಗ್ ಹಾಗೂ ಇಶಾ ಸಿಂಗ್ ಎನ್‌ಆರ್‌ಎಐ ಚಿತ್ರ

ನವದೆಹಲಿ (ಪಿಟಿಐ): ಒಲಿಂಪಿಯನ್ ಮನು ಭಾಕರ್ ಅವರು ಏಷ್ಯಾ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಸೋಮವಾರ ಬೆಳ್ಳಿ ಪದಕ ಜಯಿಸಿದರು. ವಿಯೆಟ್ನಾಂನ ಎನ್‌ಗುಯೆನ್ ಥುಯ್ ತ್ರಾಂಗ್ ಸ್ವರ್ಣ ಗೆದ್ದರೆ, ಇಶಾ ಸಿಂಗ್ ಕಂಚು ತಮ್ಮದಾಗಿಸಿಕೊಂಡರು.

ನಿಖರ ಗುರಿಯಿಡುವಲ್ಲಿ ಯಶಸ್ವಿಯಾದ ಮನು ಹಾಗೂ ಎನ್‌ಗುಯೆನ್ ಫೈನಲ್ ಸುತ್ತಿನಲ್ಲಿ ತಲಾ 35 ಅಂಕ ಗಳಿಸಿದರು. ಹೀಗಾಗಿ, ವಿಜೇತರ ನಿರ್ಣಯಕ್ಕೆ ಶೂಟ್–ಆಫ್ ಸ್ಪರ್ಧೆ ನಡೆಸಲಾಯಿತು. ಎನ್‌ಗುಯೆನ್ 5ರಲ್ಲೂ ಯಶಸ್ವಿಯಾದರೆ, ಮನು 4ರಲ್ಲಿ ಯಶಸ್ವಿಯಾದರು.

589 ಅಂಕಗಳೊಂದಿಗೆ ಕ್ವಾಲಿಫಿಕೇಶನ್ ಸುತ್ತಿನಲ್ಲಿ ಮೊದಲ ಸ್ಥಾನ ಪಡೆದಿದ್ದ ಇಶಾ ಸಿಂಗ್ ಫೈನಲ್‌ನಲ್ಲಿ 30 ಅಂಕ ಗಳಿಸಿದರು. ಭಾರತದ ಮತ್ತೊಬ್ಬ ಶೂಟರ್ ರಿದಮ್ ಸಂಗ್ವಾನ್ (27) ನಾಲ್ಕನೇ ಸ್ಥಾನ ಪಡೆದರು.

ಮನು, ಇಶಾ ಹಾಗೂ ರಿದಮ್ ಅವರು ಟೀಮ್ ವಿಭಾಗದಲ್ಲಿ ಸ್ವರ್ಣದ ಪದಕ (ಒಟ್ಟು 1,751 ಅಂಕ) ತಮ್ಮದಾಗಿಸಿಕೊಂಡರು. ತೈವಾನ್ (1,735) ಹಾಗೂ ವಿಯೆಟ್ನಾಂ (1,729) ಕ್ರಮವಾಗಿ ರಜತ ಹಾಗೂ ಕಂಚು ಜಯಿಸಿದವು.

ಜೂನಿಯರ್ ಮಹಿಳೆಯರ 25 ಮೀ. ಪಿಸ್ತೂಲ್‌ನಲ್ಲಿ ಭಾರತದ ನಾಮ್ಯ ಕಪೂರ್ ಚಿನ್ನಕ್ಕೆ ಕೊರಳೊಡ್ಡಿದರು. ಇಂಡೋನೇಷ್ಯಾದ ರಿಹಾದತ್ ಅಸೀಫಾ ಬೆಳ್ಳಿ ಗೆದ್ದರೆ, ಅಂಜಲಿ ಭಾಗವತ್ ಕಂಚು ಜಯಿಸಿದರು. ಭಾರತದ ಶೂಟರ್‌ಗಳು ಟೀಮ್ ವಿಭಾಗದಲ್ಲಿಯೂ ಪ್ರಶಸ್ತಿ ಗೆದ್ದುಕೊಂಡರು.

ಬಹಿಷ್ಕಾರ ನಿರ್ಧಾರ ಕೈಬಿಟ್ಟ ಪಾಕ್

• ನಿಗದಿಯಂತೆ ಕೊಲಂಬೊದಲ್ಲಿ 15ರಂದು ಭಾರತ–ಪಾಕಿಸ್ತಾನ ಪಂದ್ಯ • 10 ದಿನಗಳ ಪ್ರಹಸನಕ್ಕೆ ತೆರೆ

ಇಸ್ಲಾಮಾಬಾದ್/ಢಾಕಾ (ಪಿಟಿಐ): ಇದೇ 15ರಂದು ಭಾರತದ ವಿರುದ್ಧ ನಡೆಯಲಿರುವ ಟಿ20 ವಿಶ್ವಕಪ್ ಪಂದ್ಯದಲ್ಲಿ ಪಾಕಿಸ್ತಾನ ಕ್ರಿಕೆಟ್ ತಂಡವನ್ನು ಕಣಕ್ಕಿಳಿಸಲು ಪಾಕಿಸ್ತಾನ ಸರ್ಕಾರ ಒಪ್ಪಿಗೆ ನೀಡಿದೆ. ಇದರೊಂದಿಗೆ ಹತ್ತು ದಿನಗಳ ಪ್ರಹಸನಕ್ಕೆ ತೆರೆಬಿದ್ದಿದೆ.

ಶ್ರೀಲಂಕಾ ಮತ್ತು ಬಾಂಗ್ಲಾದೇಶದವರು ಕ್ರಿಕೆಟ್ ಆಡಲು ಒಪ್ಪಿಸಿದ ನಂತರ ಪಾಕ್ ಸರ್ಕಾರದಿಂದ ಈ ನಿರ್ಧಾರ ಹೊರಬಿದ್ದಿದೆ. ಸ್ನೇಹಪರ ರಾಷ್ಟ್ರಗಳ ಕೋರಿಕೆಯ ಮೇರೆಗೆ ಪಾಕ್ ತಂಡಕ್ಕೆ ಭಾರತದ ವಿರುದ್ಧ ಆಡಲು ಅನುಮತಿ ನೀಡಲಾಗಿದೆ ಎಂದು ಪಾಕಿಸ್ತಾನ ಸರ್ಕಾರ ತಡರಾತ್ರಿ ಬಿಡುಗಡೆ ಮಾಡಿದ ಪ್ರಕಟಣೆಯಲ್ಲಿ ತಿಳಿಸಿದೆ.

ಆಟದ ಹಿತದೃಷ್ಟಿಯಿಂದ ಬಹಿಷ್ಕಾರ ನಿರ್ಧಾರದಿಂದ ಹಿಂದೆ ಸರಿಯುವಂತೆ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯ (ಬಿಸಿಬಿ) ಮುಖ್ಯಸ್ಥ ಅಮಿನುಲ್ ಇಸ್ಲಾಂ ಅವರು ಪಾಕಿಸ್ತಾನಕ್ಕೆ ಮನವಿ ಮಾಡಿದ್ದರು.

ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ದಿಸಾನಾಯಕೆ ಅವರೂ ಪಾಕಿಸ್ತಾನ ಪ್ರಧಾನಿ ಶಹಬಾಜ್ ಶರೀಫ್ ಅವರಿಗೆ ಕರೆ ಮಾಡಿ ಬಹಿಷ್ಕಾರದ ಕರೆಯನ್ನು ಹಿಂತೆಗೆದುಕೊಳ್ಳುವಂತೆ ಒತ್ತಾಯಿಸಿದ್ದರು. ಇದರ ಬೆನ್ನಲ್ಲೇ ಪಾಕ್ ಸರ್ಕಾರದ ನಿರ್ಧಾರ ಕೈಗೊಂಡಿದೆ. ಈ ಬೆಳವಣಿಗೆಯಿಂದಾಗಿ ಬಹುನಿರೀಕ್ಷಿತ ಭಾರತ-ಪಾಕಿಸ್ತಾನ ನಡುವಿನ ಎ ಗುಂಪಿನ ಪಂದ್ಯವು ಕೊಲಂಬೊದಲ್ಲಿ ನಿಗದಿಯಂತೆ ನಡೆಯಲಿದೆ.

ಈ ಬೆಳವಣಿಗೆಗೂ ಮುನ್ನ ಮಾತನಾಡಿದ್ದ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಮುಖ್ಯಸ್ಥ ಮೊಹ್ಸಿನ್ ನಖ್ವಿ, ಭಾರತ ವಿರುದ್ಧ ಪಂದ್ಯವನ್ನು ತಮ್ಮ ದೇಶ ಬಹಿಷ್ಕರಿಸುವುದಕ್ಕೆ ಸಂಬಂಧಿಸಿ ಅಂತಿಮ ನಿರ್ಧಾರ ಮುಂದಿನ 24 ಗಂಟೆಗಳಲ್ಲಿ ಸ್ಪಷ್ಟವಾಗಲಿದೆ ಎಂದು ತಿಳಿಸಿದ್ದರು.

ಪಾಕಿಸ್ತಾನ ತಂಡದ ನಾಯಕ ಸಲ್ಮಾನ್ ಆಘಾ ಮತ್ತು ಭಾರತ ತಂಡದ ನಾಯಕ ಸೂರ್ಯಕುಮಾರ್ ಪಿಟಿಐ ಸಂಗ್ರಹ ಚಿತ್ರ

ಬಿಸಿಬಿ ಮುಖ್ಯಸ್ಥ ಅಮಿನುಲ್ ಇಸ್ಲಾಂ ಅವರನ್ನು ಒಳಗೊಂಡಂತೆ ಐಸಿಸಿ ಜೊತೆ ಸರಣಿ ಮಾತುಕತೆ ನಡೆಸಿರುವುದನ್ನು ಅವರು ಒಪ್ಪಿಕೊಂಡರು. ಬಹಿಷ್ಕಾರದ ನಂತರ ಉದ್ಭವಿಸಿರುವ ಕೆಲವು ವಿಷಯಗಳಿಗೆ ಸಂಬಂಧಿಸಿ ಐಸಿಸಿ ಮತ್ತು ಬಾಂಗ್ಲಾದೇಶ ಕ್ರಿಕೆಟ್ ಮಂಡಳಿಯಿಂದ ಪ್ರತಿಕ್ರಿಯೆಗಳಿಗೆ ಕಾಯುತ್ತಿರುವುದಾಗಿ ನಖ್ವಿ ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದರು.

ಬಿಸಿಬಿಗೆ ನಿರ್ಬಂಧ ವಿಧಿಸುವುದಿಲ್ಲ: ಐಸಿಸಿ

ದುಬೈ (ಪಿಟಿಐ): ಭಾರತದಲ್ಲಿ ಟಿ20 ವಿಶ್ವಕಪ್ ಪಂದ್ಯಗಳನ್ನು ಆಡಲು ನಿರಾಕರಿಸಿದ ಬಾಂಗ್ಲಾದೇಶ ಕ್ರಿಕೆಟ್ ಮಂಡಳಿ (ಬಿಸಿಬಿ) ಮೇಲೆ ಯಾವುದೇ ನಿರ್ಬಂಧ ಅಥವಾ ದಂಡ ವಿಧಿಸುವುದಿಲ್ಲ ಎಂದು ಐಸಿಸಿ ಸೋಮವಾರ ತಿಳಿಸಿದೆ.

ಬಿಸಿಬಿ ಮತ್ತು ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಜೊತೆ ಮಾತುಕತೆಯ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಬಿಸಿಬಿಗೆ ಯಾವುದೇ ಆರ್ಥಿಕ, ಕ್ರೀಡಾ ಅಥವಾ ಆಡಳಿತಾತ್ಮಕ ನಿರ್ಬಂಧ ವಿಧಿಸುವುದಿಲ್ಲ.

ಮಾತುಕತೆಯ ಭಾಗವಾಗಿ 2028 ಮತ್ತು 2031ರ ನಡುವೆ ಐಸಿಸಿ ಟೂರ್ನಿಯೊಂದಕ್ಕೆ ಬಾಂಗ್ಲಾದೇಶ ಆತಿಥ್ಯವನ್ನೂ ವಹಿಸಲಿದೆ ಎಂದು ಐಸಿಸಿ ಹೇಳಿಕೆಯಲ್ಲಿ ತಿಳಿಸಿದೆ.

ಭದ್ರತಾ ಕಳವಳಗಳನ್ನು ವ್ಯಕ್ತಪಡಿಸಿ ಬಾಂಗ್ಲಾದೇಶವು ಭಾರತಕ್ಕೆ ತನ್ನ ತಂಡವನ್ನು ಕಳುಹಿಸಲು ನಿರಾಕರಿಸಿತ್ತು. ಅದರ ಬದಲು ಸ್ಕಾಟ್ಲೆಂಡ್ ಅವಕಾಶ ಪಡೆದಿತ್ತು.

‘ನಾವು ಅವರೊಂದಿಗೆ (ಐಸಿಸಿ) ಚರ್ಚೆ ನಡೆಸಿದ್ದೇವೆ. ಈ ಬಗ್ಗೆ ಈಗ ಯಾವುದೇ ವಿವರ ನೀಡುವುದು ನನಗೆ ಸೂಕ್ತವೆನಿಸುತ್ತಿಲ್ಲ. ಅವರ ಪ್ರತಿಕ್ರಿಯೆಗಳು ಬಂದ ನಂತರ ನಾವು ನಿರ್ಧಾರಕ್ಕೆ ಬರುತ್ತೇವೆ. ಐಸಿಸಿ ಉತ್ತರಿಸಿದ ಬಳಿಕ ನಾವು ಮತ್ತೆ ಪ್ರಧಾನಿಯವರ (ಶಹಬಾಜ್ ಶರೀಫ್) ಬಳಿ ಹೋಗುತ್ತೇವೆ’ ಎಂದು ಅವರು ಹೇಳಿದ್ದರು.

‘ನಾವು ನಮ್ಮ ಅತಿಥಿಗಳನ್ನು ಗೌರವಿಸುತ್ತೇವೆ. ಐಸಿಸಿ ನಮ್ಮ ಬಳಿಗೆ ಬಂದಿದೆ. ನಾವು ಅವರಿಗೆ ಗೌರವ ಕೊಡುತ್ತೇವೆ. ಐಸಿಸಿ ಮತ್ತು ಬಾಂಗ್ಲಾದೇಶ ನಡುವಣ ಮಾತುಕತೆ ಪ್ರಗತಿಯಲ್ಲಿರುವ ಕಾರಣ ಈಗಿನ ಪರಿಸ್ಥಿತಿಯಲ್ಲಿ ನಾವೇನೂ ಹೇಳುವಂತಿಲ್ಲ. ಬಾಂಗ್ಲಾದೇಶದ ನಿಲುವು ಸರಿಯಾಗಿದ್ದ ಕಾರಣ ನಾವು ಅವರ ಬೆನ್ನಿಗೆ ನಿಂತೆವು’ ಎಂದೂ ಅವರು ಹೇಳಿದ್ದರು.

ಭದ್ರತೆಯ ಆತಂಕದ ಕಾರಣಗಳನ್ನು ಒಡ್ಡಿ ಭಾರತದಲ್ಲಿ ವಿಶ್ವಕಪ್ ಪಂದ್ಯಗಳನ್ನು ಆಡಲು ನಿರಾಕರಿಸಿದ ನಂತರ ಬಾಂಗ್ಲಾದೇಶ ತಂಡವನ್ನು ಟೂರ್ನಿಯಿಂದ ಹೊರಗಿಡಲಾಗಿದೆ. ಐಸಿಸಿ ಕ್ರಮ ಕೈಗೊಳ್ಳುವ ಎಚ್ಚರಿಕೆಯಿಂದ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಒತ್ತಡಕ್ಕೆ ಸಿಲುಕಿದೆ ಎಂಬ ಮಾತುಗಳನ್ನು ಅವರು ತಳ್ಳಿಹಾಕಿದ್ದರು.

ಐಸಿಸಿಯ ಡೆಪ್ಯೂಟಿ ಚೇರ್‌ಮನ್ ಇಮ್ರಾನ್ ಖ್ವಾಜಾ ಅವರೊಂದಿಗೆ ಭಾನುವಾರ ನಡೆಸಿದ ಮಾತುಕತೆಯ ವೇಳೆ ನಖ್ವಿ ಅವರು ಕೆಲವು ಬೇಡಿಕೆಗಳನ್ನು ಮುಂದಿಟ್ಟಿದ್ದರು ಎನ್ನಲಾಗಿದೆ. ಭಾರತ–ಪಾಕಿಸ್ತಾನ ನಡುವಣ ದ್ವಿಪಕ್ಷೀಯ ಸರಣಿ ಪುನರಾರಂಭ ಮಾಡುವುದು, ಬಾಂಗ್ಲಾದೇಶ ಒಳಗೊಂಡು ತ್ರಿಕೋನ ಸರಣಿ ನಡೆಸುವುದು ಇವುಗಳಲ್ಲಿ ಒಳಗೊಂಡಿದೆ. ಭಾರತ– ಪಾಕಿಸ್ತಾನ ದ್ವಿಪಕ್ಷೀಯ ಸರಣಿ ಪುನರಾರಂಭಿಸುವುದು ಐಸಿಸಿ ವ್ಯಾಪ್ತಿಗೆ ಬರುತ್ತಿಲ್ಲ. ಆದರೆ ತ್ರಿಕೋನ ಸರಣಿಯ ಪ್ರಸ್ತಾವವನ್ನು ಐಸಿಸಿ ತಕ್ಷಣಕ್ಕೆ ತಿರಸ್ಕರಿಸಿದೆ.

ಬಾಂಗ್ಲಾದೇಶ ತಂಡವನ್ನು ವಿಶ್ವಕಪ್‌ನಿಂದ ಹೊರಗಿಟ್ಟ ಐಸಿಸಿ ಕ್ರಮವನ್ನು ಪಾಕಿಸ್ತಾನ ವಿರೋಧಿಸಿತ್ತು. ಬಾಂಗ್ಲಾಕ್ಕೆ ಬೆಂಬಲ ಸೂಚಿಸಿ ಭಾರತ ವಿರುದ್ಧ ಪಂದ್ಯಕ್ಕೆ ಪಾಕಿಸ್ತಾನ ಬಹಿಷ್ಕಾರ ಹಾಕಿತ್ತು.

ಪಾಕ್‌ಗೆ ಸೋಲಿನ ನೆನಪು ಅಳಿಸುವ ಗುರಿ

ಕೊಲಂಬೊ (ಪಿಟಿಐ): ಅಸ್ಥಿರ ಆಟವಾಡುವ ಪಾಕಿಸ್ತಾನ ತಂಡವು 20 ತಿಂಗಳ ಹಿಂದೆ ಟಿ20 ವಿಶ್ವಕಪ್‌ನಲ್ಲಿ ಆತಿಥೇಯ ಅಮೆರಿಕ ಎದುರು ಆಘಾತ ಅನುಭವಿಸಿತ್ತು. ಈಗ ಆ ಕರಾಳ ನೆನಪನ್ನು ಅಳಿಸಿಹಾಕುವ ಗುರಿಯೊಡನೆ ಪಾಕಿಸ್ತಾನ ತಂಡವು ಮಂಗಳವಾರ ಇಲ್ಲಿ ನಡೆಯುವ ‘ಎ’ ಗುಂಪಿನ ಪಂದ್ಯದಲ್ಲಿ ಅಮೆರಿಕ ತಂಡವನ್ನು ಎದುರಿಸಲಿದೆ.

ಆ ಪಂದ್ಯದ ಮೂಲಕ ಕ್ರಿಕೆಟ್ ಜಗತ್ತಿಗೆ ತನ್ನ ಸಾಮರ್ಥ್ಯ ಪರಿಚಯಿಸಿದ ಅಮೆರಿಕ ತಂಡ ದೃಢಸಂಕಲ್ಪದಿಂದ ಆಡುತ್ತಿದೆ. ಈ ಬಾರಿ ಮೊದಲ ಪಂದ್ಯದಲ್ಲಿ ಭಾರತ ಎದುರು ಸೋತಿರುವ ಅಮೆರಿಕ ತಂಡವು ಹೆಚ್ಚಿನ ಸ್ಫೂರ್ತಿಯೊಡನೆ ಪಾಕ್ ವಿರುದ್ಧ ಕಣಕ್ಕಿಳಿಯಲಿದೆ.


ಪಾಕಿಸ್ತಾನ ತಂಡದ ವೇಗಿ ಶಾಹೀನ್ ಶಾ ಅಫ್ರಿದಿ

ಎರಡೂ ತಂಡಗಳು ಬ್ಯಾಟಿಂಗ್ ಸಮಸ್ಯೆ ಎದುರಿಸಿವೆ. ನೆದರ್ಲೆಂಡ್ಸ್ ವಿರುದ್ಧ ಮೊದಲ ಪಂದ್ಯದಲ್ಲಿ ಸುಲಭ ಗೆಲುವಿನತ್ತ ಸಾಗಿದ್ದ ಪಾಕ್ ನಂತರ ಮಧ್ಯಮ ಕ್ರಮಾಂಕದಲ್ಲಿ ಕುಸಿತ ಕಂಡು ಪರದಾಡಿತ್ತು. ಫಾಹೀಂ ಅಶ್ರಫ್ ಅವರ ಮಿಂಚಿನ ಆಟ ತಂಡವನ್ನು ಕಾಪಾಡಿತ್ತು.


ಮೊನಾಂಕ್ ಪಟೇಲ್

ವಾಂಖೆಡೆ ಕ್ರೀಡಾಂಗಣದಲ್ಲಿ ಅಮೆರಿಕ ತಂಡವು ಮೊದಲ ಪಂದ್ಯದಲ್ಲಿ ಸ್ಫೂರ್ತಿಯುತ ಬೌಲಿಂಗ್ ಪ್ರದರ್ಶನಿಸಿ ಹಾಲಿ ಚಾಂಪಿಯನ್ ಭಾರತ ತಂಡವನ್ನು ಎಲ್ಲ ರೀತಿ ಒತ್ತಡಕ್ಕೆ ಸಿಲುಕಿಸಿತ್ತು. ಸೂರ್ಯ ಕುಮಾರ್ ಆಟದಿಂದ ಭಾರತ ಹೋರಾಟದ ಮೊತ್ತ ಗಳಿಸಿತು. ಆದರೆ ಅಮೆರಿಕದ ಬ್ಯಾಟರ್‌ಗಳು, ಬೌಲರ್‌ಗಳ ಶ್ರಮಕ್ಕೆ ಪೂರಕವಾದ ಆಟವಾಡಲು ವಿಫಲರಾದರು.

ಚುಟುಕು ಕ್ರಿಕೆಟ್‌ಗೆ ಪುನರಾಗಮನ ಮಾಡಿರುವ ನಾಯಕ ಬಾಬರ್ ಆಜಂ ಅವರಿಗೆ ಉತ್ತಮ ಆಟ ಆಡಬೇಕಾದ ಒತ್ತಡವಿದೆ. ಆರಂಭ ಆಟಗಾರ ಸಯಿಮ್ ಅಯೂಬ್ ಬ್ಯಾಟಿಂಗ್‌ನಲ್ಲಿ ಮಿಂಚಿಲ್ಲ. ಆದರೆ ಸ್ಪಿನ್ನರ್ ಆಗಿ ಯಶಸ್ಸು ಕಂಡಿದ್ದಾರೆ.

ತಂಡದ ಆಟಗಾರರು ಒತ್ತಡ ನಿಭಾಯಿಸುವುದನ್ನು ಕಲಿಯಬೇಕಾಗಿದೆ ಎಂದು ನಾಯಕ ಸಲ್ಮಾನ್ ಅಲಿ ಆಘಾ ಅಭಿಪ್ರಾಯಪಟ್ಟಿದ್ದಾರೆ. ‘ನಾವು ಉತ್ತಮ ಆರಂಭ ಪಡೆದ ಮೇಲೆ ಕೆಲವು ವಿಕೆಟ್‌ಗಳನ್ನು ಕಳೆದುಕೊಂಡು ಒತ್ತಡಕ್ಕೆ ಸಿಲುಕಿದ್ದೆವು’ ಎಂದು ನೆದರ್ಲೆಂಡ್ಸ್ ವಿರುದ್ಧ ಪಂದ್ಯದ ಬಗ್ಗೆ ಪ್ರತಿಕ್ರಿಯಿಸಿದರು.

ಅಮೆರಿಕ ತಂಡವೂ ಬ್ಯಾಟಿಂಗ್ ಬಲಪಡಿಸುವತ್ತ ಗಮನ ಹರಿಸಬೇಕಾಗಿದೆ. ‘ಭಾರತ ವಿರುದ್ಧದ ಪಂದ್ಯದಲ್ಲಿ ಕೆಟ್ಟ ಹೊಡೆತಗಳಿಂದ ನಾವು ವಿಕೆಟ್ ಕಳೆದುಕೊಂಡೆವು’ ಎಂದು ನಾಯಕ ಮೊನಾಂಕ್ ಪಟೇಲ್ ಒಪ್ಪಿಕೊಂಡರು. ದಕ್ಷಿಣ ಆಫ್ರಿಕಾ ಸಂಜಾತ ಶಾಡ್ಲಿ ವಾನ್ ಶಾಲ್ವಿಕ್ ನೇತೃತ್ವದಲ್ಲಿ ಬೌಲರ್‌ಗಳ ಪ್ರದರ್ಶನ ಗಮನ ಸೆಳೆದಿದೆ.

ವಿಶ್ವಕಪ್‌ಗೆ ಮೊದಲು ಅಮೆರಿಕ ತಂಡವು ಇಲ್ಲಿನ ಪರಿಸ್ಥಿತಿಗೆ ಒಗ್ಗಿಕೊಳ್ಳಲು ಶ್ರೀಲಂಕಾದಲ್ಲಿ ಅಭ್ಯಾಸ ನಡೆಸಿತ್ತು. ಮೊದಲ ಪಂದ್ಯದಲ್ಲಿ ಫೀಲ್ಡಿಂಗ್ ವೇಳೆ ಗಾಯಗೊಂಡ ವೇಗಿ ಅಲಿ ಖಾನ್ ಅವರ ಫಿಟ್ನೆಸ್ ಬಗ್ಗೆ ಪ್ರಶ್ನೆಗಳು ಉಳಿದಿವೆ.

ಇಂದಿನ ಪಂದ್ಯ

ನೆದರ್ಲೆಂಡ್ಸ್ Vs ನಮೀಬಿಯಾ		ಬೆಳಿಗ್ಗೆ 11 ರಿಂದ
ನ್ಯೂಜಿಲೆಂಡ್ Vs ಯುಎಇ		ಮಧ್ಯಾಹ್ನ 3
ಪಾಕಿಸ್ತಾನ Vs ಅಮೆರಿಕ		ರಾತ್ರಿ 7

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಸ್ಟಾರ್

ಎನ್‌ಗಿಡಿ ಮಿಂಚು, ಮರ್ಕರಂ ಅರ್ಧಶತಕ

ದಕ್ಷಿಣ ಆಫ್ರಿಕಾ ತಂಡ ಶುಭಾರಂಭ

ಅಹಮದಾಬಾದ್ (ಎಎಫ್‌ಪಿ): ವೇಗಿ ಲುಂಗಿ ಎನ್‌ಗಿಡಿ (31ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ದಾಳಿ ಮತ್ತು ನಾಯಕ ಏಡನ್ ಮರ್ಕರಂ (59;32ಎ) ಅವರ ಮಿಂಚಿನ ಅರ್ಧಶತಕದ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಡಿ ಗುಂಪಿನ ಪಂದ್ಯದಲ್ಲಿ ಹಾಲಿ ರನ್ನರ್ಸ್ ಅಪ್ ದಕ್ಷಿಣ ಆಫ್ರಿಕಾ ತಂಡವು 57 ರನ್‌ಗಳಿಂದ ಅನನುಭವಿ ಕೆನಡಾ ತಂಡವನ್ನು ಸುಲಭವಾಗಿ ಮಣಿಸಿತು.

214 ರನ್‌ಗಳ ಕಠಿಣ ಗುರಿಯನ್ನು ಬೆನ್ನಟ್ಟಿದ ಕೆನಡಾ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗೆ 156 ರನ್ ಗಳಿಸಿ ಹೋರಾಟ ಮುಗಿಸಿತು. ಮೂರನೇ ಕ್ರಮಾಂಕದ ನವನೀತ್ ಧಲಿವಾಲ್ (64;49ಎ, 4x7, 6x1) ಮತ್ತು ಹರ್ಷ್ ಥಾಕರ್ (33;29ಎ) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ.

ಇದಕ್ಕೂ ಮೊದಲು ಟಾಸ್ ಗೆದ್ದ ಕೆನಡಾ ಫೀಲ್ಡಿಂಗ್ ಆಯ್ದುಕೊಂಡಿತು. ಬ್ಯಾಟಿಂಗ್‌ಗೆ ಇಳಿದ ದಕ್ಷಿಣ ಆಫ್ರಿಕಾ ತಂಡಕ್ಕೆ ಮರ್ಕರಂ ಮತ್ತು ಕ್ವಿಂಟನ್ ಡಿಕಾಕ್ (25;22ಎ) ಉತ್ತಮ ಆರಂಭ ನೀಡಿದರು. ಮೊದಲ ವಿಕೆಟ್ ಜೊತೆಯಾಟದಲ್ಲಿ 6.5 ಓವರ್‌ಗಳಲ್ಲಿ 70 ರನ್ ಸೇರಿಸಿದರು.

ಡಿಕಾಕ್ ನಿರ್ಗಮನದ ಬಳಿಕ ಮರ್ಕರಂ ಅವರನ್ನು ಸೇರಿಕೊಂಡ ರಿಯಾನ್ ರಿಕಲ್ಟನ್ (33;21ಎ) ತಂಡದ ಮೊತ್ತವನ್ನು ಮತ್ತಷ್ಟು ಹಿಗ್ಗಿಸಿದರು. ಒಂದು ವಿಕೆಟ್‌ಗೆ 126 ರನ್ ಗಳಿಸಿ ಉತ್ತಮ ಸ್ಥಿತಿಯಲ್ಲಿದ್ದ ತಂಡಕ್ಕೆ ಎಡಗೈ ಸ್ಪಿನ್ನರ್ ಅಂಶ್ ಪಟೇಲ್ (31ಕ್ಕೆ 3) ಕಡಿವಾಣ ಹಾಕುವ ಪ್ರಯತ್ನ ನಡೆಸಿದರು. 12 ರನ್‌ಗಳ ಅಂತರದಲ್ಲಿ ಮರ್ಕರಂ, ರಿಕಲ್ಟನ್ ಮತ್ತು ಡೆವಾಲ್ಡ್ ಬ್ರೆವಿಸ್ (6) ಅವರಿಗೆ ಅಂಶ್ ಪೆವಿಲಿಯನ್ ದಾರಿ ತೋರಿಸಿದರು.

ಈ ಹಂತದಲ್ಲಿ ಡೇವಿಡ್ ಮಿಲ್ಲರ್ (ಔಟಾಗದೇ 39;23ಎ) ಮತ್ತು ಟ್ರಿಸ್ಟನ್ ಸ್ಟಬ್ಸ್ (ಔಟಾಗದೇ 34;19ಎ) ಜವಾಬ್ದಾರಿಯುತ ಆಟ ಪ್ರದರ್ಶಿಸಿದರು. ಎದುರಾಳಿ ಬೌಲರ್‌ಗಳ ಮೇಲೆ ಸವಾರಿ ನಡೆಸಿದ ಅವರು ಮುರಿಯದ ಐದನೇ ವಿಕೆಟ್ ಜೊತೆಯಾಟದಲ್ಲಿ 75 (39ಎ) ರನ್ ಸೇರಿಸಿದರು. ಹೀಗಾಗಿ, ದಕ್ಷಿಣ ಆಫ್ರಿಕಾ ತಂಡವು 4 ವಿಕೆಟ್‌ಗೆ 213 ರನ್ ಗಳಿಸಿತು. ಇದು ಹಾಲಿ ಟೂರ್ನಿಯಲ್ಲಿ ಈವರೆಗಿನ ಅತ್ಯಧಿಕ ಮೊತ್ತವಾಗಿದೆ.

ವಿಕೆಟ್ ಪಡೆದ ಲುಂಗಿ ಎನ್‌ಗಿಡಿ ಅವರನ್ನು ಅಭಿನಂದಿಸಿದ ನಾಯಕ ಏಡನ್ ಮರ್ಕರಂ ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರು: ದಕ್ಷಿಣ ಆಫ್ರಿಕಾ: 20 ಓವರ್‌ಗಳಲ್ಲಿ 4 ವಿಕೆಟ್‌ಗೆ 213 (ಏಡನ್ ಮರ್ಕರಂ 59, ಕ್ವಿಂಟನ್ ಡಿಕಾಕ್ 25, ರಿಯಾನ್ ರಿಕಲ್ಟನ್ 33, ಡೇವಿಡ್ ಮಿಲ್ಲರ್ ಔಟಾಗದೇ 39, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 34; ಅಂಶ್ ಪಟೇಲ್ 31ಕ್ಕೆ 3) ಕೆನಡಾ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 156 (ನವನೀತ್ ಧಲಿವಾಲ್ 64, ಹರ್ಷ್ ಥಾಕರ್ 33; ಲುಂಗಿ ಎನ್‌ಗಿಡಿ 31ಕ್ಕೆ 4, ಮಾರ್ಕೊ ಯಾನ್ಸೆನ್ 30ಕ್ಕೆ 2). ಫಲಿತಾಂಶ: ದಕ್ಷಿಣ ಆಫ್ರಿಕಾಕ್ಕೆ 57 ರನ್ ಜಯ. ಪಂದ್ಯದ ಆಟಗಾರ: ಲುಂಗಿ ಎನ್‌ಗಿಡಿ

ಜಿಂಬಾಬ್ವೆಗೆ ಮಣಿದ ಒಮಾನ್

ಕೊಲಂಬೊ (ಪಿಟಿಐ): ಬೌಲರ್‌ಗಳ ಪರಿಣಾಮಕಾರಿ ದಾಳಿಯ ಬಳಿಕ ಆರಂಭಿಕ ಆಟಗಾರ ಬ್ರಿಯಾನ್ ಬೆನೆಟ್ ಅವರ ಬ್ಯಾಟಿಂಗ್ ಬಲದಿಂದ ಜಿಂಬಾಬ್ವೆ ತಂಡವು ಸೋಮವಾರ ಟಿ20 ವಿಶ್ವಕಪ್‌ನ ಪಂದ್ಯದಲ್ಲಿ ಒಮಾನ್ ವಿರುದ್ಧ ಎಂಟು ವಿಕೆಟ್‌ಗಳ ಸುಲಭ ಜಯ ಸಾಧಿಸಿತು.

ಬಿ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ಜಿಂಬಾಬ್ವೆ ತಂಡವು ಫೀಲ್ಡಿಂಗ್ ಆಯ್ದು ಕೊಂಡಿತು. ಬ್ಯಾಟಿಂಗ್‌ಗೆ ಇಳಿದ ಅನನುಭವಿ ಒಮಾನ್ ತಂಡವು ರಿಚರ್ಡ್ ನ್ಗರವಾ (17ಕ್ಕೆ 3), ಬ್ಲೆಸಿಂಗ್ ಮುಜರಬಾನಿ (16ಕ್ಕೆ 3) ಮತ್ತು ಬ್ರಾಡ್ ಇವಾನ್ಸ್ (18ಕ್ಕೆ 3) ದಾಳಿಗೆ ತತ್ತರಿಸಿತು.

27 ರನ್‌ಗಳಿಗೆ ಪ್ರಮುಖ ಐದು ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ತಂಡಕ್ಕೆ ಸುಫ್ಯಾನ್ ಮೊಹಮೂದ್ (25) ಮತ್ತು ವಿನಾಯಕ್ ಶುಕ್ಲಾ (28) ಕೊಂಚ ಆಸರೆಯಾದರು. ಕೊನೆಯ ಹಂತದಲ್ಲಿ ನದೀಂ ಖಾನ್ (20) ಹೋರಾಟ ನಡೆಸಿ ತಂಡದ ಮೊತ್ತವನ್ನು ನೂರರ ಗಡಿ ದಾಟಿಸಿದರು. 19.5 ಓವರ್‌ಗಳಲ್ಲಿ 103 ರನ್ ಗಳಿಸಿತು.

ಸುಲಭ ಗುರಿಯನ್ನು ಬೆನ್ನಟ್ಟಿದ ಜಿಂಬಾಬ್ವೆ ತಂಡವು 39 ಎಸೆತಗಳು ಬಾಕಿ ಇರುವಂತೆ 2 ವಿಕೆಟ್‌ಗೆ 106 ರನ್ ಗಳಿಸಿ ಟೂರ್ನಿಯಲ್ಲಿ ಶುಭಾರಂಭ ಮಾಡಿತು. ಬ್ರಿಯಾನ್ ಅವರು 36 ಎಸೆತಗಳಲ್ಲಿ ಔಟಾಗದೇ 48 ರನ್ ಗಳಿಸಿದರು. ಬ್ರಿಯಾನ್ ಮುರಿಯದ ಮೂರನೇ ವಿಕೆಟ್ ಜೊತೆಯಾಟದಲ್ಲಿ ಬ್ರೆಂಡನ್ ಟೇಲರ್ (31) ಅವರೊಂದಿಗೆ 68 ರನ್ ಸೇರಿಸಿ, ತಂಡವನ್ನು ಗೆಲುವಿನತ್ತ ಕೊಂಡೊಯ್ದರು. ಜಯಕ್ಕೆ ಆರು ರನ್ ಬೇಕಿದ್ದಾಗ ಬ್ರೆಂಡನ್ ಅವರು ಗಾಯಾಳಾಗಿ ನಿವೃತ್ತರಾದರು. ನಂತರದಲ್ಲಿ ಸಿಕಂದರ್ ರಜಾ (ಔಟಾಗದೇ 5) ಗೆಲುವಿನ ಔಪಚಾರ ಪೂರೈಸಿದರು.

ಜಿಂಬಾಬ್ವೆ ತಂಡದ ಬ್ರಿಯಾನ್ ಬೆನೆಟ್

ಸಂಕ್ಷಿಪ್ತ ಸ್ಕೋರು: ಒಮಾನ್: 19.5 ಓವರ್‌ಗಳಲ್ಲಿ 103 (ವಿನಾಯಕ ಶುಕ್ಲಾ 28, ರಿಚರ್ಡ್ ನ್ಗರವಾ 17ಕ್ಕೆ 3, ಬ್ಲೆಸಿಂಗ್ ಮುಜರಬಾನಿ 16ಕ್ಕೆ 3, ಬ್ರಾಡ್ ಇವಾನ್ಸ್ 18ಕ್ಕೆ 3. ಜಿಂಬಾಬ್ವೆ: 13.3 ಓವರ್‌ಗಳಲ್ಲಿ 2 ವಿಕೆಟ್‌ಗೆ 106 (ಬ್ರಿಯಾನ್ ಬೆನೆಟ್ ಔಟಾಗದೇ 48; ಸುಫ್ಯಾನ್ ಮೊಹಮೂದ್ 12ಕ್ಕೆ 2). ಫಲಿತಾಂಶ: ಜಿಂಬಾಬ್ವೆಗೆ ಎಂಟು ವಿಕೆಟ್‌ಗಳ ಜಯ. ಪಂದ್ಯದ ಆಟಗಾರ: ಬ್ಲೆಸಿಂಗ್ ಮುಜರಬಾನಿ

ಜಾರ್ಜ್ ಅರ್ಧಶತಕ: ಇಟಲಿ ವಿರುದ್ಧ ಸ್ಕಾಟ್ಲೆಂಡ್‌ಗೆ ಸುಲಭ ಗೆಲುವು

ಕೋಲ್ಕತ್ತ (ಪಿಟಿಐ): ಆರಂಭ ಆಟಗಾರ ಜಾರ್ಜ್ ಮುನ್ಸಿ ಅವರ ಆಕ್ರಮಣಕಾರಿ ಅರ್ಧಶತಕದ ನೆರವಿನಿಂದ ಸ್ಕಾಟ್ಲೆಂಡ್ ತಂಡ, ಟಿ20 ವಿಶ್ವಕಪ್‌ಗೆ ಪದಾರ್ಪಣೆ ಮಾಡಿದ ಇಟಲಿ ತಂಡವನ್ನು ಸೋಮವಾರ ನಡೆದ ಪಂದ್ಯದಲ್ಲಿ ಹೆಚ್ಚಿನ ಪ್ರಯಾಸವಿಲ್ಲದೇ ಸೋಲಿಸಿತು.

ಮುನ್ಸಿ 54 ಎಸೆತಗಳಲ್ಲಿ 84 ರನ್ ಸಿಡಿಸಿದರು. ಮೊದಲ ವಿಕೆಟ್‌ಗೆ ಮೈಕೆಲ್ ಜೋನ್ಸ್ (37, 30ಎ) ಜತೆ 126 ರನ್ ಸೇರಿಸಿ ಭದ್ರ ಬುನಾದಿ ಒದಗಿಸಿಕೊಟ್ಟರು. ಸ್ಕಾಟ್ಲೆಂಡ್ 4 ವಿಕೆಟ್‌ಗೆ 207 ರನ್‌ಗಳ ದೊಡ್ಡ ಮೊತ್ತ ಗಳಿಸಿತು. ಉತ್ತರವಾಗಿ ಇಟಲಿ ತಂಡ ಆರಂಭದಲ್ಲಿ ಹೋರಾಟ ತೋರಿ ದರೂ ನಂತರ ಕುಸಿಯಿತು ಒಂದು ಹಂತದಲ್ಲಿ 12 ಓವರುಗಳಲ್ಲಿ 3 ವಿಕೆಟ್‌ಗೆ 113 ರನ್ ಗಳಿಸಿತ್ತು. ಬೆನ್ ಮುನೆಂಟಿ ಮತ್ತು ಅವರ ಸಹೋದರ ಹ್ಯಾರಿ ಸೇರಿಕೊಂಡು ನಾಲ್ಕನೇ ವಿಕೆಟ್‌ಗೆ 73 ರನ್ ಸೇರಿಸಿದ್ದರು. ಆದರೆ ಅನನು ಭವ ಕಾಡಿತು. 21 ರನ್ ಅಂತರ ದಲ್ಲಿ ಆರು ವಿಕೆಟ್‌ಗಳನ್ನು ಕಳೆದು ಕೊಂಡು 134 ರನ್‌ಗಳಿಗೆ (16.4 ಓವರುಗಳಲ್ಲಿ) ಸವಾಲು ಮುಗಿಸಿತು. ಸ್ಕಾಟ್ಲೆಂಡ್‌ನ ಆಫ್ ಸ್ಪಿನ್ನರ್ ಮೈಕೆಲ್ ಲೀಸ್ಕ್ 17 ರನ್ನಿಗೆ 4 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಸ್ಕಾಟ್ಲೆಂಡ್: 20 ಓವರುಗಳಲ್ಲಿ 4 ವಿಕೆಟ್‌ಗೆ 207 (ಜಾರ್ಜ್ ಮುನ್ಸಿ 84, ಮೈಕೆಲ್ ಜೋನ್ಸ್ 37, ಬ್ರಾಂಡನ್ ಮ್ಯಾಕ್‌ಮುಲೆನ್ ಔಟಾಗದೇ 41; ಗ್ರಾಂಟ್ ಸ್ಟೀವರ್ಟ್ 21ಕ್ಕೆ1, ಜೆ.ಜೆ. ಸ್ಮಟ್ಸ್ 38ಕ್ಕೆ1); ಇಟಲಿ: 16.4 ಓವರುಗಳಲ್ಲಿ 134 (ಬೆನ್ ಮುನೆಂಟಿ 62; ಮೈಕೆಲ್ ಲೀಸ್ಕ್ 17ಕ್ಕೆ4, ಮಾರ್ಕ್ ವಾಟ್ 24ಕ್ಕೆ2).

ಮ್ಯಾಡ್ಸನ್‌ಗೆ ಗಾಯ

ಇಟಲಿ ತಂಡ ಈ ಪಂದ್ಯದಲ್ಲಿ ಸೋಲಿನ ಜೊತೆ ಮತ್ತೊಂದು ಹಿನ್ನಡೆ ಅನುಭವಿಸಿತು. ನಾಯಕ ವೇಯ್ನ್ ಮ್ಯಾಡ್ಸನ್ ಅವರು ಸ್ಕಾಟ್ಲೆಂಡ್ ಇನಿಂಗ್ಸ್‌ನ ನಾಲ್ಕನೇ ಓವರಿ ನಲ್ಲಿ ಚೆಂಡನ್ನು ಡೈವ್ ಮಾಡಿ ತಡೆಯುವ ಯತ್ನದಲ್ಲಿ ಎಡಭುಜಕ್ಕೆ ಪೆಟ್ಟುಮಾಡಿಕೊಂಡರು. ನೋವಿನಿಂದ ಕ್ರೀಡಾಂಗಣ ತೊರೆದರು.

42 ವರ್ಷ ವಯಸ್ಸಿನ ಮ್ಯಾಡ್ಸನ್, ದಕ್ಷಿಣ ಆಫ್ರಿಕಾ ಪರ ಅಂತರ ರಾಷ್ಟ್ರೀಯ ಹಾಕಿ ಪಂದ್ಯಗಳನ್ನೂ ಆಡಿದ್ದು, ಕ್ರಿಕೆಟ್‌ನಲ್ಲಿ ಡರ್ಬಿಶೈರ್ ಕೌಂಟಿಗೆ ಆಡಿದ್ದರು. ಅವರು ಲೀಗ್‌ನ ಉಳಿದ ಪಂದ್ಯಗಳಲ್ಲಿ ಆಡುವುದು ಅನುಮಾನ ಎಂದು ಹೆಡ್ ಕೋಚ್ ಜಾನ್ ಡೇವಿಸನ್ ತಿಳಿಸಿದ್ದಾರೆ.

‘12ರಂದು ಸಿಎಂ ಜೊತೆ ಸಭೆ’

ಬೆಂಗಳೂರು: ಇಂಡಿಯನ್ ಪ್ರೀಮಿಯರ್ ಲೀಗ್‌ನ 19ನೇ ಆವೃತ್ತಿಯು ಮಾರ್ಚ್ 26ರಿಂದ ಆರಂಭವಾಗಲಿದ್ದು, ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪಂದ್ಯಗಳನ್ನು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಯೋಜಿಸುವ ಕುರಿತು ಚರ್ಚಿಸಲು ಇದೇ 12ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಮಹತ್ವದ ಸಭೆ ನಡೆಯಲಿದೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಹಾಗೂ ಆರ್‌ಸಿಬಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ರಾಜೇಶ್ ಮೆನನ್ ನೇತೃತ್ವದ ನಿಯೋಗವು ಸೋಮವಾರ ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರೊಂದಿಗೆ ಮಾತುಕತೆ ನಡೆಸಿತು.

‘ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಗತ್ಯ ಸುರಕ್ಷತೆ ಕೈಗೊಳ್ಳುವ ಕುರಿತಂತೆ ನ್ಯಾಯಮೂರ್ತಿ ಮೈಕೆಲ್ ಡಿ ಕುನ್ಹಾ ಅವರ ವರದಿಯ ಶಿಫಾರಸು ಪಾಲಿಸಬೇಕು ಎಂದು ನಿಯೋಗಕ್ಕೆ ಹೇಳಿದ್ದೇವೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಯುಕ್ತರ ಮತ್ತು ಬೆಂಗಳೂರು ನಗರ ಪೊಲೀಸ್ ಆಯುಕ್ತರ ನೇತೃತ್ವದ ಸಮಿತಿಯ ಶಿಫಾರಸುಗಳನ್ನು ಪೂರ್ಣಗೊಳಿಸುವುದು ಸೇರಿದಂತೆ ವಿವಿಧ ವಿಚಾರಗಳ ಕುರಿತು ಸಮಾಲೋಚನೆ ನಡೆಸಲಾಯಿತು. ಮುಖ್ಯಮಂತ್ರಿಯವರೊಂದಿಗೆ ಚರ್ಚಿಸಿ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು’ ಎಂದು ಪರಮೇಶ್ವರ ಅವರು ತಿಳಿಸಿದ್ದಾರೆ.

‘ಶಿಫಾರಸುಗಳನ್ನು ಅವರು ಎಷ್ಟರ ಮಟ್ಟಿಗೆ ಪೂರೈಸಿದ್ದಾರೆ ಅಂತ ನೋಡಿ ತೀರ್ಮಾನ ಮಾಡುತ್ತೇವೆ. ಬೆಂಗಳೂರಿನಲ್ಲಿ ಪಂದ್ಯ ನಡೆಯಬೇಕು ಎಂದು ಅಭಿಮಾನಿಗಳು ಬಯಸುತ್ತಿದ್ದಾರೆ. ಆದರೆ, ಸುರಕ್ಷತೆಯನ್ನೂ ನೋಡಬೇಕು. ಎಲ್ಲವನ್ನೂ ನೋಡಿ ತೀರ್ಮಾನ ಮಾಡುತ್ತೇವೆ’ ಎಂದು ಹೇಳಿದರು.

‘ಇವತ್ತು ಗೃಹ ಸಚಿವರನ್ನು ಭೇಟಿ ಮಾಡಿ ಚರ್ಚೆ ನಡೆಸಿದ್ದೇವೆ. ಐಪಿಎಲ್ ವೇಳಾಪಟ್ಟಿ ತಯಾರಿಗಾಗಿ ಆದಷ್ಟೇ ಬೇಗ ತೀರ್ಮಾನ ತೆಗೆದುಕೊಳ್ಳುವಂತೆ ಮನವಿ ಮಾಡಿದ್ದೇವೆ. ಎಲ್ಲಾ ಶಿಫಾರಸುಗಳನ್ನು ಕೆಎಸ್‌ಸಿಎಯಿಂದ ಪೂರೈಸುತ್ತೇವೆ. ಆರ್‌ಸಿಬಿ ಅಭಿಮಾನಿಗಳಿಗೆ ಶುಭಸುದ್ದಿ ಸಿಗುವ ನಿರೀಕ್ಷೆಯಿದೆ’ ಎಂದು ವೆಂಕಟೇಶ್ ಪ್ರಸಾದ್ ಹೇಳಿದರು.